ಮಂಗಳೂರು
ಮಂಗಳವಾರ, 24 ಫೆಬ್ರವರಿ 2026
ಸಂಪುಟ 47, ಸಂಚಿಕೆ 327, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಕೈಕಮಾಂಡ್‌ಗೆ 31 ಹೊಸ ಶಾಸಕರ ಪತ್ರ
ಸಚಿವ ಸ್ಥಾನಕ್ಕೆ ಬೇಡಿಕೆ
• ಪುಟ 2

ಇರಾನ್ ತೊರೆಯಲು ಭಾರತೀಯರಿಗೆ ಸಲಹೆ
• ಪುಟ 2

ಕಿರುಸುದ್ದಿ


ಡಾ. ಕಲ್ಲೂರಾಯರಿಗೆ ಬಹುಮುಖೀ 2026 ಪ್ರಶಸ್ತಿ



• **ಮಂಗಳೂರು:** ರಾಜ್ಯದ ಪ್ರಮುಖ ಕಲಾ ಸಂಸ್ಥೆಯಲ್ಲಿ ಒಂದಾದ ಬಹುಮುಖಿ ಪ್ರತಿಷ್ಠಾನ ಕೊಡ ಮಾಡುವ ಬಹುಮುಖಿ 2026 ಪ್ರಶಸ್ತಿಗೆ ಮೂಡಬಿದ್ರೆ ಕಲ್ಲಬೆಟ್ಟು ಎಕ್ಸಲೆಂಟ್ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ, ಲೇಖಕ, ನಿರೂಪಕ, ಚಿಂತಕ ಡಾ. ವಾದಿರಾಜ ಕಲ್ಲೂರಾಯ ಆಯ್ಕೆಯಾಗಿದ್ದಾರೆ. ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಶಿಕ್ಷಕರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಮಾರ್ಚ್ 8ರಂದು ಮಂಗಳೂರಿನಲ್ಲಿ ನಡೆಯಲಿರುವ ಕಲಾಸಂಗಮ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ಸ್ಮರಣಿಕೆ ಹಾಗೂ 20,000 ರೂ. ಗೌರವ ಧನವನ್ನು ಒಳಗೊಂಡಿದೆ ಎಂದು ಸಂಸ್ಥೆ ಮುಖ್ಯಸ್ಥ ಎ.ವಿ. ರಮಾನಾಥ ಶೆಟ್ಟಿ ತಿಳಿಸಿದ್ದಾರೆ.

ವಾದಿರಾಜ ಕಲ್ಲೂರಾಯ ಅವರು ಕಿನ್ನಿ ಕಂಬಳ ರಾಮಚಂದ್ರ ಕಲ್ಲೂರಾಯ ಹಾಗೂ ಅಂಬಾ ಕಲ್ಲೂರಾಯ ಅವರ ಪುತ್ರ. ಕಟೀಲು ಮೇಳದ ಕಲಾವಿದರೂ ಆಗಿದ್ದಾರೆ.

ಫೆ.25ಕ್ಕೆ ಬ್ರಹ್ಮಕಲಶೋತ್ಸವ ದಿನ: ಕುಡುಪು ದೇವಸ್ಥಾನದಲ್ಲಿ ವಿವಿಧ ಕಾರ್ಯಕ್ರಮ



• **ಮಂಗಳೂರು:** ಪ್ರಸಿದ್ಧ ನಾಗಾರಾಧನೆಯ ಕ್ಷೇತ್ರ ಕುಡುಪು ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ಫೆ.25ರಂದು ಬ್ರಹ್ಮಕಲಶೋತ್ಸವ ದಿನದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 7ರಿಂದ ಪ್ರಧಾನ ದೇವರಿಗೆ 'ಶತ ರುದ್ರಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಂಜೆ 6ರಿಂದ ಹನುಮಗಿರಿ ಮೇಳದವರಿಂದ ಯಕ್ಷಗಾನ ಬಯಲಾಟ 'ವರ್ಣ ಪಲ್ಲಟ' ನಡೆಯಲಿರುವುದು. ಭಕ್ತಾದಿಗಳು ಎಲ್ಲಾ ಕಾರ್ಯಕ್ರಮಕ್ಕೆ ಆಗಮಿಸಿ ಶ್ರೀದೇವರ ಪ್ರಸಾದ ಸ್ವೀಕರಿಸುವಂತೆ ಶ್ರೀ ಅನಂತಪದ್ಮನಾಭ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಕಚೇರಿಯ ಪ್ರಕಟಣೆಯಲ್ಲಿ ತಿಳಿಸಿದೆ.

ಹೃದಯಾಘಾತ: ಮಾಡಮೆ ನಿವಾಸಿ ಯುವಕ ಸಾವು



• **ಬಂಟ್ವಾಳ:** ಯುವನೋರ್ವ ಹೃದಯಾಘಾತಕ್ಕೊಳಗಾಗಿ ಮೃತಪಟ್ಟಿರುವ ಘಟನೆ ಬಂಟ್ವಾಳ ತಾಲೂಕಿನ ಮಾಡಮೆಯಲ್ಲಿ ನಡೆದಿದೆ. ಕುಕ್ಕಿಪಾಡಿ ಗ್ರಾಮದ ಮಾಡಮೆ ನಿವಾಸಿ ಶಿವರಾಮ ಆಚಾರ್ಯ ಅವರ ಪುತ್ರ ಪ್ರಶಾಂತ ಆಚಾರ್ಯ (25)ಅವರು ಮೃತಪಟ್ಟ ದುರ್ದೈವಿಯಾಗಿದ್ದಾರೆ. ಪ್ರಶಾಂತ ಅವರು ಸಿದ್ದಕಟ್ಟೆ ಕೃಷಿ ಯಂತ್ರೋಪಕರಣದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ರಜೆ ಇದ್ದ ಕಾರಣ ಸಮೀಪದ ಆರಂಬೋಡಿ ಎಂಬಲ್ಲಿ ಮನೆಯೊಂದಕ್ಕೆ ಕೃಷಿ ಕಾರ್ಯಕ್ಕಾಗಿ ತೆರಳಿದ್ದರು. ಮಧ್ಯಾಹ್ನದ ಹೊತ್ತಿಗೆ ಹಠಾತ್ ಎದೆನೋವು ಕಾಣಿಸಿಕೊಂಡು ಅವರು ಅಲ್ಲೇ ಕುಸಿದು ಬಿದ್ದಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಆದಾಗಲೇ ಅವರು ಮೃತಪಟ್ಟಿದ್ದರು. ಶಿವರಾಮ ಆಚಾರ್ಯ ಅವರ ಮೂವರು ಪುತ್ರರಲ್ಲಿ ಪ್ರಶಾಂತ್ ಎರಡನೆಯವರು. ಅವರು ಬಿಜೆಪಿ, ಬಜರಂಗದಳದ ಕಾರ್ಯಕರ್ತರಾಗಿದ್ದರು.

ಮಹಿಳೆಯ ಮಾನಭಂಗ ಯತ್ನ : ಕುಪ್ಪೆಪದವು ವಾಟರ್ ಮ್ಯಾನ್ ಬಂಧನ

• **ಕೈಕಂಬ:** ಮನೆಗೆ ಪ್ರವೇಶಿಸಿ ಮಹಿಳೆಯ ಮಾನಭಂಗಕ್ಕೆ ಯತ್ನಿಸಿದ ಆರೋಪದ ಮೇಲೆ ಕುಪ್ಪೆಪದವಿನ ವಾಟರ್ ಮ್ಯಾನ್ ಉಬ್ಬೆದುಲ್ಲಾ ಯಾನೆ ಉಬ್ಬ (40)ಎಂಬಾತನ ವಿರುದ್ಧ ಬಜಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಪ್ಪೆಪದವಿನಲ್ಲಿ ವಾಟರ್ ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿರುವ ಉಬ್ಬೆದುಲ್ಲಾ ಯಾನೆ ಉಬ್ಬ ಎಂಬಾತ ಕುಪ್ಪೆಪದವಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುವ ಮಹಿಳೆ ಒಬ್ಬಂಟಿಯಾಗಿದ್ದ ಸಮಯದಲ್ಲಿ ಮನೆಗೆ ನುಗ್ಗಿ ಮಾನಭಂಗಕ್ಕೆ ಯತ್ನಿಸಿದ್ದಾನೆ. ಈ ಬಗ್ಗೆ ಸಂತ್ರಸ್ತ ಮಹಿಳೆ ಬಜಪೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಎಫ್ಐಆರ್ ದಾಖಲಿಸಿ ಉಬ್ಬೆದುಲ್ಲಾ ಯಾನೆ ಉಬ್ಬನನ್ನು ಬಂಧಿಸಲಾಗಿದೆ ಎಂದು ಬಜಪೆ ಠಾಣಾ ಸರ್ಕಲ್ ಇನ್ಸ್‌ಪೆಕ್ಟರ್ ಬಾಲಕೃಷ್ಣ ಮಾಹಿತಿ ನೀಡಿದ್ದಾರೆ.

ಅಂಗನವಾಡಿ ಸಹಾಯಕಿ ಸಾವು



• **ಬೆಳ್ತಂಗಡಿ:** ಮನೆಯಲ್ಲಿ ಯಾರೂ ಇಲ್ಲದ ವೇಳೆ ಅಂಗನವಾಡಿ ಸಹಾಯಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಸೋಮವಾರ ನಡೆದಿದೆ. ಚಾರ್ಮಾಡಿ ಗ್ರಾ.ಪಂ. ವ್ಯಾಪ್ತಿಯ ಚಿಬಿದ್ರೆ ಗ್ರಾಮದ ಮುಕ್ಕುಡ ಸಮೀಪದ ನಿವಾಸಿ ಲೀಲಾ (55) ಆತ್ಮಹತ್ಯೆ ಮಾಡಿಕೊಂಡವರು.



ಕೊಡಗು ಜಿಲ್ಲೆಯ ಸೋಮವಾರಪೇಟೆ ಪಟ್ಟಣದ ಬೇಳೂರು ಮಂಡಲದ ವತಿಯಿಂದ ಹಿಂದೂ ಸಂಗಮ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಮಾರಂಭದಲ್ಲಿ ಭಾರೀ ಸಂಖ್ಯೆಯಲ್ಲಿ ಜನ ಆಗಮಿಸಿದ್ದರು.

ವಂದೇ ಭಾರತ್: ಉತ್ತರಕನ್ನಡ ಜಿಲ್ಲೆ ಜನತೆಯಲ್ಲಿ ಮನೆಮಾಡಿದೆ ಸಂಭ್ರಮ!

• **ಕುಂದಾಪುರ:** ಕರಾವಳಿಯ ಸಂಸದರ ಮನವಿಯಂತೆ ಭಾರತೀಯ ರೈಲ್ವೆ ವಂದೇ ಭಾರತ್‌ಆರಂಭಿಸಲು ಪ್ರಸ್ತಾವನೆ ಅಂತಿಮಗೊಳಿಸಿದ್ದು, ವಂದೇ ಭಾರತ್ ರೈಲಿನ ಬಗ್ಗೆ ಹಾಗೂ ಉತ್ತರಕನ್ನಡ ಜಿಲ್ಲೆಯಾದ್ಯಂತ ಸಂಭ್ರಮ ನೆಲೆಸಿದೆ ಎಂದು ಕುಂದಾಪುರ ರೈಲು ಪ್ರಯಾಣಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗಣೇಶ ಪುತ್ರನ್ ತಿಳಿಸಿದ್ದಾರೆ.



ಗೋವಾದಿಂದ ಬೆಂಗಳೂರಿಗೆ ಸುಮಾರು 13 ಗಂಟೆಯಲ್ಲಿ ಓಡುವ ಈ ರೈಲು, ಉಡುಪಿಯಿಂದ ಬೆಂಗಳೂರಿಗೆ ಸುಮಾರು 9 ಗಂಟೆಯಲ್ಲಿ ತಲುಪುವ ಸಾಧ್ಯತೆ ಇದೆ. ಕೈಗಾ ಅಣು ಸ್ಥಾವರ, ಕಾರವಾರ ನೌಕಾ ನೆಲೆಯ ಜತೆಗೆ ಗೋಕರ್ಣ, ಮುರುಡೇಶ್ವರ ದೇಗುಲಗಳು ಉತ್ತರ ಕನ್ನಡದ ಬಹು ಬೇಡಿಕೆಯ ಪ್ರವಾಸಿ ತಾಣಗಳಾದರೆ, ಕೊಲ್ಲೂರು ಮೂಕಾಂಬಿಕೆ, ಶ್ರೀ ಕೃಷ್ಣ ದೇಗುಲಗಳ ಭಕ್ತರು ಮತ್ತು ಮರವಂತೆ, ಕೋಡಿ ಬೀಚ್, ಮಣಿಪಾಲದ ವಿದ್ಯಾ ಕೇಂದ್ರಗಳ ಮೂಲಕ ಉಡುಪಿ ರಾಜಧಾನಿ ಜತೆ ವೇಗವಾಗಿ ಸಂಪರ್ಕ ಪಡೆಯಲಿದೆ.

ಸುರತ್ಕಲ್, ಬಂದರು, ಕೈಗಾರಿಕಾ ಸ್ಥಾವರಗಳ ಜತೆಗೆ ಕುಕ್ಕೆ ಸುಬ್ರಮಣ್ಯದ ಸಾವಿರಾರು ಜನರಿಗೆ ಮಂಗಳೂರು ಬೆಂಗಳೂರನ್ನು ವಂದೇ ಭಾರತ್ ಬೆಸೆಯಲಿದೆ. ಮಂಗಳೂರು ಜಂಕ್ಷನ್ ಅಥವಾ ಸುರತ್ಕಲ್ ನಿಲ್ದಾಣದ ಮೂಲಕ ಬಂಟ್ವಾಳ ತಲುಪುವ ರೈಲು ಮಾರ್ಗದ ಉದ್ದಕ್ಕೂ ಹಲವು ದೇಶವ್ಯಾಪ್ತಿ ಪ್ರಸಿದ್ಧ ತಾಣಗಳನ್ನು ಬೆಸೆಯಲಿದೆ. ಕುಕ್ಕೆ ಮತ್ತು ಬಂಟ್ವಾಳ, ಘಾಟ್ ಭಾಗ, ಬಾಣಾವರ ಮತ್ತು ಸಕಲೇಶಪುರ ನಡುವೆ ವೇಗ ಹೆಚ್ಚಳಕ್ಕೆ ರೈಲು ಮಂಡಳಿ ಒಪ್ಪಿಗೆ ಬಹುತೇಕ ಖಚಿತವೆನಿಸಿದ್ದು, ಹೀಗಾದಾಗ ಪ್ರಯಾಣದ ಅವಧಿ ಸುಮಾರು 1 ರಿಂದ 2 ಗಂಟೆ ಇಳಿಯಲಿದೆ. ಬೆಂಗಳೂರು–ಗೋವಾ ನಡುವೆ ವಂದೇ ಭಾರತ್ ಓಡಾಟ ನಡೆಸುವುದು ನಿಶ್ಚಿತವಾಗಿದ್ದು, ಈ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದಲ್ಲಿ ಖುಷಿಯ ವಾತಾವರಣವಿದೆ ಎಂದು ಅವರು ಹೇಳಿದ್ದಾರೆ.

ಸೌರ ತೂಗು ಬೇಲಿ, ಅತ್ಯಾಧುನಿಕ ವಾಚ್ ಟವರ್‌ಗೆ ಬಂದಡ್ಕದಲ್ಲಿ ಸಚಿವ ಶಶೀಂದ್ರನ್ ಚಾಲನೆ

ಕೃಷಿ, ವನ್ಯಜೀವಿ ರಕ್ಷಣೆಗೆ ಹೊಸ ಹೆಜ್ಜೆ

• **ಕಾಸರಗೋಡು:** ಅರಣ್ಯ ಸಂರಕ್ಷಣೆಯಲ್ಲಿ ತೊಡಗಿರುವ ಅರಣ್ಯ ಸಿಬ್ಬಂದಿಗಳ ಸುರಕ್ಷತೆ ಖಚಿತಪಡಿಸಿಕೊಳ್ಳುವುದು ಅರಣ್ಯ ಇಲಾಖೆ ಮತ್ತು ಕೇರಳ ಸರಕಾರದ ಜವಾಬ್ದಾರಿಯಾಗಿದೆ. ಕಾಡು ಬೆಳೆಸುವುದರ ಜೊತೆಗೆ ಅರಣ್ಯ ಇಲಾಖೆ ನೌಕರರಿಗೆ ವಿವಿಧ ರಕ್ಷಣಾ ಸಾಮಗ್ರಿ ಒದಗಿಸಲು ಸರಕಾರವು ಬದ್ಧವಾಗಿದೆ ಎಂದು ಕಾಸರಗೋಡು ಜಿಲ್ಲಾ ಉಸ್ತುವಾರಿ, ಅರಣ್ಯ ಮತ್ತು ವನ್ಯಜೀವಿ ಖಾತೆ ಸಚಿವ ಎ.ಕೆ. ಶಶೀಂದ್ರನ್ ಹೇಳಿದ್ದಾರೆ.

ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಿಸಲು ಕಾಸರಗೋಡು ಅರಣ್ಯ ವಿಭಾಗದ ಅಧೀನದಲ್ಲಿ ಜಾರಿಗೆ ತರಲಾಗುತ್ತಿರುವ ಯೋಜನೆಗಳ ಪೈಕಿ ನಿರ್ಣಾಯಕ ಹೆಜ್ಜೆಯಾದ ಪುಲಿಪರಂಬ ವಾಚ್ ಟವರ್ ಮತ್ತು ಅರಣ್ಯ ಇಲಾಖೆಯ ನೌಕರರ ಮೂಲಭೂತ ಸೌಕರ್ಯ ಸುಧಾರಿಸಲು ಪಾಂಡಿಯಲ್ಲಿ ಪೂರ್ಣಗೊಂಡ ಸಿಬ್ಬಂದಿ ಬ್ಯಾರಕ್‌ಗಳನ್ನು ಹಾಗೂ ಸೌರಶಕ್ತಿ ಚಾಲಿತ ತೂಗು ಬೇಲಿಯನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಹಲವಾರು ಯೋಜನೆ ಅನುಷ್ಠಾನಕ್ಕೆ

ವನ್ಯಜೀವಿ ಸಂಘರ್ಷದ ಸಮಸ್ಯೆಯನ್ನು ಪರಿಹರಿಸಲು ಮತ್ತು ಕೃಷಿಕ ಸಮುದಾಯವನ್ನು ರಕ್ಷಿಸಲು ಸರಕಾರವು ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಈ ಯೋಜನೆಯು ಕೇರಳ ಮತ್ತು ಕರ್ನಾಟಕ ರಾಜ್ಯಗಳ ಗಡಿಯಲ್ಲಿರುವ ಬಂದಡ್ಕ ಅರಣ್ಯ ವಿಭಾಗದಲ್ಲಿ ಅರಣ್ಯ ಸಂರಕ್ಷಣೆಗೆ ಹೊಸ ಆದ್ಯತೆ ನೀಡುತ್ತಿದೆ. 20 ಲಕ್ಷ ರೂ. ವೆಚ್ಚದಲ್ಲಿ ಇಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿರುವುದು ಕಾಸರಗೋಡು ಜಿಲ್ಲೆಯಲ್ಲಿನ ಹಸಿರು ಸಂಪತ್ತು ಸಂರಕ್ಷಿಸಲು ಮತ್ತು ವನ್ಯಜೀವಿಗಳನ್ನು ರಕ್ಷಿಸಲು ಸರಕಾರ ಹಾಗೂ ಅರಣ್ಯ, ವನ್ಯಜೀವಿ ಇಲಾಖೆಯ ಇಚ್ಛಾಶಕ್ತಿಯ ಸಂಕೇತವಾಗಿದೆ ಎಂದು ಸಚಿವ ಎ.ಕೆ. ಶಶೀಂದ್ರನ್ ಇದೇ ಸಂದರ್ಭದಲ್ಲಿ ನುಡಿದರು.



ವಿಶೇಷ ಆರ್ಥಿಕ ನೆರವಿನೊಂದಿಗೆ ನೂತನ ಯೋಜನೆ

ಕಾಸರಗೋಡು ಜಿಲ್ಲಾ ಯೋಜನಾ ಸಮಿತಿಯ ಶಿಫಾರಸು ಮತ್ತು ರಾಜ್ಯ ಮಟ್ಟದ ಅನುಮೋದನೆ ಪಡೆದ ನಂತರ ವಿಶೇಷ ಆರ್ಥಿಕ ನೆರವಿನೊಂದಿಗೆ ಸೌರಶಕ್ತಿ ತೂಗು ಬೇಲಿ ಯೋಜನೆಯನ್ನು ಜಾರಿಗೆ ತರಲಾಯಿತು. ಬಂದಡ್ಕ ವಿಭಾಗದಲ್ಲಿ ತಲಚ್ಚೇರಿಯಿಂದ ಅಂಟಿನಡ್ಕ ವರೆಗೆ 16.3 ಕಿಲೋ ಮೀಟರ್ ಸೌರಶಕ್ತಿ ಚಾಲಿತ ನೇತಾಡುವ ಬೇಲಿಯನ್ನು 196 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಕ್ಷಣಾ ವ್ಯವಸ್ಥೆಗಳ ಪರಿಣಾಮಕಾರಿ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಲು ನಿರಂತರ ಮೇಲ್ವಿಚಾರಣೆ ಅತ್ಯಗತ್ಯವಾಗಿದ್ದರಿಂದ ಪುಲಿಪರಂಬದಲ್ಲಿ ಶಾಶ್ವತ ವೀಕ್ಷಣಾ ಪೋಸ್ಟ್ ಆಗಿ ವಾಚ್ ಟವರ್‌ನ್ನು ಸ್ಥಾಪಿಸಲಾಯಿತು. ಈ ಪ್ರದೇಶದಲ್ಲಿ ವೀಕ್ಷಣೆಯು ಗಡಿ ದಾಟುವ ವನ್ಯಜೀವಿಗಳ ಚಲನವಲನಗಳನ್ನು ಮುಂಚಿತವಾಗಿ ಗುರುತಿಸಲು ಸಹಾಯಕವಾಗಿದೆ. ವಸತಿ ಪ್ರದೇಶಕ್ಕೆ ಪ್ರವೇಶವನ್ನು ತಡೆಗಟ್ಟುವಲ್ಲಿ ಮತ್ತು ಕಾಡ್ಗಿಚ್ಚಿನಂತಹ ತುರ್ತು ಪರಿಸ್ಥಿತಿಗಳನ್ನು ಸಕಾಲಿಕವಾಗಿ ಪತ್ತೆಹಚ್ಚುವಲ್ಲಿ ಈ ಗೋಪುರವು ಉಪಯುಕ್ತವಾಗಿದೆ. ವಾಚ್ ಟವರ್‌ನ್ನು 23 ಲಕ್ಷ ರೂ. ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸಲಾಗಿದೆ.

ವಿವಿಧ ಯೋಜನೆಗಳಿಂದ ವನ್ಯಜೀವಿ ಸಂರಕ್ಷಣಾ ವ್ಯವಸ್ಥೆಗಳ ದಕ್ಷತೆ

ಕಾಸರಗೋಡು ಜಿಲ್ಲೆಯಲ್ಲಿ ವನ್ಯಜೀವಿ ಸಂರಕ್ಷಣಾ ವ್ಯವಸ್ಥೆಗಳ ದಕ್ಷತೆಯನ್ನು ಹೆಚ್ಚಿಸುವುದು ಮತ್ತು ಅರಣ್ಯ ರಕ್ಷಕರಿಗೆ ನಿರಂತರ ಮೇಲ್ವಿಚಾರಣಾ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳುವುದು ಅರಣ್ಯ ಇಲಾಖೆಯ ಮುಖ್ಯ ಯೋಜನೆಗಳ ಉದ್ದೇಶವಾಗಿದೆ. ಎರಡು ದಶಕಗಳಿಗೂ ಹೆಚ್ಚು ಕಾಲ ದೇಲಂಪಾಡಿ, ಕಾರಡ್ಕ, ಮುಳಿಯಾರು, ಬೇಡಡ್ಕ ಮತ್ತು ಕುತ್ತಿಕೋಲ್ ಗ್ರಾಮ ಪಂಚಾಯತ್‌ಗಳು ಕಾಡಾನೆ, ಕಾಡುಕೋಣ, ಚಿರತೆ, ಕಾಡುಹಂದಿ ಸಹಿತ ವಿವಿಧ ಕಾಡುಪ್ರಾಣಿಗಳ ಹಾವಳಿಯಿಂದಾಗಿ ತೊಂದರೆಗಳನ್ನು ಎದುರಿಸುತ್ತಿವೆ. ಕೇರಳ – ಕರ್ನಾಟಕ ಗಡಿ ಅರಣ್ಯ ಪ್ರದೇಶದಿಂದ ಪ್ರವೇಶಿಸುವ ಕಾಡುಪ್ರಾಣಿಗಳು ವಸತಿ ಪ್ರದೇಶಗಳು ಮತ್ತು ಕೃಷಿ ಭೂಮಿಗೆ ಗಂಭೀರ ಹಾನಿಯನ್ನುಂಟು ಮಾಡಿವೆ. ಕಾಡಾನೆಗಳ ದಾಳಿಯಿಂದಾಗಿ ಅಪಾರ ಸಂಕಷ್ಟ ಅನುಭವಿಸುವಂತಾಗಿದೆ. ಈ ನಿಟ್ಟಿನಲ್ಲಿ ಕಾಡಾನೆ ಸಂರಕ್ಷಣಾ ಯೋಜನೆಯಡಿ ದೇಲಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ 21 ಕಿಲೋ ಮೀಟರ್ ಉದ್ದಕ್ಕೆ ಅತ್ಯಾಧುನಿಕ ಸೌರಶಕ್ತಿ ಚಾಲಿತ ನೇತಾಡುವ ಬೇಲಿಯನ್ನು ಸ್ಥಾಪಿಸಲಾಗಿದೆ.

ಆಧುನಿಕ ವಿಧಾನದಲ್ಲಿ ವಾಚ್ ಟವರ್

ವನ್ಯಜೀವಿಗಳ ಚಲನವಲನಗಳನ್ನು ಮತ್ತು ಇರುವಿಕೆಯನ್ನು ಮೊದಲೇ ಪತ್ತೆಹಚ್ಚಲು ಹಾಗೂ ಸಕಾಲಿಕ ಮಧ್ಯಪ್ರವೇಶಕ್ಕೆ ಸಹಾಯ ಮಾಡುವ ರೀತಿಯಲ್ಲಿ ಆಧುನಿಕ ವಿಧಾನದಲ್ಲಿ ವಾಚ್ ಟವರ್ ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದರು. ಜಿಲ್ಲಾ ಮಟ್ಟದ ಯೋಜನಾ ಸಮಿತಿಯ ಶಿಫಾರಸು ಮತ್ತು ರಾಜ್ಯಮಟ್ಟದ ಅನುಮೋದನೆಯನ್ನು ಪಡೆದ ನಂತರ ವಿಶೇಷ ಆರ್ಥಿಕ ನೆರವಿನೊಂದಿಗೆ 16.3 ಕಿಲೋ ಮೀಟರ್ ಸೌರ ಬೇಲಿಯನ್ನು ನೂತನ ವ್ಯವಸ್ಥೆಯಡಿ ಜಾರಿಗೆ ತರಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬಂದಡ್ಕ ವಲಯ ಅರಣ್ಯ ಕಚೇರಿ ಆವರಣದಲ್ಲಿ ನಡೆದ ಸಮಾರಂಭದಲ್ಲಿ ದೇಲಂಪಾಡಿ ಗ್ರಾ.ಪಂ. ಅಧ್ಯಕ್ಷ ಎ.ಮುಸ್ತಾಫ ಹಾಜಿ ಅಧ್ಯಕ್ಷತೆ ವಹಿಸಿದ್ದರು. ಕಾರಡ್ಕ ಗ್ರಾಪಂ ಅಧ್ಯಕ್ಷೆ ಎಂ.ಜನನಿ, ಮುಳಿಯಾರು ಗ್ರಾಪಂ ಅಧ್ಯಕ್ಷ ಕೆ.ಬಿ.ಮಹಮ್ಮದ್ ಕುಂಞ, ದೇಲಂಪಾಡಿ ಗ್ರಾಪಂ ಉಪಾಧ್ಯಕ್ಷೆ ಶಾರದಾ, ಗ್ರಾಪಂ ಸ್ಥಾಯೀ ಸಮಿತಿ ಅಧ್ಯಕ್ಷ ರತ್ನ ಕುಮಾರ್, ಕಾಸರಗೋಡು ಅರಣ್ಯ ಇಲಾಖೆ ಸಹಾಯಕ ಸಂರಕ್ಷಣಾಧಿಕಾರಿ ವಿ.ಬಿ. ಉದಯಸೂರ್ಯನ್, ಗ್ರಾಮ ಪಂಚಾಯತ್ ಸದಸ್ಯರಾದ ಕೆ.ವಿ. ಶ್ಯಾಮಲಾ, ಕೆ.ವಿ. ನಾಯರ್, ದಿಲೀಪ್ ಪಳ್ಳಂಜಿ, ಅಶ್ರಫ್ ಹಾಜಿ, ಗುತ್ತಿಗೆದಾರ ನಾಸರ್ ಮಾತನಾಡಿದರು. ಕಣ್ಣೂರು ಉತ್ತರ ವಲಯದ ಮುಖ್ಯ ಅರಣ್ಯ ಸಂರಕ್ಷಣಾಕಾರಿ ಬಿ.ಎನ್.ಅಂಜನ್ ಕುಮಾರ್ ಸ್ವಾಗತಿಸಿ, ಕಾಸರಗೋಡು ವಿಭಾಗೀಯ ಅರಣ್ಯಾಧಿಕಾರಿ ಜೋಸ್ ಮ್ಯಾಥ್ಯೂ ವಂದಿಸಿದರು.

ದೇಗುಲ ಜೀರ್ಣೋದ್ಧಾರಕ್ಕೆ ನಿವೃತ್ತ ಅಧಿಕಾರಿ ಅಡ್ಡಿ:ಗ್ರಾಮಸ್ಥರ ಆಕ್ರೋಶ

• **ಕುಶಾಲನಗರ:** ತಾಲೂಕಿನ ಏಳನೇ ಹೊಸಕೋಟೆ ಗ್ರಾಮದ ಕಲ್ಲುಕೋರೆ ರಸ್ತೆಯಲ್ಲಿರುವ ಪುರಾತನ ಕಾಲದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಸ್ಥಳೀಯ ನಿವಾಸಿ, ನಿವೃತ್ತ ಸರಕಾರಿ ಅಧಿಕಾರಿ ವಿನಾಕಾರಣ ಅಡ್ಡಿಪಡಿಸುತ್ತಿದ್ದಾರೆ ಎಂದು ಜೀರ್ಣೋದ್ಧಾರ ಸಮಿತಿ ಹಾಗೂ ಗ್ರಾಮಸ್ಥರು ಆರೋಪಿಸಿದ್ದಾರೆ.



ಗ್ರಾಮದಲ್ಲಿ 29 ಸೆಂಟ್ ಜಾಗದಲ್ಲಿ 2016–17 ರಲ್ಲಿ ಜೀರ್ಣೋದ್ಧಾರ ಕಾರ್ಯ ಆರಂಭಿಸಲಾಗಿದೆ. ದೇವಾಲಯ ನಿರ್ಮಾಣಕ್ಕೆ ಎಂಪಿ, ಎಂಎಲ್ಎ ಎಂಎಲ್ಸಿ ಅನುದಾನ ಕೂಡಾ ಮಂಜೂರಾಗಿದೆ. ದೇವಾಲಯ ನಿರ್ಮಾಣಕ್ಕೆ ಅಡಿಪಾಯ ಕಾರ್ಯ ಕೂಡಾ ನಡೆದಿದೆ. ದೇವಾಲಯ ನಿರ್ಮಾಣಕ್ಕೆ ಅಗತ್ಯ ಕಲ್ಲು ಮತ್ತಿತರ ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆ. ಆದರೆ ದೇವಾಲಯ ಜಾಗಕ್ಕೆ ಹೊಂದಿಕೊಂಡಂತಿರುವ ಅಡಿಕೆ ತೋಟಕ್ಕೆ ಸಂಪರ್ಕ ಕಲ್ಪಿಸುವ ದಾರಿ ನಿರ್ಮಾಣಕ್ಕೆ ದೇವಾಲಯದ ಜಾಗ ಒದಗಿಸಬೇಕೆಂದು ನಿವೃತ್ತ ಅಧಿಕಾರಿ ಪಟ್ಟು ಹಿಡಿದು ಅನಗತ್ಯ ಕಿರುಕುಳ ನೀಡುತ್ತಿರುವುದರಿಂದ ದೇವಾಲಯ ಜೀರ್ಣೋದ್ಧಾರ ವಿಳಂಬವಾಗುತ್ತಿದೆ ಎಂದು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ದಾಸಂಡ ರಮೇಶ್ ಆರೋಪಿಸಿದ್ದಾರೆ.

ಇದೇ ವ್ಯಕ್ತಿ ಮಹಾಲಿಂಗೇಶ್ವರ ಕೆರೆ ಜಾಗವನ್ನೂ ಕಬಳಿಸಿಕೊಂಡಿದ್ದಾರೆ. ಕೆರೆ ಒತ್ತುವರಿ ಮಾಡಿಕೊಂಡ ಜಾಗದ ಮೂಲಕ ಅಡಿಕೆ ತೋಟಕ್ಕೆ ಸಂಪರ್ಕ ವ್ಯವಸ್ಥೆಯಿದೆ. ಇಲ್ಲಿ ಗ್ರಾಮ ಪಂಚಾಯತಿ ಮೂಲಕ ಸುಸಜ್ಜಿತ ಕಾಂಕ್ರಿಟ್ ರಸ್ತೆ ಕೂಡಾ ನಿರ್ಮಿಸಲಾಗಿದೆ. ಬ್ರಿಟೀಷರ ಕಾಲದಲ್ಲೇ ಈ ದೇವಾಲಯಕ್ಕೆ ದಾನವಾಗಿ ಜಾಗ ದೊರೆತಿರುವ ಬಗ್ಗೆ ನಮ್ಮಲ್ಲಿ ದಾಖಲೆಯಿದೆ. ಯಾವುದೇ ಇಲಾಖೆಯಿಂದ ನಮಗೆ ಅಡಚಣೆ ಇಲ್ಲ. ಆದರೂ ಕೂಡಾ ದೇವಾಲಯ ನಿರ್ಮಾಣವಾಗಲಿ ಎಂಬ ಸದುದ್ದೇಶಕ್ಕೆ ನಾವೆಲ್ಲರೂ ಸುಮ್ಮನಿದ್ದು, ಇದೇ ರೀತಿ ಕಿರುಕುಳ ಮುಂದುವರೆದರೆ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ದೂರು ನೀಡಲಾಗುವುದು ಎಂದು ಸಮಿತಿಯ ನಿರ್ದೇಶಕರಾದ ದಾಸಂಡ ಜಗದೀಶ್ ಮಾದಪ್ಪ, ಬಿ.ಎಸ್.ಬಾಲಕೃಷ್ಣ ರೈ, ಬಿ.ಎಸ್. ಜಗನ್ನಾಥ ರೈ ಮತ್ತಿತರರು ತಿಳಿಸಿದರು.

ಈ ಸಂದರ್ಭ ಸಮಿತಿ ನಿರ್ದೇಶಕರಾದ ರಿಜೇಶ್, ಕಿರಣ, ಜೀವನ್, ಈರಪ್ಪ, ಕುಮಾರ್, ಶಿವಪ್ಪ, ರುಕ್ಕಯ್ಯ, ಮಹೇಶ್, ಶರವಣ, ವಿಕ್ರಂ, ಸುಜು, ಸುನಿಲ್, ಪೆಮ್ಮಯ್ಯ, ಆಕಾಶ್, ರಾಜ, ನಂದ, ಪೊನ್ನಪ್ಪ, ಮಹೇಶ್, ರಮೇಶ್, ಬಸವರಾಜ, ಉಣ್ಣಿ ಜೀವನ್, ಚಂದ್ರ, ಚೇತನ್, ಶೇಖರ್ ಮತ್ತಿತರರಿದ್ದರು.

ಚಂದ್ರ ಗ್ರಹಣ: ಕುಡುಪು ಶ್ರೀಕ್ಷೇತ್ರದಲ್ಲಿ ದರುಶನ ಸಮಯ ವ್ಯತ್ಯಯ

• **ಮಂಗಳೂರು:** ನಾಗಾರಾಧನೆಯ ಪುಣ್ಯಕ್ಷೇತ್ರ ಕುಡುಪು ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ಚಂದ್ರಗ್ರಹಣ ಹಿನ್ನಲೆಯಲ್ಲಿ ಮಾ.3ರಂದು ಮಧ್ಯಾಹ್ನ 1ರವರೆಗೆ ಮಾತ್ರ ಶ್ರೀದೇವರ ದರುಶನಕ್ಕೆ ಅವಕಾಶ ಇರಲಿದೆ. ರಾತ್ರಿ 7ಕ್ಕೆ ಚಂದ್ರಗ್ರಹಣ ಮುಕ್ತಾಯದ ಬಳಿಕ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿದೆ. ಆ ಬಳಿಕ ಶ್ರೀ ದೇವರ ದರುಶನಕ್ಕೆ ಅವಕಾಶ ಇರಲಿದ್ದು, ಅಂದು ಮಧ್ಯಾಹ್ನ ಅನ್ನಸಂತರ್ಪಣೆ ಹಾಗೂ ಪ್ರತಿದಿನ ನಡೆಯುವ ಆಶ್ಲೇಷ ಬಲಿ ಸೇವೆಯೂ ಕೂಡ ಇರುವುದಿಲ್ಲ ಎಂದು ಶ್ರೀ ಅನಂತಪದ್ಮನಾಭ ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಪೊಸಳ್ಳಿ, ದೈಪಲ, ಕಾಮಾಜೆ, ಕುಲಾಲರ ಮಠ ಸಂಪರ್ಕ ರಸ್ತೆಗೆ ಡಾ. ಅಮ್ಮೆಂಬಳ ಬಾಳಪ್ಪ ಹೆಸರು

ಸ್ವಾತಂತ್ರ್ಯ ಯೋಧಗೆ ಜನ್ಮದಿನದಂದು ಗೌರವ

• **ಬಂಟ್ವಾಳ:** ಬಿ.ಸಿ.ರೋಡ್‌ನ ನಾರಾಯಣ ಗುರು ವೃತ್ತದ ಬಳಿಯಿಂದ ಪೊಸಳ್ಳಿ, ದೈಪಲ, ಕಾಮಾಜೆ, ಕುಲಾಲರ ಮಠ ಸಂಪರ್ಕ ರಸ್ತೆಗೆ 'ದೇಶ ಭಕ್ತ, ಸ್ವಾತಂತ್ರ್ಯ ಹೋರಾಟಗಾರ ಡಾ. ಅಮ್ಮೆಂಬಳ ಬಾಳಪ್ಪ ರಸ್ತೆ' ಎಂಬ ನಾಮಕರಣ ಕಾರ್ಯಕ್ರಮ ಅವರ 104ನೇ ಜನ್ಮದಿನದ ಅಂಗವಾಗಿ ಸೋಮವಾರ ನಡೆದಿದ್ದು, ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಈ ನಾಮಫಲಕ ಅನಾವರಣಗೊಳಿಸಿದರು.



ಈ ಸಂದರ್ಭ ಮಾತನಾಡಿದ ಶಾಸಕರು, ಈ ರಸ್ತೆಯನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿ ಸುಂದರೀಕರಣ ಗೊಳಿಸಿದಾಗ ನಾಮಕರಣ ಅರ್ಥಪೂರ್ಣವಾಗುತ್ತದೆ ಎಂದರು.

ಹೆಸರು ಚಿರಸ್ಥಾಯಿಗೊಳಿಸಲು ಕ್ರಮ

ಬಿಎಸ್‌ಎಫ್ ನಿವೃತ್ತ ಕಮಾಂಡರ್ ಚಂದಪ್ಪ ಮೂಲ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಅಮ್ಮೆಂಬಳ ಬಾಳಪ್ಪ ಅವರ ಹೆಸರು ಚಿರಸ್ಥಾಯಿಗೊಳಿಸುವ ನಿಟ್ಟಿನಲ್ಲಿ ಶಾಶ್ವತವಾದ ಕೆಲಸ ಆಗಬೇಕಿದ್ದು, ಪ್ರಸ್ತುತ ದಿನಗಳಲ್ಲಿ ಹಂತಹಂತವಾಗಿ ನಡೆಯುತ್ತಿದೆ ಎಂದು ತಿಳಿಸಿದರು.

ವಿವಿಧ ಗಣ್ಯರುಗಳ ಉಪಸ್ಥಿತಿ

ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್ ಶುಭ ಹಾರೈಸಿದರು. ಬಂಟ್ವಾಳ ತಾಲೂಕು ಕುಲಾಲ ಸುಧಾರಕ ಸಂಘದ ಅಧ್ಯಕ್ಷ ರಮೇಶ್ ಸಾಲ್ಯಾನ್ ಸಂಚಯಗಿರಿ ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಸುರೇಶ್ ಕುಮಾರ್ ನಾವೂರು, ಬಂಟ್ವಾಳ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪ್ರಶಾಂತ್ ಪುಂಜಾಲಕಟ್ಟೆ, ಸಮಾಜ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ಕುಲಾಲ್, ಉಪಾಧ್ಯಕ್ಷ ಜನಾರ್ದನ ಬೊಂಡಾಲ, ಬೂಡಾ ಮಾಜಿ ಅಧ್ಯಕ್ಷ ಸದಾಶಿವ ಬಂಗೇರ ಮೊದಲಾದವರು ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಯಾದವ ಕುಲಾಲ್ ಅಗ್ರಬೈಲು ಸ್ವಾಗತಿಸಿದರು. ಸದಸ್ಯ ಮಚ್ಚೇಂದ್ರ ಸಾಲ್ಯಾನ್ ವಂದಿಸಿದರು, ಕಟ್ಟಡ ಸಮಿತಿ ಗೌರವಾಧ್ಯಕ್ಷ ನಾರಾಯಣ ಸಿ.ಪೆರ್ನೆ ಕಾರ್ಯಕ್ರಮ ನಿರೂಪಿಸಿದರು.

ಬೂಡಾ ಸದಸ್ಯ ಮನೋಹರ ನೇರಂಬೋಳು, ಕಟ್ಟಡ ಸಮಿತಿ ಜತೆಕಾರ್ಯದರ್ಶಿ ಲಕ್ಷ್ಮಣ ಅಗ್ರಬೈಲು, ಸಿವಿಲ್ ಇಂಜಿನಿಯರ್ ಸತೀಶ್ ಕುಲಾಲ್, ಸ್ಥಳೀಯರಾದ ಜನಾರ್ದನ ಪೊಸಳ್ಳಿ ಕಾರ್ಯಕ್ರಮಕ್ಕೆ ಸಹಕರಿಸಿದರು.

ರಸ್ತೆಯ ಇಕ್ಕೆಲ ಸುಂದರಗೊಳಿಸಲು ಶಾಸಕರ ನಿಧಿಯಿಂದ ಅನುದಾನ

ತನ್ನ ಶಾಸಕರ ನಿಧಿಯಿಂದ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸುವುದಾಗಿ ತಿಳಿಸಿದ ಶಾಸಕ ರಾಜೇಶ್ ನ್ಯಾಕ್ ಬಳಿಕ ರಸ್ತೆಯ ಇಕ್ಕೆಲಗಳಲ್ಲಿ ಅರಣ್ಯ ಇಲಾಖೆಯ ಸಹಕಾರದೊಂದಿಗೆ ಸುಂದರಗೊಳಿಸುವಂತೆ ರಾಜೇಶ್ ನ್ಯಾಕ್ ತಿಳಿಸಿದರು.

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ವೈಷ್ಣೋದೇವಿ ಯಾತ್ರಿಕರಿಗೂ ಸಹಾಯಧನ |೦೫
ಭೂಸ್ವಾಧೀನ ಕೇಸ್ ವಾಪಸ್ ತರಲ್ಲ |೦೭
26ಕ್ಕೆ ಕೆನಡಾ ಪ್ರಧಾನಿ ಭಾರತಕ್ಕೆ |೦೭

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲಪಕ್ಷ, ತಿಥಿ: ಸಪ್ತಮಿ ಉಪರಿ ಅಷ್ಟಮಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ದುಡಿಮೆ ದೇಹವನ್ನು ಹುರಿಗೊಳಿಸುತ್ತದೆ. ಕಷ್ಟಗಳು ಮನಸ್ಸನ್ನು ಬಲಗೊಳಿಸುತ್ತವೆ.
▲ ಲೋಕೋಕ್ತಿ

ಯಾಕ್ ಎಂಬ ಪ್ರಾಣಿಗಿದೆ ಸಾವಿರಾರು ವರ್ಷಗಳ ಇತಿಹಾಸ

ಧರಣಿ ಮಂಡಲ
• ಕೆ.ಎನ್.ಶೈಲೇಶ್ ಹೊಳ್ಳ
• ಪುಟ ೬

ಕಿರುಸುದ್ದಿ

ಮಾ.11ರಿಂದ ಒಪಿಡಿ ಸ್ಥಗಿತಗೊಳಿಸಿ ಮುಷ್ಕರ

• ಬೆಂಗಳೂರು: ಆರೋಗ್ಯ ಇಲಾಖೆಯ ನಾನ್-ಕೇಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ, ವರ್ಗಾವಣೆ ಬದಲಾವಣೆ, ಕಾಲ-ಕಾಲಕ್ಕೆ ಸಮರ್ಪಕ ಔಷಧ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ವೈದ್ಯರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರು ಮಾ.11ರಿಂದ ಹೊರರೋಗಿಗಳ ಸೇವೆಯನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ಮುಂದಾಗಿದ್ದಾರೆ.

• ಪುಟ ೪

ಸಂಪಾದನೆಯಿಲ್ಲದ ಗೃಹಿಣಿ ನಿರುದ್ಯೋಗಿ ಅಲ್ಲ: ದಿಲ್ಲಿ ಹೈ

• ಹೊಸದಿಲ್ಲಿ: ಪತಿಯ ಕೆಲಸ ಕಾರ್ಯಗಳೆಲ್ಲವೂ ಪರಿಣಾಮಕಾರಿಯಾಗಿ ನಡೆಯಲು ನೆರವಾಗುವ ಗೃಹಿಣಿಯ ಕರ್ತವ್ಯವನ್ನು ನಿರ್ಲಕ್ಷಿಸುವುದು ನ್ಯಾಯವಲ್ಲವೆಂದು ದಿಲ್ಲಿ ಹೈಕೋರ್ಟ್ ಸೋಮವಾರ ಹೇಳಿದೆ. ನೌಕರಿಗೆ ಹೋಗದ ಮಹಿಳೆ ನಿರುದ್ಯೋಗಿಯೆಂದು ನಿರ್ಲಕ್ಷಿಸುವುದು ಸರಿಯಲ್ಲ, ಗೃಹಿಣಿಯ ಕರ್ತವ್ಯವನ್ನು ಗೌರವದಿಂದ ಕಾಣುವುದೂ ಅಷ್ಟೇ ಮುಖ್ಯ ಎಂದು ದಿಲ್ಲಿ ಹೈಕೋರ್ಟ್ ಹೇಳಿದೆ.

• ಪುಟ ೭

ಶಿವಾಜಿಗೆ ಅಪಮಾನ: ಎಲ್ಲೆಡೆ ಭಾರೀ ಆಕ್ರೋಶ

• ಪುಟ ೭

ಜೆಎನ್‌ಯು: ಎಬಿವಿಪಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

• ಪುಟ ೭

ನೇಪಾಳದಲ್ಲಿ ನದಿಗೆ ಉರುಳಿದ ಬಸ್: 19 ಸಾವು

• ಪುಟ ೭



ಭಯೋತ್ಪಾದನೆ ವಿರುದ್ಧ ಪ್ರಹಾರ

• ಪುಟ ೭
ಸುದ್ದಿ ಸಮಗ್ರ

ಸಂಪುಟ ಪುನಾರಚನೆಗಾಗಿ ಕೈಕಮಾಂಡ್‌ಗೆ 31 ಹೊಸ ಶಾಸಕರ ಪತ್ರ

ಸಚಿವ ಸ್ಥಾನಕ್ಕೆ ಬೇಡಿಕೆ

• ಬೆಂಗಳೂರು: ಆಡಳಿತ ಪಕ್ಷ ಕಾಂಗ್ರೆಸ್‌ನಲ್ಲಿ ದಿನಕ್ಕೊಂದು ವಿದ್ಯಮಾನಗಳು ನಡೆಯುತ್ತಿದ್ದು, ನಾಯಕತ್ವ ಬದಲಾವಣೆ ಚರ್ಚೆಗಳು ಜೋರಾಗಿರುವ ಸಂದರ್ಭದಲ್ಲೇ ಮೊದಲ ಬಾರಿಗೆ ಆಯ್ಕೆಯಾಗಿರುವ ಶಾಸಕರು ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದಾರೆ. ಇದು ಹೊಸ ಚರ್ಚೆ ಹುಟ್ಟುಹಾಕಿದೆ.

ಸಂಪುಟ ಪುನರ್ ರಚನೆಯಲ್ಲಿ ಮೊದಲ ಬಾರಿಗೆ ಆಯ್ಕೆ ಆಗಿರುವ ಶಾಸಕರಿಗೆ ಅವಕಾಶ ನೀಡಬೇಕೆಂದು ಕಾಂಗ್ರೆಸ್‌ನ 31 ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದಿರುವುದು ಹೊಸ ತಲೆನೋವು ತಂದಿದೆ. ಈಗಾಗಲೇ ಪಕ್ಷದಲ್ಲಿ ಉಂಟಾಗಿರುವ ಗೊಂದಲಗಳಿಗೆ ಕಡಿವಾಣ ಹಾಕಬೇಕೆಂದು ಹಿರಿಯ ನಾಯಕರ ಹೇಳಿಕೆಗಳ ನಡುವೆಯೇ ಸಂಪುಟದಲ್ಲಿ ಸ್ಥಾನ ಪಡೆಯಲು ಶಾಸಕರು ಮುಂದಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಸೇರಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ 31 ಶಾಸಕರು ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಹಲವು ರಾಜ್ಯಗಳಲ್ಲಿ ಮೊದಲ ಬಾರಿಗೆ ಶಾಸಕರಾದವರಿಗೆ ಮುಖ್ಯಮಂತ್ರಿ ಸ್ಥಾನ ಮತ್ತು ಸಚಿವ ಸ್ಥಾನ ನೀಡಿದ ಹಲವು ನಿದರ್ಶನಗಳಿವೆ, ನಾವೆಲ್ಲರೂ ಕಾಂಗ್ರೆಸ್ ಸಿದ್ಧಾಂತವನ್ನು ಬಲವಾಗಿ ನಂಬಿದ್ದೇವೆ ಮತ್ತು ರಾಜ್ಯ ಸರ್ಕಾರದಲ್ಲಿ ಸ್ವಚ್ಛ, ಪಾರದರ್ಶಕ ಮತ್ತು ವಿಶ್ವಾಸಾರ್ಹ ಆಡಳಿತವನ್ನು ಒದಗಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಶ್ರಮಿಸುತ್ತೇವೆ, ಇದರಿಂದಾಗಿ 2028ರಲ್ಲಿ ನಾವು ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ➡ಪುಟ ೪



ಸಚಿವರು ಸರಿಯಾಗಿ ಕೆಲಸ ಮಾಡದ ಬಗ್ಗೆ ಚರ್ಚಿಸಿಯೇ ನಾವು ಪತ್ರ ಬರೆದಿದ್ದೇವೆ. ನಾವ್ಯಾರು ಸಚಿವ ಸ್ಥಾನದ ಆಕಾಂಕ್ಷಿಗಳಲ್ಲ. ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಒಳ್ಳೆ ಆಡಳಿತ ಬೇಕು. ಆದಕ್ಕಾಗಿ, ಕೆಲವರನ್ನು ಬದಲಾಯಿಸಲು ಎರಡ್ಮೂರು ಸಭೆಗಳಲ್ಲಿ ಒತ್ತಾಯಿಸಿದ್ದೇವೆ. 6 ತಿಂಗಳಿಂದ ಈ ಪ್ರಕ್ರಿಯೆ ನಡೆಯುತ್ತಲೇ ಇದೆ.
■ ಇಕ್ಬಾಲ್ ಹುಸೇನ್, ರಾಮನಗರ ಶಾಸಕ



ಪತ್ರ ಬರೆದ ಶಾಸಕರು

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ರಾಮನಗರ ಶಾಸಕ ಇಕ್ಬಾಲ್ ಹುಸೇನ್, ಮಡಿಕೇರಿ ಶಾಸಕ ಮಂಥರ ಗೌಡ, ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ, ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ಕಿತ್ತೂರು ಶಾಸಕ ಬಾಬಸಾಹೇಬ್ ಪಾಟೀಲ್, ಸವದತ್ತಿ ಯಲ್ಲಮ್ಮ ಶಾಸಕ ವಿಶ್ವಾಸ್ ವೈದ್ಯ, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣನವರ್, ಮದ್ದೂರು ಶಾಸಕ ಉದಯ್ ಗೌಡ, ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ಮತ್ತು ಸುರಪುರ ಶಾಸಕ ವೇಣುಗೋಪಾಲ್ ನಾಯ್ಕ್ ಸೇರಿದಂತೆ ಒಟ್ಟು 31 ಶಾಸಕರು ಪತ್ರ ಬರೆದಿದ್ದಾರೆ.

ಕನಿಷ್ಠ ಐದು ಸ್ಥಾನಕ್ಕೆ ಮನವಿ

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ 38 ಹೊಸ ಮುಖಗಳಿಗೆ ವಿಧಾನಸಭೆ ಪ್ರವೇಶಿಸಲು ರಾಜ್ಯದ ಜನ ಅವಕಾಶ ನೀಡಿದ್ದಾರೆ, ಹೀಗಿರುವಾಗ ಸಂಪುಟ ರಚನೆಯಲ್ಲಿ ಮೊದಲ ಬಾರಿಗೆ ಆಯ್ಕೆಯಾದ ಶಾಸಕರಿಗೆ ಅವಕಾಶ ನೀಡಿಲ್ಲ. ಮುಂಬರುವ ದಿನಗಳಲ್ಲಿ ಸಂಪುಟ ಪುನರ್ ರಚನೆ ಮಾಡಿದಾಗ ಮೊದಲ ಬಾರಿಗೆ ಆಯ್ಕೆಯಾದ ಕನಿಷ್ಠ 5 ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಲಾಗಿದೆ.

ಆಕಾಂಕ್ಷಿಗಳಿಗೆ ಆತಂಕ

ಮುಂಬರುವ ಸಂಪುಟ ಪುನರ್‌ರಚನೆಯಲ್ಲಿ ಸಚಿವ ಸ್ಥಾನದ ನಿರೀಕ್ಷೆಯಲ್ಲಿ ಹಲವು ಹಿರಿಯ ಮತ್ತು ಕಿರಿಯ ಶಾಸಕರಿಗೆ ಒಂದು ರೀತಿಯ ಆತಂಕ ಎದುರಾಗಿದ್ದು, ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದ ಕೆಲವು ಶಾಸಕರಿಗೆ ಸಚಿವ ಸ್ಥಾನ ತಪ್ಪಲಿದೆಯೇ? ಎಂಬ ಹೊಸ ಚರ್ಚೆ ಪಕ್ಷದಲ್ಲಿ ನಡೆಯುತ್ತಿದೆ. ಮೊದಲ ಬಾರಿಗೆ ಆಯ್ಕೆಯಾಗಿರುವ ಶಾಸಕರು 5 ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದು, ಇದರಲ್ಲಿ ಪಕ್ಷದ ಹೈಕಮಾಂಡ್ ಕನಿಷ್ಠ 3 ರಿಂದ 2 ಸ್ಥಾನಗಳನ್ನು ನೀಡಿದ್ದಲ್ಲಿ ಸಚಿವ ಸ್ಥಾನದ ಭಾರೀ ನಿರೀಕ್ಷೆಯಲ್ಲಿದ್ದವರಿಗೆ ಕೊನೆ ಕ್ಷಣದಲ್ಲಿ ಸ್ಥಾನ ಕೈತಪ್ಪಿದರೂ ಆಶ್ಚರ್ಯ ಪಡಬೇಕಿಲ್ಲ ಎಂಬ ಚರ್ಚೆಗಳು ನಡೆದಿವೆ.

ಕೊಡಗು ಜಿಲ್ಲೆಯಿಂದ ಇಬ್ಬರು ಮೊದಲ ಬಾರಿಗೆ ಗೆದ್ದಿದ್ದೇವೆ. ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ನೀಡಲಿ. ಈಗ ಇರುವ ಹಿರಿಯ ಸಚಿವರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿ.
■ ಮಂಥರ ಗೌಡ, ಮಡಿಕೇರಿ ಶಾಸಕ

ಯಾವುದೇ ಕ್ಷಣ ಅಮೆರಿಕ ದಾಳಿ ಸಾಧ್ಯತೆ

ಇರಾನ್ ತೊರೆಯಲು ಭಾರತೀಯರಿಗೆ ಸಲಹೆ

• ಹೊಸದಿಲ್ಲಿ: ಇರಾನ್ ಮೇಲೆ ಅಮೆರಿಕ ಯಾವುದೇ ಕ್ಷಣದಲ್ಲಿ ದಾಳಿ ನಡೆಸುವ ಸಾಧ್ಯತೆ ಹೆಚ್ಚಾಗಿದ್ದು, ತಕ್ಷಣ ಇರಾನ್ ಬಿಟ್ಟು ತೆರಳುವಂತೆ ಭಾರತೀಯರಿಗೆ ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸೋಮವಾರ ಸಲಹೆ ನೀಡಿದೆ.

ಇರಾನ್ ಮೇಲೆ ಅಮೆರಿಕ ದಾಳಿ ನಡೆಸುವುದು ಬಹುತೇಕ ಖಚಿತವಾದ ಹಿನ್ನೆಲೆ ಸುರಕ್ಷತೆ ಸಮಸ್ಯೆ ಎದುರಾಗಲಿದ್ದು, ಎಲ್ಲಾ ಭಾರತೀಯರಿಗೂ ತಾಯ್ನಾಡಿಗೆ ಮರಳುವಂತೆ ಸಲಹೆ ನೀಡಿದೆ. ಸದ್ಯ ಲಭ್ಯವಿರುವ ಎಲ್ಲಾ ರೀತಿಯ ಸಾರಿಗೆ ಹಾಗೂ ವಾಣಿಜ್ಯ ವಿಮಾನಗಳನ್ನು ಬಳಸಿಕೊಂಡು ವಾಪಾಸಾಗುವಂತೆ ಸರ್ಕಾರ ತಿಳಿಸಿದೆ.



ಟೆಹ್ರಾನ್‌ನಲ್ಲಿ ಹೊಸ ಪ್ರತಿಭಟನೆಗಳು ಆರಂಭವಾಗಿದ್ದು, ಗಲ್ಫ್ ರಾಷ್ಟ್ರದ ಮೇಲೆ ಅಮೆರಿಕ ಸೇನೆ ಯಾವುದೇ ಕ್ಷಣದಲ್ಲಿ ದಾಳಿ ಮಾಡಬಹುದೆಂಬ ಆತಂಕ ಹೆಚ್ಚಾಗಿದೆ. ಇದನ್ನು ಗಮನಿಸಿದ ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ, ಭಾರತೀಯರಿಗೆ ಸಲಹೆ ನೀಡಿದೆ.

ಇರಾನ್‌ನ ಹಲವು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಖಮೇನಿ ಆಡಳಿತದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಕಳೆದ ತಿಂಗಳು ಇರಾನ್ ರಾಜಧಾನಿಯಲ್ಲಿ ಪ್ರತಿಭಟನಾಕಾರರನ್ನು ಖಮೇನಿ ಸರ್ಕಾರ ಕ್ರೂರವಾಗಿ ದಮನಿಸಿದ ಬಳಿಕ ಇದೀಗ ಹೊಸ ಪ್ರತಿಭಟನೆಗಳನ್ನು ವಿದ್ಯಾರ್ಥಿಗಳು ಆರಂಭಿಸಿದ್ದಾರೆ. ಭಾರತೀಯ ಅಧಿಕಾರಿಗಳ ಪ್ರಕಾರ, ಜನವರಿವರೆಗೆ ಇರಾನ್‌ನಲ್ಲಿ 10 ಸಾವಿರಕ್ಕೂ ಅಧಿಕ ಭಾರತೀಯರು ವಾಸವಾಗಿದ್ದರು.

ಇರಾನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳು, ತೀರ್ಥಯಾತ್ರಿಗಳು, ಉದ್ಯಮಿಗಳು ಮತ್ತು ಪ್ರವಾಸಿಗಳು ತಕ್ಷಣ ಲಭ್ಯವಿರುವ ಸಾರಿಗೆ, ವಾಣಿಜ್ಯ ವಿಮಾನಗಳ ಮೂಲಕ ಇರಾನ್ ಬಿಡಬೇಕು. ಪಾಸ್‌ಪೋರ್ಟ್ ಮತ್ತು ಗುರುತಿನ ಚೀಟಿ ಸಹಿತ ಎಲ್ಲಾ ಪ್ರಯಾಣ ಮತ್ತು ವಲಸೆ ದಾಖಲೆಗಳನ್ನು ಜತೆಗಿಟ್ಟುಕೊಳ್ಳಿ.
■ ಇರಾನ್‌ನಲ್ಲಿನ ಭಾರತ ರಾಯಭಾರ ಕಚೇರಿ



ಸೀಮಿತ ದಾಳಿಗೆ ಟ್ರಂಪ್ ಯೋಜನೆ?

ಇರಾನ್ ಮೇಲೆ ಸೀಮಿತ ದಾಳಿ ನಡೆಸಿ, ಆ ಬಳಿಕ ಆಡಳಿತ ಬದಲಾಯಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯೋಜನೆ ರೂಪಿಸಿದ್ದಾರೆಂದು ವರದಿಯಾಗಿದೆ. ಮೊದಲು ಸೀಮಿತ ದಾಳಿ ನಡೆಸಿ, ಬಳಿಕ ತನ್ನ ಪರಮಾಣು ಬೇಡಿಕೆಗಳಿಗೆ ಹೊಂದಿಕೊಳ್ಳುವ ಆಡಳಿತ ಬದಲಾವಣೆ ತರಲು ಟ್ರಂಪ್ ನಿಶ್ಚಯಿಸಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ವೆನಿಜುವೆಲಾ ಮಾದರಿಯಲ್ಲೇ ತೈಲರಾಷ್ಟ್ರ ಇರಾನ್ ಮೇಲೆ ದಾಳಿಗೆ ಟ್ರಂಪ್ ಯೋಜಿಸಿದ್ದರೂ, ಇರಾನ್ ಕಬ್ಜಾ ಮಾಡುವುದು ಸುಲಭದ ಮಾತಲ್ಲ.

ದಾಳಿ ನಡೆಸಿದರೆ ಉಗ್ರ ಪ್ರತ್ಯುತ್ತರ: ಇರಾನ್

ಒಂದು ವೇಳೆ ಅಮೆರಿಕ ಸೀಮಿತ ದಾಳಿ ನಡೆಸಿದರೂ ಅದನ್ನು ಯುದ್ಧ ಸಂಘರ್ಷವೆಂದೇ ಪರಿಗಣಿಸಿ ಉಗ್ರವಾದ ಪ್ರತ್ಯುತ್ತರ ನೀಡುತ್ತೇವೆಂದು ಇರಾನ್ ಖಡಕ್ ಎಚ್ಚರಿಕೆ ನೀಡಿದೆ.

ಭಾರತದ ಮೇಲೆ ಪರಿಣಾಮಗಳು • ಪುಟ ೩

ಕೈ ಅರೆಬೆತ್ತಲೆ ಪ್ರತಿಭಟನೆ ವಿವಾದ: ಮಿತ್ರಪಕ್ಷಗಳ ಅಸಮಾಧಾನ

ಇಂಡಿ ಒಕ್ಕೂಟದಲ್ಲಿ ಮತ್ತೆ ಬಿರುಕು

• ಹೊಸದಿಲ್ಲಿ/ಕೋಲ್ಕತ್ತಾ/ಚೆನ್ನೈ: ಕೇಂದ್ರದ ಆಡಳಿತಾರೂಢ ಎನ್‌ಡಿಎಗೆ ಪರ್ಯಾಯವಾಗಿ ರೂಪುಗೊಂಡ ಇಂಡಿ(ಐಎನ್‌ಡಿಐಎ) ಮೈತ್ರಿಕೂಟದಲ್ಲಿ ನಾಯಕತ್ವದ ಗೊಂದಲ ಮತ್ತೆ ತಲೆದೋರಿದೆ. ಮೈತ್ರಿಕೂಟದ ಪ್ರಮುಖ ಪಕ್ಷವಾಗಿರುವ ಕಾಂಗ್ರೆಸ್ ಮತ್ತು ಆದರ ನಾಯಕ ರಾಹುಲ್ ಗಾಂಧಿ ನಾಯಕತ್ವದ ವಿರುದ್ಧ ಮಿತ್ರಪಕ್ಷಗಳಿಂದ ಮಾತ್ರವಲ್ಲದೇ ಸ್ವಪಕ್ಷದಲ್ಲೂ ಅಪಸ್ವರಗಳು ಕೇಳಿಬಂದಿವೆ. ಇತ್ತೀಚಿನ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆನಗ್ನವಾಗಿ ನಡೆಸಿದ ಪ್ರತಿಭಟನೆ ಮೈತ್ರಿಕೂಟದ ಅಸಮಾಧಾನವನ್ನು ಬಹಿರಂಗಗೊಳಿಸಿದೆ. ಭಾರತ ಎಐ ಶೃಂಗಸಭೆ ವೇದಿಕೆಯಲ್ಲಿ ನಡೆದ ಪ್ರತಿಭಟನೆಗೆ ಮೊದಲು ಇಂಡಿ ಕೂಟದ ಹಲವು ಪಕ್ಷಗಳು ದೂರ ಉಳಿದಿದ್ದವು. ಆದರೆ, ಪ್ರಧಾನಿ ಮೋದಿಯವರು ಬಹಿರಂಗವಾಗಿ ಟೀಕೆ ನಡೆಸಿದ ಬಳಿಕ, ಮೈತ್ರಿ ಪಕ್ಷಗಳು ಸ್ಪಷ್ಟವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿವೆ. ➡ಪುಟ ೪



ರಾಹುಲ್ ಬದಲು ಸ್ಟಾಲಿನ್ ಅಥವಾ ಮಮತಾ ಸೂಕ್ತ

ಕಾಂಗ್ರೆಸ್ ಹಿರಿಯ ನಾಯಕ ಮಣಿಶಂಕರ್ ಅಯ್ಯರ್, ಪಕ್ಷದ ಒಳಗೇ ನಾಯಕತ್ವದ ಪ್ರಶ್ನೆ ಎತ್ತಿದ್ದಾರೆ. ಇಂಡಿ ಮೈತ್ರಿಕೂಟದ ನಾಯಕತ್ವವನ್ನು ರಾಹುಲ್ ಗಾಂಧಿ ತ್ಯಜಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಅಂತೆಯೇ, ಪ್ರಾದೇಶಿಕ ಪಕ್ಷಗಳ ನಾಯಕರಿಗೆ ಅವಕಾಶ ನೀಡಬೇಕೆಂದು ಹೇಳಿರುವ ಅವರು, ಈ ಸ್ಥಾನಕ್ಕೆ ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ಅಥವಾ ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಸೂಕ್ತ ಎಂದಿದ್ದಾರೆ.



ಬಡವರ ಉದ್ಯೋಗದ ಹಕ್ಕು ಕಸಿದ ಕೇಂದ್ರ: ಸಿದ್ದರಾಮಯ್ಯ

ಮನರೇಗಾ ಸ್ಥಾಪನೆಗೆ ಹೋರಾಟ

• ಚಿಕ್ಕಬಳ್ಳಾಪುರ: ಗ್ರಾಮೀಣ ಬಡ ಜನರ ಉದ್ಯೋಗದ ಹಕ್ಕನ್ನು ಕೇಂದ್ರ ಸರ್ಕಾರ ಕಸಿಯುತ್ತಿದ್ದು, ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ರದ್ದುಪಡಿಸಿ, ಮನರೇಗಾ ಮರುಸ್ಥಾಪಿಸುವಂತೆ ದೇಶಾದ್ಯಂತ ಹೋರಾಟ ನಡೆಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವ್ ಆಂದೋಲನದಲ್ಲಿ ಅವರು ಮಾತನಾಡಿದರು.

ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಮನರೇಗಾವನ್ನು ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಕಾಯ್ದೆ ಜಾರಿ ಮಾಡಿದೆ. ಮನರೇಗಾದ ರದ್ದು ಅಗತ್ಯವಿರಲಿಲ್ಲ. ಕೂಲಿಕಾರರು, ಆದಿವಾಸಿಗಳು, ಸಣ್ಣ ರೈತರಿಗೆ, ಮಹಿಳೆಯರಿಗೆ ಉದ್ಯೋಗದ ಅನುಕೂಲ ಕಲ್ಪಿಸುವ ದಿಸೆಯಲ್ಲಿ 2005ರಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ನಾಯಕಿ ಸೋನಿಯಾ ಗಾಂಧಿ ನೇತೃತ್ವದಲ್ಲಿ ಈ ಕಾಯ್ದೆ ಜಾರಿಯಾಯಿತು. ➡ಪುಟ ೪



ಯೂನುಸ್ ಕುತಂತ್ರ ಬಯಲು

• ಢಾಕಾ: ಬಾಂಗ್ಲಾದೇಶದಲ್ಲಿ ತಾರಿಕ್ ರೆಹಮಾನ್ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನಗಳ ಬಳಿಕ ಸರ್ಕಾರ ಉರುಳಿಸಲು ಮಾಜಿ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಷಡ್ಯಂತ್ರ ನಡೆಸಿದ್ದಾಗಿ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಆರೋಪಿಸಿದ್ದಾರೆ. ಪ್ರಧಾನಿ ತಾರಿಕ್ ರೆಹಮಾನ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಅಸಾಂವಿಧಾನಿಕ ಪ್ರಯತ್ನಗಳನ್ನು ಯೂನುಸ್ ನಡೆಸಿದ್ದಾರೆಂದು ಶಹಾಬುದ್ದೀನ್ ಗಂಭೀರ ಆರೋಪ ಮಾಡಿದ್ದಾರೆ.

ಅಧ್ಯಕ್ಷರ ವಿದೇಶ ಪ್ರವಾಸಕ್ಕೆ ತಡೆ: ಕಳೆದ ಒಂದೂವರೆ ವರ್ಷದಿಂದ ನನ್ನನ್ನು ಅರಮನೆಯ ಕೈದಿಯಂತೆ ನಡೆಸಿಕೊಂಡಿದ್ದು, ಕೊಸೊವೊ, ಕತಾರ್‌ಗೆ ತೆರಳಬೇಕಿದ್ದ ವಿದೇಶ ಪ್ರವಾಸಗಳನ್ನು ಯೂನುಸ್ ಆಡಳಿತ ತಡೆಹಿಡಿದಿತ್ತು. ➡ಪುಟ ೪

ಬಾಂಗ್ಲಾ ನೂತನ ಸರ್ಕಾರ ಉರುಳಿಸಲು ನಡೆದಿತ್ತು ಷಡ್ಯಂತ್ರ




ಆರೆಸ್ಸೆಸ್ ಹಿಂದುತ್ವ ರಾಜಕೀಯ ಮಾಡುತ್ತಿಲ್ಲ: ಡಾ.ಭಾಗ್ವತ್

ರಾಷ್ಟ್ರ ನಿರ್ಮಾಣಕ್ಕೆ ಸಂಘ ಆದ್ಯತೆ

• ಡೆಹ್ರಾಡೂನ್: ರಾಷ್ಟ್ರೀಯ ಸ್ವಯಂಸೇವಕ ಸಂಘವು 'ಹಿಂದುತ್ವ ರಾಜಕೀಯ'ದಲ್ಲಿ ತೊಡಗಿಲ್ಲ, ಇದರ ಬದಲಾಗಿ ವ್ಯಕ್ತಿ ನಿರ್ಮಾಣದ ಮೂಲಕ ಬಲಿಷ್ಠ ಸಮಾಜ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ನಂಬಿಕೆ ಇಟ್ಟಿದೆ ಎಂಬುದಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಒತ್ತಿ ಹೇಳಿದ್ದಾರೆ.

ಸಂಘದ ಉದ್ದೇಶ ವ್ಯಕ್ತಿ ನಿರ್ಮಾಣ. ಯಾಕೆಂದರೆ ಯೋಗ್ಯ ವ್ಯಕ್ತಿಗಳಿಂದ ಮಾತ್ರವೇ ಒಗ್ಗಟ್ಟಿನ, ಉತ್ತಮ ಮತ್ತು ಬಲಿಷ್ಠ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂಬುದಾಗಿ ಅವರು ಸಂಘ ಶತಾಬ್ದಿ ಅಂಗವಾಗಿ ನಡೆದ ಕಾರ್ಯಕ್ರಮವೊಂದರಲ್ಲಿ ನುಡಿದರು. ಆದರೆ ಸಂಘವನ್ನು ಹೊರಗಿನಿಂದ ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

'ಸಂಘಯಾತ್ರಾ-ಹೊಸ ದಿಗಂತಗಳು, ಹೊಸ ಆಯಾಮಗಳು' ಎಂಬ ಧ್ಯೇಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲವರು ಸಂಘ ಎಂದರೆ ಅರೆಸೈನಿಕ ಸಂಘಟನೆ ಎಂದು ತಪ್ಪಾಗಿ ತಿಳಿಯುತ್ತಾರೆ, ಇನ್ನು ಕೆಲವರು ಇದೊಂದು ಸೇವಾ ಕ್ಷೇತ್ರದ ಸಂಸ್ಥೆ ಎಂದು ಭಾವಿಸುತ್ತಾರೆ. ಆದರೆ ಆರೆಸ್ಸೆಸ್ ಒಂದು ಈ ಎಲ್ಲ ಗಡಿಗಳನ್ನು ದಾಟಿ ಕೆಲಸ ಮಾಡುವ ಒಂದು ಸಾಮಾಜಿಕ ಶಕ್ತಿ ಎಂದರು. ಸಂಘದ ಚಟುವಟಿಕೆಗಳಲ್ಲಿ ಜೋಡಿಸಿಕೊಳ್ಳುವ ಮೂಲಕ ಸಮಾಜ, ದೇಶ ಬಲಪಡಿಸಬೇಕಾಗಿದ್ದು, ಇಂದು ಜಗತ್ತು ಮತ್ತೊಮ್ಮೆ ಭಾರತವನ್ನು ನಾಯಕತ್ವದ ಪಾತ್ರದಲ್ಲಿ ನೋಡಲು ಬಯಸುತ್ತಿದೆ. ➡ಪುಟ ೪



ಮಹಿಳೆಯರಿಗೆ ಶೇ.33 ಅಲ್ಲ, ಶೇ.50 ಪಾಲುದಾರಿಕೆ ಬೇಕು

ಮಹಿಳೆಯರ ಪಾತ್ರದ ಕುರಿತಂತೆ ಮಾತನಾಡಿದ ಅವರು, ಮಹಿಳೆಯರು ಸಂಪೂರ್ಣವಾಗಿ ಸ್ವತಂತ್ರರು. ಆಡಳಿತ ವ್ಯವಸ್ಥೆಯಲ್ಲಿ ಅವರ ಭಾಗವಹಿಸುವಿಕೆ ಶೇ.33ಕ್ಕೆ ಸೀಮಿತವಾಗಿರಬಾರದು, ಬದಲಿಗೆ ಶೇ.50ರಷ್ಟಿರಬೇಕು ಎಂದು ಭಾಗ್ವತ್ ಪ್ರತಿಪಾದಿಸಿದರು. ➡ಪುಟ ೪

ತ.ನಾಡು: 74 ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ

• ಚೆನ್ನೈ: ತಮಿಳುನಾಡಿನಲ್ಲಿ 74.07 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಿರುವ ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗ ಸೋಮವಾರ ಬಿಡುಗಡೆ ಮಾಡಿದೆ. ಇದರಿಂದ ರಾಜ್ಯದ ಒಟ್ಟು ಮತದಾರರ ಸಂಖ್ಯೆ 5.67 ಕೋಟಿಗೆ ಇಳಿಕೆಯಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾಧಿಕಾರಿ ಅರ್ಚನಾ ಪಟ್ನಾಯಕ್ ಅವರು, ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಗೆ ಮೊದಲು ರಾಜ್ಯದಲ್ಲಿ ಒಟ್ಟು 6.41 ಕೋಟಿ ಮತದಾರರು ಇದ್ದರು ಎಂದು ತಿಳಿಸಿದರು. ➡ಪುಟ ೪

ದೇಶಾದ್ಯಂತ ಆರೆಸ್ಸೆಸ್ ಕಾರ್ಯ: ಅಂಬೇಕರ್



• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್ಎಸ್)ದ ಮೂಲ ಕಾರ್ಯವಿಧಾನವು ದೈನಂದಿನ ಶಾಖೆಯಾಗಿದೆ. ಇದು ಎಳವೆಯಲ್ಲೇ ಶಿಸ್ತು, ತಂಡದ ಕೆಲಸ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರೀಯ ಪ್ರಜ್ಞೆ ಬೆಳೆಸಲು ವಿನ್ಯಾಸಗೊಳಿಸಲಾದ ಒಂದು ತಾಸಿನ ರಚನಾತ್ಮಕ ಸಭೆಯಾಗಿದೆ ಎಂದು ಆರ್‌ಎಸ್ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಹೇಳಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ವರ್ಷದ ಹಿನ್ನೆಲೆಯಲ್ಲಿ ಐಟಿ ಮಿಲನ್ಸ್ ಬೆಂಗಳೂರು ಸಿಎಂಆರ್ ಐಟಿಯಲ್ಲಿ ಆಯೋಜಿಸಿದ್ದ ಐಟಿ ನಾಯಕರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ನಾಗ್ಪುರದಲ್ಲಿ 1925ರಲ್ಲಿ ಡಾ. ಕೇಶವ್ ಬಲಿರಾಮ್ ಹೆಡ್ಗೆವಾರ್ ಅವರು ಸ್ಥಾಪಿಸಿದ ಆರ್‌ಎಸ್ಎಸ್ ಒಂದು ಶಾಖೆಯಿಂದ ಪ್ರಾರಂಭವಾಗಿ ಈಗ ದೇಶಾದ್ಯಂತ ಕಾರ್ಯನಿರ್ವಹಿಸುತ್ತಿದೆ. ಆರ್‌ಎಸ್ಎಸ್ ರಾಜಕೀಯ ಪಕ್ಷ, ಅರೆಸೈನಿಕ ಸಂಸ್ಥೆ ಅಥವಾ ಕೇವಲ ಸೇವಾ ಸಂಘಟನೆಯಲ್ಲ. ಇದು ಸ್ವಯಂಸೇವಕ ಚಟುವಟಿಕೆಗಳು ಮತ್ತು ವಿದ್ಯಾರ್ಥಿ, ಕಾರ್ಮಿಕ, ಬುಡಕಟ್ಟು ಮುಂತಾದ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಅಂಗಸಂಸ್ಥೆಗಳ ಮೂಲಕ ರಾಷ್ಟ್ರೀಯ ಜೀವನದ ಬಹು ಆಯಾಮಗಳಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರ ನಿರ್ಮಾಣ ಚಳವಳಿಯಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಯಾದವ್ ರಾವ್ ಜೋಶಿ ಅವರಂತಹ ಆರಂಭಿಕ ಪ್ರಚಾರಕರ ಮೂಲಕ ಕರ್ನಾಟಕ ಸೇರಿದಂತೆ ಪ್ರಾಂತಗಳಲ್ಲಿ ಸಂಘಟನಾತ್ಮಕ ವಿಸ್ತರಣೆ, ವಿಭಜನೆಯ ಸಮಯದಲ್ಲಿ ಪರಿಹಾರ ಮತ್ತು ಪುನರ್ವಸತಿ ಪ್ರಯತ್ನಗಳು, ತುರ್ತು ಪರಿಸ್ಥಿತಿಯ ಸಮಯದಲ್ಲಿ ಪ್ರತಿರೋಧ ಮತ್ತು ರಾಜಕೀಯ ಅಥವಾ ಆರ್ಥಿಕ ಶಕ್ತಿಯ ಬದಲು ನಿಸ್ವಾರ್ಥ ಕಾರ್ಯದ ಮೂಲಕ ಸಂಘದ ನಿರಂತರ ಬೆಳವಣಿಗೆ ಮುಂತಾದ ಐತಿಹಾಸಿಕ ಹಂತಗಳನ್ನು ಅಂಬೇಕರ್ ಉಲ್ಲೇಖಿಸಿದರು.ಸಂಘವು ಸಮಾಜದ ಎಲ್ಲಾ ವರ್ಗಗಳನ್ನು ಸಂಪರ್ಕಿಸಲು ಪ್ರಯತ್ನಿಸುತ್ತದೆ. ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಏಕೀಕರಣವನ್ನು ಪ್ರತಿಪಾದಿಸುವಾಗ ಪ್ರತ್ಯೇಕತಾವಾದ, ಭಯೋತ್ಪಾದನೆ ಮತ್ತು ಸಾಮಾಜಿಕ ವಿಘಟನೆಯಂತಹ ವಿಭಜಕ ಪ್ರವೃತ್ತಿಗಳನ್ನು ವಿರೋಧಿಸುತ್ತದೆ. ಸಂಘ ಶತಮಾನೋತ್ಸವದ ಪ್ರಯುಕ್ತ ಪಂಚ ಪರಿವರ್ತನ (ಸಾಮಾಜಿಕ ಸಾಮರಸ್ಯ, ಸ್ವದೇಶಿ ಜೀವನ ಶೈಲಿ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ ಮತ್ತು ನಾಗರಿಕ ಶಿಷ್ಟಾಚಾರ)ದ ಕುರಿತು ಮಾತನಾಡಿದರು.

ಆರ್‌ಎಸ್ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಬೆಂಗಳೂರು ಮಹಾನಗರ ಸಂಘಚಾಲಕ ಮಿಲಿಂದ್ ಗೋಖಲೆ ವೇದಿಕೆಯಲ್ಲಿದ್ದರು.

ವಾಟ್ಸ್ಯಾಪ್ ಗ್ರೂಪ್ ಮೂಲಕ ಮಾಹಿತಿ ನೀಡಿ

• **ಬೆಂಗಳೂರು:** ವನ್ಯಜೀವಿ-ಮಾನವ ಸಂಘರ್ಷ ಇರುವ ಪ್ರದೇಶಗಳ ಸ್ಥಳೀಯ ಮುಖಂಡರ, ಗ್ರಾಮಗಳ ಜಮೀನು ಮಾಲೀಕರ ವಾಟ್ಸ್ಯಾಪ್ ಗ್ರೂಪ್ ಮಾಡಿ ಮಾಹಿತಿ ಪ್ರಸಾರ ಮಾಡುವಂತೆ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಚಿಕ್ಕಮಗಳೂರು ತಾಲೂಕು ಹುಣಸೆಹಳ್ಳಿ ಬಳಿಯ ತೋಟದಲ್ಲಿ ಕಳೆದ 7 ದಿನಗಳ ಅಂತರದಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಹಿನ್ನೆಲೆಯಲ್ಲಿ ಉನ್ನತಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ತುರ್ತು ಸಭೆ ನಡೆಸಿದ ಸಚಿವರು ಸಲಹೆ ಸೂಚನೆ ನೀಡಿದರು. ಅರಣ್ಯದಂಚಿನ ಜಮೀನುಗಳಲ್ಲಿ ವನ್ಯಜೀವಿಗಳ ಸಂಚಾರದ ಬಗ್ಗೆ ಕಮಾಂಡ್ ಕೇಂದ್ರಕ್ಕೆ ಮಾಹಿತಿ ಬಂದ ಕೂಡಲೇ ತೋಟದ ಬೆಳೆಗಾರರ ಸಂಘಟನೆ ಮತ್ತು ಕಾರ್ಮಿಕ ಸಂಘಟನೆಗಳಿಗೆ, ಸ್ಥಳೀಯ ಮುಖಂಡರಿಗೆ ಮಾಹಿತಿ ರವಾನಿಸಲು ಕ್ರಮ ವಹಿಸುವಂತೆ ತಿಳಿಸಿದರು.

ಥರ್ಮಲ್ ಡ್ರೋನ್ ಬಳಕೆಗೆ ಸಲಹೆ: ಮಾನವ ಜೀವ ಅತ್ಯಮೂಲ್ಯವಾದ್ದು, ಒಂದು ಜೀವಹಾನಿ ಆದ ಬಳಿಕ ಮತ್ತೊಂದು ಜೀವ ಹಾನಿ ಆಗಿರುವುದು ಅತ್ಯಂತ ನೋವಿನ ಸಂಗತಿ. ಅಧಿಕಾರಿಗಳು ಮತ್ತು ಸಿಬ್ಬಂದಿ ಇಂತಹ ಘಟನೆ ಮರುಕಳಿಸದಂತೆ 24/7 ನಿಗಾ ಇಡಬೇಕು. ಕಡ್ಡಾಯವಾಗಿ ಸೆಕ್ಷನ್ 144 ಜಾರಿ ಮಾಡಿ ವನ್ಯಜೀವಿ ಸೆರೆ ಕಾರ್ಯಾಚರಣೆ ನಡೆಸಬೇಕು. ಅತ್ಯಾಧುನಿಕ ಸಲಕರಣೆಗಳಾದ ಥರ್ಮಲ್ ಡ್ರೋನ್ ಬಳಕೆ ಮಾಡಬೇಕು ಎಂದು ಸೂಚಿಸಿದರು.

ಮಾಹಿತಿಯ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯದ ಹೊರಗೆ 35 ಆನೆಗಳು 3 ಗುಂಪಿನಲ್ಲಿ ಸಂಚರಿಸುತ್ತಿದ್ದು, ಬೇಸಿಗೆಯಲ್ಲಿ ಅವುಗಳು ಕಾಡಿನಿಂದ ಹೊರಬರುವುದು ಸಾಮಾನ್ಯ. ಆದಾಗ್ಯೂ ಸಿಬ್ಬಂದಿ ಮತ್ತು ಅಧಿಕಾರಿಗಳು ವನ್ಯಜೀವಿ-ಮಾನವ ಸಂಘರ್ಷ ಆಗದಂತೆ ನಿಗಾ ಇಡಬೇಕು. ಪ್ರತಿ ವರ್ಷ ವನ್ಯಜೀವಿ-ಮಾನವ ದಾಳಿಯಲ್ಲಿ ಆಗುತ್ತಿರುವ ಸಾವಿನ ಸಂಖ್ಯೆ ಇಳಿಕೆಯಾಗಬೇಕೇ ಹೊರತು, ಹೆಚ್ಚಳ ಆಗಬಾರದು ನೀವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿ ಎಂದು ತಿಳಿಸಿದರು.



ಸಫಾರಿ ಪುನಾರಂಭ: ಕಾಡಿನಂಚಿನ ಗ್ರಾಮಗಳಲ್ಲಿ ಸಭೆ : ನಾಗರಹೊಳೆ ಮತ್ತು ಬಂಡೀಪುರದಲ್ಲಿ ಸಫಾರಿ ಪುನಾರಂಭ ಮಾಡಿರುವ ಬಗ್ಗೆ ಕೆಲವರು ಮಾತ್ರವೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ರಾಜ್ಯ ಸರ್ಕಾರ ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35 ರಷ್ಟನ್ನು ಕಾಡಿನಂಚಿನ ಗ್ರಾಮದ ಜನರ ಕಲ್ಯಾಣಕ್ಕಾಗಿ ಬಳಸಲು ತೀರ್ಮಾನಿಸಿದ್ದು, ಗ್ರಾಮಗಳಲ್ಲಿ ಸಭೆ ನಡೆಸಿ, ಸ್ಥಳೀಯರ ಅಗತ್ಯಕ್ಕೆ ಅನುಗುಣವಾಗಿ ಕಾರ್ಯಕ್ರಮ ರೂಪಿಸಬೇಕು. ಯುವಜನರಿಗೆ ಕೌಶಲ ತರಬೇತಿ ನೀಡಬೇಕು, ಕಾಡಿನಂಚಿನ ಶಾಲೆ- ಕಾಲೇಜುಗಳಿಗೆ ಅಗತ್ಯ ಸಲಕರಣೆ ನೀಡಬೇಕು. ವನ್ಯಜೀವಿಗಳು ನಾಡಿಗೆ ಬಂದಾಗ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಅರಿವು ಮೂಡಿಸಲು ತಿಳಿಸಿದರು.

ವನ್ಯಜೀವಿ-ಮಾನವ ಸಂಘರ್ಷ ತಡೆಯಲು ಅಧಿಕಾರಿಗಳಿಗೆ ಖಂಡ್ರೆ ಸೂಚನೆ

ನಿರ್ಲಕ್ಷ್ಯ ತೋರಿದರೆ ದೂರು

ಚಿಕ್ಕಮಗಳೂರಿನಲ್ಲಿ ಕಳೆದ ವಾರ ಆನೆ ದಾಳಿಯಿಂದ ವ್ಯಕ್ತಿ ಮೃತಪಟ್ಟ ಬಳಿಕ, ಆನೆ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಸ್ಥಳೀಯರಿಗೆ ತೋಟಕ್ಕೆ ಹೋಗದಂತೆ ಮಾಹಿತಿ ನೀಡಲಾಗಿತ್ತು. ಆದಾಗ್ಯೂ ತೋಟಕ್ಕೆ ಹೋದ ಕಾರಣ ಈ ಸಾವು ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದರು. ಅರಣ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿದ ಬಳಿಕವೂ ತೋಟದ ಮಾಲೀಕರು ಕಾರ್ಮಿಕರನ್ನು ತೋಟಕ್ಕೆ ಕಳಿಸಿದರೆ ಅಂತಹ ಮಾಲೀಕರಿಗೆ ಎಚ್ಚರಿಕೆ ನೀಡಿ, ತೋಟದ ಮಾಲೀಕರಿಗೂ ಜವಾಬ್ದಾರಿ ಇರಬೇಕು. ನಿರ್ಲಕ್ಷ್ಯ ತೋರಿದರೆ ದೂರು ದಾಖಲಿಸಿ ಎಂದು ತಿಳಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಉಡುಪಿ ಪರ್ಯಾಯದಲ್ಲಿ ಜಿಲ್ಲಾಧಿಕಾರಿಯವರು ಸಾಂಪ್ರದಾಯಿಕವಾಗಿ ಭಗವಾ ಧ್ವಜ ಹಾರಿಸಿದ್ದನ್ನು ವಿರೋಧಿಸಿದ್ದ ಕಾಂಗ್ರೆಸ್ಸಿಗರು ಹಲವು ಕಡೆಗಳಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿದಾಗ ಎಲ್ಲಿದ್ದರು?

– ಕ್ವಾಶ್ಚನ್ ಬ್ರಿಜೇಶ್ ಚೌಟ

-ಬ್ರದರ್ಸ್ ಬೇರೆ, ಅದರ್ಸ್ ಬೇರೆ. ತಪ್ಪಾಗಿ ಅಂದ ಬ್ರದರ್ಸ್ ಬಾಂಧವ್ಯವನ್ನು ಬಿಡೋದಕ್ಕಾಗುತ್ತಾ?

ದಿನ ಭವಿಷ್ಯ

ಮೇಷ ಗ್ರಹಗತಿ ನಿಮಗೆ ಪೂರಕ. ವೃತ್ತಿಯಲ್ಲಿ ಉನ್ನತಿ. ವೈಯಕ್ತಿಕ ಚಿಂತೆ ಪರಿಹಾರದ ಲಕ್ಷಣ ತೋರಲಿದೆ. ಮುನಿಸು ದೂರ, ಸಂಬಂಧ ಹತ್ತಿರ.

ವೃಷಭ ಇತ್ತೀಚಿನ ಕೆಲ ಕೆಲಸಗಳ ಪರಾಮರ್ಶೆ ನಡೆಸಿ. ತಪ್ಪಿದ್ದರೆ ತಿದ್ದಿಕೊಳ್ಳಿ. ಟೀಕೆಗಳಿಗೆ ನೋಯದಿರಿ. ಪ್ರಭಾವಿ ವ್ಯಕ್ತಿಗಳ ಸಂಪರ್ಕ ಸಾಧ್ಯವಾಗಲಿದೆ.

ಮಿಥುನ ದೈಹಿಕವಾಗಿ, ಮಾನಸಿಕವಾಗಿ ಇಂದು ಬಳಲುವಷ್ಟು ಕೆಲಸ. ಆರೋಗ್ಯ ಏರುಪೇರು. ಆತ್ಮೀಯರ ಸಂಗ ನೆಮ್ಮದಿ ತರಲಿದೆ. ಧನವ್ಯಯ.

ಕಟಕ ನಿಮ್ಮ ಮಾನಸಿಕ ದೃಢತೆ ಕೆಲವರಿಗೆ ಹೊಟ್ಟೆಯುರಿ ತರಲಿದೆ. ಪ್ರೀತಿಯ ವಿಷಯದಲ್ಲಿ ಮನಃಪರಿವರ್ತನೆ ಆದೀತು. ಆರೋಗ್ಯ ಸ್ಥಿರ.

ಸಿಂಹ ಅಧಿಕ ಕೆಲಸದ ಒತ್ತಡ. ಸಂಗಾತಿ ಜತೆ ವಿರಸದಿಂದ ಮನಸ್ಸು ಅಶಾಂತ. ಸ್ವಂತ ಉದ್ದಿಮೆಯಲ್ಲಿ ಹಿನ್ನಡೆ ಉಂಟಾದೀತು.

ಕನ್ಯಾ ನಿಮ್ಮ ನಿರ್ಧಾರ ದೀರ್ಘಾವಧಿ ಪರಿಣಾಮ ಬೀರಬಹುದು. ಯೋಚಿಸಿ ನಿರ್ಧಾರ ಕೈಗೊಳ್ಳಿ. ಸಣ್ಣ ವಿಷಯವೊಂದು ಮನಸ್ಸಿಗೆ ಕಿರಿಕಿರಿ ಸೃಷ್ಟಿಸಲಿದೆ.

ತುಲಾ ವೃತ್ತಿ ಕ್ಷೇತ್ರದಲ್ಲಿ ಎಲ್ಲರನ್ನು ಪೂರ್ಣವಾಗಿ ನಂಬದಿರಿ. ಹಠ ವರ್ತನೆಗಳ ಜತೆ ಎಚ್ಚರವಿರಲಿ. ಆಧ್ಯಾತ್ಮಿಕ ಚಿಂತನೆ ಆವರಿಸಬಹುದು.

ವೃಶ್ಚಿಕ ಸಾಮಾಜಿಕ, ಖಾಸಗಿ ಬದ್ಧತೆ ಈಡೇರಿಸಬೇಕಾದ ಒತ್ತಡ ಎದುರಿಸುವಿರಿ. ಕೆಲಸದಿಂದ ವಿರಾಮ ಸಿಗದು. ಕೌಟುಂಬಿಕ ಶಾಂತಿ ಭಂಗ ಬಂದೀತು.

ಧನು ಭಾವನಾತ್ಮಕ ಸವಾಲು ಎದುರಿಸುವಿರಿ. ಮನೋನಿಗ್ರಹ ಅವಶ್ಯ. ಬಹುಮುಖ್ಯ ಬಯಕೆ ಈಡೇರುವ ಕಾಲ ಬಂದಿದೆ. ಧನಪ್ರಾಪ್ತಿ.

ಮಕರ ಅಂತಃಪ್ರೇರಣೆ ಪ್ರಕಾರ ನಡಕೊಳ್ಳಿ. ಅದು ನಿಮ್ಮನ್ನು ಉನ್ನತಿಗೆ ಕೊಂಡೊಯ್ಯಲಿದೆ. ಸಣ್ಣ ವಿಷಯಕ್ಕೆ ಜಗಳ ಕಾಯಲು ಹೋಗಬೇಡಿ.

ಕುಂಭ ಇಂದು ತಾಳ್ಮೆ ಮುಖ್ಯ. ಪ್ರತಿಕೂಲ ಸನ್ನಿವೇಶ ಎದುರಾದರೂ ಧೃತಿಗೆಡದಿರಿ. ಬಳಿಕ ಎಲ್ಲವೂ ತಾನಾಗಿ ಸರಿಹೋಗಲಿದೆ.

ಮೀನ ಹೊಸತಾದುದನ್ನು ಅಳವಡಿಸಲು ಸಕಾಲ. ಕೆಲ ವಿಚಾರಗಳಲ್ಲಿ ಬದಲಾವಣೆ ತಂದುಕೊಳ್ಳಿ. ಸಂಘರ್ಷದ ಮನೋಭಾವ ಬಿಡಿ. ಹೊಂದಾಣಿಕೆ ಒಳಿತು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,6,2,0

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಎಚ್ಚರಿಕೆ

ಮಾ.11ರಿಂದ ಒಪಿಡಿ ಸ್ಥಗಿತ

• **ಬೆಂಗಳೂರು:** ಆರೋಗ್ಯ ಇಲಾಖೆಯ ನಾನ್ -ಕೇಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ, ವರ್ಗಾವಣೆ ಬದಲಾವಣೆ, ಕಾಲ-ಕಾಲಕ್ಕೆ ಸಮರ್ಪಕ ಔಷಧ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ವೈದ್ಯರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರು ಮಾ.11ರಿಂದ ಹೊರರೋಗಿಗಳ ಸೇವೆಯನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ಮುಂದಾಗಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಡಾ. ರವೀಂದ್ರನಾಥ್ ಎಂ. ಮೇಟಿ ಅವರು, ಮಾ. 11ರಿಂದ 15ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಡಿಸ್ಪೆನ್ಸರಿಗಳಲ್ಲಿನ ಎಲ್ಲ ವೃಂದದ ವೈದ್ಯರು, ಅಧಿಕಾರಿಗಳು, ನೌಕರರು ಕಪ್ಪುಪಟ್ಟಿ ಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ, ತುರ್ತು ಸೇವೆಗಳನ್ನು ಮಾತ್ರ ನಿರ್ವಹಿಸುವ ಮೂಲಕ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ರಾಜ್ಯ ಸರ್ಕಾರ ಪ್ರತಿಭಟನೆಗೆ ಸ್ಪಂದಿಸಿ, ಬೇಡಿಕೆಗಳನ್ನು ಈಡೇರಿಸದಿದ್ದರೆ ಮಾ.16ರಂದು ಇಲಾಖೆಯ ಎಲ್ಲ ನೌಕರರು, ಕರ್ತವ್ಯಕ್ಕೆ ಅನಿರ್ದಿಷ್ಟಾವಧಿವರೆಗೆ ಗೈರು ಹಾಜರಾಗುವ ಮೂಲಕ ಮುಷ್ಕರ ಕೈಗೊಳ್ಳಲು ನಿರ್ಧರಿಸಲಾಗಿದೆ. ಈ ಮುಷ್ಕರಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೂಡ ಸಂಪೂರ್ಣ ಬೆಂಬಲ ನೀಡಿದೆ ಎಂದು ತಿಳಿಸಿದರು.

ಆರೋಗ್ಯ ಇಲಾಖೆಯ ತಾಂತ್ರಿಕ ಹುದ್ದೆಗಳಿಗೆ ಇಲಾಖೆಯ ಅನುಭವಿ, ಪರಿಣಿತ ತಜ್ಞರನ್ನು ನಿಯೋಜಿಸುವ ಬದಲು, ಐಎಎಸ್ ಅಧಿಕಾರಿಗಳನ್ನೇ ನಿಯೋಜನೆ ಮಾಡಲಾಗುತ್ತಿದೆ. ಒಬ್ಬರು ವೈದ್ಯರಿಲ್ಲ. ವೈದ್ಯರನ್ನು ಮೂಲೆಗುಂಪು ಮಾಡಲಾಗುತ್ತಿದೆ. ಬದಲಾಗಿ ಆರೋಗ್ಯ ಇಲಾಖೆಯ ಎನ್-ಕೇಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ ಮತ್ತು ವರ್ಗಾವಣೆಗೆ ಆರೋಗ್ಯ ಇಲಾಖೆಯ ವೈದ್ಯರು, ಅಧಿಕಾರಿ, ನೌಕರರನ್ನೇ ನಿಯೋಜಿಸಬೇಕು ಎಂದು ಒತ್ತಾಯಿಸಿದರು.



ಪ್ರಮುಖ ಬೇಡಿಕೆಗಳು

- ನಿಯಮದಂತೆ ಸೇವಾ ನಿರತ ಅಧಿಕಾರಿಗಳು, ಸಿಬ್ಬಂದಿಗೆ ಉನ್ನತ ವ್ಯಾಸಾಂಗಕ್ಕೆ ಅವಕಾಶ ನೀಡಬೇಕು.
- ವರ್ಗಾವಣೆ ಕಾಯಿದೆಯಲ್ಲಿ ನ್ಯೂನತೆಗಳನ್ನು ಶೀಘ್ರ ಸರಿಪಡಿಸಬೇಕು.
- ಖಾಲಿಯಿರುವ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು. ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ನೀಡಬೇಕು.
- ಕೇಂದ್ರ ಪುರಸ್ಕೃತ ಯೋಜನೆಯಡಿ ಕೆಲಸ ಮಾಡುವ 6 ಸಾವಿರ ನೌಕರರಿಗೆ, ತಿಂಗಳ ಮೊದಲ ವಾರದಲ್ಲೇ ಸಂಬಳ ನೀಡುವುದು.
- ವೈದ್ಯರು, ತಜ್ಞರು ಮತ್ತು ಸಿಬ್ಬಂದಿಗಳಿಗೆ ಸಿಜಿಎಚ್‌ಎಸ್/ಎಐಸಿಟಿಇ ಮಾದರಿಯಲ್ಲಿ ವೇತನ ನೀಡಬೇಕು.

ನೌಕರರು ಕೇಳಿರುವ ಬೇಡಿಕೆಗಳು ಸುಲಭವಾಗಿ ಈಡೇರಿಸಬಹುದಾಗಿದೆ. ಆದರೆ, ಆಯಾ ಕಾಲಘಟ್ಟದಲ್ಲಿ ಕೆಲಸ ಮಾಡುವ ಇಲಾಖೆಯ ಅಧಿಕಾರಿಗಳ ಪ್ರತಿಷ್ಠೆಯಿಂದ ಇದು ಸಾಧ್ಯವಾಗುತ್ತಿಲ್ಲ. ಹಾಗಾಗಿ, ರಾಜ್ಯ ಸರಕಾರಿ ನೌಕರರ ಸಂಘ ಈ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಿದೆ.

■ ಸಿ.ಎಸ್.ಷಡಾಕ್ಷರಿ, ರಾಜ್ಯಾಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ನೌಕರರು ಹಲವು ವರ್ಷಗಳಿಂದ ಸಾಕಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಪರಿಹರಿಸುವ ಕುರಿತು ಹಲವು ಸಭೆ, ಚರ್ಚೆಗಳಾದರೂ, ಬೇಡಿಕೆ ಮಾತ್ರ ಈಡೇರಿಲ್ಲ. ಹಾಗಾಗಿ ಅಂತಿಮವಾಗಿ ಮುಷ್ಕರದ ನಿರ್ಧಾರ ಮಾಡಲಾಗಿದೆ. ಈ ಕುರಿತು ಈಗಾಗಲೇ ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಕೂಡ ನೀಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆರೋಗ್ಯ ಇಲಾಖೆ ನೌಕರರ ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಿ. ಬಳ್ಳಾರಿ, ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಕಾರ್ಯದರ್ಶಿ ಡಾ.ಪಿ.ಆರ್.ತಿಮ್ಮರಾಜು ಸೇರಿದಂತೆ ಇತರರಿದ್ದರು.

ಬಿಜೆಪಿ ನಿಯೋಗ ರಾಜ್ಯಪಾಲರ ಭೇಟಿ

18 ತಿಂಗಳು ಕಳೆದರೂ ಒಳಮೀಸಲು ಜಾರಿ ಇಲ್ಲ

• **ಬೆಂಗಳೂರು:** ಒಳ ಮೀಸಲಾತಿ ಸಂಬಂಧಿಸಿ ಸುಪ್ರೀಂ ಕೋರ್ಟ್ ತೀರ್ಪು ಬಂದು 18 ತಿಂಗಳಾಗಿದ್ದರೂ ಕರ್ನಾಟಕದಲ್ಲಿ ಇನ್ನೂ ಒಳ ಮೀಸಲಾತಿ ಜಾರಿಯಾಗಿಲ್ಲ ಎಂದು ಬಿಜೆಪಿ ನಿಯೋಗವು ಸೋಮವಾರ ರಾಜ್ಯಪಾಲರನ್ನು ಭೇಟಿ ಮಾಡಿ ಗಮನ ಸೆಳೆದಿದೆ.

ನೆರೆಯ ತೆಲಂಗಾಣ, ಆಂಧ್ರಪ್ರದೇಶ, ದೂರದ ಹರ್ಯಾಣ ಸರ್ಕಾರಗಳು ಆರೇ ತಿಂಗಳಲ್ಲಿ ಒಳ ಮೀಸಲಾತಿಯನ್ನು ಜಾರಿ ಮಾಡಿ ನ್ಯಾಯ ಕೊಟ್ಟಿವೆ. ಆದರೆ, ಕರ್ನಾಟಕದಲ್ಲಿ ಮಾತ್ರ ಇನ್ನೂ ಜಾರಿಯಾಗಿಲ್ಲ. ನ್ಯಾ. ನಾಗಮೋಹನ್ ದಾಸ್ ಆಯೋಗ ರಚನೆ ಮಾದಿಗ ಸಮಾಜದ ಬೇಡಿಕೆ ಆಗಿರಲಿಲ್ಲ. ಈ ಹಿಂದೆ ತಯಾರಿಸಿದ ನ್ಯಾ. ಸದಾಶಿವ ಆಯೋಗದ ವರದಿ ಮತ್ತು ಮಾಧುಸ್ವಾಮಿ ಸಮಿತಿ ವರದಿಯ ದತ್ತಾಂಶಗಳು ಸರ್ಕಾರದ ಬಳಿ ಇದ್ದವು. ಆದರೂ ಸರ್ಕಾರ ನ್ಯಾ. ನಾಗಮೋಹನ ದಾಸ್ ಆಯೋಗ ರಚಿಸಿ ವರದಿ ಪಡೆಯಲು ನಿಶ್ಚಯಿಸಿತು. ಆರು ತಿಂಗಳು ಶ್ರಮವಹಿಸಿ, 110 ಕೋಟಿ ರೂ. ತೆರಿಗೆ ಹಣ ವ್ಯಯಿಸಿ ಆಯೋಗದಿಂದ ಶಿಫಾರಸುಗಳನ್ನು ಪಡೆಯಲಾಯಿತು ಎಂದು ನಿಯೋಗ ವಿವರಿಸಿದೆ.

ನ್ಯಾ. ನಾಗಮೋಹನ್ ದಾಸ್ ಶಿಫಾರಸ್ಸಿನಲ್ಲಿ ಪ್ರವರ್ಗ 1 (59 ಸಣ್ಣ ಅಲೆಮಾರಿ ಜಾತಿಗಳು) ಶೇ. 1, ಪ್ರವರ್ಗ 2 (ಮಾದಿಗ ಸಂಬಂಧಿತ ಜಾತಿಗಳು) ಶೇ. 6, ಪ್ರವರ್ಗ 3 (ಹೊಲೆಯ ಸಂಬಂಧಿತ ಜಾತಿಗಳು) ಶೇ. 5, ಪ್ರವರ್ಗ 4 (ಭೋವಿ, ಬಂಜಾರ, ಕೊರಚ, ಕೊರಮ ಜಾತಿಗಳು) ಶೇ. 4 ಹಾಗೂ ಪ್ರವರ್ಗ 5 (ಮೂಲ ಜಾತಿ ಗುರುತಿಸಿಕೊಳ್ಳದೆ ಉಳಿದ ಎಕೆ, ಎಡಿ, ಎಎ) ಶೇ. 1 ಮೀಸಲಾತಿಯನ್ನು ಉಲ್ಲೇಖಿಸಲಾಗಿದೆ. ಆದರೆ, ಸರ್ಕಾರ ಈ ಶಿಫಾರಸ್ಸನ್ನು ಏಕೆ ಪರಿಗಣಿಸಲಿಲ್ಲ? ಬದಲಾಗಿ ಸರ್ಕಾರ ರಾಜಕೀಯ ಒತ್ತಡಕ್ಕೆ ಮಣಿದು 6 : 6 : 5 ರ ಹೊಸ ಸೂತ್ರ ರೂಪಿಸಿತು. ಈ ಸೂತ್ರವನ್ನು ಯಾವ ಆಧಾರದಲ್ಲಿ ರೂಪಿಸಲಾಯಿತು ಎಂಬುದನ್ನು ಸರ್ಕಾರವಾಗಲಿ, ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ವಿವರಿಸಲಿಲ್ಲ ಎಂದು ಆಕ್ಷೇಪಿಸಿದೆ.

ಐತಿಹಾಸಿಕವಾದ ಒಳ ಮೀಸಲಾತಿಯನ್ನು ಜಾರಿ ಮಾಡುವ ಇಡೀ ಪ್ರಕ್ರಿಯೆಯಲ್ಲಿ ಸರ್ವಪಕ್ಷಗಳ ಪ್ರಮುಖರ ಸಭೆ ಮಾಡಲಿಲ್ಲ, ಸಲಹೆ ಕೇಳಲಿಲ್ಲ. ದಲಿತ ಸಂಘಟನೆಗಳ ಪ್ರಮುಖರ, ಹೋರಾಟಗಾರರ, ಕಾನೂನು ತಜ್ಞರ, ಬುದ್ಧಿಜೀವಿಗಳ ಸಭೆ ಕರೆಯಲಿಲ್ಲ ಎಂದು ಆಪಾದಿಸಿದೆ.

ನ್ಯಾ. ಸದಾಶಿವ ಆಯೋಗ, ಮಾಧುಸ್ವಾಮಿ ಆಯೋಗ, ನ್ಯಾ. ನಾಗಮೋಹನ್ ದಾಸ್ ಆಯೋಗ – ಮೂರೂ ವರದಿಗಳು ಅಲೆಮಾರಿ, ಸಣ್ಣ ಜಾತಿಗಳ ಗುಂಪಿಗೆ ಪ್ರತ್ಯೇಕ ಪ್ರವರ್ಗದಲ್ಲಿ ಶೇ. 1ರ ಮೀಸಲಾತಿ ಕೊಟ್ಟಿದ್ದವು. ಆದರೆ, ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ಗಾಳಿಗೆ ತೂರಿ ಬೇಕಾಬಿಟ್ಟಿಯಾಗಿ ಒಳ ಮೀಸಲಾತಿಯನ್ನು ಜಾರಿ ಮಾಡಲು ಹೋಗಿ ಜಾರಿಬಿದ್ದು ನಗೆಪಾಟಲಾಗಿದೆ. ಅಲೆಮಾರಿಗಳು, ಸಣ್ಣ ಜಾತಿಯವರನ್ನು ಬೀದಿಪಾಲು ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಶಾಸಕರಾದ ದುರ್ಯೋಧನ ಐಹೊಳೆ, ಬಸವರಾಜ್ ಮತ್ತಿಮಡು, ನಿವೃತ್ತ ಐಎಎಸ್ ಅಧಿಕಾರಿ ಲಕ್ಷ್ಮೀನಾರಾಯಣ್ ನಿಯೋಗದಲ್ಲಿದ್ದರು.

ರಾಷ್ಟ್ರ ನಿರ್ಮಾಣಕ್ಕೆ ಸಂಘ ಆದ್ಯತೆ

ಪುಟ 0 ➡ ಯಾಕೆಂದರೆ ಜಗತ್ತು ಇಂದು ಎದುರಿಸುತ್ತಿರುವ ಅನೇಕ ಸಮಸ್ಯೆ, ಸವಾಲುಗಳಿಗೆ ಉತ್ತರ ಕಂಡುಕೊಳ್ಳಬಲ್ಲ ಶಕ್ತಿ, ಸಾಮರ್ಥ್ಯಗಳಿರುವುದು ಭಾರತಕ್ಕೆ ಮಾತ್ರ ಎಂದು ವಿಶ್ವವಿಂದು ಭಾವಿಸುತ್ತಿದೆ ಎಂದರು. ಯಾರು ಹಿಂದುಗಳ ಏಕತೆಗಾಗಿ ಕೆಲಸ ಮಾಡುತ್ತಾರೋ ಅವರು ಮಾತೃಭೂಮಿಯ ಮೇಲೆ ನಿಷ್ಠೆ ಮತ್ತು ಭಕ್ತಿ ಹೊಂದಿರುವುದು ಅತ್ಯಗತ್ಯ. ನಿಜ, ಇಂದು ಜಗತ್ತು ಸತ್ಯಕ್ಕಿಂತ ಹೆಚ್ಚಾಗಿ ಶಕ್ತಿಯನ್ನು ಅರ್ಥ ಮಾಡಿಕೊಳ್ಳುತ್ತದೆ. ಆದ್ದರಿಂದ ಅಧಿಕಾರ, ಶಕ್ತಿ ಅತ್ಯಗತ್ಯ. ಆದರೆ ಈ ಅಧಿಕಾರದ ಬಳಕೆಯು ಸಂಯಮ ಮತ್ತು ನಿಯಂತ್ರಣದೊಳಗಿರಬೇಕು ಎಂದು ಅವರು ತಿಳಿಸಿದರು.

ಮಹಿಳೆಯರಿಗೆ ಶೇ.33 ಅಲ್ಲ, ಶೇ.50 ಪಾಲುದಾರಿಕೆ ಬೇಕು

ಪುಟ 0 ➡ **ಇದೇ ರೀತಿ ಉತ್ತರಾಖಂಡದಲ್ಲಿ ನದಿಗಳು ಮತ್ತು ಪರಿಸರವನ್ನು ಸಂರಕ್ಷಿಸಲು ಸ್ಥಳೀಯರ ಪಾಲುದಾರಿಕೆ ಮತ್ತು ಸಂಘಟಿತ ನೀತಿಯೊಂದರ ಅಗತ್ಯವಿದೆ ಎಂದು ಹೇಳಿದರು.**

ಯೂನುಸ್ ಕುತಂತ್ರ ಬಯಲು

ಪುಟ 0 ➡ ಬೆಂಗಾಲಿ ಡೈಲಿ ಕಾಲೆರ್ ಕಾಂಥೊ ಬಾಂಗ್ಲಾ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅಧ್ಯಕ್ಷ ಶಹಾಬುದ್ದೀನ್ ಸ್ಫೋಟಕ ಹೇಳಿಕೆಗಳನ್ನು ನೀಡಿದ್ದಾರೆ.

ಶಾಶ್ವತ ಅಶಾಂತಿ, ಅಸ್ಥಿರತೆ ಷಡ್ಯಂತ್ರ: ಬಾಂಗ್ಲಾದೇಶದಲ್ಲಿ ಶಾಶ್ವತವಾಗಿ ಅಶಾಂತಿಯ ವಾತಾವರಣ ಸೃಷ್ಟಿಸಬೇಕು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಅಸ್ಥಿರತೆ ತರಬೇಕೆಂಬ ದುರುದ್ದೇಶದಿಂದ ಯೂನುಸ್ ಆಡಳಿತವು ದೇಶದ ವಿರುದ್ಧವೇ ಹಲವು ಷಡ್ಯಂತ್ರಗಳನ್ನು ನಡೆಸಿದೆ. ನನ್ನ ಅಧಿಕಾರ ಕಸಿಯಲೂ ಯೂನುಸ್ ಕುತಂತ್ರ ನಡೆಸಿದ್ದರು. ಯೂನುಸ್ 14ರಿಂದ 15 ವಿದೇಶ ಪ್ರವಾಸಗಳನ್ನು ಮಾಡಿದ್ದು, ಅಧ್ಯಕ್ಷನಾದ ನನಗೆ ಒಮ್ಮೆಯೂ ಮಾಹಿತಿ ನೀಡಿರಲಿಲ್ಲ.

ಹೀಗೆ ಹಲವು ಬಾರಿ ಯೂನುಸ್ ಆಡಳಿತ ಅಸಾಂವಿಧಾನಿಕ ರೀತಿಯಲ್ಲಿ ನಡೆದುಕೊಂಡಿದೆ. ಮುಖ್ಯ ಸಲಹೆಗಾರನೇ ಸಾಂವಿಧಾನಿಕ ನಿಯಮಗಳ ಪಾಲನೆ ಮಾಡುತ್ತಿರಲಿಲ್ಲ ಎಂದು ಶಹಾಬುದ್ದೀನ್ ಆಕ್ರೋಶ ಹೊರಹಾಕಿದ್ದಾರೆ.

ಇರಾನ್-ಅಮೆರಿಕ ಯುದ್ಧ: ಭಾರತದ ಮೇಲೆ ಪರಿಣಾಮಗಳು

ಭಾರತದ ಕಚ್ಚಾ ತೈಲ ಮತ್ತು ಎಲ್‌ಎನ್‌ಜಿ ಆಮದಿನ ಬಹುತೇಕ ಪಾಲು ಪರ್ಷಿಯಾ ಮತ್ತು ಒಮನ್ ನಡುವಿನ ಹೊರ್ಮುಜ್ ಜಲಸಂಧಿ ಮೂಲಕ ತಲುಪುತ್ತವೆ. ಇರಾನ್ ಮೇಲೆ ಅಮೆರಿಕ ದಾಳಿ ನಡೆಸುವುದರಿಂದ ಕಚ್ಚಾ ತೈಲ ಆಮದು ವೆಚ್ಚ ಏಕಾಏಕಿ ಭಾರೀ ಏರಿಕೆಯಾಗಲಿದೆ. ಇದರಿಂದ ತೈಲ ಆಮದು ಮಾಡಿಕೊಳ್ಳುವ ಭಾರತೀಯ ಗ್ರಾಹಕರು ಮತ್ತು ವ್ಯವಹಾರಗಳು ಹಣದುಬ್ಬರ ಎದುರಿಸಬೇಕಾದ ಸ್ಥಿತಿ ಬರುವ ಸಾಧ್ಯತೆಯಿದೆ.

- ತೈಲ, ಎಲ್‌ಎನ್‌ಜಿ, ರಾಸಾಯನಿಕ, ರಸಗೊಬ್ಬರ ಬೆಲೆ ಏರಿಕೆ
- ಉಳಿದೆಲ್ಲಾ ಉದ್ಯಮ ಮತ್ತು ಆಹಾರದ ವೆಚ್ಚ ಏರಿಕೆ ಸಾಧ್ಯತೆ
- ಹೂಡಿಕೆದಾರರ ಈಕ್ವಿಟಿ ಮಾರಾಟ ಮಾಡಿ, ಸ್ವರ್ಣದಂತಹ ಸುರಕ್ಷಿತ ಹೂಡಿಕೆ ಮಾಡುವ ಸಾಧ್ಯತೆ
- ಮಧ್ಯಪ್ರಾಚ್ಯದ ಪ್ರಾದೇಶಿಕ ಅಸ್ಥಿರತೆಗೆ ಭಾರತೀಯ ಮಾರುಕಟ್ಟೆ ಕುಸಿಯುವ ಅಪಾಯ

ಜಾಗತಿಕ ಪರಿಣಾಮಗಳು

- ಮಧ್ಯಪ್ರಾಚ್ಯದಲ್ಲಿ ಪ್ರಾದೇಶಿಕ ಅಸ್ಥಿರತೆ
- ತೈಲ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಬೆಲೆ ಏರಿಕೆ
- ಹಲವು ರಾಷ್ಟ್ರಗಳಲ್ಲಿ ಹಣದುಬ್ಬರ ಸಮಸ್ಯೆ
- ಜಾಗತಿಕ ಇಂಧನ ಪೂರೈಕೆ ಸರಪಣಿ ಅಸ್ತವ್ಯಸ್ತವಾಗುವ ಆತಂಕ
- ವಿಶ್ವ ಷೇರು ಮಾರುಕಟ್ಟೆ ಪಾತಾಳಕ್ಕಿಳಿಯುವ ಅಪಾಯ
- ಗಲ್ಫ್ ರಾಷ್ಟ್ರಗಳ ಮೂಲಕ ಸಾಗುವ ನೌಕೆಗಳ ಇನ್ಶೂರೆನ್ಸ್ ವೆಚ್ಚ ಏರಿಕೆಯಾಗುವ ಸಾಧ್ಯತೆ
- ಜಾಗತಿಕ ವ್ಯಾಪಾರ ವೇಗ ಕುಂಠಿತ
- ಮಧ್ಯಪ್ರಾಚ್ಯ, ಅಮೆರಿಕ, ಚೀನಾ, ರಷ್ಯಾ ಭಾಗಿಯಾದರೆ ಜಾಗತಿಕ ಅಸ್ಥಿರತೆ ಇನ್ನಷ್ಟು ಏರಿಕೆ ಸಾಧ್ಯತೆ

ಮೆರವಣಿಗೆ ವೇಳೆ ಗಲಾಟೆ: 8 ಜನರ ಸೆರೆ

• **ಬಾಗಲಕೋಟೆ:** ಛತ್ರಪತಿ ಶಿವಾಜಿ ಮೆರವಣಿಗೆ ಸಂದರ್ಭದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಎಂಟು ಜನರನ್ನು ಬಂಧನ ಮಾಡಲಾಗಿದ್ದು, ಇನ್ನೂ ಕೆಲವರ ಮೇಲೆ ತನಿಖೆ ನಡೆಯುತ್ತಿದೆ. ವಿಡಿಯೋ ಪರಿಶೀಲಿಸಿ ತಪ್ಪು ಮಾಡಿದವರ ಮೇಲೆ ಪಕ್ಕಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ಪ್ರಕರಣಗಳು ದಾಖಲಾಗಿವೆ. ಪ್ರಕರಣದಲ್ಲಿ ಕಿಡಿಗೇಡಿಗಳನ್ನು ಬಂಧಿಸಲಾಗಿದೆ. ಕೆಲವು ಸಾಮಾಜಿಕ ಜಾಲತಾಣಗಳ ಮುಖಾಂತರ ಕೆಲವು ಸಂಘಟನೆಯವರು ಬಾಗಲಕೋಟೆ ಶಹರದಲ್ಲಿ ಫೆ.26 ರಂದು ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ತಿಳಿದು ಬಂದಿರುತ್ತದೆ.

ಮನರೇಗಾ ಸ್ಥಾಪನೆಗೆ ಹೋರಾಟ

ಪುಟ 0 ➡ ಇದೇ ಕಾಯ್ದೆಯಲ್ಲದೇ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ಸೇರಿದಂತೆ ಹಲವು ಜನಪರ ಕಾಯ್ದೆಗಳನ್ನು ಜಾರಿಗೆ ತಂದಿದ್ದರು. ಆದರೆ ಈ ಎಲ್ಲ ಜನಪರ ಕಾಯ್ದೆಗಳನ್ನು ದುರ್ಬಲಗೊಳಿಸುವ ಕೆಲಸವನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾಡುತ್ತಿದೆ ಎಂದರು.

ಮನರೇಗಾದಲ್ಲಿ 12.16 ಕೋಟಿ ಜನರಿಗೆ ಉದ್ಯೋಗ: ಸದನದಲ್ಲಿ ಕೇವಲ 8 ಗಂಟೆಗಳ ಕಾಲ ಚರ್ಚೆ ಮಾಡಿದ ಕೇಂದ್ರ ಸರ್ಕಾರ, ನಂತರ ಹೊಸ ಕಾಯ್ದೆಯನ್ನು ಜಾರಿಗೆ ತಂದಿದೆ. ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಜೀವಿಕ ಮಿಷನ್ ಗ್ರಾಮೀಣ ಕಾಯ್ದೆ, 12.16 ಕೋಟಿ ಜನರು ಕೆಲಸ ಪಡೆಯುತ್ತಿದ್ದರು. ಇದರಲ್ಲಿ ಸುಮಾರು 53% ಉದ್ಯೋಗ ಪಡೆಯುತ್ತಿದ್ದರು. ಅಲ್ಲದೇ ಪರಿಶಿಷ್ಟ ಜಾತಿಯ 17% ಮತ್ತು ಪರಿಶಿಷ್ಟ ವರ್ಗದ 11% ಜನರು ಉದ್ಯೋಗ ಪಡೆಯುತ್ತಿದ್ದರು. ಈ ಎಲ್ಲ ಜನರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ ಎಂದರು.

ನಿರಂತರ ಆಂದೋಲನ

ವಿಬಿ ಜಿ ರಾಮ್ ಜಿ ಯೋಜನೆಯನ್ನು ಸಂಪೂರ್ಣವಾಗಿ ರದ್ದುಪಡಿಸಿ, ಮನರೇಗಾವನ್ನು ಮರು ಜಾರಿಗೊಳಿಸಬೇಕು. ಜನರ ಉದ್ಯೋಗದ ಹಕ್ಕನ್ನು ಮರುಸ್ಥಾಪಿಸಬೇಕು. ಪಂಚಾಯತ್ ಸ್ವಯಂ ಆಡಳಿತದ ಹಕ್ಕು ಮರುಸ್ಥಾಪನೆ, ದಿನಕ್ಕೆ 400 ರೂ.ಗಳ ಕನಿಷ್ಠ ವೇತನವನ್ನು ದೇಶಾದ್ಯಂತ ನೀಡಬೇಕು. ಈ ಬೇಡಿಕೆಗಳು ಈಡೇರುವವರೆಗೆ ನಮ್ಮ ಆಂದೋಲನ ನಿಲ್ಲುವುದಿಲ್ಲ ಎಂದರು. ರೈತವಿರೋಧಿ ಕಾಯ್ದೆಗಳನ್ನು ಹೋರಾಟದ ಫಲವಾಗಿ ರದ್ದುಗೊಳಿಸಲಾಯಿತು. ಅದೇ ರೀತಿಯಲ್ಲಿ ಈ ಹೋರಾಟ ನಿಲ್ಲುವುದಿಲ್ಲ. ಈ ಹೋರಾಟಕ್ಕೆ ರಾಜ್ಯದ ಜನರೆಲ್ಲರೂ ನಮ್ಮ ಜತೆಯಾಗಬೇಕು. ಹಳ್ಳಿಗಾಡಿನ ಜನರಿಗೆ ಅನುಕೂಲ ಕಲ್ಪಿಸುವ ಮನರೇಗಾ ಯೋಜನೆಯ ಮರುಸ್ಥಾಪಿಸುವ ಕಾಂಗ್ರೆಸ್‌ನ ಸಾರ್ಥಕ ಉದ್ದೇಶವನ್ನು ಜನರು ಬೆಂಬಲಿಸಬೇಕು ಎಂದು ಕರೆ ನೀಡಿದರು.

ಮಹಾತ್ಮಾ ಗಾಂಧಿ ಅವರ ಹೆಸರಿನಲ್ಲಿ 20 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರ ಬಡವರಿಗಾಗಿ ಉದ್ಯೋಗ ಖಾತರಿ ಕಾರ್ಯಕ್ರಮ ನೀಡಿತ್ತು. ಇದು ದೇಶದ ಪಾಲಿಗೆ ಕ್ರಾಂತಿಕಾರಿ ಕಾರ್ಯಕ್ರಮ. ಇಂತಹ ಯೋಜನೆಯನ್ನು ಕೇಂದ್ರ ಸರ್ಕಾರ ಕಸಿಯುತ್ತಿದೆ. ಮನರೇಗಾ ಉಳಿಸಿ, ಹಳ್ಳಿಗಳು, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮಾ ಗಾಂಧಿ ಹೆಸರು ರಕ್ಷಿಸಬೇಕು.

■ ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ತ.ನಾಡು: 74 ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ

ಪುಟ 0 ➡ ಎಸ್‌ಐಆರ್ ಅಭಿಯಾನದ ವೇಳೆ 97.37 ಲಕ್ಷ ಮತದಾರರ ಹೆಸರುಗಳನ್ನು ಅಳಿಸಲಾಗಿದ್ದು, ಪರಿಷ್ಕರಣೆ ನಂತರ ಒಟ್ಟು 74,07,207 ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಪ್ರಸ್ತುತ ರಾಜ್ಯದ ಮತದಾರರ ಸಂಖ್ಯೆ 5.67 ಕೋಟಿಯಾಗಿದೆ ಎಂದರು.

18-19 ವರ್ಷದ ವಯೋಮಾನದ 7.40 ಲಕ್ಷ ಯುವ ಮತದಾರರನ್ನು ಪಟ್ಟಿಗೆ ಸೇರಿಸಲಾಗಿದೆ. ನಿರಂತರ ನವೀಕರಣ ಪ್ರಕ್ರಿಯೆ ತಕ್ಷಣದಿಂದಲೇ ಪ್ರಾರಂಭವಾಗುತ್ತದೆ ಎಂದು ತಿಳಿಸಿದರು.

2026ರ ಜ.1 ಅರ್ಹತಾ ದಿನಾಂಕವಾಗಿ ಪರಿಗಣಿಸಿ ಎಸ್‌ಐಆರ್ ಪ್ರಕ್ರಿಯೆ 2025ರ ಅ.27ರಿಂದ ರಾಜ್ಯದಲ್ಲಿ ನಡೆಸಲಾಗಿತ್ತು. ಅಂತಿಮ ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ. 2025ರ ಅ.27ರಂದು ರಾಜ್ಯದಲ್ಲಿ 6,41,14,587 ಮತದಾರರು ನೋಂದಾಯಿತರಾಗಿದ್ದರು. ಗಣನೆ ನಂತರ 2025ರ ಡಿ. 19ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಿದ್ದು, ಆ ವೇಳೆಗೆ ಮತದಾರರ ಸಂಖ್ಯೆ 5,43,76,756 ಆಗಿತ್ತು. ಡಿ.19, 2025ರಿಂದ ಜ.30, 2026ರವರೆಗೆ ದಾವೆಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯಲ್ಲಿ 27.53 ಲಕ್ಷ ಅರ್ಹ ಮತದಾರರ ಹೆಸರುಗಳನ್ನು ಸೇರಿಸಲಾಗಿದ್ದು, 4.23 ಲಕ್ಷ ಅನರ್ಹರ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂದು ಅವರು ಹೇಳಿದರು.

ಅಂತಿಮ ಪಟ್ಟಿಯ ಪ್ರಕಾರ ಪುರುಷ ಮತದಾರರು 2,77,38,925; ಮಹಿಳಾ ಮತದಾರರು 2,89,60,838; ತೃತೀಯ ಲಿಂಗ ಮತದಾರರು 7,617. 18-19 ವರ್ಷದ ವಯೋಮಾನದ ಒಟ್ಟು ಮತದಾರರು 12.51 ಲಕ್ಷ. ವಿಶಿಷ್ಟ ಚೇತನರು 4.63 ಲಕ್ಷ ಮತ್ತು 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕ ಮತದಾರರು 3.99 ಲಕ್ಷ ಎಂದು ಪಟ್ನಾಯಕ್ ತಿಳಿಸಿದ್ದಾರೆ.

ಇಂಡಿ ಒಕ್ಕೂಟದಲ್ಲಿ ಮತ್ತೆ ಬಿರುಕು

ಪುಟ 0 ➡ ಹಿರಿಯ ಕಾಂಗ್ರೆಸ್ ನಾಯಕಿ, ಮಾಜಿ ಕೇಂದ್ರ ಸಚಿವೆ ಮತ್ತು ಮಾಜಿ ರಾಜ್ಯಪಾಲರಾದ ಮಾರ್ಗರೇಟ್ ಆಳ್ವಾ, ಅಂತಾರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಶಿಸ್ತು ಮತ್ತು ಹೊಣೆಗಾರಿಕೆ ಮುಖ್ಯವೆಂದು ಹೇಳಿದ್ದಾರೆ. ಹೆಸರು ಬಹಿರಂಗಪಡಿಸಲಿಚ್ಚಿಸದ ಮತ್ತೊಬ್ಬ ಕಾಂಗ್ರೆಸ್ ಹಿರಿಯ ನಾಯಕರೊಬ್ಬರು, ಪ್ರತಿಭಟನೆ ಹಕ್ಕಾಗಿದ್ದರೂ, ವೇದಿಕೆ ಆಯ್ಕೆ ಸರಿಯಾಗಿರಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಸ್‌ಪಿ, ಆರ್‌ಜೆಡಿ ದೂರ: ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ(ಎಸ್‌ಪಿ) ಮತ್ತು ಲಾಲು ಪ್ರಸಾದ್ ಯಾದವ್ ಅವರ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಕೂಡ ಕಾಂಗ್ರೆಸ್ ಪ್ರತಿಭಟನೆಗೆ ಅಸಮಾಧಾನ ವ್ಯಕ್ತಪಡಿಸಿವೆ. ಅಖಿಲೇಶ್ ಯಾದವ್ ಬಿಜೆಪಿ ವಿರುದ್ಧ ಟೀಕೆ ನಡೆಸಿದರೂ, ವಿದೇಶಿ ಪ್ರತಿನಿಧಿಗಳನ್ನು ಅವಮಾನಿಸುವ ರೀತಿಯ ಪ್ರತಿಭಟನೆಗೆ ಬೆಂಬಲವಿಲ್ಲ ಎಂದಿದ್ದಾರೆ. ಆರ್‌ಜೆಡಿ ನಾಯಕ ಮನೋಜ್ ಜಾ ಕೂಡ ದೇಶದಲ್ಲಿ ಅಸಮಾಧಾನವಿದ್ದರೂ, ಪ್ರತಿಭಟನೆಗೆ ಇಂತಹ ವೇದಿಕೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಶದ ಗೌರವಕ್ಕೆ ಧಕ್ಕೆ : ಶಿವಸೇನೆ (ಯುಬಿಟಿ) ಪಕ್ಷದ ನಾಯಕರಾದ ಅರವಿಂದ್ ಸಾವಂತ್ ಮತ್ತು ಆದಿತ್ಯ ಠಾಕ್ರೆ ಮಾತನಾಡಿ, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಂತಹ ಪ್ರತಿಭಟನೆ ತಪ್ಪಿಸಬೇಕಿತ್ತು ಎಂದಿದ್ದಾರೆ. ಪಶ್ಚಿಮ ಬಂಗಾಳದ ಐಟಿ ಸಚಿವ, ಟಿಎಂಸಿ ನಾಯಕ ಬಾಬುಲ್ ಸುಪ್ರಿಯೋ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯೆ ನೀಡಿ, ಜಾಗತಿಕ ನಾಯಕರು ಮತ್ತು ಉದ್ಯಮಿಗಳ ಸಮ್ಮುಖದಲ್ಲಿ ನಡೆದ ಘಟನೆಯಿಂದ ದೇಶದ ಗೌರವಕ್ಕೆ ಧಕ್ಕೆಯಾಗಿದೆ ಎಂದಿದ್ದಾರೆ. ಚೆನ್ನೈನಲ್ಲಿ ಇಂಡಿ ಮೈತ್ರಿಯ ಮತ್ತೊಂದು ಒಳಬಿರುಕು ಸ್ಪಷ್ಟವಾಗಿದೆ. ಬಿಜೆಪಿ ವಿರುದ್ಧದ ಹೋರಾಟವನ್ನು ಎಂ.ಕೆ. ಸ್ಟಾಲಿನ್ ಮುನ್ನಡೆಸಬೇಕು ಎಂದು ತಮಿಳುನಾಡಿನ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಹೇಳಿದ್ದಾರೆ. ಇತರ ರಾಜ್ಯಗಳ ನಾಯಕರು ಎಂ.ಕೆ. ಸ್ಟಾಲಿನ್ ಅವರನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ನಾಯಕನಾಗಿ ನೋಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಸಚಿವ ಸ್ಥಾನಕ್ಕೆ ಬೇಡಿಕೆ

ಪುಟ 0 ➡ ಯುವಕರು ಮತ್ತು ಅನುಭವಿಗಳ ಸಮತೋಲನದ ಸಂಪುಟವು ದೂರದೃಷ್ಟಿಯ ನಾಯಕತ್ವದೊಂದಿಗೆ ಉತ್ತಮ ಆಡಳಿತ ಸಿಗಲಿದೆ ಎಂದು ನಾವು ಖಚಿತವಾಗಿ ಹೇಳುತ್ತೇವೆ. ಆದ್ದರಿಂದ, ಸಂಪುಟ ಪುನರ್‌ರಚನೆ ಸಮಯದಲ್ಲಿ ಕನಿಷ್ಠ ಐವರು ಹೊಸ ಶಾಸಕರನ್ನು ಕರ್ನಾಟಕದಲ್ಲಿ ಸಚಿವರನ್ನಾಗಿ ನೇಮಿಸಿಕೊಳ್ಳುವಂತೆ ನಾವು ನಿಮ್ಮನ್ನು ವಿನಂತಿಸುತ್ತೇವೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರದ ಅಮಾನವೀಯ ನಡೆ: ವಿಪಕ್ಷ ನಾಯಕ ಅಶೋಕ

ಬೆಂಗಳೂರು: ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಗಳಾದ ಭಿಕ್ಷುಕರ ಪುನರ್ವಸತಿಗಾಗಿ ಜನರಿಂದ ಸಂಗ್ರಹಿಸಿದ ಭಿಕ್ಷುಕರ ಉಪಕರವನ್ನೂ ನುಂಗಿ ನೀರು ಕುಡಿಯುತ್ತಿರುವ ಈ ಕಾಂಗ್ರೆಸ್ ಸರ್ಕಾರದ ನಡೆ ಅತ್ಯಂತ ಅಮಾನವೀಯ ಮತ್ತು ನಾಚಿಕೆಗೇಡು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಬಡವರ ಹೆಸರಲ್ಲಿ ಅಧಿಕಾರಕ್ಕೆ ಬಂದು, ಈಗ ದೀನ-ದಲಿತರ ಹಸಿವು ನೀಗಿಸಬೇಕಾದ ಹಣವನ್ನೂ ಬಿಡದೆ ಲೂಟಿ ಮಾಡುತ್ತಿರುವುದು ಈ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿ ಎಂದು ಟೀಕಿಸಿದ್ದಾರೆ.



ಸಾವಿರಾರು ಕೋಟಿ ಬಾಕಿ: ಬಿಬಿಎಂಪಿ (ಜಿಬಿಎ)ಯಿಂದ ಸಂಗ್ರಹವಾದ ಆರೋಗ್ಯ ಸೆಸ್ (256 ಕೋಟಿ ರೂ.), ಗ್ರಂಥಾಲಯ ಸೆಸ್ (218 ಕೋಟಿ ರೂ.) ಸೇರಿದಂತೆ ಸಾವಿರಾರು ಕೋಟಿ ರೂ.ಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸದೆ ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ. 2024-25ನೇ ಸಾಲಿನಲ್ಲಿ ಪಂಚಾಯತ್‌ಗಳು ಸಂಗ್ರಹಿಸಿದ 72.82 ಕೋಟಿ ರೂ.ಗಳಲ್ಲಿ ಕೇವಲ 21.55 ಕೋಟಿ ರೂ. ಮಾತ್ರ ಜಮೆಯಾಗಿದೆ. ಉಳಿದ 51 ಕೋಟಿ ರೂ.ಗಳು ಎಲ್ಲಿ ಹೋಯಿತು? ಎಂದು ಪ್ರಶ್ನಿಸಿದ್ದಾರೆ. ಸಿದ್ದರಾಮಯ್ಯ ಅವರೇ, ಅಹಿಂದ ಮತ್ತು ಬಡವರ ಪರ ಎಂದು ಬೊಬ್ಬೆ ಹೊಡೆಯುವ ನೀವು, ಭಿಕ್ಷುಕರ ಹೊಟ್ಟೆ ಮೇಲೆ ಹೊಡೆಯುವ ಈ ಪಾಪದ ಹಣದಲ್ಲಿ ಸರ್ಕಾರ ನಡೆಸುತ್ತಿದ್ದೀರಾ? ಜನರಿಂದ ಸಂಗ್ರಹಿಸಿದ ಪ್ರತಿಯೊಂದು ಪೈಸೆಗೂ ನೀವು ಲೆಕ್ಕ ನೀಡಲೇಬೇಕು. ಈ ಕೂಡಲೇ ಬಾಕಿ ಇರುವ ಎಲ್ಲಾ ಸೆಸ್ ಹಣವನ್ನು ಕೇಂದ್ರ ಪರಿಹಾರ ಸಮಿತಿಗೆ ಬಿಡುಗಡೆ ಮಾಡಬೇಕು ಮತ್ತು ಮಕ್ಕಳ ಪುನರ್ವಸತಿಗೆ ಕ್ರಮ ಕೈಗೊಳ್ಳಬೇಕು ಎಂದು ಅಶೋಕ ಎಚ್ಚರಿಸಿದ್ದಾರೆ.



ಮನರೇಗಾ ಬಚಾವೋ ಆಂದೋಲನದ ಅಂಗವಾಗಿ ಚಿಕ್ಕಬಳ್ಳಾಪುರದಲ್ಲಿ ಸೋಮವಾರ ಏರ್ಪಡಿಸಿದ್ದ ಬೈಕ್ ರ್ಯಾಲಿಯಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬೈಕ್ ಏರಿ ಕಾರ್ಯಕರ್ತರಿಗೆ ಸಾಥ್ ನೀಡಿದ ಪರಿ...

ಸ್ವಯಂಪ್ರೇರಿತ ಪಿಐಎಲ್ ವಿಲೇವಾರಿ ಮಾಡಿದ ಹೈ

ಬೆಂಗಳೂರು: ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮ ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿಯಂತ್ರಣ) ಮಸೂದೆಯು ಕಾಯ್ದೆ ರೂಪ ಪಡೆಯುವವರೆಗೆ ಜನಸಂದಣಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಪ್ರಮಾಣೀಕೃತ ಕಾರ್ಯವಿಧಾನ ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಸೋಮವಾರ ಹೈಕೋರ್ಟ್ ನಿರ್ದೇಶಿಸಿದ್ದು, ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಲೇವಾರಿ ಮಾಡಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಮುಂಭಾಗ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ನಡೆಸಿತು.

ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಸಾಕಷ್ಟು ಸಮಯ ತೆಗೆದುಕೊಂಡು ಎಸ್‌ಒಪಿ ಸಿದ್ಧಪಡಿಸಿದ್ದೇವೆ ಎಂದು ಜನವರಿ 13ರಂದು ರೂಪಿಸಿರುವ ಎಸ್‌ಒಪಿಯನ್ನು ಪೀಠಕ್ಕೆ ಸಲ್ಲಿಸಿದರು. ಅಮಿಕಸ್ ಕ್ಯೂರಿ ಎಸ್. ಸುಶೀಲಾ ಅವರು ಏನು ನಡೆಯಿತು ಎಂಬ ವಿಚಾರಕ್ಕೆ ನಾವು ಹೋಗುತ್ತಿಲ್ಲ. ನ್ಯಾಯಾಲಯ ಕೆಲವು ನಿರ್ದೇಶನಗಳನ್ನು ನೀಡಬೇಕು. ಈ ಅರ್ಜಿ ದಾಖಲಿಸಿಕೊಳ್ಳುವಾಗ ಒಂಭತ್ತು ಪ್ರಶ್ನೆಗಳನ್ನು ಎತ್ತಲಾಗಿತ್ತು. ಈ ಅರ್ಜಿಯ ಕುರಿತಾದ ಮಿತಿಯ ಅರಿವು ನನಗಿದೆ. ಕರ್ನಾಟಕ ಜನಸಂದಣಿ ನಿಯಂತ್ರಣ ಮಸೂದೆಯು ಕಾಯ್ದೆಯಾಗಿ ಜಾರಿಯಾಗುವರೆಗೆ ಎಸ್‌ಒಪಿ ಜಾರಿಗೊಳಿಸಬೇಕು ಎಂದರು. ಪೀಠವು ಈಗ ಎಸ್‌ಒಪಿ ಯಾಗಿದೆ. ಕಾನೂನು ಸದನ ಸಮಿತಿಯ ಮುಂದಿದೆ. ಇನ್ನೇನು ಬಾಕಿ ಇದೆ. ಕಾನೂನು ಜಾರಿಯಾದ ಮೇಲೆ ಅದು ಅಸ್ತಿತ್ವಕ್ಕೆ ಬರಲಿದೆ. ಅಲ್ಲಿಯವರೆಗೆ ಎಸ್‌ಒಪಿ ಪಾಲಿಸಬೇಕು. ಕಾಯ್ದೆ ಜಾರಿಯಾದ ಮೇಲೆ ಅಹವಾಲುಗಳಿದ್ದರೆ ಈ ಅರ್ಜಿಯನ್ನು ಪುನರ್ ತೆರೆಯಬಹುದು ಎಂದಿತು.

ಕಿರುಸುದ್ದಿ

ಮಹದೇವಪ್ಪ ಸಿಎಂ ಆದರೆ ಸಂತೋಷ: ವೆಂಕಟೇಶ್

ಮೈಸೂರು: ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ.ಮಹದೇವಪ್ಪ ಅವರು ಮುಖ್ಯಮಂತ್ರಿಯಾದರೆ ನನಗೆ ಸಂತೋಷವಾಗುತ್ತದೆ ಎಂದು ರೇಷ್ಮೆ ಮತ್ತು ಪಶುಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ್ ಹೇಳಿದರು. ಕಾಂಗ್ರೆಸ್ ಪಕ್ಷದಲ್ಲಿ ದಲಿತ ಸಿಎಂ ಕೂಗು ಎದ್ದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಸೋಮವಾರ ಮೈಸೂರಿನಲ್ಲಿ ಪ್ರತಿಕ್ರಿಯಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಎಚ್.ಸಿ.ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ. ಹೀಗಾಗಿ ಮಹದೇವಪ್ಪ ಸಿಎಂ ಆಗಲಿ ಎಂದು ಹಾರೈಸುತ್ತೇನೆ, ಸಿಎಂ ಆದರೆ ನನಗೆ ಖುಷಿಯಾಗುತ್ತದೆ ಎಂದು ಹೇಳಿದರು. ದಲಿತ ಸಿಎಂ ಕೂಗು ಪಕ್ಷದಲ್ಲಿ ಇದಿಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಸದ್ಯ ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಖಾಲಿ ಆದ ಮೇಲೆ ದಲಿತ, ಲಿಂಗಾಯತ, ಒಕ್ಕಲಿಗ, ಕುರುಬ್ ಹೀಗೆ ಯಾವುದಾದರೂ ಸಮುದಾಯದ ಒಬ್ಬರು ಮುಖ್ಯಮಂತ್ರಿ ಆಗುತ್ತಾರೆ ಎಂದರು.

ಎಂ. ಫಾರ್ಮಾ ಸೀಟು ಹಂಚಿಕೆ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಎಂ. ಫಾರ್ಮಾ ಕೋರ್ಸ್ ಪ್ರವೇಶಕ್ಕೆ ಎರಡನೇ ಹಾಗೂ ಅಂತಿಮ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಇಚ್ಛೆ /ಆಯ್ಕೆಗಳನ್ನು ದಾಖಲಿಸಲು ಫೆ.25 ರಂದು ಮಧ್ಯಾಹ್ನ 2 ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ)ದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ. ಫೆ.25 ರಂದು ಸಂಜೆ 8 ಗಂಟೆಯ ನಂತರ ತಾತ್ಕಾಲಿಕ ಹಾಗೂ ಫೆ.26 ರಂದು ಮಧ್ಯಾಹ್ನ 2 ಗಂಟೆ ಬಳಿಕ ಅಂತಿಮ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಹೇಳಿದ್ದಾರೆ. ಸೀಟು ಹಂಚಿಕೆಯಾದವರು ಫೆ.27 ರಿಂದ ಮಾ.4 ರವರೆಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರಗಳನ್ನು ಪಡೆಯಬೇಕು. ಮಾ.5ರ ಒಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ವಿವರಿಸಿದ್ದಾರೆ.ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳಿಗೆ ಈ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. ಈವರೆಗೂ ಯಾವುದೇ ಸೀಟು ಹಂಚಿಕೆಯಾಗದಿರುವ ಹಾಗೂ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳಿಗೆ ಆಪ್ಷನ್ಸ್ ದಾಖಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೆಇಎ ವೆಬ್‌ಸೈಟ್ ವೀಕ್ಷಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಸಭೆ ಮುಂದೂಡಿಕೆ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಫೆ. 28 ರಂದು ನಿಗದಿಯಾಗಿದ್ದ ಪೋಷಕ-ಶಿಕ್ಷಕರ ಸಭೆಯನ್ನು ಮಾ. 7ರಂದು ಮುಂದೂಡಲಾಗಿದೆ. ಫೆ. 28 ರಂದು ನಗರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಎಲ್ಲ ಶಿಕ್ಷಕರು ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ ಪೋಷಕ-ಶಿಕ್ಷಕರ ಸಭೆಯ ದಿನಾಂಕವನ್ನು ಮರು ನಿಗದಿ ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಪರಿಷ್ಕೃತ ಜ್ಞಾಪನಾ ಹೊರಡಿಸಿದ್ದಾರೆ.

ಯೋಜನೆ ಉಳಿಸಿ: ಹಳ್ಳಿಗಳು, ಕಾರ್ಮಿಕರನ್ನು ರಕ್ಷಿಸಿ: ಡಿಸಿಎಂ

ಮನ್ರೇಗಾ ಕಸಿಯುವ ಯತ್ನ

ಚಿಕ್ಕಬಳ್ಳಾಪುರ: ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ 20 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರವು ಬಡವರಿಗಾಗಿ ಉದ್ಯೋಗ ಖಾತರಿ ಕಾರ್ಯಕ್ರಮ ನೀಡಿತ್ತು. ಇದು ದೇಶದ ಪಾಲಿಗೆ ಕ್ರಾಂತಿಕಾರಿ ಕಾರ್ಯಕ್ರಮ" ಇಂತಹ ಯೋಜನೆಯನ್ನು ಕೇಂದ್ರ ಸರ್ಕಾರ ಕಸಿಯುತ್ತಿದೆ. ಮನರೇಗಾ ಉಳಿಸಿ, ಹಳ್ಳಿಗಳು, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮಾ ಗಾಂಧಿ ಹೆಸರು ರಕ್ಷಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವ್ ಆಂದೋಲನದಲ್ಲಿ ಅವರು ಮಾತನಾಡುತ್ತಾ, ಈ ಕಾರ್ಯಕ್ರಮದಲ್ಲಿ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಯಾವ ಕಾಮಗಾರಿ ಮಾಡಬೇಕು ಎಂಬ ತೀರ್ಮಾನ ಮಾಡುವ ಅಧಿಕಾರ ಹೊಂದಿದ್ದವು. ಹಸಿದ ಹೊಟ್ಟೆ, ಖಾಲಿ ಜೇಬಿನ ನೋವು ಏನು ಎಂಬುದು ನಮಗೆ ಅರಿವಿದೆ. 60% ಗ್ರಾಮೀಣ ಭಾಗದ ಮಹಿಳೆಯರು ಕೂಲಿ ಮಾಡುತ್ತಿದ್ದಾರೆ. ರಾಜ್ಯದಲ್ಲಿರುವ 5,900 ಪಂಚಾಯ್ತಿಗಳಲ್ಲಿ, ಕನಿಷ್ಠ 1-2 ಕೋಟಿಯಷ್ಟು ಹಣವನ್ನು ಪಂಚಾಯಿತಿಗಳಲ್ಲಿ ನೀಡಿ ಅಲ್ಲಿ ಶಾಶ್ವತ ಆಸ್ತಿ ಸೃಷ್ಟಿಸಿ ಜನರಿಗೆ ಉದ್ಯೋಗ ಕಲ್ಪಿಸಲಾಗುತ್ತಿತ್ತು. ಮನರೇಗಾ ಉಳಿಸುವ ಮೂಲಕ, ಹಳ್ಳಿಗಳು, ಈ ದೇಶ, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮ ಗಾಂಧಿ ಅವರ ಹೆಸರು ಉಳಿಸಬೇಕಾಗಿದೆ ಎಂದು ಕರೆ ನೀಡಿದರು. ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಮಾತನಾಡಿ, ನರೇಗಾ ಬಿಜೆಪಿ, ಜೆಡಿಎಸ್ ಎರಡೂ ಪಕ್ಷಗಳು ಸೇರಿ ದೊಡ್ಡ ಹುನ್ನಾರ ಮಾಡುವ ಮೂಲಕ ದೇಶದ ಜನರ ಜೀವನವನ್ನು ಬೀದಿಗೆ ತರುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.



ಗ್ರಾಪಂ ಕಚೇರಿಗೆ ಗಾಂಧಿ ಹೆಸರು

ನೋಟಿನ ಮೇಲಿರುವ ಗಾಂಧಿ ಫೋಟೋವನ್ನು ತೆಗೆದು ನಿಮ್ಮ ಫೋಟೋ ಹಾಕಿಕೊಳ್ಳುವಂತೆ ನಾನು ಸವಾಲು ಹಾಕಿದೆ. ನಮ್ಮ ಪಕ್ಷ ಹಾಗೂ ಸರ್ಕಾರ ಚರ್ಚೆ ಮಾಡಿ ಪ್ರತಿ ಗ್ರಾಮ ಪಂಚಾಯಿತಿ ಕಚೇರಿಗಳಿಗೆ ಮಹಾತ್ಮಾ ಗಾಂಧಿ ಹೆಸರಿಡಲು ತೀರ್ಮಾನಿಸಿದ್ದೇವೆ. ಉದ್ಯೋಗ ಖಾತರಿ ಯೋಜನೆ ಕಾಂಗ್ರೆಸ್ ಕಾರ್ಯಕ್ರಮ ಮಾತ್ರವಲ್ಲ. ದೇಶದ ಬಡವರು, ಕೂಲಿ ಕಾರ್ಮಿಕರ ಕಾರ್ಯಕ್ರಮ. ಗ್ರಾಮೀಣ ಭಾಗದ ಕಾರ್ಮಿಕರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ. ಮತ್ತೊಮ್ಮೆ ಮನರೇಗಾ ಯೋಜನೆ ಮರುಸ್ಥಾಪಿಸಿ, ಉದ್ಯೋಗದ ಹಕ್ಕು ಹಾಗೂ ಗ್ರಾಮಗಳ ಸ್ವಯಂ ಆಡಳಿತ ಹಕ್ಕನ್ನು ಪುನರ್ ಸ್ಥಾಪಿಸಬೇಕಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂದೇಶ ನೀಡಿದರು.

> ಬಿಜೆಪಿಯ ಪ್ರತೀ ನಾಯಕರಿಗೆ ನರೇಗಾ ಯೋಜನೆಯ ಹೆಸರು ಬದಲಾವಣೆ ಬಗ್ಗೆ ಪ್ರಶ್ನಿಸಬೇಕಿದೆ. ದಿಲ್ಲಿಯಲ್ಲಿ ಕೂತು ಹಳ್ಳಿಯ ಜನರ ಬದುಕನ್ನು ಕದಡುವ ಕೆಲಸ ಮಾಡಿದ್ದಾರೆ. ಅಮೆರಿಕದ ಅಧ್ಯಕ್ಷರ ಜೊತೆಗೆ ಒಡಂಬಡಿಕೆ ಮಾಡಿಕೊಂಡು ನಮ್ಮ ದೇಶದ ರೈತರ ಅಸ್ತಿತ್ವಕ್ಕೆ ಕುಂದು ತರುವ ಕೆಲಸ ಮಾಡುತ್ತಿದ್ದಾರೆ.
>
> ■ ರಣದೀಪ್‌ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಮೊಬೈಲ್‌ನಿಂದ ಮಕ್ಕಳ ವಿದ್ಯಾಭ್ಯಾಸ ಕುಂಠಿತ

ಶಾಲಾ-ಕಾಲೇಜಲ್ಲಿ ಮೊಬೈಲ್ ನಿಷೇಧ?

ಬೆಂಗಳೂರು: ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಮೊಬೈಲ್ ನಿಷೇಧ ಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದ್ದಾರೆ.

ಸೋಮವಾರ ಸದಾಶಿವನಗರದ ನಿವಾಸದ ಬಳಿ ಮಾಧ್ಯಮದವರಿಗೆ ಹೇಳಿಕೆ ನೀಡಿದ ಅವರು, 16 ವರ್ಷದೊಳಗಿನ ಮಕ್ಕಳಿಗೆ ಮೊಬೈಲ್ ಕೊಟ್ಟರೆ ವಿದ್ಯಾಭ್ಯಾಸದ ಮೇಲೆ ಬೇರೆ ರೀತಿಯ ಪರಿಣಾಮ ಬೀರುತ್ತದೆ. ಬಹಳಷ್ಟು ದೇಶಗಳಲ್ಲಿ ಅಧ್ಯಯನ ನಡೆಸಿ ಮೊಬೈಲ್ ನಿಷೇಧ ಮಾಡಿದ್ದಾರೆ. ಅದರಂತೆ ಮೊಬೈಲ್ ನಿಷೇಧಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದಿದ್ದಾರೆ.



ಮೊಬೈಲ್ ನಿಷೇಧ ಮಾಡುವ ಬಗ್ಗೆ ಸಿಎಂ ಕೂಡ ಚಿಂತನೆ ಹರಿಸಿದ್ದಾರೆ. ಇದರ ಸಾಧಕ-ಬಾಧಕಗಳನ್ನು ಅಧ್ಯಯನ ನಡೆಸಿ ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

ಸಿದ್ದು ನ್ಯಾಯದ ಪರ: ಸಿಎಂ ಸಿದ್ದರಾಮಯ್ಯ ಅವರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯ. ಆ ಸಿದ್ಧಾಂತದ ಮೇಲೆ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಹೊಸದೇನು ಇಲ್ಲ. ಅವರು ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದಾರೆ. ಹಿಂದಿನಿಂದಲೂ ಕೂಡ ಸಾಮಾಜಿಕ ನ್ಯಾಯದ ಪರವಾಗಿದ್ದಾರೆ. ಅವರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯ. ಹೊಸದಾಗಿ ಇವತ್ತು ಮಾಡುತ್ತಿಲ್ಲ ಎಂದರು.

ರಂಜಾನ್, ಹೋಳಿ ಹಬ್ಬ ಆಚರಣೆ ವೇಳೆ ಯಾರು ಕೂಡ ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ಕೊಡಬಾರದು. ಸಂತೋಷದಿಂದ ಹಬ್ಬ ಆಚರಿಸಬೇಕು. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆಸಲು ಅವಕಾಶವಿಲ್ಲ. ಅದಕ್ಕೆ ಅವಕಾಶ ಕೊಡು ವುದೂ ಇಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿ ಚುನಾವಣೆ ಕ್ಯಾಬಿನೆಟ್‌ನಲ್ಲಿ ನಿರ್ಧಾರ

ಚುನಾವಣೆ ತಂದರೆ ವಿದ್ಯಾರ್ಥಿಗಳ ನಡುವೆ ಗುಂಪುಗಳಾಗಿ ಹೊಡೆದಾಡಿಕೊಳ್ಳುತ್ತಾರೆ ಎಂಬ ಕಾರಣದಿಂದ ನಾನು ಉನ್ನತ ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ಸಿಂಡಿಕೇಟ್ ಚುನಾವಣೆಯನ್ನು ನಿಷೇಧ ಮಾಡಲಾಯಿತು. ಈಗ ವಿದ್ಯಾರ್ಥಿ ಚುನಾವಣೆ ನಡೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬ ಒತ್ತಡ ಬರುತ್ತಿದೆ. ಈ ಬಗ್ಗೆ ಕ್ಯಾಬಿನೆಟ್ ಏನು ನಿರ್ಧಾರ ಮಾಡುತ್ತದೆ ನೋಡಬೇಕು ಎಂದು ಹೇಳಿದರು.

ಕನ್ನಡ ವಿವಿ ಕುಲಪತಿ ಡಾ.ಪರಮಶಿವಮೂರ್ತಿ ಹೇಳಿಕೆ

ಮೂವರಿಗೆ ನಾಡೋಜ ಗೌರವ

ವಿಜಯನಗರ: ಕನ್ನಡ ವಿಶ್ವವಿದ್ಯಾಲಯದಿಂದ ನೀಡಲಾಗುವ ನಾಡಿನ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಗೆ ಈ ಬಾರಿ ಬಹುಭಾಷೆ ಹಾಗೂ ಬಹುಶಿಸ್ತುಗಳ ತಜ್ಞರು, ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಪ್ರಕಾಂಡ ಪಂಡಿತ ಶತಾಯುಷಿ ಪ್ರೊ.ಸಿ.ಮಹಾದೇವಪ್ಪ, ಮಾರ್ಕ್ಸ್‌ವಾದಿ ಡಾ.ಜಿ.ರಾಮಕೃಷ್ಣ ಹಾಗೂ ದಕ್ಷ ಆಡಳಿತಗಾರ, ರಾಜ್ಯ ಮಾಹಿತಿ ಹಕ್ಕು ಆಯುಕ್ತ ಡಾ.ಎಚ್.ಸಿ.ಸತ್ಯನ್ ಭಾಜನರಾಗಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಪರಮಶಿವಮೂರ್ತಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಈ ವಿಷಯ ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿರುವ 'ನವರಂಗ' ಬಯಲು ರಂಗಮಂದಿರದಲ್ಲಿ ಫೆ.24 ರಂದು ಸಂಜೆ 5.30ಕ್ಕೆ ಆಯೋಜಿಸಿರುವ ಕನ್ನಡ ವಿಶ್ವವಿದ್ಯಾಲಯದ 34ನೇ ನುಡಿಹಬ್ಬ (ಘಟಿಕೋತ್ಸವ)ದಲ್ಲಿ ರಾಜ್ಯಪಾಲರೂ ಆಗಿರುವ ಕನ್ನಡ ವಿವಿ ಕುಲಾಧಿಪತಿ ಥಾವರ್ ಚಂದ್ ಗೆಹಲೋತ್ ಅಧ್ಯಕ್ಷತೆಯಲ್ಲಿ ಗಣ್ಯರಿಗೆ 'ನಾಡೋಜ'(ಗೌರವ ಡಾಕ್ಟರೇಟ್) ಪದವಿ ಪ್ರದಾನ ಮಾಡಲಾಗುತ್ತದೆ. ವಿಶ್ರಾಂತ ಪ್ರಾಧ್ಯಾಪಕ ಹಾಗೂ ಸಂಸ್ಕೃತಿ ಚಿಂತಕ ಡಾ.ಕೆ. ಮರಳಸಿದ್ದಪ್ಪ ಅವರು ಘಟಿಕೋತ್ಸವ ಭಾಷಣವನ್ನು ನೆರವೇರಿಸಲಿದ್ದಾರೆ. ಸಹ ಕುಲಪತಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಮುಖ್ಯಅತಿಥಿಯಾಗಿ ಪಾಲ್ಗೊಳ್ಳುವರು. ಇದೇ ವೇಳೆ ಕನ್ನಡ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಡಿ ಕನ್ನಡ ವಿಶ್ವವಿದ್ಯಾಲಯ ಹಾಗೂ



ವಿಸ್ತರಣಾ ಕೇಂದ್ರಗಳಲ್ಲಿ ಸಂಶೋಧನೆ ನಡೆಸಿರುವ 107 ಜನ ವಿದ್ಯಾರ್ಥಿಗಳು ಪಿಎಚ್‌ಡಿ ಪದವಿ ಪಡೆಯಲಿದ್ದಾರೆ ಎಂದು ಕುಲಪತಿ ಪ್ರೊ.ಪರಮಶಿವಮೂರ್ತಿ ಮಾಹಿತಿ ನೀಡಿದರು.

ರಾಜ್ಯ ಮಾಹಿತಿ ಹಕ್ಕು ಆಯುಕ್ತ ಡಾ.ಎಚ್.ಸಿ.ಸತ್ಯನ್ ವಿರುದ್ಧದ ಪ್ರಕರಣಗಳು ಲೋಕಾಯುಕ್ತ ಹಾಗೂ ಇತರೆ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿವೆ.

ಕಾನೂನು ಸಂಘರ್ಷದಲ್ಲಿರುವ ವ್ಯಕ್ತಿಗೆ ನಾಡಿನ ಪ್ರತಿಷ್ಠಿತ 'ನಾಡೋಜ' ಗೌರವ ಸೂಕ್ತವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ಪರಮಶಿವಮೂರ್ತಿ, ಈ ಬಗ್ಗೆ ಈಗಾಗಲೇ ಕನ್ನಡ ವಿಶ್ವವಿದ್ಯಾಲಯಕ್ಕೆ ಎರಡ್ಮೂರು ಪತ್ರಗಳು ಬಂದಿದ್ದು, ರಾಜ್ಯಪಾಲರಿಗೆ ಮಾಹಿತಿ ನೀಡಲಾಗಿದೆ. ಎಲ್ಲ ಪ್ರಕರಣಗಳು ಇತ್ಯರ್ಥವಾಗಿವೆ. ಅವರಿಗೆ ನಾಡೋಜ ನೀಡಬೇಕೆಂಬ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ನೀಡಲಾಗುತ್ತದೆ. ಆದರೂ, ಈ ಬಗ್ಗೆ ಮತ್ತೊಮ್ಮೆ ರಾಜ್ಯಪಾಲರ ಗಮನ ಸೆಳೆಯುವುದಾಗಿ ತಿಳಿಸಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿ.ವೈ. ವಿಜಯೇಂದ್ರ ಆಕ್ಷೇಪ

ಬಂಜಾರರ ವಿರುದ್ಧ ದ್ವೇಷ ರಾಜಕಾರಣ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರವು ಬಂಜಾರ ಸಮಾಜದ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ಷೇಪಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ಸಿನವರು ಯಾವ ನೈತಿಕತೆ ಇಟ್ಟುಕೊಂಡು ಭ್ರಷ್ಟಾಚಾರದ ಕುರಿತು ಮಾತನಾಡುತ್ತಾರೆ? ಭ್ರಷ್ಟಾಚಾರದ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಪ್ರಿಯಾಂಕ್ ಖರ್ಗೆ ಅವರು ಮಾತನಾಡುತ್ತಿದ್ದಾರೆ. ಭ್ರಷ್ಟಾಚಾರದ ಕುರಿತು ಮಾತನಾಡುವ ಯೋಗ್ಯತೆ ಕಾಂಗ್ರೆಸ್ಸಿನವರಿಗೆ ಇದೆಯೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದ ಬಂಜಾರ ಸಮಾಜವನ್ನು ಟಾರ್ಗೆಟ್ ಮಾಡುತ್ತಿರುವುದು ಜಗಜ್ಜಾಹೀರಾಗಿದೆ. ಈ ಸಮಾಜವು ಕಳೆದ 30-40 ವರ್ಷಗಳಿಂದ ಬಿಜೆಪಿ ಜೊತೆ ಗಟ್ಟಿಯಾಗಿ ಗುರುತಿಸಿಕೊಂಡಿದೆ. ಬಿಜೆಪಿಯನ್ನು ರಾಜ್ಯದಲ್ಲಿ ಶೇ.100ಕ್ಕೆ ನೂರು ಬೆಂಬಲಿಸುತ್ತಿದೆ. ಇದರ ಪರಿಣಾಮವಾಗಿ ಸಿದ್ದರಾಮಯ್ಯ ಅವರ ಸರ್ಕಾರದಿಂದ ಕಳೆದ ಎರಡೂವರೆ ವರ್ಷದಲ್ಲಿ ಈ ಸಮಾಜಕ್ಕೆ ಅನ್ಯಾಯವೂ ಆಗಿದೆ ಎಂದು ವಿಶ್ಲೇಷಿಸಿದರು.

ಚಂದ್ರು ಲಮಾಣಿ ಅವರ ವಿಚಾರ ಕೋರ್ಟಿನಲ್ಲಿದ್ದು, ಅದರ ಬಗ್ಗೆ ಹೆಚ್ಚೇನೂ ಹೇಳಲು ಹೋಗುವುದಿಲ್ಲ. ಆಡಿಯೋ ಲೀಕ್ ಆಗಿದೆ. ಏನೇನು ಚರ್ಚೆ ಆಗಿದೆ? ಯಾವ ರೀತಿ ರಾಜಕೀಯವಾಗಿ ಟಾರ್ಗೆಟ್ ಆಗಿದ್ದಾರೆ; ಇವೆಲ್ಲವೂ ಬಹಿರಂಗ ಆಗಿದೆ ಎಂದು ತಿಳಿಸಿದರು.



ಬಜೆಟ್ ಅಧಿವೇಶನ ಕುರಿತಾಗಿ ಚರ್ಚೆ: ರಾಜ್ಯದ ಬಜೆಟ್ ಅಧಿವೇಶನ ಮಾರ್ಚ್ ಮೊದಲ ವಾರದಲ್ಲಿ ಆರಂಭವಾಗಲಿದೆ. ಬಜೆಟ್ ಅಧಿವೇಶನದ ಸಂಬಂಧ ಪ್ರತಿಪಕ್ಷ ನಾಯಕ ಆರ್.ಅಶೋಕ ಅವರ ಜೊತೆ ಸದನವನ್ನು ಎದುರಿಸುವ ಕುರಿತು ಚರ್ಚಿಸಿದ್ದೇವೆ ಎಂದರು.

ಆನೆ ಹಾವಳಿ: ಶೃಂಗೇರಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಚಿಕ್ಕಮಗಳೂರು: ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ಭಾನುವಾರ ಬಾಳೆಹೊನ್ನೂರು ಸಮೀಪ ಕಡಬಗೆರೆಯಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದವರ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರ, ಪ್ರಮುಖರ ಬಂಧನ ಖಂಡಿಸಿ ಮಲೆನಾಡು ನಾಗರಿಕ ರೈತ ಹಿತರಕ್ಷಣಾ ಸಮಿತಿ ಕರೆ ನೀಡಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರ ಬಂದ್ ಯಶಸ್ವಿಯಾಗಿದೆ.

ಶೃಂಗೇರಿ, ಕೊಪ್ಪ, ಎನ್.ಆರ್.ಪುರ ಮತ್ತು ಚಿಕ್ಕಮಗಳೂರು ತಾಲೂಕಿನ ಖಾಂಡ್ಯ ಹೋಬಳಿ ಪ್ರದೇಶಗಳಲ್ಲಿ ಬಂದ್‌ಗೆ ಉತ್ತಮ ಸ್ಪಂದನೆ ಸಿಕ್ಕಿದೆ. ಅಂಗಡಿ ಮುಂಗ್ಗಟ್ಟುಗಳು ಮುಚ್ಚಿ ವರ್ತಕರು ಬಂದ್‌ಗೆ ಬೆಂಬಲ ಸೂಚಿಸಿದರು.

ಕೆಲವೆಡೆ ಸಾರಿಗೆ ವಾಹನಗಳು, ಆಟೋ ರಿಕ್ಷಾಗಳ ಸಂಚಾರ ಕಂಡುಬಂತು. ಪೆಟ್ರೋಲ್ ಬಂಕ್, ಮೆಡಿಕಲ್ ಶಾಪ್, ಬಸ್ ಸೇವೆ ಸಾಮಾನ್ಯವಾಗಿತ್ತು. ಶಾಲಾ-ಕಾಲೇಜುಗಳು ಎಂದಿನಂತೆ ನಡೆದವು.

ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಮುಜರಾಯಿ ಇಲಾಖೆ | ಯಾತ್ರಿಕರಿಗೆ 5000 ರೂ.

ವೈಷ್ಣೋದೇವಿ ಯಾತ್ರಿಕರಿಗೂ ಸಹಾಯಧನ ಲಭ್ಯ

▶ ದೇವಿತಾ ಸಿ.ಎಸ್.

ಬೆಂಗಳೂರು: ವೈಷ್ಣೋದೇವಿ ಭಕ್ತರಿಗೆ ಸಿಹಿಸುದ್ದಿ ಇಲ್ಲಿದೆ. ಕಾಶಿ ಯಾತ್ರೆ ಮಾದರಿಯಲ್ಲೇ ವೈಷ್ಣೋದೇವಿ ಯಾತ್ರೆ ಕೈಗೊಳ್ಳುವವರಿಗೂ ಸಹಾಯಧನ ಸಿಗಲಿದೆ. ಈ ನಿಟ್ಟಿನಲ್ಲಿ ರಾಜ್ಯ ಮುಜರಾಯಿ ಇಲಾಖೆ ಈಗಾಗಲೇ ಸಿದ್ಧತೆ ನಡೆಸಿದ್ದು, ಈ ಸಂಬಂಧ ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದೆ.

ಜಮ್ಮು-ಕಾಶ್ಮೀರದ ಪ್ರಸಿದ್ಧ ವೈಷ್ಣೋದೇವಿ ದೇವಾಲಯಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ಸಹಾಯಧನ ನೀಡುವ ಯೋಜನೆ ಜಾರಿಗೆ ತರಲು ಉದ್ದೇಶಿಸಲಾಗಿದೆ. ಯಾತ್ರಾರ್ಥಿಗಳು ಸಹಾಯಧನ ಪಡೆಯಲು ಯಾತ್ರೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಒದಗಿಸಿದರೆ 5 ಸಾವಿರ ರೂ.ಗಳನ್ನು ನೀಡಲಾಗುತ್ತದೆ. ಇದಕ್ಕಾಗಿ ಇಲಾಖೆಯಿಂದ ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಅನುಮೋದನೆ ದೊರೆತ ನಂತರ ಈ ಯೋಜನೆಗೆ ಚಾಲನೆ ದೊರೆಯಲಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೊಸ ದಿಗಂತಕ್ಕೆ ಮಾಹಿತಿ ನೀಡಿದ್ದಾರೆ. ಯಾತ್ರೆ ಸಂಬಂಧ ಕಳೆದ ವರ್ಷ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಧಾರ್ಮಿಕ ಪರಿಷತ್ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು.



ಆನ್‌ಲೈನ್‌ನಲ್ಲೇ ಅರ್ಜಿ: ಯಾತ್ರಾರ್ಥಿಗಳು ಪ್ರಯಾಣದ ಟಿಕೆಟ್, ದೇವಾಲಯದ ಬಳಿ ಜಿಪಿಎಸ್ ಫೋಟೊ, ವಯಸ್ಸಿನ ದೃಢೀಕರಣ ಪತ್ರ, ಆಧಾರ್ ಕಾರ್ಡ್ ಪ್ರತಿ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಸೇವಾ ಸಿಂಧು ಮೂಲಕ ಆನ್‌ಲೈನ್‌ನಲ್ಲಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಬಹುದು. ಈ ಪ್ರವಾಸದ ಸಹಾಯಧನ ಪಡೆಯಲು ಫಲಾನುಭವಿಗಳು 18 ವರ್ಷ ಮೇಲ್ಪಟ್ಟವರಾಗಿರಬೇಕು. ಕರ್ನಾಟಕದ ಕಾಯಂ ನಿವಾಸಿಗಳಾಗಿರಬೇಕು. ಒಂದು ಯಾತ್ರೆಗೆ ಒಂದು ಬಾರಿ ಮಾತ್ರ ಈ ಸೌಲಭ್ಯ ಪಡೆಯಬಹುದಾಗಿದೆ. ಕಾಶಿ, ಚಾರ್‌ಧಾಮ್, ಮಾನಸ ಸರೋವರ ಯಾತ್ರೆ ಯಂತೆ ವೈಷ್ಣೋದೇವಿ ಯಾತ್ರೆಯೂ ಸೇರಿದಂತೆ ಕೇವಲ ಒಂದು ಬಾರಿ ಮಾತ್ರ ಸಹಾಯಧನ ಪಡೆಯಬಹುದಾಗಿದೆ.

> ಕಾಶಿಯಾತ್ರೆ ಮಾದರಿಯಲ್ಲಿಯೇ ವೈಷ್ಣೋದೇವಿ ಯಾತ್ರೆಗೂ ಸಹಾಯಧನ ನೀಡಲು ಇಲಾಖೆ ವತಿಯಿಂದ ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಬಾರಿ ಬಜೆಟ್‌ನಲ್ಲಿ ಅನುಮೋದನೆ ಸಿಕ್ಕ ಬಳಿಕ ಯೋಜನೆ ಜಾರಿಗೊಳಿಸಲಾಗುವುದು.
>
> ■ ರಾಮಲಿಂಗಾ ರೆಡ್ಡಿ, ಸಾರಿಗೆ ಮತ್ತು ಮುಜರಾಯಿ ಸಚಿವ

ಮಾರ್ಚ್-ಅಕ್ಟೋಬರ್ ವೇಳೆ ಹೆಚ್ಚು ಭಕ್ತರು

ಜಮ್ಮು ಮತ್ತು ಕಾಶ್ಮೀರದ ತ್ರಿಕೂಟ ಪರ್ವತಗಳಲ್ಲಿರುವ ವೈಷ್ಣೋದೇವಿ ದೇವಾಲಯವು (ಮಾತಾ ರಾಣಿ) ಹಿಂದುಗಳ ಅತಿದೊಡ್ಡ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಒಂದಾಗಿದೆ. ಸಮುದ್ರ ಮಟ್ಟದಿಂದ ಸುಮಾರು 5,300 ಅಡಿ ಎತ್ತರದಲ್ಲಿರುವ ಈ ಗುಹಾಂತರ ದೇವಾಲಯವು ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯರ ರೂಪವಾಗಿ ಮಾತಾ ವೈಷ್ಣೋದೇವಿಯನ್ನು ಪೂಜಿಸಲಾಗುತ್ತದೆ. ಪ್ರತಿ ವರ್ಷ ಮಾರ್ಚ್‌ನಿಂದ ಅಕ್ಟೋಬರ್ ವರೆಗೆ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ. ಕತ್ರಾದಿಂದ ಸುಮಾರು 14 ಕಿ.ಮೀ. ಪಾದಯಾತ್ರೆ ಮೂಲಕ ತಲುಪಬಹುದು. ಹೆಲಿಕಾಪ್ಟರ್ ಸೇವೆಗಳಿದ್ದು, ಕುದುರೆ ಸವಾರಿ ಮೂಲಕವೂ ವೈಷ್ಣೋದೇವಿ ಸನ್ನಿಧಿ ತಲುಪಬಹುದಾಗಿದೆ.

ವಿದ್ಯಾರ್ಥಿಗಳಿಗೆ ಸಚಿವ ಮಧು ಬಂಗಾರಪ್ಪ ಸಲಹೆ

ಅಂಕಗಳಿಗೆ ಸೀಮಿತವಾಗದಿರಿ

ಬೆಂಗಳೂರು: ವಿದ್ಯಾರ್ಥಿಗಳು ಕೇವಲ ಅಂಕಗಳಿಗಾಗಿ ಓದಬಾರದು. ವಿಷಯವನ್ನು ಆಳವಾಗಿ ಅರ್ಥೈಸಿಕೊಳ್ಳುವುದರ ಕಡೆಗೆ ಗಮನ ಹರಿಸಬೇಕು. ಅರಿವು ಮೂಡಿದರೆ ಫಲಿತಾಂಶ ತಾನಾಗಿಯೇ ಉತ್ತಮವಾಗುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕಿವಿ ಮಾತು ತಿಳಿಸಿದರು.



ಸೋಮವಾರ ವಿಕಾಸಸೌಧದಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ (ಎಸ್‌ಎಸ್‌ಕೆ) ಹಾಗೂ ಡಬ್ಲ್ಯುಡಬ್ಲ್ಯುಎಫ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮಿಷನ್ ಪ್ರಕೃತಿ: ತರಗತಿಯಿಂದ ಸಂರಕ್ಷಣೆಯತ್ತ ಕಾರ್ಯಕ್ರಮದಲ್ಲಿ ರಾಜ್ಯದ ಹತ್ತು ಅತ್ಯುತ್ತಮ ಶಾಲೆಗಳಿಗೆ ಪ್ರಶಸ್ತಿ ಪ್ರದಾನ ನೆರವೇರಿಸಿ ಮಾತನಾಡಿದ ಅವರು, ಮುಂದಿನ ವರ್ಷದಿಂದ 1 ರಿಂದ 10ನೇ ತರಗತಿಯವರೆಗೆ ನೈತಿಕ ವಿಜ್ಞಾನ ಪಠ್ಯಪುಸ್ತಕವನ್ನು ಪರಿಚಯಿಸಲಾಗುತ್ತದೆ. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಶಿಕ್ಷಣದ ಮೊದಲ ಮೆಟ್ಟಿಲು ಎಂದು ಪ್ರತಿಪಾದಿಸಿದರು. ಸರ್ಕಾರಿ ಶಾಲಾ ಶಿಕ್ಷಕರ ಮೆರಿಟ್ ಮತ್ತು ಕಾರ್ಯಕ್ಷಮತೆಯನ್ನು ಶ್ಲಾಘಿಸಿದ ಸಚಿವರು, ವಿದ್ಯಾರ್ಥಿಗಳಿಗೆ ಸರ್ಕಾರ ನೀಡುತ್ತಿರುವ ಬಿಸಿಯೂಟ, ರಾಗಿಮಾಲ್ಟ್, ಹಾಲು, ಮೊಟ್ಟೆ/ಬಾಳೆಹಣ್ಣು ಮತ್ತು ಸಮವಸ್ತ್ರಗಳ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.

ಪ್ರಶಸ್ತಿ ವಿಜೇತ 10 ಶಾಲೆ

ಜಿ.ಎಂ.ಪಿ.ಎಚ್.ಎಸ್, ಎಮ್ಮಿಗನೂರು, ಬಳ್ಳಾರಿ., ಜಿ.ಕೆ.ಎಚ್.ಪಿ.ಎಸ್, ಕಾತ್ರಾಳ, ಕಾಗವಾಡ, ಬೆಳಗಾವಿ., ಜಿ.ಎಚ್.ಎಸ್ ಅಲಿಪುರ, ಚಿಕ್ಕಬಳ್ಳಾಪುರ., ಜಿ.ಎಚ್.ಪಿ.ಎಸ್, ಹಿರೇಗೋಣಿಗೆರೆ, ದಾವಣಗೆರೆ., ಜಿ.ಎಚ್.ಪಿ.ಎಸ್, ಜೋಡಳ್ಳಿ, ಕಲಘಟಗಿ., ಕೆ.ಪಿ.ಎಸ್, ಕೋಟೇಶ್ವರ, ಕುಂದಾಪುರ, ಉಡುಪಿ., ಡಿ.ಕೆ.ಜೆಡ್.ಪಿ, ಅಳಿಯೂರು, ದಕ್ಷಿಣ ಕನ್ನಡ., ಕೆ.ಎಸ್.ಎಸ್ ಜಿ.ಎಚ್.ಎಸ್, ಕಳ್ಳಾಡಿ, ಬೈಂದೂರು, ಉಡುಪಿ., ಕೆ.ಜಿ.ಬಿ.ವಿ, ಯಳಂದೂರು, ಚಾಮರಾಜನಗರ., ಜಿ.ಎಚ್.ಪಿ.ಎಸ್, ಮಲ್ಲೂರು, ಉಡುಪಿ.

ಸಂಪಾದಕೀಯ

ಭಯೋತ್ಪಾದನೆ: ಬಾಂಗ್ಲಾ ನಂಟು

ಭಾರತದಲ್ಲಿ ನಡೆಯುವ ಭಯೋತ್ಪಾದಕ ಕೃತ್ಯಗಳಲ್ಲಿ ಪಾಕಿಸ್ತಾನದ ನಂಟು ಇರುವುದು ತಿಳಿದಿರುವುದೆ. ದಶಕಗಳಿಂದಲೇ ಪಾಕಿಸ್ತಾನವು ಭಾರತದಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ಎಸಗುತ್ತಲೇ ಬಂದಿದೆ. ಭಯೋತ್ಪಾದನೆಗೆ ಪ್ರೇರಣೆ ನೀಡುವುದರ ಜತೆಗೆ ಶಸ್ತ್ರಾಸ್ತ್ರ ಮತ್ತು ಇತರ ಸಾಮಗ್ರಿಗಳನ್ನು ಒದಗಿಸುವುದು, ಭಯೋತ್ಪಾದಕರನ್ನು ವಿಧ್ವಂಸಕ ಕೃತ್ಯಗಳಿಗೆ ಕಳುಹಿಸುವುದು ಮುಂತಾದ ಕೃತ್ಯಗಳಲ್ಲಿ ಪಾಕಿಸ್ತಾನವು ಸಕ್ರಿಯವಾಗಿ ಪಾಲ್ಗೊಳ್ಳುತ್ತಲೇ ಬಂದಿದೆ. ಇದೀಗ ಬಾಂಗ್ಲಾ ದೇಶೀಯರು ಕೂಡಾ ಭಾರತ ವಿರೋಧಿ ಭಯೋತ್ಪಾದಕ ಕೃತ್ಯಗಳಲ್ಲಿ ಪಾಕಿಸ್ತಾನದೊಂದಿಗೆ ಕೈಜೋಡಿಸಿರುವುದು ತಿಳಿದುಬಂದಿದೆ.



ಬಾಂಗ್ಲಾ ದೇಶದ ಕೆಲವರು ಭಾರತದಲ್ಲಿದ್ದುಕೊಂಡು ವಿಧ್ವಂಸಕ ಕೃತ್ಯಗಳನ್ನು ಎಸಗಲು ಯೋಜನೆ ರೂಪಿಸಿದ್ದುದು ಬೆಳಕಿಗೆ ಬಂದಿದೆ. ಈ ಸಂಬಂಧ ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ದಿಲ್ಲಿ ಪೊಲೀಸರು ನಡೆಸಿರುವ ಕಾರ್ಯಾಚರಣೆಯಲ್ಲಿ ಎಂಟು ಮಂದಿಯನ್ನು ಬಂಧಿಸಲಾಗಿದೆ. ಇವರಲ್ಲಿ ಏಳು ಮಂದಿ ಬಾಂಗ್ಲಾ ದೇಶೀಯರಾಗಿದ್ದಾರೆ. ಆದರೆ ಇವರ ಮುಖ್ಯಸ್ಥನೊಬ್ಬ ಮಾತ್ರ ಇನ್ನೂ ತಲೆತಪ್ಪಿಸಿಕೊಂಡಿದ್ದಾನೆ. ಆತ ಕೂಡ ಬಾಂಗ್ಲಾ ದೇಶೀಯನಾಗಿದ್ದು, ಆತನ ಸೆರೆಗೆ ಬಲೆ ಬೀಸಲಾಗಿದೆ. ದಿಲ್ಲಿಯಲ್ಲಿ ಭಾರತ ವಿರೋಧಿ ಪೋಸ್ಟರ್‌ಗಳನ್ನು ಹಚ್ಚಿದ ಸಂಬಂಧ ಪೊಲೀಸರು ತನಿಖೆ ನಡೆಸಿದ ವೇಳೆ ಈ ಭಯೋತ್ಪಾದಕ ದುಷ್ಟ ಯೋಜನೆ ಬೆಳಕಿಗೆ ಬಂದಿದೆ.

ಇತ್ತೀಚಿನ ವರ್ಷಗಳಲ್ಲಿ ಪಾಕಿಸ್ತಾನದಂತೆಯೆ ಬಾಂಗ್ಲಾದಲ್ಲಿ ಕೂಡಾ ಭಾರತ ವಿರೋಧಿ ಭಾವನೆಯು ಹೆಚ್ಚುತ್ತಿದೆ. ವಿದ್ಯಾರ್ಥಿ ದಂಗೆಯ ಬಳಿಕವಂತೂ ಇದು ಇನ್ನಷ್ಟು ಮಿತಿಮೀರಿದೆ. ಪಾಕಿಸ್ತಾನದ ಐಎಸ್ಐ ಮತ್ತು ಲಷ್ಕರ್ ಇ ತೊಯ್ಬಾ ಕೂಡಾ ಬಾಂಗ್ಲಾದ ಉಗ್ರವಾದ ಶಕ್ತಿಗಳಿಗೆ ನೆರವು ನೀಡುತ್ತಿವೆ. ಆತಂಕಕಾರಿ ಸಂಗತಿಯೆಂದರೆ ಲಕ್ಷಾಂತರ ಬಾಂಗ್ಲಾ ದೇಶೀಯರು ಭಾರತದೊಳಕ್ಕೆ ನುಸುಳಿ ದೇಶಾದ್ಯಂತ ಹರಡಿ ಹೋಗಿದ್ದಾರಲ್ಲದೆ, ಬಹುತೇಕ ಸಂದರ್ಭಗಳಲ್ಲಿ ಭಾರತದ ಪ್ರಮಾಣಪತ್ರಗಳನ್ನು ಪಡೆಯುವಲ್ಲೂ ಸಫಲರಾಗಿದ್ದಾರೆ. ಅವರಿಗೆ ಭಾರತದೊಳಗಿದ್ದುಕೊಂಡೇ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಇದು ಹೆಚ್ಚು ನೆರವಾಗಿದೆ. ಅಕ್ರಮ ಬಾಂಗ್ಲಾ ದೇಶಿಗರು ದೇಶದ ಭದ್ರತೆಗೆ ಸದಾ ಅಪಾಯಕಾರಿಗಳು ಎಂದು ಹೇಳುತ್ತಾ ಬಂದಿರುವುದನ್ನು ಇದು ಸತ್ಯಗೊಳಿಸಿದೆ. ದುರಂತವೆಂದರೆ ನಮ್ಮ ದೇಶದಲ್ಲೇ ರಾಜಕೀಯ ಲಾಭಕ್ಕಾಗಿ ಕೆಲವು ಶಕ್ತಿಗಳು ಇಂತಹ ಬಾಂಗ್ಲಾ ದೇಶೀಯರಿಗೆ ಆಶ್ರಯ ನೀಡುತ್ತಿರುವುದು. ಇನ್ನು ಮುಂದೆ ಬಾಂಗ್ಲಾ ದೇಶಿ ಭಯೋತ್ಪಾದಕರತ್ತಲೂ ಭಾರತವು ಹದ್ದಿನ ಕಣ್ಣಿಡಬೇಕಾದ ಅಗತ್ಯ ಬಂದಿದೆ.

ಯಾಕ್ ಎಂಬ ಪ್ರಾಣಿಗಿದೆ ಸಾವಿರಾರು ವರ್ಷಗಳ ಇತಿಹಾಸ

ಹಿಮಾಲಯದ ತಪ್ಪಲಿನ ಸಾಕಷ್ಟು ದೇಶಗಳ ನಾಗರಿಕತೆಯ ಹಿಂದಿನ ಹಲವು ಶಕ್ತಿಗಳಲ್ಲಿ ಯಾಕ್ ಎಂಬ ಈ ದೈತ್ಯ ಪ್ರಾಣಿಯೂ ಒಂದಾಗಿತ್ತು.

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಮಾನವನ ಜೊತೆಗೆ ಬಹು ಹಿಂದಿನಿಂದ ನಡೆದುಕೊಂಡು ಬಂದ ಕೆಲವೇ ಪ್ರಾಣಿಗಳಲ್ಲಿ ಯಾಕ್ ಸಹ ಒಂದು ಎಂಬುದನ್ನು ಇತ್ತೀಚಿನ ಒಂದು ಸಂಶೋಧನೆ ಬಹಿರಂಗಪಡಿಸಿದೆ. ಹಿಮಾಲಯದ ತಪ್ಪಲು ಪ್ರದೇಶದಲ್ಲಷ್ಟೇ ಕಂಡುಬರುವ ಈ ಸಸ್ತನಿ ಪ್ರಾಣಿಯ ಅಸ್ತಿತ್ವ, ಮೂಲ ಮತ್ತು ಉಳಿವಿಗೆ ಸಂಬಂಧಿಸಿದಂತೆ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಹೀಗೆ ನಡೆದ ಒಂದು ಸಂಶೋಧನಾ ವರದಿ ಯಾಕ್ ಒಂದು ಬಹು ಪ್ರಾಚೀನ ಪ್ರಾಣಿ ಎಂಬುದನ್ನು ಸ್ಪಷ್ಟಪಡಿಸಿದೆ. ಆ ವರದಿಯ ಪ್ರಕಾರ ಗೋವುಗಳಂತೆ ಕಾಡಿನಲ್ಲಿದ್ದ ಯಾಕ್ ಪ್ರಾಣಿಯನ್ನು ಸಹ ಮನುಷ್ಯ ಪಳಗಿಸಿ ಸಾಕತೊಡಗಿರುವುದು ಅತಿ ಕಡಿಮೆ ಸಮಯ ಎಂಬುದಾಗಿ ಹೇಳಲಾಗಿದೆ. ಸುಮಾರು ಮೂರು ಸಾವಿರ ವರ್ಷಗಳ ಹಿಂದಿನಿಂದಲೇ ಮಾನವರೊಂದಿಗೆ ಈ ಪ್ರಾಣಿ ಬೆರೆತುಕೊಂಡಿದ್ದನ್ನು ದೊರೆತ ದಾಖಲೆಗಳೊಂದಿಗೆ ಈ ವರದಿ ದೃಢಪಡಿಸಿದೆ. ಚೀನಾದ ಇತಿಹಾಸದಲ್ಲಿ ಇವುಗಳ ಸಾಗಾಣಿಕೆ ಮತ್ತು ಸಾಕಾಣಿಕೆ ಬಹು ಹಿಂದಿನಿಂದಲೂ ಇದ್ದುದನ್ನು ದೊರೆತ ಕೆಲ ದಾಖಲೆಗಳೊಂದಿಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಾಡು ಪ್ರಾಣಿಯಾದ ಇದನ್ನು ಮೊದಲಿಗೆ ಭಾರತದ ಗಡಿಯಿಂದ ಸ್ವಲ್ಪ ದೂರದಲ್ಲಿರುವ ಟಿಬೆಟ್‌ನ ಬ್ರಹ್ಮಪುತ್ರ ಬಳಿ ಸುಮಾರು ಇಂದಿಗೆ 2,500 ವರ್ಷಗಳ ಹಿಂದೆ ಪಳಗಿಸಲಾಯಿತು ಎಂಬುದಾಗಿ ಈ ಸಂಶೋಧನಾ ವರದಿ ಹೇಳಿದೆ. ಇದರೊಂದಿಗೆ ಇಂದು ಚೀನಾದ ಸುಪರ್ದಿಯಲ್ಲಿರುವ ಟಿಬೆಟಿಯನ್ ಪ್ರದೇಶದ ಶಾನನ್ ಪ್ರಾಂತ್ಯದ ಬಂಗ್ಲಾ ಎಂಬಲ್ಲಿ ಯಾಕ್‌ನ್ನು ಮಾನವರು ಮೊದಲಿಗೆ ಸಾಕಿಕೊಂಡಿದ್ದರು ಎಂದು ಹೇಳಲಾದ ಆಶ್ಚರ್ಯಕರ ಹಳೆಯ ದಾಖಲೆಗಳು ದೊರೆತಿವೆ ಎಂಬುದಾಗಿ ಹೊಸ ಅಧ್ಯಯನವೊಂದು ತಿಳಿಸಿದೆ.

ಟಿಬೆಟ್‌ನ ಬಂಗ್ಲಾದಲ್ಲಿ ನೆಲೆಸಿದ್ದ ಜನರು ಸುಮಾರು 2,500 ವರ್ಷಗಳ ಹಿಂದೆ ಯಾಕ್ ಪ್ರಾಣಿಯನ್ನಷ್ಟೇ ಅಲ್ಲದೆ ಅದರೊಂದಿಗೆ ಟೌರಿನ್ ಪ್ರಭೇದದ ದನಗಳನ್ನು ಸಹ ಸಾಕಿಕೊಂಡಿದ್ದರು ಎಂಬ ಅಚ್ಚರಿಯ ಸಂಗತಿಯನ್ನು ಸಂಶೋಧನಾ ವರದಿಗಳು ಬಹಿರಂಗಪಡಿಸಿವೆ. ನಂತರ ಬಂಗ್ಲಾದಲ್ಲಿನ ಸ್ಥಳೀಯ ನಿವಾಸಿಗಳು ಇವೆರಡನ್ನು ಸಂಕರಿಸಿ ಅಂದರೆ ತಮ್ಮಲ್ಲಿದ್ದ ದನಗಳೊಂದಿಗೆ ಈ ಯಾಕ್‌ನ್ನು ಸೇರಿಸಿ ಹೊಸದಾದ ಹೈಬ್ರೀಡ್ ತಳಿಯೊಂದನ್ನು ಹುಟ್ಟುಹಾಕಿಕೊಂಡರು ಎಂಬುದಾಗಿ ಸಂಶೋಧನಾ ವರದಿಗಳು ಸ್ಪಷ್ಟಪಡಿಸಿವೆ. ಇದರೊಂದಿಗೆ ವರ್ಗೀಕರಣ ಶಾಸ್ತ್ರಜ್ಞರು ಈ ಎರಡು ತಳಿಗಳೊಂದಿಗೆ ಇಲ್ಲಿನ ಪ್ರಾಚೀನ ತಳಿಯಾದ ಡಿಜೋಕ್‌ನ್ನು ಸಹ ಬಾಸ್ ವರ್ಗದ ಅಡಿಯಲ್ಲಿ ವರ್ಗೀಕರಿಸಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ. ಮತ್ತೊಂದು ಸಮೀಕ್ಷೆಯ ಹಿಮಾಲಯ ಮತ್ತು ಟಿಬೇಟಿಯನ್ ಪ್ರಸ್ಥ ಭೂಮಿಯುದ್ದಕ್ಕೂ ಇರುವ ಕೆಲ ಸಮುದಾಯಗಳು ಇಂದು ತಮ್ಮಲ್ಲಿರುವ ಡಿಜೋ ಎಂಬ ಗಂಡು ಮತ್ತು ಡಿಜೋಮೊ ಎಂಬ ಹೆಣ್ಣು ಹೈಬ್ರೀಡ್ ತಳಿಗಳೊಂದಿಗೆ ಸ್ಥಳೀಯ ದನಗಳನ್ನು ಸೇರಿದಂತೆ ಯಾಕ್‌ಗಳನ್ನು ಸಂಕರಿಸುವಲ್ಲಿ ತೊಡಗಿದ್ದಾರೆ ಎಂಬುದಾಗಿ ತಿಳಿಸಿದೆ.

ಸಂಶೋಧನೆಯ ಕೇಂದ್ರ ಬಿಂದುವಾದ ಶಾನನ್ ಪ್ರದೇಶವು ಚೀನಾದ ಟಿಬೆಟಿಯನ್ ಸ್ವಾಯತ್ತ ಪ್ರದೇಶದ ಪ್ರಾಂತ್ಯವಾಗಿದ್ದು, ಆದರೊಳಗೆ ಬಂಗ್ಲಾ ಎಂಬ ಪ್ರದೇಶವಿದೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ಸರಿಸುಮಾರು 3,750 ಮೀಟರ್ ಅಂದರೆ ಸುಮಾರು 12,300 ಅಡಿ ಎತ್ತರದಲ್ಲಿದೆ. ಈ ಶಾನನ್ ಪ್ರದೇಶವು ಭೂತಾನ್ ಮತ್ತು ಪಶ್ಚಿಮ ಅರುಣಾಚಲ ಪ್ರದೇಶದೊಂದಿಗೆ ಗಡಿಯನ್ನು ಬೆಸೆದುಕೊಂಡಿದ್ದು, ಅರುಣಾಚಲ ಪ್ರದೇಶದ ಕೇಂದ್ರಾಡಳಿತ ಪ್ರದೇಶವಾದ ತವಾಂಗ್‌ಗೆ ಸಮೀಪದಲ್ಲೇ ಇದೆ. ಟಿಬೆಟ್‌ನಲ್ಲಿ ಯಾರ್ಲುಂಗ್-ತ್ಯಾಂಗ್ಪೋ ಎಂದು ಕರೆಯುವ ಬ್ರಹ್ಮಪುತ್ರ ನದಿ ಇದೇ ಪ್ರದೇಶವನ್ನು ತಾಕಿಕೊಂಡೇ ಮುಂದಕ್ಕೆ ಹರಿದುಹೋಗುತ್ತದೆ.

ಈ ಎಲ್ಲಾ ಸಂಶೋಧನೆಗಳೊಂದಿಗೆ ಇತ್ತೀಚೆಗೆ ವೈಜ್ಞಾನಿಕರ ಒಂದು ದಂಡು ಈ ತಳಿಯ ಅಸ್ತಿತ್ವ ಹಾಗೂ ಬಂಗ್ಲಾ ಪ್ರದೇಶದ ಅಂತರಾಳದಲ್ಲಿ ಸಂಶೋಧನೆ ನಡೆಸಿ ಅಚ್ಚರಿಯ ಸಂಗತಿಗಳನ್ನು ಬಹಿರಂಗಪಡಿಸಿದೆ. ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿರುವ ವಾಷಿಂಗ್ಟನ್ ವಿಶ್ವವಿದ್ಯಾಲಯದ ಪುರಾತತ್ತ್ವ ಶಾಸ್ತ್ರಜ್ಞರನ್ನು ಒಳಗೊಂಡ ಈ ಅಂತಾರಾಷ್ಟ್ರೀಯ ಸಂಶೋಧಕರ ತಂಡ ಬಂಗ್ಲಾದಲ್ಲಿ ನಿರಂತರ ಸಂಶೋಧನೆ ನಡೆಸಿ ಇಲ್ಲಿಯ ಭೂಮಿಯ ತಳಭಾಗವು ಪ್ರಾಣಿಗಳ ಪಳೆಯುಳಿಕೆಗಳಿಂದ ಸಮೃದ್ಧವಾಗಿದೆ ಎಂಬುದಾಗಿ ತಿಳಿಸಿದೆ. ವಾಷಿಂಗ್ಟನ್ ವಿಶ್ವವಿದ್ಯಾಲಯದ ಹೇಳಿಕೆಯ ಪ್ರಕಾರ ಈ ಪ್ರದೇಶವು ದಕ್ಷಿಣ ಪ್ರಸ್ಥ ಭೂಮಿಯಲ್ಲಿನ ಆರಂಭಿಕ ಕೃಷಿ ಪಾಸ್ಟೋರಲ್ ವಸಾಹತುಗಳಲ್ಲಿ ಒಂದಾಗಿದೆ ಎನ್ನುವುದಾಗಿದೆ. ಈ ತಂಡವು ಇತ್ತೀಚಿನ ದಶಕಗಳಲ್ಲಿ ವ್ಯವಸ್ಥಿತವಾಗಿ ನಡೆಸಿದ ಉತ್ಖನನದ ನಂತರದ ವರದಿಯು ಈ ಪ್ರದೇಶವು ಸುತ್ತಮುತ್ತಲಿನ ಪ್ರದೇಶಗಳಿಗೆ ಹೋಲಿಸಿದ್ದಲ್ಲಿ ಹೇರಳವಾದ ಪ್ರಾಣಿಗಳ ಅವಶೇಷಗಳನ್ನು ಹೊಂದಿರುವ ಜಗತ್ತಿನ ಏಕೈಕ ತಾಣವಾಗಿರುವುದು ಕಂಡುಬಂದಿದೆ.

ಇಲ್ಲಿ ಲೆಕ್ಕವಿಲ್ಲದಷ್ಟು ಪ್ರಾಣಿಗಳ ಅವಶೇಷಗಳನ್ನು ಉತ್ಖನನದ ಸಮಯದಲ್ಲಿ ಹೊರತೆಗೆದ ಸಂಶೋಧಕರು ಅದರಲ್ಲಿನ ಸುಮಾರು 10,000ಕ್ಕೂ ಹೆಚ್ಚು ಸಸ್ತನಿ ಪ್ರಾಣಿಗಳ ಮೂಳೆಗಳನ್ನು ನಿರಂತರ ಸಂಶೋಧನೆಗೆ ಒಳಪಡಿಸಿದ್ದರು. ಇದರಲ್ಲಿ ಅವರುಗಳು ಬಾಸ್ ಇಂಡಿಕಸ್ ಜಾತಿಗೆ ಸೇರಿದ ಸುಮಾರು 193 ಮಾದರಿಗಳನ್ನು ಗುರುತಿಸಿ ವಿಂಗಡಿಸಿದ್ದರು. ನಂತರ ಇದರಲ್ಲಿ ಐದು ಉತ್ತಮವಾಗಿ ಸಂರಕ್ಷಿಸಲ್ಪಟ್ಟ ಮೂಳೆಗಳನ್ನು ಆಯ್ಕೆ ಮಾಡಿ ತೀವ್ರ ಸಂಶೋಧನೆಗೆ ಗುರಿಪಡಿಸಿದ್ದರು. ಈ ಐದು ಮೂಳೆಗಳನ್ನು ಅನುವಂಶಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಅದರಲ್ಲಿನ ಒಂದು ಮೂಳೆ ಗಂಡು ಯಾಕ್ ಪ್ರಾಣಿಯದ್ದಾಗಿದ್ದು ಕಂಡುಬಂತು. ಇನ್ನುಳಿದ ನಾಲ್ಕು ಮೂಳೆಗಳು ಟೌರಿನ್ ಜಾತಿಗೆ ಸೇರಿದ ಹೆಣ್ಣು ಜಾನುವಾರಿನದ್ದಾಗಿತ್ತು.

ಯುರೋಪಿನ ಹೆಚ್ಚಿನ ಆಧುನಿಕ ಜಾನುವಾರು ತಳಿಗಳು ಮತ್ತು ಏಷ್ಯಾದ ಸಮಶೀತೋಷ್ಣ ಪ್ರದೇಶದಲ್ಲಿರುವ ಬಹುತೇಕ ಜಾನುವಾರು ತಳಿಗಳನ್ನು ಟೌರಿನ್ ಎಂದು ಕರೆಯಲಾಗುತ್ತದೆ. ಇವುಗಳು ಭಾರತೀಯ ಉಪಖಂಡ ಮತ್ತು ಏಷ್ಯಾದ ಉಷ್ಣ ವಲಯದಲ್ಲಿ ಸ್ಥಳೀಯವಾಗಿ ಕಾಣಸಿಗುವ ಜೀಬು ತಳಿ ಅಥವಾ ಬೆನ್ನಿನ ಗುಪ್ಪೆಯನ್ನು ಹೊಂದಿರುವ ತಳಿಗಳಿಗಿಂತ ಬಹುತೇಕ ಭಿನ್ನವಾಗಿರುತ್ತವೆ. ಆದರೆ ಜೀಬು ದನಗಳ ಪ್ರಾಬಲ್ಯವಿರುವ ಭಾರತೀಯ ಉಪಖಂಡದ ಸಮೀಪವಿರುವ ಈ ಪ್ರದೇಶದಲ್ಲಿ ಟೌರಿನ್ ಜಾನುವಾರುಗಳ ಉಪಸ್ಥಿತಿ ಬರೀ ಸಂಶೋಧಕರಷ್ಟೇ ಅಲ್ಲದೇ ವಿಶ್ವದ ಜಾನುವಾರು ಪ್ರಭೇದದ ಕುರಿತಂತಿನ ಇಲ್ಲಿಯವರೆಗಿನ ಎಲ್ಲಾ ಸಂಶೋಧನಾ ವರದಿಗಳಿಗೆ ಹೊಸದೊಂದು ಪ್ರಶ್ನೆಯನ್ನು ಹುಟ್ಟುಹಾಕಿದೆ. ಆ ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಿರುವಂತೆ ಟೌರಿನ್ ಜಾನುವಾರುಗಳು ಸಿಲ್ಕ್ ರೂಟ್ ಮತ್ತು ಉತ್ತರ ಟಿಬೇಟ್ ಮೂಲಕ ಅನಾಟೋಲಿಯಾ ಅಂದರೆ ಇಂದಿನ ತುರ್ಕಿಯಿಂದ ಮಧ್ಯ ಮತ್ತು ಪೂರ್ವ ಟಿಬೇಟ್‌ನ್ನು ತಲುಪಿರಬಹುದು ಎಂಬುದಾಗಿ ಅಂದಾಜಿಸಲಾಗಿದೆ.ಈ ಕುರಿತಂತೆ ಸವಿಸ್ತಾರವಾದ ಅಧ್ಯಯನದ ವರದಿಯನ್ನು ಡಿಸೆಂಬರ್ 13, 2023ರಂದು ಸೈನ್ಸ್ ಅಡ್ವಾನ್ಸ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಟಿಬೇಟಿಯನ್ ಪ್ರಸ್ಥ ಭೂಮಿಯಲ್ಲಿ ಆರಂಭಿಕ ದೇಶಿ ಯಾಕ್, ಟೌರಿನ್ ಜಾನುವಾರುಗಳು ಮತ್ತು ಅವುಗಳ ಮಿಶ್ರ ತಳಿಗಳ ಮರಾವೆಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ವರದಿ ಪ್ರಕಟವಾಗಿತ್ತು.

ಭಾರತವಷ್ಟೇ ಅಲ್ಲದೆ ಹಿಮಾಲಯದ ತಪ್ಪಲಿನ ಸಾಕಷ್ಟು ದೇಶಗಳ ನಾಗರಿಕತೆಯ ಹಿಂದಿನ ಹಲವು ಶಕ್ತಿಗಳಲ್ಲಿ ಈ ದೈತ್ಯ ಪ್ರಾಣಿಯೂ ಒಂದಾಗಿತ್ತು ಎಂಬುದು ಬಹಳಷ್ಟು ಜನರಿಗೆ ತಿಳಿದಿಲ್ಲ. ಇಂತಹ ದೇಶಿ ಯಾಕ್ ತಳಿಗಳಿಂದು ಏಷ್ಯಾದ ಎತ್ತರದ ಪ್ರದೇಶಗಳಲ್ಲಿ ಸುಮಾರು 14 ರಿಂದ 15 ಮಿಲಿಯನ್‌ನಷ್ಟು ಮಾತ್ರ ಇರುವುದಾಗಿ ಸಂಶೋಧನಾ ವರದಿಗಳು ಹೇಳುತ್ತವೆ. ಭಾರತದಲ್ಲಿ ಇವುಗಳು ಹಿಮಾಲಯದ ಗಡಿ ರಾಜ್ಯಗಳು, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ, ಅರುಣಾಚಲ ಪ್ರದೇಶ ಮತ್ತು ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಕಂಡುಬರುತ್ತವೆ. ಇವುಗಳು ವೈಜ್ಞಾನಿಕವಾಗಿ ಬಾಸ್ ಗ್ರೂನ್ನೀನ್ಸ್ ಮತ್ತು ಬಾಸ್ ಮೂಟಸ್ ಎಂಬ ಜಾತಿಗೆ ಸೇರಿದವುಗಳಾಗಿವೆ. ಈ ಬಾಸ್ ಮೂಟಸ್ ಅಥವಾ ಕಾಡು ಯಾಕ್ ಎಂಬ ಜಾತಿ ಇಂದು ಅಪರೂಪವಾಗಿದ್ದು, ಭಾಗಶಃ ವಿನಾಶದ ಅಂಚಿನಲ್ಲಿದೆ. ಹೀಗೆ ಮನುಷ್ಯನ ಹಸ್ತಕ್ಷೇಪವೇ ಇಲ್ಲದೆ, ಮನುಷ್ಯ ಪಳಗಿಸದೇ ಕಾಡಿನಲ್ಲಿ ವಾಸವಿರುವ ಈ ಯಾಕ್‌ಗಳ ಸಂತತಿ ಬೆರಳೆಣಿಕೆಯಷ್ಟಾಗಿರುವುದಕ್ಕೆ ಸಾಕಷ್ಟು ಕಾರಣಗಳು ಕಂಡುಬರುತ್ತವೆ. ಒಂದು ಸಮೀಕ್ಷೆಯ ಪ್ರಕಾರ ಕಾಡಿನಲ್ಲಿ ಇವುಗಳ ಸಂಖ್ಯೆ ಸುಮಾರು 7,500 ರಿಂದ 10,000ದಷ್ಟು ಮಾತ್ರ ಉಳಿದಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಹೀಗಾಗಿ ಇವುಗಳನ್ನು ಈಗ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ ಮೂಲಕ ಅಳಿವಿನಂಚಿನಲ್ಲಿರುವ ದುರ್ಬಲ ಪ್ರಾಣಿಗಳು ಎಂಬುದಾಗಿ ಪಟ್ಟಿ ಮಾಡಲಾಗಿದೆ.

ನಶಿಸಿ ಹೋಗುತ್ತಿರುವ ಸಾಕಷ್ಟು ಜೀವಿಗಳಂತೆ ಈ ಪ್ರಾಣಿಯೂ ಇನ್ನೈದು ಹತ್ತು ವರ್ಷಗಳಲ್ಲಿ ವಿಶೇಷವಾಗಿ ಭಾರತದಿಂದ ಸಂಪೂರ್ಣ ಕಣ್ಮರೆಯಾಗಬಹುದು ಎಂಬುದಾಗಿ ಅಂದಾಜಿಸಲಾಗುತ್ತಿದೆ. ಹೀಗಾದಲ್ಲಿ ಮತ್ತೊಂದು ಅಪರೂಪದ ಜೀವ ಸಂಕುಲ ನಮ್ಮಿಂದ, ಈ ಭೂಮಿಯಿಂದ ಶಾಶ್ವತವಾಗಿ ಕಣ್ಮರೆಯಾಗಲಿದೆ. ತಡವಾದರೂ ಎಚ್ಚೆತ್ತು ಈ ಜೀವ ಸಂಕುಲವನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆಯನ್ನು ಸರ್ಕಾರವಾಗಲಿ, ಇಲ್ಲವೇ ಯಾವುದೇ ಸರ್ಕಾರೇತರ ಸಂಸ್ಥೆಗಳಾಗಲಿ ಸಿದ್ಧಪಡಿಸಿ ಕಾರ್ಯಗತಗೊಳಿಸಬೇಕಿದೆ.

ಬುದ್ಧಿವಂತರು ಪಾಪವೆಸಗಬಾರದು

ಸಂದಿಗ್ಧೇ ಪರಲೋಕೇಽಪಿ ತ್ಯಾಜ್ಯಮೇವಾಶುಭಂ ಬುಧೈಃ।
ನಾಸ್ತಿ ಚೇನ್ನಾಸ್ತಿ ನೋ ಹಾನಿಃ ಅಸ್ತಿ ಚೇನ್ನಾಸ್ತಿಕೋ ಹತಃ ॥ –ಮಹಾಭಾರತ

ಪರಲೋಕದ ಬಗೆಗೆ ಸಂದೇಹವಿದ್ದಾಗ್ಯೂ ಬುದ್ಧಿವಂತರು ಪಾಪವನ್ನು ಮಾಡಬಾರದು. ಪರಲೋಕವು ಇಲ್ಲದಿದ್ದರೆ ಇಲ್ಲ. ಆದರಿಂದ ನಷ್ಟವೇನಿಲ್ಲ. ಆದರೆ ಪರಲೋಕವಿದ್ದ ಪಕ್ಷದಲ್ಲಿ ನಾಸಿಕನು ಹಾಳಾಗುತ್ತಾನೆ –ಎಂಬುದು ಶ್ಲೋಕಾರ್ಥ.

ಸನಾತನ ಪರಂಪರೆಯಲ್ಲಿ ಪರಲೋಕದ ಕಲ್ಪನೆ ದಟ್ಟವಾಗಿದೆ. ಧರ್ಮಮಾರ್ಗದಲ್ಲಿ ನಡೆದರೆ ಉನ್ನತಿ, ಅಧರ್ಮಮಾರ್ಗದಲ್ಲಿ ನಡೆದರೆ ಅವನತಿ (ಧರ್ಮೇಣ ಗಮನಾಮೂರ್ಧ್ವಂ ಗಮನಮಧಸ್ತಾತ್ ಅಧರ್ಮೇಣ) ಎಂಬುದು ನಂಬಿಕೆ. ಉತ್ತಮ ಕೆಲಸವನ್ನು ಮಾಡಿದವರು ಸ್ವರ್ಗವನ್ನು ಪಡೆದರೆ ಕೆಟ್ಟ ಕೆಲಸವನ್ನು ಮಾಡಿದವರು ನರಕವನ್ನು ಪಡೆಯುತ್ತಾರೆ ಎಂಬುದನ್ನು ಶಾಸ್ತ್ರಗಳು ಹೇಳಿ ಉತ್ತಮ ದಾರಿಯನ್ನು ತುಳಿಯುಂತೆ ಪ್ರೇರೇಪಿಸುತ್ತವೆ.



ಇಷ್ಟೊಂದು ನಂಬಿಕೆ ಪರಲೋಕದ ಕುರಿತು ಇದ್ದರೂ, ಇವೆಲ್ಲವೂ ಗ್ರಂಥಲಿಖಿತ ಹಾಗೂ ಹಿರಿಯರ ಉಪದೇಶ. ಆದರೆ ನೋಡಿ ಬಂದವರು ಯಾರೊಬ್ಬರೂ ಇಲ್ಲ. ಆದರೂ ಗ್ರಂಥಗಳು ಹೇಳಿವೆ ಎಂಬ ಕಾರಣಕ್ಕೆ ನಂಬುತ್ತಾರೆ. ಸಂದೇಹವೇ ವಿನಾ ಪ್ರತ್ಯಕ್ಷದರ್ಶಿ ಯಾವೊಬ್ಬನೂ ಇಲ್ಲ. ಇದನ್ನು ನಂಬುವುದರಿಂದ ಹಾನಿಯಿದೆಯೇ? ಎಂದರೆ ಅದೂ ಇಲ್ಲ. ಬದಲಾಗಿ ಮನುಷ್ಯನನ್ನು ಒಳ್ಳೆಯ ಮಾರ್ಗಕ್ಕೆ ಹಚ್ಚುವುದಕ್ಕೆ ಕಾರಣವಾಗಿವೆ. ಪುಣ್ಯ–ಪಾಪ, ಸ್ವರ್ಗ–ನರಕ ಇತ್ಯಾದಿ ವಿಚಾರಗಳನ್ನು ಶಾಸ್ತ್ರಗಳು ಪ್ರಚುರಪಡಿಸಿ ಒಳ್ಳೆಯದರತ್ತ ಮುಖ ಮಾಡಲು ಪ್ರೇರೇಪಿಸುತ್ತವೆ. ಪರಲೋಕದ ಕುರಿತಾದ ಸಂದೇಹವಿದ್ದಾಗಲೂ ಪಾಪ ಮಾಡಬಾರದು. ಇದು ಬುದ್ಧಿವಂತರ ಲಕ್ಷಣ ಕೂಡ. ಏನೇನೂ ಕೆಡುಕಿಲ್ಲದೆ ಒಳ್ಳೆಯದನ್ನು ಮಾಡಲು ಪ್ರೇರಣೆ ಕೊಡುವುದಾದಲ್ಲಿ ತೊಂದರೆಯೇನಿದೆ? ಪರಲೋಕವಿಲ್ಲದಿದ್ದರೆ ಇಲ್ಲ. ಅದಿಲ್ಲದಿದ್ದರೂ ಒಳ್ಳೆಯ ಕೆಲಸದಿಂದ ಹಾನಿಯೇನೂ ಆಗದು. ಅಕಸ್ಮಾತ್ ಇದ್ದದ್ದೇ ಆದರೆ ಟೀಕೆ ಮಾಡಿದ ನಾಸ್ತಿಕನು ಹಾಳಾಗುತ್ತಾನೆ. ತೊಂದರೆಯನ್ನು ಅನುಭವಿಸುತ್ತಾನೆ.

ಪಾಪ–ಪುಣ್ಯ, ಸ್ವರ್ಗ–ನರಕಗಳ ಕಲ್ಪನೆಯೇ ಇಹದಲ್ಲಿ ಚೆನ್ನಾಗಿ ಬದುಕುವುದಕ್ಕೆ. ಈ ಭಯದಿಂದಲಾದರೂ ಒಳ್ಳೆಯ ಕೆಲಸವನ್ನು ಮಾಡಲಿ ಎಂಬುದು ಕಲ್ಪನೆಯ ಹಿಂದಿನ ಆಶಯ. ನಾವೇ ಬುದ್ಧಿವಂತರು, ಬುದ್ಧಿಜೀವಿಗಳು, ನಾವು ತಾರ್ಕಿಕವಾಗಿ ಯೋಚಿಸಿ ಮುಂದು ವರಿಯುವವರು... ಇತ್ಯಾದಿ ಹೇಳಿಕೊಂಡು ಇತರರನ್ನು ದಾರಿ ತಪ್ಪಿಸುವವರು ಸಾಕಷ್ಟು ಜನರಿದ್ದಾರೆ. ಇವರು ತಮ್ಮನ್ನು ತಾವು ವಿಚಾರವಾದಿಗಳೆಂದು ಕರೆದುಕೊಳ್ಳುತ್ತಾರೆ. ಇವರೆಂದೂ ಭಾವನಾತ್ಮಕವಾಗಿ ನಡೆದುಕೊಳ್ಳುವುದಿಲ್ಲ. ಆಚಾರ–ವಿಚಾರಗಳನ್ನು ಟೀಕಿಸುವುದರಲ್ಲೇ ಜೀವನ ಕಳೆಯುತ್ತಾರೆ. ಭಾರತೀಯ ಮೂಲ ಗ್ರಂಥಗಳನ್ನು ಅದರ ಆಶಯದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದಿಲ್ಲ. ಜನರು ಗೊತ್ತಿಲ್ಲದೆ ತಪ್ಪಾಗಿ ಆಚರಿಸಿದ್ದನ್ನು ಎತ್ತಿಕೊಂಡು ಗೇಲಿ ಮಾಡುತ್ತಾರೆ. ಇವರು ಅಲ್ಪಸ್ವಲ್ಪ ಓದಿರುವುದು ಪಾಶ್ಚಾತ್ಯ ಸಾಹಿತ್ಯವನ್ನು, ಕಮ್ಯುನಿಸ್ಟ್ ಸಿದ್ಧಾಂತವನ್ನು. ದೇವರು, ದೈವಗಳನ್ನು ನಂಬಿ ನಡೆದು ಜೀವನದಲ್ಲಿ ನೆಮ್ಮದಿಯನ್ನು, ಪ್ರೇರಣೆಯನ್ನು ಪಡೆದುಕೊಳ್ಳುವವರ ಬಗ್ಗೆ ಆಡಿಕೊಳ್ಳುತ್ತಾರೆ.

ಇಹದ ಜೀವನವನ್ನು ಚೆನ್ನಾಗಿ ನಿರ್ವಹಿಸಲು, ಬದುಕಿನ ಬಗ್ಗೆ ಭರವಸೆ ತಾಳಲು ಇಂತಹ ನಂಬಿಕೆ ಬೇಕಾಗುತ್ತವೆ. ಯಾರಿಗೂ ತೊಂದರೆ ನೀಡದ ಆಚರಣೆ ಹಾಗೂ ಕಲ್ಪನೆ ನಷ್ಟವನ್ನೇನೂ ಉಂಟು ಮಾಡುವುದಿಲ್ಲ. ಒಂದೊಮ್ಮೆ ಪರಲೋಕಾದಿಗಳಿದ್ದರೆ ಪಡೆಯುತ್ತಾನೆ. ಇಲ್ಲದಿದ್ದರೆ ನಷ್ಟವೇನಿಲ್ಲ. ಆದರೆ ಇದನ್ನೇ ಗುರಿ ಮಾಡಿ ಟೀಕಿಸುವವನು, ಅಲ್ಲಗಳೆಯುವವನು ಒಂದೊಮ್ಮೆ ಪರಲೋಕವಿದ್ದ ಪಕ್ಷದಲ್ಲಿ ಹಾಳಾಗುತ್ತಾನೆ.

ಅವರವರ ನಂಬಿಕೆಗಳನ್ನು ಗೌರವಿಸೋಣ. ಬೆಲೆ ಕೊಡೋಣ. ಅತಿ ಬುದ್ಧಿವಂತಿಕೆ ಪ್ರದರ್ಶಿಸಿ ಇನ್ನೊಬ್ಬರ ನಂಬಿಕೆಯನ್ನು ಹೀಗಳೆಯುವ ಅಧಿಕಾರ ಯಾರಿಗೂ ಇಲ್ಲ.

ಒತ್ತಡ ಹೇರಹೊರಟವರೇ ಒತ್ತಡಕ್ಕೀಡಾದರೆ!?

▸ ಶಶಿಧರ್ ತಲ್ಲೂರಂಗಡಿ



ಭಾರತ ವಿಶ್ವಗುರುವಿನ ಸ್ಥಾನಕ್ಕೇರಿದ್ದು ಮೋದಿ ಪ್ರಧಾನಿಯಾದ ಮೇಲೆ ಎಂದರೆ ಅದಕ್ಕಿಂತ ದೊಡ್ಡ ಭ್ರಮೆ ಬೇರಿಲ್ಲ. ಮೋದಿಯನ್ನು ವಿರೋಧಿಸುವ ಭರದಲ್ಲಿ ಕಾಂಗ್ರೆಸಿಗರು ಈ ರಾಷ್ಟ್ರದ ಬಗ್ಗೆಯೇ ಅಣಕ ಮಾಡುತಿರುವುದನ್ನು ಪ್ರಜ್ಞಾವಂತರು ಗಮನಿಸುತ್ತಿರುತ್ತಾರೆ ಎಂಬ ಸಾಮಾನ್ಯ ಪ್ರಜ್ಞೆಯೂ ಅವರಿಗಿಲ್ಲವಾಗಿದೆ.

ಇತ್ತೀಚೆಗೆ ಅಮೆರಿಕಾದ ಅಧ್ಯಕ್ಷ ಟ್ರಂಪ್ ಮೋದಿಯವರಿಗೆ ಕರೆ ಮಾಡಿ ಮಾತನಾಡಿದ್ದು, ಭಾರತದ ಮೇಲೆ ಹೇರಿದ್ದ ಶೇ.25 ಸುಂಕವನ್ನು ಶೇ.18ಕ್ಕೆ ಇಳಿಸಿದ್ದು ಹಾಗೂ ಭಾರತ ಅಮೆರಿಕಾ ನಡುವೆ ವ್ಯಾಪಾರ ಒಪ್ಪಂದವಾಗಿದ್ದು ಎಲ್ಲರಿಗೂ ತಿಳಿದಿದೆ. ಈ ಒಪ್ಪಂದದ ನಂತರ ಟ್ರಂಪ್ ಅವರ ಮನಸ್ಸಿಗೆ ಇಷ್ಟ ಬಂದಂತೆ ಹೇಳಿಕೆ ಕೊಡತೊಡಗಿದ್ದು ಅಮೆರಿಕಾದ ಪತ್ರಿಕೆಗಳೇ ಆತನ ಮಾತಿಗೆ ಸೊಪ್ಪು ಹಾಕದೆ ಭಾರತದ ಪರವಾಗಿ ವರದಿ ಮಾಡುತ್ತಿರುವ ಸಂದರ್ಭದಲ್ಲಿಯೂ ಭಾರತದ ವಿಪಕ್ಷಗಳು ಮಾತ್ರ ಭಾರತ ಅಮೆರಿಕಾದೆದುರು ಮಂಡಿಯೂರಿದೆ ಎನ್ನತೊಡಗಿದ್ದಾರೆ. ಈ ವ್ಯಾಪಾರ ಒಪ್ಪಂದದ ಎಲ್ಲ ಮಾಹಿತಿ ಬಹಿರಂಗಗೊಂಡ ನಂತರ ಈ ವಿಚಾರದಲ್ಲಿ ರಾಜಕೀಯ ಮಾಡಲು ಸಾಧ್ಯವಿಲ್ಲ. ಹೀಗಾಗಿ ಈಗ ಟ್ರಂಪ್ ಹೇಳಿದ್ದೆ ಪರಮಸತ್ಯವೆಂಬ ನೆಲೆಯಲ್ಲಿ ವಿಪಕ್ಷಗಳು ತಮ್ಮ ಬೇಳೆ ಬೇಯಿಸುವ ಕೆಲಸ ಮಾಡುತ್ತಿವೆ. 'ಇನ್ನು ಮುಂದೆ ಭಾರತ ರಷ್ಯಾದಿಂದ ಪೆಟ್ರೋಲಿಯಂ ಉತ್ಪನ್ನಗಳನ್ನು ಖರೀದಿಸುವುದಿಲ್ಲ' ಎಂದು ಟ್ರಂಪ್ ಹೇಳತೊಡಗಿದ್ದಾರೆ. ಅವರ ಈ ಹೇಳಿಕೆಯ ಆಧಾರದಲ್ಲಿ ಭಾರತ ಸೋತಿತೆಂದು ವಿಪಕ್ಷದವರು ವಿಜೃಂಭಿಸುವುದನ್ನು ಕಂಡರೆ ಇವರು ಯಾವ ರಾಷ್ಟ್ರಕ್ಕೆ ಸಂಬಂಧ ಪಟ್ಟವರು ಎಂಬ ಅನುಮಾನ ಕಾಡುತ್ತದೆ.

ಅಮೆರಿಕಾದ ಪತ್ರಿಕೆಗಳು ಟ್ರಂಪ್ ವಿರುದ್ಧ ಲೇಖನಗಳನ್ನು ಪ್ರಕಟಿಸುತ್ತಿವೆ. ಅವರೀಗ ಅಮೆರಿಕಾಗಿಂತ ಜಾಸ್ತಿ ಭಾರತವನ್ನು ನಂಬುತ್ತಿದ್ದಾರೆ. ಸುಂಕದ ವಿಚಾರವಾಗಿ ಅಜಿತ್ ಧೋವಲ್‌ರು ಅಮೆರಿಕಾವನ್ನು ಹೆದರಿಸಿದ್ದರ ಪರಿಣಾಮ ಟ್ರಂಪ್ ಮೋದಿಗೆ ಕರೆ ಮಾಡಿ ಟ್ರೇಡ್ ಡೀಲ್ ಮಾಡಿಕೊಂಡಿದ್ದಾರೆ ಎಂದು ಅಮೆರಿಕಾದ ಪತ್ರಿಕೆಗಳು ವರದಿ ಮಾಡುತ್ತಿವೆ. ಭಾರತ ರಷ್ಯಾದಿಂದ ತೈಲ ಖರೀದಿಸುವ ವಿಚಾರದಲ್ಲಿ ಆರಂಭದ ದಿನಗಳಲ್ಲಿ ಟ್ರಂಪ್‌ಗೇನೂ ಸಮಸ್ಯೆಯಿರಲಿಲ್ಲ. ಭಾರತ ಯಾವಾಗ ಟ್ರಂಪ್‌ನ ಟ್ರೇಡ್ ಡೀಲ್‌ಗೆ ಒಪ್ಪಲಿಲ್ಲವೋ ಆಗ ಶುರುವಾಗಿತ್ತು ಹೆದರಿಸುವ ಕೆಲಸ. ಸುಂಕ ಏರಿಸುತ್ತಾ ಸಾಗಿದ ಟ್ರಂಪ್‌ನ ಹುಚ್ಚಾಟಕ್ಕೆ ಭಾರತ ಜಪ್ಪೆಂದಿರಲಿಲ್ಲ. ಈಗ ಒಪ್ಪಂದವಾದ ಮೇಲೆ "ಭಾರತ ಅಮೆರಿಕಾ ಹಾಗೂ ವೆನೆಜುವೆಲಾದಿಂದ ಮಾತ್ರ ಆಯಿಲ್ ಖರೀದಿಸಲಿದೆ, ರಷ್ಯಾದಿಂದ ನಡೆಯುತ್ತಿರುವ ಖರೀದಿ ಸಂಪೂರ್ಣ ಸ್ಥಗಿತಗೊಳ್ಳಲಿದೆ. ಹೀಗೆಂದು ಭಾರತ ಒಪ್ಪಿಕೊಂಡಿದೆ" ಎಂದು ಟ್ರಂಪ್ ಹೇಳಿದ್ದು ನಿಜವೆಂದು ನಂಬಿ ವಿಪಕ್ಷಗಳು ಸರ್ಕಾರದ ವಿರುದ್ಧ ಹರಿಹಾಯತೊಡಗಿದ್ದಾರೆ. ಅಷ್ಟಕ್ಕೂ ರಷ್ಯಾ "ಭಾರತ ಆಯಿಲ್ ಖರೀದಿಯನ್ನು ನಿಲ್ಲಿಸುವ ಯಾವ ಸುಳಿವನ್ನೂ ನಮಗೆ ನೀಡಿಲ್ಲ. ಹಲವು ರಾಷ್ಟ್ರಗಳಿಂದ ಭಾರತ ಆಯಿಲ್ ಖರೀದಿಸುವುದು ಮೊದಲಿಂದಲೂ ನಡೆದು ಬಂದಿರುವ ನೀತಿ. ಆ ವಿಚಾರದಲ್ಲಿ ಭಾರತ ಸಂಪೂರ್ಣ ಸ್ವತಂತ್ರ. ಅವರು ಯಾರಿಂದ ಬೇಕಿದ್ದರೂ ಖರೀದಿಸಬಹುದು" ಎಂಬ ಹೇಳಿಕೆಯನ್ನು ನೀಡುವ ಮೂಲಕ ಭಾರತದೊಂದಿಗೆ ನಿಂತಿದೆ. ಆದರೆ ಭಾರತ ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸುವ ಸಾಧ್ಯತೆಯನ್ನು ಲೆಕ್ಕ ಹಾಕಿ ಇದು ಆಗದ ಮಾತು ಎಂದು ಅಮೆರಿಕಾದ ಪತ್ರಿಕೆಗಳು ಬರೆಯುತ್ತಿದ್ದರೆ ಭಾರತದ ವಿಪಕ್ಷಗಳು ಮಾತ್ರ ಈಗೇನು ಮಾಡುತ್ತೆ ನಿಮ್ಮ ವಿಶ್ವಗುರು ಎಂದು ಪ್ರಶ್ನಿಸುತ್ತಿವೆ!

ವಾಸ್ತವದಲ್ಲಿ ರಷ್ಯಾ ಭಾರತಕ್ಕೆ ರಿಯಾಯಿತಿ ದರದಲ್ಲಿ ತೈಲ ಕೊಡುತ್ತಿರುವುದರಿಂದ ವಾರ್ಷಿಕ ಸುಮಾರು 4ರಿಂದ 5 ಬಿಲಿಯನ್ ಡಾಲರ್‌ನಷ್ಟು ಲಾಭವಾಗುತ್ತಿದೆ. ಹೀಗಾಗಿ ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಿ ಹೆಚ್ಚಿನ ವ್ಯತ್ಯಾಸಗಳನ್ನು ಕಳೆದ ಐದಾರು ವರ್ಷಗಳಿಂದ ನಾವು ಕಾಣುತ್ತಿಲ್ಲ. ಈಗಿನ ಚಿನ್ನ ಬೆಳ್ಳಿಯ ದರದಂತೆ ಪ್ರತಿ ದಿನ ವ್ಯತ್ಯಾಸ ಕಾಣುತ್ತಿದ್ದ ಪೆಟ್ರೋಲಿಯಂ ಬೆಲೆ ಈಗ ಸ್ಥಿರವಾಗಿದೆಯೆಂದರೆ ಅದಕ್ಕೆ ರಷ್ಯಾದ ಆಮದೇ ಕಾರಣ. ದೊಡ್ಡ ಪ್ರಮಾಣದಲ್ಲಿ ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತ ಅದಕ್ಕೊಂದು ಪ್ರಾಕೃತಿಕ ವ್ಯವಸ್ಥೆ ಮಾಡಿಕೊಂಡಿರುತ್ತದೆ. ಈಗ ಅಮೆರಿಕಾದ ಮಾತಿಗೆ ಓಗೊಟ್ಟು ಒಮ್ಮೆಗೇ



ಅದನ್ನು ಸಂಪೂರ್ಣ ನಿಲ್ಲಿಸಿ ಅಮೆರಿಕಾ ಅಥವಾ ವೆನಿಜುವೆಲಾದಿಂದ ಖರೀದಿಸಲು ಸಾಧ್ಯವೇ ಇಲ್ಲ. ಒಂದೊಮ್ಮೆ ಹಾಗೆ ಮನಸ್ಸು ಮಾಡಿದರೂ ಅದಕ್ಕೆ ವ್ಯವಸ್ಥೆ ಮಾಡಿಕೊಳ್ಳಲು ಒಂದೆರಡು ವರ್ಷಗಳಷ್ಟು ಸಮಯ ಬೇಕಾಗುತ್ತದೆ. ಹೆಚ್ಚೆಂದರೆ ಈಗ ರಷ್ಯಾದಿಂದ ಖರೀದಿಸುತ್ತಿರುವ ತೈಲ ಪ್ರಮಾಣದಲ್ಲಿ ಸ್ವಲ್ಪ ಇಳಿಕೆಯಾಗಬಹುದು. ಅಮೆರಿಕಾದಿಂದ ಇರುವ ಶೇ.6 ರಷ್ಟಿರುವ ತೈಲ ಆಮದು ಶೇ.10ರಷ್ಟಾಗಬಹುದು. ಇದಕ್ಕಿಂತ ಹೆಚ್ಚಿನದ್ದೇನೂ ನಡೆಯಲಿಕ್ಕಿಲ್ಲ ಎಂಬುದು ಅಮೆರಿಕಾ ಪತ್ರಿಕೆಗಳ ವಾದ. ಅದು ಸತ್ಯವೂ ಹೌದು. ಆದರಿದು ವಿಪಕ್ಷಗಳಿಗೆ ಅರ್ಥವಾಗುತ್ತಿಲ್ಲ.

ಹೆದರಿಸಿ ಕೆಲಸ ಮಾಡಿಸಿಕೊಳ್ಳುವುದು ಅಮೆರಿಕಾದ ಹಳೆಯ ನೀತಿ. ಅದೇ ನೀತಿಯನ್ನು ವ್ಯಾಪಾರ ಒಪ್ಪಂದದ ವಿಚಾರದಲ್ಲಿ ಟ್ರಂಪ್ ಮುಂದುವರೆಸಿದ್ದರು. ಆದರೆ ಭಾರತ ಬಗ್ಗಲಿಲ್ಲ. ಭಾರತದ ಆರ್ಥಿಕತೆಯನ್ನು ಕುಗ್ಗಿಸುವ ಪ್ರಯತ್ನ ಕಳೆದ ಆಗಸ್ಟ್ ನಿಂದ ಆರಂಭವಾಗಿತ್ತಾದರೂ ಫಲ ನೀಡಲಿಲ್ಲ. ಸುಂಕ ಶೇ.50ಕ್ಕೆ ಏರಿದಾಗಲೂ ಭಾರತ ಜಗ್ಗಿರಲಿಲ್ಲ. "ನಮ್ಮ ಈ ಗೊಡ್ಡು ಬೆದರಿಕೆಗಳಿಗೆ ಹೆದರುವವರಲ್ಲ, ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಟ್ರಂಪ್ ಅವಧಿ ಮುಗಿಯುವಲ್ಲಿಯವರೆಗೂ ಕಾಯುವ ತಾಳ್ಮೆ ಹಾಗೂ ಶಕ್ತಿ ನಮಗಿದೆ" ಎಂದು ಅಮೆರಿಕಾದ ಸೆಕ್ರೆಟರಿ ಆಫ್ ಸ್ಟೇಟ್ ಆದ ಮಾರ್ಕೋ ರುಬಿಯೊ ಅವರಿಗೆ ಅಜಿತ್ ದೋವಲ್‌ರು ಸ್ಪಷ್ಟ ಸಂದೇಶ ರವಾನಿಸಿದ್ದರು. ಟ್ರಂಪ್ ಹಿಂದಿನ ಬಾರಿ ಅಧಿಕಾರಕ್ಕೆ ಬರುವಾಗ ಇಲ್ಲಿ ಮೋದಿ ಸರ್ಕಾರವಿತ್ತು. ಅಧಿಕಾರದಿಂದ ಇಳಿಯುವಾಗಲೂ ಮೋದಿ ಸರ್ಕಾರವಿತ್ತು. ಮತ್ತೆ ಅಧಿಕಾರಕ್ಕೆ ಬರುವಾಗಲೂ ಮೋದಿ ಸರ್ಕಾರವಿದೆ. ಟ್ರಂಪ್ ಆಡಳಿತ ಅವಧಿ ಮುಗಿದರೂ ಭಾರತದಲ್ಲಿ ಮೋದಿ ಸರ್ಕಾರದ ಅವಧಿ ಮುಗಿದಿರುವುದಿಲ್ಲ! ಹೀಗಾಗಿ ದೋವಲ್ ಹೇಳಿದ ಮಾತು ಸತ್ಯವಾಗಿದ್ದು ಅವರ ಎಚ್ಚರಿಕೆಗೆ ನಿಜಕ್ಕೂ ಭಯಗೊಂಡಿದ್ದು ಅಮೆರಿಕಾ ಸರ್ಕಾರ ಎಂದು ಅಮೇರಿಕಾದ Bloomberg ಪತ್ರಿಕೆ ವರದಿ ಮಾಡಿದೆ. ಅಮೆರಿಕಾದ ಬೆದರಿಕೆಗೆ ಭಾರತ ಬಗ್ಗುವುದಿಲ್ಲ ಎಂಬುದನ್ನು ಅರಿತ ಮೇಲೆ ಅಮೆರಿಕಾ ಮೆತ್ತಗಾಗದೆ ಬೇರೆ ದಾರಿ ಇರಲಿಲ್ಲ. ಭಾರತವೀಗ ಮೊದಲಿನಂತಿಲ್ಲ ಎಂಬುದು ಅಮೆರಿಕಾಕ್ಕೆ ಅರ್ಥವಾದಷ್ಟು ವಿಪಕ್ಷಗಳಿಗೆ ಅರ್ಥವಾಗುತ್ತಿಲ್ಲ.

'ಐ ಲವ್ ಇಂಡಿಯಾ, ಮೋದಿ ಈಸ್ ಮೈ ಫ್ರೆಂಡ್" ಎನ್ನುತ್ತಿದ್ದ ಟ್ರಂಪ್ ತಲೆಗೆ ತಾನೇ ದೊಡ್ಡಣ್ಣ ಎಂಬ ಭ್ರಮೆ ಕಾಡಿದಾಗ ಸ್ವಲ್ಪ ಮಟ್ಟಿಗೆ ಭಾರತವನ್ನು ಹೆದರಿಸುವ ಕಾರ್ಯಕ್ಕೆ ಮುಂದಾದರು. ಆದರೆ ಭಾರತ ಸರ್ಕಾರ ಗಟ್ಟಿ ನಿಂತಾಗ ಮತ್ತೆ ತಣ್ಣಗಾಗದೆ ವಿಧಿಯಿಲ್ಲದಾಯ್ತು. ಟ್ರಂಪ್‌ರ ಆಪ್ತ ಕಾರ್ಯದರ್ಶಿಯಾದ ಕರೋಲಿನ್ ಲೀವಿಟ್ ವ್ಯಾಪಾರ ಒಪ್ಪಂದವನ್ನು ಉಲ್ಲೇಖಿಸುತ್ತಾ "ಟ್ರಂಪ್ ವಿಶ್ವನಾಯಕರ ಜೊತೆ ಮಾತನಾಡಲು ಸದಾ ಉತ್ಸುಕರಾಗಿರುತ್ತಾರೆ. ಆದರೆ ಪ್ರಧಾನಿ ನರೇಂದ್ರ ಮೋದಿಯವರ ವಿಚಾರ ಬಂದಾಗ ಅದು ಬೇರೆಯದ್ದೆ ಮಟ್ಟದಲ್ಲಿರುತ್ತದೆ" ಎಂಬ ಹೇಳಿಕೆ ನೀಡಿದ್ದಾರೆ. ಈ ಮೂಲಕ ಭಾರತದ ಪ್ರಧಾನಿ ನಮಗೆ ಬಹಳ ಪ್ರಮುಖರು ಎಂಬ ವಿಚಾರವನ್ನು ಅವರು ಒತ್ತಿ ಹೇಳುತ್ತಿದ್ದಾರೆ. ಟ್ರಂಪ್ ಅಂತೂ ಮೋದಿಯ ಬಗ್ಗೆ ಬಹಳ ಉತ್ತಮ ಮಾತುಗಳನ್ನಾಡುತ್ತಿದ್ದಾರೆ. Truth Social ಎಂಬ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಭಾರತದ 'ಇಂಡಿಯಾ ಗೇಟ್'ನ ಚಿತ್ರವನ್ನು ಹಂಚಿಕೊಂಡಿದ್ದಾರೆ. ಇದೇ ಅಮೇಕಾದ ಕೆಲ ತಿಂಗಳುಗಳ ಹಿಂದಿನ ಧೋರಣೆಗೂ ಈಗಕ್ಕೂ ಬಹಳ ವ್ಯತ್ಯಾಸವಿದೆ. ಹಿಂದೆ ಟ್ರಂಪ್ ಟೀಂನಲ್ಲಿದ್ದವರೆಲ್ಲರೂ ಭಾರತದ ವಿರುದ್ಧ ಹರಿಹಾಯ್ದಿದ್ದರು. ಲಿಂಡ್ಸೆ ಗ್ರಹಮ್ ಎಂಬ ಒಬ್ಬ ಸಾಮಾನ್ಯ ಸಂಸದ ಕೂಡ ಭಾರತದ ವಿರುದ್ಧ ಮಾತನಾಡುತ್ತಿದ್ದ. ಹೌವಾರ್ಡ್ ಲುಟ್ನಿಕ್ ಎಂಬಾತ "ಇನ್ನೆರಡು ತಿಂಗಳೊಳಗೆ ಭಾರತ ನಮ್ಮ ಬಳಿ ಬಂದು ಕ್ಷಮೆ ಯಾಚಿಸಲಿದೆ, ವ್ಯಾಪಾರ ಒಪ್ಪಂದ ಮಾಡಿಕೊಳ್ಳಬೇಕೋ ಬೇಡವೊ ಎಂದು ಅನಂತರ ಟ್ರಂಪ್ ನಿರ್ಧರಿಸುತ್ತಾರೆ" ಎಂಬ ಹೇಳಿಕೆ ನೀಡಿದ್ದ. ಭಾರತಕ್ಕೆ ಅತಿದೊಡ್ಡ ವ್ಯಾಪಾರ ಪಾಲುದಾರ ಅಮೆರಿಕಾ, ನಮ್ಮ ಅತಿ ಹೆಚ್ಚಿನ ರಫ್ತು ವಹಿವಾಟಿರುವುದು ಅಮೆರಿಕಾದೊಂದಿಗೆ ಹೀಗಾಗಿ ಭಾರತ ಮೆತ್ತಗಾಗಲೇಬೇಕು. ಅಮೆರಿಕಾದೆದುರು ಮಂಡಿಯೂರಲೇಬೇಕು ಎಂಬ ಭ್ರಮೆಯಲ್ಲಿದ್ದ ಅಮೆರಿಕಾದ ನಿರೀಕ್ಷೆ ಸುಳ್ಳಾಗಿದೆ. ಅಜಿತ್ ದೋವಲ್ ನಾವು ಕಾಯಲು ಸಿದ್ಧರಿದ್ದೇವೆ ಎಂದರು. ಭಾರತ ಹೊಸ ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಲಾರಂಭಿಸಿತು. ಹೀಗೆ ಒತ್ತಡ ಹೇರಹೊರಟ ಅಮೆರಿಕಾ ತಾನೇ ಒತ್ತಡಕ್ಕೆ ಸಿಲುಕಿ ಭಾರತಕ್ಕೆ ಮಣಿದು ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ ಎಂಬುದು ಅಮೆರಿಕಾದ ಮಾಧ್ಯಮಗಳ ವಾದ. ಸದ್ಯಕ್ಕಂತೂ ಟ್ರಂಪ್‌ರನ್ನು ಅಮೆರಿಕಾದ ಪ್ರಜೆಗಳು ಬಿಡಿ ಅಮೆರಿಕಾದ ಪ್ರಮುಖ ಪತ್ರಿಕೆಗಳೂ ನಂಬುತ್ತಿಲ್ಲ. ಆದರೆ ಭಾರತದ ವಿಪಕ್ಷಗಳು ಮಾತ್ರ ಅವರ ಮಾತನ್ನು ವೇದವಾಕ್ಯವೆಂದು ಪರಿಗಣಿಸಿವೆ.

ಶ್! ಇದು ಪರೀಕ್ಷಾ ಸಮಯ

▸ ಡಾ.ಮೈತ್ರಿ ಭಟ್, ವಿಟ್ಲ



ಜನವರಿ ಕಳೆದು ಫೆಬ್ರವರಿ ತಿಂಗಳು ಕಾಲಿಡುತ್ತಿದ್ದ ಹಾಗೆ ವಿದ್ಯಾರ್ಥಿಗಳಲ್ಲಿ ಅದೇನೋ ಒಂದು ರೀತಿಯ ಭಯ, ಗಾಬರಿ, ಗೊಂದಲ, ಚಡಪಡಿಕೆ ಮನದೊಳಗೆ ಮೂಡಲಾರಂಭಿಸುತ್ತದೆ. ಮಾರ್ಚ್ ಬಂತೆಂದರೆ ಕೇಳುವುದೇ ಬೇಡ. ಬಿಸಿಲಿನ ಕಾವಿನೊಡನೆ ಮೂಡುವ ಪರೀಕ್ಷೆಯ ಕಾವು ಮನೆಯೊಳಗೆ ಒಂದು ಬಗೆಯ ಬಿಸಿ ವಾತಾವರಣವನ್ನು ಸೃಷ್ಟಿಸುತ್ತದೆ. ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಥಿ ಬದುಕಿನ ಅಗ್ನಿಪರೀಕ್ಷೆ ಈ ಸಮಯದಲ್ಲಿ ಆರಂಭವಾಗುತ್ತದೆ. ಅದುವರೆಗೆ ಶಾಲೆಯಲ್ಲಿ ನಡೆದ ಪಾಠ, ಪ್ರವಚನಗಳನ್ನು ಸರಿಯಾಗಿ ಓದಿ ಯಾವುದೇ ರೀತಿಯಲ್ಲಿ ಭಯ, ಗೊಂದಲಕ್ಕೆ ಒಳಗಾಗದೆ ಮೂರು ಗಂಟೆಗಳಲ್ಲಿ ನೆನಪಿನಿಂದ ಹೆಕ್ಕಿ ತೆಗೆದು ಸಲೀಸಾಗಿ ಪ್ರಶ್ನೆಗಳಿಗೆ ಉತ್ತರಿಸುವುದು ವಿದ್ಯಾರ್ಥಿ ಜೀವನದಲ್ಲಿ ಎದುರಿಸುವ ಬಹುಮುಖ್ಯ ಸವಾಲೇ ಆಗಿರುತ್ತದೆ.

ಎಲ್ಲಾ ವಿದ್ಯಾರ್ಥಿಗಳ ಮನಸ್ಥಿತಿ ಒಂದೇ ಆಗಿರುವುದಿಲ್ಲ. ಕೆಲವರು ಅಂದಂದಿನ ಪಾಠ ಅಂದೇ ಓದಿ ಪರೀಕ್ಷೆಗೆ ಬೇಕಾದ ತಯಾರಿ ನಡೆಸಿದ್ದರೆ, ಇನ್ನೂ ಕೆಲವರು ಪರೀಕ್ಷೆಯ ಹಿಂದಿನ ದಿನ ಮೆಲ್ಲನೆ ಪುಸ್ತಕ ತೆರೆಯುತ್ತಾರೆ. ಹಾಗೆಂದು ಪರೀಕ್ಷಾ ಭಯ ಓದದ ವಿದ್ಯಾರ್ಥಿಗೆ ಮಾತ್ರ ಇರುತ್ತದೆ ಅಥವಾ ಇರಲೇಬೇಕು ಎಂದೇನೂ ಇಲ್ಲ. ಬದುಕಿನ ಯಾವುದೋ ಕ್ಷಣದಲ್ಲಿ ಈ ಭಯ ಹೆಚ್ಚಿನ ಎಲ್ಲರನ್ನೂ ಕಾಡಿರುತ್ತದೆ.

ಪರೀಕ್ಷೆ ಎನ್ನುವುದು ವಿದ್ಯಾರ್ಥಿಯ ಜೀವನಘಟ್ಟದಲ್ಲಿ ಮಹತ್ತರವಾದ ಮೈಲುಗಲ್ಲು. ಪರೀಕ್ಷೆಯಲ್ಲಿ ಜಯವನ್ನು ಸಾಧಿಸಿ ಬರುವುದಕ್ಕೆ ಅದು ಯುದ್ಧವೇನೂ ಅಲ್ಲ, ಇಲ್ಲಿ ನಮ್ಮೊಡನೆ ನಾವು ಸ್ಪರ್ಧಿಸಬೇಕಿದೆ. ಅದು ಶಿಕ್ಷಣದ ಒಂದು ಮೆಟ್ಟಿಲು ಏರಿದುದರ ಸೂಚಕ. ಪರೀಕ್ಷೆ ಎನ್ನುವುದು ಕೊನೆಯ ಅವಕಾಶವಲ್ಲ; ಅದು ಸುದೀರ್ಘ ಜೀವನವನ್ನು ಕಳೆಯಲು ನಮ್ಮನ್ನು ನಾವು ರೂಪಿಸಿಕೊಳ್ಳುವ ಸದವಕಾಶ. ಪ್ರತಿಯೊಬ್ಬ ಹೆತ್ತವರೂ ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಲಿ ಎಂದು ಆಶಿಸುವುದು ಸಹಜ. ವಿದ್ಯಾರ್ಥಿಯು ಮನಸ್ಸಿನ ಚಂಚಲತೆಯನ್ನು ಹೋಗಲಾಡಿಸಿ ಏಕಾಗ್ರತೆಯಿಂದ ಯಾವ ರೀತಿ ತನ್ನನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಪರೀಕ್ಷೆಯ ಸಮಯದಲ್ಲಿ ತೊಡಗಿಸಿಕೊಳ್ಳುತ್ತಾನೆ ಎಂಬುದರ ಮೇಲೆ ವಿದ್ಯಾರ್ಥಿಯ ಭವಿಷ್ಯ ಅಡಗಿರುತ್ತದೆ.

ತಾವು ಕಲಿಸಿದ ವಿದ್ಯೆಯನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಕಲಿತಿದ್ದಾರೆ ಎಂಬುದನ್ನು ಪರೀಕ್ಷಿಸುವ ಪರಿಪಾಠ ಇಂದು ನಿನ್ನೆಯದಲ್ಲ, ಅದು ಪುರಾಣ ಕಾಲದಿಂದಲೂ ನಡೆದು ಬಂದಿದೆ. ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳು ಕಾಲಕಾಲಕ್ಕೆ ಪಡೆದ ಜ್ಞಾನ, ಕೌಶಲಗಳನ್ನು ಅಳೆಯಲಾಗುತ್ತದೆ. ಇದರಿಂದ ನಮ್ಮ ಜ್ಞಾನ, ಕೌಶಲದ ಮಟ್ಟವನ್ನು ತಿಳಿದು ದೌರ್ಬಲ್ಯಗಳನ್ನು ಉತ್ತಮಪಡಿಸಿಕೊಳ್ಳಬಹುದು. ಇಂದು ಅದು ಭವಿಷ್ಯವನ್ನು ನಿರ್ಧರಿಸುವ ಮಾರ್ಗವೂ ಆಗಿದೆ.

ಚೆನ್ನಾಗಿ ಓದಿ ತಯಾರಿ ನಡೆಸಿದ ವಿದ್ಯಾರ್ಥಿ ಕೂಡಾ ಓದಿದ್ದೆಲ್ಲ ಎಲ್ಲಿ ಮರೆತು ಹೋಗುವುದೋ ಎಂದು ಚಿಂತಿಸಿದರೆ, ಓದದೇ ಇರುವ ವಿದ್ಯಾರ್ಥಿಯ ಆತಂಕ ಹೇಳತೀರದು. ಬದಲಾದ ಸಾಮಾಜಿಕ ಪರಿಸ್ಥಿತಿ ಹಾಗೂ ಹೆಚ್ಚಿದ ಸಾಮಾಜಿಕ ಒತ್ತಡದಿಂದ 'ಪರೀಕ್ಷೆ' ಎಂಬುದು 'ಆತಂಕ'ವಾಗಿ ಹಿಂದೆಂದೂ ಕಾಣದಷ್ಟು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಒಂಭತ್ತನೆಯ ತರಗತಿಯವರೆಗೆ ವಿದ್ಯಾರ್ಥಿಗಳನ್ನು ಫೇಲ್ ಮಾಡುವಂತಿಲ್ಲ ಎನ್ನುವ ಸತ್ಯ ಗೊತ್ತಿದ್ದರೂ ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಆತಂಕ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಬದಲಾಗಿ ಎಲ್‌ಕೆಜಿ, ಯುಕೆಜಿಯಲ್ಲಿ ಕಲಿಯುತ್ತಿರುವ ಮಕ್ಕಳೂ ಕೂಡಾ ಪರೀಕ್ಷೆಯೆಂದರೆ ಭಯಪಡುವ ಸಂದರ್ಭಗಳನ್ನು ಕಾಣುತ್ತಿದ್ದೇವೆ.

ಇಂತಹ ಕಾಲೇಜಿನಲ್ಲೇ ಸೀಟ್ ತೆಗೆದುಕೊಳ್ಳಬೇಕು, ಇದೇ ವಿಷಯ, ವೃತ್ತಿ ಆಯ್ಕೆಯ ಚಿಂತನೆಗಳು, ಹೆಚ್ಚುತ್ತಿರುವ

ಪರೀಕ್ಷೆಯು ವಿದ್ಯಾರ್ಥಿಗಳನ್ನು ಹೆದರಿಸಲು ಬರುವುದಿಲ್ಲ. ಅದು ವಿದ್ಯಾರ್ಥಿಗಳ ಪ್ರತಿಭೆ, ಸಾಮರ್ಥ್ಯವನ್ನು ಪ್ರದರ್ಶಿಸಲು ಒಂದು ಸದವಕಾಶವಾಗಿರುತ್ತದೆ.



ಸಹಪಾಠಿಗಳೊಂದಿಗಿನ ಸ್ಪರ್ಧೆ, ಇತರರೊಂದಿಗೆ ಹೋಲಿಕೆ, ತಮ್ಮ ಸ್ಥಾನ ಕಾಯ್ದಿರಿಸಿಕೊಳ್ಳಲು ಉಂಟಾಗುವ ಸ್ಪರ್ಧೆ, ಪೋಷಕರ ಹೆಚ್ಚಿನ ನಿರೀಕ್ಷೆಗಳ ಕಾರಣ ಮಕ್ಕಳಲ್ಲಿ ಒತ್ತಡ, ಆತಂಕ ಮತ್ತು ಭಯ ಹೆಚ್ಚಾಗುತ್ತದೆ. ಈ ಪರೀಕ್ಷಾ ಸಮಯ ಎಂಬುದು ವರ್ಷದಲ್ಲಿ ಒಮ್ಮೆ ಎದುರಾಗುವ ಒತ್ತಡದ ಸಮಯ. ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ, ಚೆನ್ನಾಗಿ ಅಭ್ಯಾಸ ಮಾಡಿದ್ದರೆ ಪರೀಕ್ಷೆಗೆ ಹೆದರಬೇಕಿಲ್ಲ. ನಿಜವಾಗಿ ನೋಡಿದರೆ ಪರೀಕ್ಷೆ ವಿದ್ಯಾರ್ಥಿಗಳನ್ನು ಹೆದರಿಸಲು ಬರುವುದಿಲ್ಲ. ಬದಲಿಗೆ ವಿದ್ಯಾರ್ಥಿಗಳ ಪ್ರತಿಭೆ, ಸಾಮರ್ಥ್ಯವನ್ನು ಪ್ರದರ್ಶಿಸಲು ಒಂದು ಸದವಕಾಶವಾಗಿರುತ್ತದೆ.

ಬಾಲ್ಯ ಎನ್ನುವುದು ಸುಂದರ ಸಮಯ. ತನ್ನ ಸುತ್ತಲಿನ ಪರಿಸರ, ತಾನು ಬೆಳೆಯುವ ವಾತಾವರಣ ಪ್ರತಿಯೊಂದು ವಿದ್ಯಾರ್ಥಿಯ ಬದುಕಿನ ಮೇಲೆ ಅಗಾಧವಾದಂತಹ ಪರಿಣಾಮವನ್ನು ಬೀರುತ್ತದೆ ಎನ್ನುವ ವಿಚಾರ ನಮಗೆಲ್ಲರಿಗೂ ತಿಳಿದೇ ಇದೆ. ಬಾಲ್ಯವನ್ನು ಬಾಲ್ಯವನ್ನಾಗಿಯೇ ಉಳಿಸಿ ಅವರ ಮನಸ್ಸಿನ ಎಲ್ಲಾ ಮುಗ್ಧ ಕನಸು ಕಲ್ಪನೆಗಳನ್ನು ಹಾಗೆಯೇ ಬೆಳೆಯಲು ಅವಕಾಶ ನೀಡಿದಾಗ ಅವರು ಪ್ರಬುದ್ಧರಾಗಿ, ಸುಂದರ ಮನಸ್ಸಿನ ಮೂಲಕ ಸ್ವಚ್ಛ ಮನಸ್ಸಿನ ಕಳಂಕರಹಿತ ರೀತಿಯಲ್ಲಿ ಬೆಳೆಯಲು ಸಾಧ್ಯ. ಆದರೆ ಮನಸ್ಸಿನ ತುಂಬಾ ಗೊಂದಲ, ಆತಂಕಗಳೇ ಮನೆ ಮಾಡಿದಾಗ ಅವರ ಭವಿಷ್ಯ ಎನ್ನುವುದು ಕತ್ತಲಲ್ಲಿ ಕರಟಿ ಹೋಗದೇ?

ಪರೀಕ್ಷೆ ಎನ್ನುವುದು ಮಕ್ಕಳ ಮನದ ಗಟ್ಟಿತನದ ಪರೀಕ್ಷೆ ಆಗದಿರಲಿ. ಅವರ ಮನಸ್ಸನ್ನು ಗೊಂದಲಕ್ಕೆ ದೂಡಿ, ಆತಂಕಕ್ಕೆ ಕಾರಣವಾಗಿ ಅವರ ಮನಸ್ಸಿನಲ್ಲಿ ಉಂಟಾದ ಗೊಂದಲ, ಭಯ, ಆತಂಕಗಳ ಪರಿಣಾಮವಾಗಿ ಅವರು ಯಾವುದೇ ರೀತಿಯ ತಪ್ಪು ನಿರ್ಧಾರಗಳಿಗೆ ಬರುವಂತೆ ಮಾಡದಿರಲಿ. ಅವರ ಮನಸ್ಸಿಗೆ ಯಾವುದೇ ಘಾಸಿಯನ್ನು ಉಂಟುಮಾಡದಿರಲಿ. ಮಕ್ಕಳ ಮನಸ್ಸಿನ ಚಿಂತನೆಯನ್ನು ಮಾಡುವಂತಹ ಖಚಿತ, ಸ್ಪಷ್ಟ ನಿರ್ಧಾರಗಳು ಹರಿದು ಬರಲಿ ಎಂಬ ಆಶಯವನ್ನು ಮತ್ತೆ ಹೊಂದಬೇಕಾದ ಮಕ್ಕಳ ಬಾಲ್ಯದ ಮತ್ತು ಶಿಕ್ಷಣದ ಬಗೆಗೆ ಆತಂಕಿರಾಗಬೇಕಾದ ಆಲೋಚಿಸಬೇಕಾದ ಕ್ಷಣದ ಎದುರಿನಲ್ಲಿ ನಾವಿದ್ದೇವೆ ಮತ್ತೆ ಮತ್ತೆ ಈ ಬಗ್ಗೆ ಒಂದಷ್ಟು ಚಿಂತನೆಗಳು ಎಲ್ಲೆಡೆಯಿಂದ ಹರಿದು ಬರಲಿ ಎಂಬ ಆಶಯವನ್ನು ಇಟ್ಟು ಸಾಗೋಣ.

ಅವ್ಯವಸ್ಥೆ ಸರಿಪಡಿಸುವುದಾಗಿ ಮೋದಿ ಭರವಸೆ

ವಿಕಸಿತ ಪ.ಬಂಗಾಳಕ್ಕೆ ಸಂಪೂರ್ಣ ಸಹಕಾರ



ಕೋಲ್ಕತ್ತಾ : ಮಮತಾ ಬ್ಯಾನರ್ಜಿ ಆಡಳಿತದಲ್ಲಿ ರಾಜ್ಯದ ಎಲ್ಲಾ ವರ್ಗದ ಜನರು ಎದುರಿಸುತ್ತಿರುವ ವಂಚನೆ, ವೇದನೆ ಅತ್ಯಂತ ದಯನೀಯ. ವಿಕಸಿತ ಪಶ್ಚಿಮ ಬಂಗಾಳ ರಚನೆ ಮೂಲಕ ತಾವು ಈ ಅವ್ಯವಸ್ಥೆಯನ್ನು ಸರಿಪಡಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಬಂಗಾಳದ ಜನರಿಗೆ ಭರವಸೆ ನೀಡಿದ್ದಾರೆ. ಪ.ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಲು ಕೆಲ ವಾರಗಳು ಬಾಕಿಯಿರುವಂತೆ ಪ್ರಧಾನಿ ಮೋದಿ ಜನರಿಗೆ ಧೈರ್ಯ ತುಂಬಿದ್ದಾರೆ. ರಾಜಕೀಯ ಬದಲಾವಣೆ ಅನಿವಾರ್ಯ. ಆದರೆ ಮತದಾರರು ನ್ಯಾಯೋಚಿತ ಆಯ್ಕೆ ಮಾಡಿದಲ್ಲಿ ಪಶ್ಚಿಮ ಬಂಗಾಳದಲ್ಲೂ ದೇಶದ ಇತರೆಡೆ ಗೋಚರಿಸುತ್ತಿರುವ ಅಭಿವೃದ್ಧಿ ಸಾಕಾರವಾಗಲು ಸಾಧ್ಯವೆಂದು ಹೇಳಿದ್ದಾರೆ. ಬಂಗಾಳಿಯಲ್ಲಿ ಬರೆದಿರುವ ಬಹಿರಂಗ ಪತ್ರದಲ್ಲಿ ಜೈ ಮಾ ಕಾಳಿ ಎಂದು ಲಿಖಿತ ಘೋಷಣೆ ಮಾಡಿದ್ದಾರೆ. ಅಸಮರ್ಪಕ ಆಡಳಿತ , ನಕಲಿ ಮತದಾರರಿಗಾಗಿ ತುಷ್ಟೀಕರಣ ರಾಜನೀತಿ, ಉದ್ಯೋಗ ಕೊರತೆ ಮತ್ತು ಮಹಿಳೆಯರ ಸುರಕ್ಷೆಯ ಕೊರತೆ ಇತ್ಯಾದಿ ಎಲ್ಲಾ ವಿಚಾರಗಳಲ್ಲೂ ಟಿಎಂಸಿ ಸರಕಾರವನ್ನು ಪ್ರಧಾನಿ ಮೋದಿ ಪತ್ರದಲ್ಲಿ ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ.

ನಿರಾಶ್ರಿತರಿಗೆ ಪೌರತ್ವ:' ನಿರಾಶ್ರಿತರಿಗೆ ಸಿಎಎ ಮುಖೇನ ಪೌರತ್ವ ನೀಡುತ್ತೇವೆ. ರಾಜ್ಯದ ಗಡಿಗಳಿಂದಾಗಿ ಅಕ್ರಮ ನುಸುಳುವಿಕೆಯನ್ನು ನಿಲ್ಲಿಸುವುದಾಗಿ ಪ್ರಧಾನಿ ಮೋದಿ ಚುನಾವಣಾ ಪೂರ್ವ ಭರವಸೆಗಳನ್ನು ನೀಡಿದ್ದಾರೆ. ಸ್ವಾತಂತ್ರ್ಯ ಸಂದರ್ಭ ಭಾರತದಲ್ಲಿ ಬಂಗಾಳವು ಹಣಕಾಸು ಮತ್ತು ಉದ್ದಿಮೆ ರಂಗಗಳಲ್ಲಿ ಮುಂದಾಳುತ್ವ ವಹಿಸಿದ್ದ ರಾಜ್ಯ. ಆದರಿಂದು ರಾಜ್ಯದ ರೋಗಗ್ರಸ್ಥ ದುಸ್ಥಿತಿ ಕಾಣುವಾಗ ವೇದನೆಯಾಗುತ್ತಿದೆ. ಆರು ದಶಕಗಳ ದುರಾಡಳಿತ ಮತ್ತು ತುಷ್ಟೀಕರಣ ರಾಜನೀತಿಯಿಂದ ಪ.ಬಂಗಾಳಕ್ಕಾಗಿರುವ ಹಾನಿಯನ್ನು ವರ್ಣಿಸಲಸಾಧ್ಯವೆಂದು ಹೇಳಿದ್ದಾರೆ.

ಆವರಿಸಿದೆ ಕತ್ತಲೆ: ಒಂದೆಡೆ ಸರಿಯಾದ ಉದ್ಯೋಗಾವಕಾಶವಿಲ್ಲದೆ ಯುವಕರು ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದರೆ, ಮಗದೊಂದೆಡೆ ಮಾತೆಯರು ಸುರಕ್ಷಾ ಕೊರತೆಯಿಂದ ಭಯಭೀತರಾಗಿದ್ದಾರೆ. ಸ್ವಾಮಿ ವಿವೇಕಾನಂದ, ಮಹರ್ಷಿ ಅರಬಿಂದೊ, ಸುಭಾಷ್ ಚಂದ್ರ ಬೋಸ್, ರಬೀಂದ್ರನಾಥ ಠಾಗೋರ್, ಶ್ಯಾಮ ಪ್ರಸಾದ್ ಮುಖರ್ಜಿಯವರಂತಹ ಸಾಕಷ್ಟು ಸಂಖ್ಯೆಯ ರಾಜಕೀಯ , ಸಾಂಸ್ಕೃತಿಕ ದಂತಕಥೆಗಳು ಬಾಳಿದ ನಾಡಿದು. ಆದರೆ ಇಂದು ಈ ರಾಜ್ಯವನ್ನು ಕಗ್ಗತ್ತಲೆ ಆವರಿಸಿದೆ ಎಂದು ಪ್ರಧಾನಿ ಮೋದಿ ಖೇದ ವ್ಯಕ್ತಪಡಿಸಿದ್ದಾರೆ.

ಲುಟಿನ್ಸ್ ಪ್ರತಿಮೆ ಜಾಗಕ್ಕೆ ರಾಜಾಜಿ ಪ್ರತಿಮೆ

ಹೊಸದಿಲ್ಲಿ: ರಾಷ್ಟ್ರಪತಿ ಭವನದಲ್ಲಿದ್ದ ಬ್ರಿಟಿಷ್ ವಾಸ್ತುಶಿಲ್ಪಿ ಎಡ್ವಿನ್ ಲುಟಿನ್ಸ್ ಪ್ರತಿಮೆ ಜಾಗದಲ್ಲಿ ಸ್ವತಂತ್ರ ಭಾರತದ ಮೊದಲ ಮತ್ತು ಏಕೈಕ ಭಾರತೀಯ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ) ಅವರ ಪ್ರತಿಮೆ ಸ್ಥಾಪಿಸಲಾಗಿದೆ. ಅಶೋಕ ಮಂಟಪದ ಸಮೀಪ, ಮಹಾತ್ಮ ಗಾಂಧಿಯವರ ಪ್ರತಿಮೆಗೆ ಎದುರಾಗಿ ಇದನ್ನು ಸ್ಥಾಪಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಪ್ರತಿಮೆಯನ್ನು ಅನಾವರಣಗೊಳಿಸಿದ್ದು, ಈ ವೇಳೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಸೇರಿದಂತೆ ಗಣ್ಯರು ಹಾಜರಿದ್ದರು.

ರಾಷ್ಟ್ರಪತಿ ಕಚೇರಿ ಪ್ರಕಟಣೆಯ ಪ್ರಕಾರ, ವಸಾಹತು ಮನೋಭಾವದ ಅವಶೇಷಗಳನ್ನು ತೊಡೆದುಹಾಕುವ ಕ್ರಮಗಳ ಸರಣಿಯ ಭಾಗವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸಂದೇಶ ಕಳಿಸಿದ್ದು, ಇದನ್ನು 'ಮನೋವೈಜ್ಞಾನಿಕ ವಸಾಹತುಮುಕ್ತಿಯ ಮಹತ್ವದ ಹೆಜ್ಜೆ' ಎಂದು ವಿವರಿಸಿದರು. ಅನಾವರಣದ ಬಳಿಕ ರಾಷ್ಟ್ರಪತಿ ಅವರು ರಾಜಾಜಿ ಉತ್ಸವದಲ್ಲಿ ಭಾಗವಹಿಸಿ, ರಾಜಾಜಿಯವರ ಜೀವನ ಕುರಿತ ಪ್ರದರ್ಶನ ವೀಕ್ಷಿಸಿದರು. ರಾಜಾಜಿಯವರ ಬಹುಮುಖಿ ಕೊಡುಗೆಗಳನ್ನು ರಾಷ್ಟ್ರಪತಿಗಳು ಸ್ಮರಿಸಿದರು. ರಾಜಾಜಿ ಉತ್ಸವದ ಅಂಗವಾಗಿ ಮಂಗಳವಾರದಿಂದ ಮಾ. 1ರವರೆಗೆ ಅಮೃತ ಉದ್ಯಾನದಲ್ಲಿ ಪ್ರದರ್ಶನ ನಡೆಯಲಿದೆ.

ದೈಹಿಕ ಸಂಬಂಧ ಬೆಳೆಸಿ ವಿವಾಹ ನಿರಾಕರಣೆ: ದಿಲ್ಲಿ ಹೈ ಆಕ್ರೋಶ

ಕುಂಡಲಿ ನೆಪದಲ್ಲಿ ವಿವಾಹ ನಿರಾಕರಣೆ ಸಲ್ಲ

ಹೊಸದಿಲ್ಲಿ: ವಿವಾಹದ ಭರವಸೆಯ ಆಧಾರದ ಮೇಲೆ ದೈಹಿಕ ಸಂಬಂಧ ಬೆಳೆಸಿದ ಬಳಿಕ ಕುಂಡಲಿ(ಜಾತಕ) ಹೊಂದಿಕೆಯಾಗಿಲ್ಲವೆಂಬ ಕಾರಣಕ್ಕೆ ಮದುವೆಗೆ ನಿರಾಕರಿಸುವುದು ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಕಲಂ 69 ಅಡಿಯಲ್ಲಿ ಅಪರಾಧಕ್ಕೆ ಒಳಪಡಬಹುದು ಎಂದು ದಿಲ್ಲಿ ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಮಹಿಳೆಯೊಂದಿಗೆ ದೈಹಿಕ ಸಂಬಂಧಗಳನ್ನು ಹೊಂದಿ ಬಳಿಕ ಜಾತಕಗಳು ಹೊಂದಿಕೆಯಾಗಿಲ್ಲವೆಂಬ ನೆಪದಲ್ಲಿ ವಿವಾಹ ನಿರಾಕರಿಸಿದ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಜಾಮೀನು ನೀಡಲು ನಿರಾಕರಿಸಿದ ವೇಳೆ ನ್ಯಾಯಾಲಯ ಈ ಆದೇಶ ನೀಡಿದೆ. ಆರೋಪಿತನು ಕುಂಡಲಿ ಹೊಂದಿಕೆ ಸೇರಿದಂತೆ ವಿವಾಹಕ್ಕೆ ಯಾವುದೇ ಅಡೆತಡೆಗಳಿಲ್ಲವೆಂದು ಭರವಸೆ ನೀಡಿದ್ದ ಹಿನ್ನೆಲೆ, ದೈಹಿಕ ಸಂಬಂಧಗಳು ನಿರಂತರವಾಗಿ ನಡೆದಿರುವುದು ಪ್ರಕರಣದ ಗಂಭೀರತೆಯನ್ನು ತೋರಿಸುತ್ತದೆ. ಈ ಹಂತದಲ್ಲಿ ಆರೋಪಿತನ ನಡೆ ಪರಿಶೀಲನೆಗೆ ಒಳಪಡುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

ಜ.4ರಿಂದ ನ್ಯಾಯಾಂಗ ಬಂಧನದಲ್ಲಿರುವ ಆರೋಪಿತ, ಸಂಬಂಧ ಪರಸ್ಪರ ಸಮ್ಮತಿಯ ಮೇಲಾಗಿದ್ದು, ಇಬ್ಬರೂ ದೀರ್ಘಕಾಲದಿಂದ ಪರಿಚಿತರಾಗಿದ್ದರು ಎಂಬ ಕಾರಣ ನೀಡಿ ಜಾಮೀನು ಕೋರಿದ್ದ. ವಿವಾಹದ ಸುಳ್ಳು ಭರವಸೆಯ ಆಧಾರದ ಮೇಲೆ ಅತ್ಯಾಚಾರ ಆರೋಪ ಅನ್ವಯಿಸುವುದಿಲ್ಲ ಎಂದು ಅವನ ಪರ ವಕೀಲರು ವಾದಿಸಿದ್ದರು.



ಭಯೋತ್ಪಾದನೆ ವಿರುದ್ಧ ಪ್ರಹಾರ

ಸುದ್ದಿ ಸಮಗ್ರ

ಕೇಂದ್ರ ಗೃಹ ಇಲಾಖೆಯಿಂದ ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ನೀತಿ ಪ್ರಹಾರ್ ಘೋಷಣೆ

ಭಯೋತ್ಪಾದಕ ದಾಳಿಗಳನ್ನು ಪರಿಣಾಮಕಾರಿಯಾಗಿ ತಡೆಯುವುದು, ಶತ್ರುದಾಳಿಗೆ ತ್ವರಿತ ಮತ್ತು ಸೂಕ್ತ ಪ್ರತಿಕ್ರಿಯೆ, ಸರಕಾರದ ಸಮಗ್ರ ಪ್ರಯತ್ನಗಳೊಂದಿಗೆ ಆಂತರಿಕ ಸಾಮರ್ಥ್ಯ ಬಲಪಡಿಸುವಿಕೆ ಮತ್ತು ನಾಡಿನ ಕಾನೂನಿಗೆ ಕಟಿಬದ್ಧತೆಯೊಂದಿಗೆ ಮಾನವ ಹಕ್ಕುಗಳ ರಕ್ಷಣೆ ಈ ರೀತಿ ಸಮಗ್ರ ಚೌಕಟ್ಟಿನೊಂದಿಗೆ ಭಯೋತ್ಪಾದನೆ ಬೆದರಿಕೆಗಳನ್ನು ಮಟ್ಟ ಹಾಕುವುದು ಹೊಸ ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ನೀತಿ ಪ್ರಹಾರ್ ಮೂಲೋದ್ದೇಶ. ಏನಿದು ಪ್ರಹಾರ್? ದೇಶದಲ್ಲಿ ಭಯೋತ್ಪಾದನೆ ಕಿತ್ತೊಗೆಯಲು ಇದು ಹೇಗೆ ಸಹಕಾರಿಯಾಗಲಿದೆ?



ಯಾವುದೇ ಮತದ ಜತೆ ಜೋಡಣೆಯಿಲ್ಲ

ಭಾರತವು ಭಯೋತ್ಪಾದನೆಯನ್ನು ಯಾವುದೇ ನಿರ್ದಿಷ್ಟ ಮತಧರ್ಮ, ಜನಾಂಗೀಯತೆ, ರಾಷ್ಟ್ರೀಯತೆ ಅಥವಾ ನಾಗರೀಕತೆ ಜತೆ ಜೋಡಿಸಲ್ಲವೆಂದು ಭಾರತ ಸರಕಾರ ಒತ್ತಿ ಹೇಳಿದೆ. ಭಾರತ ಭಯೋತ್ಪಾದನೆಯನ್ನು ಯಾವತ್ತೂ ಖಡಾಖಂಡಿತವಾಗಿ ಮತ್ತು ಬೇಷರತ್ತಾಗಿ ಖಂಡಿಸಿದೆ. ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ಧೋರಣೆಯು ಸರಕಾರದ ಪ್ರಸ್ತುತ ಪ್ರಹಾರ್ ನೀತಿಗೆ ಪ್ರೇರಣೆಯಾಗಿದೆ.



ಹಿಂಸಾಚಾರಕ್ಕೆ ಸಮರ್ಥನೆ ಕೂಡದು

ಭಯೋತ್ಪಾದನೆಗೆ ಬಲಿಪಶುಗಳಾದವರ ಜತೆಗಿದೆ ಕೇಂದ್ರ ಸರಕಾರ. ಸರಕಾರದ ಈ ದೀರ್ಘಕಾಲೀನ ಬದ್ಧತೆ ಮತ್ತು ಜಗತ್ತಿನಲ್ಲಿ ಯಾವ ಕಾರಣಕ್ಕೂ ಹಿಂಸಾಚಾರಗಳಿಗೆ ಸಮರ್ಥನೆ ಕೂಡದೆಂಬ ಸರಕಾರದ ಅಚಲ ಧೋರಣೆ ಪ್ರಹಾರ ರಚನೆಗೆ ಪ್ರೇರಣೆಯಾಗಿದೆ. ಭಯೋತ್ಪಾದನೆಗೆ ಕುಮ್ಮಕ್ಕೀವ ದುರ್ಬಲ ಸನ್ನಿವೇಶಗಳತ್ತ ಬೆಳಕು ಚೆಲ್ಲಿರುವ ಪ್ರಹಾರ್, ಭಯೋತ್ಪಾದನೆ ನಿಗ್ರಹ ನಿಟ್ಟಿನಲ್ಲಿ ಜಾಗತಿಕ ಪ್ರಯತ್ನಗಳಿಗೆ ಬೆಂಬಲದ ಜತೆ ಜತೆ ಸಂತ್ರಸ್ತ ಸಮಾಜದ ಪುನಶ್ಚೇತನ ಹಾಗೂ ಕ್ರಿಯಾಶೀಲತೆಗೆ ತುಂಬು ಆದ್ಯತೆ ನೀಡಿದೆ.

ಉಗ್ರರಿಂದ ಅತ್ಯಾಧುನಿಕ ತಂತ್ರಜ್ಞಾನ ದುರ್ಬಳಕೆ

ಭಯೋತ್ಪಾದಕ ಸಂಘಟನೆಗಳು ಅತ್ಯಾಧುನಿಕ ತಂತ್ರಜ್ಞಾನಗಳನ್ನು ದುರ್ಬಳಸುತ್ತಿವೆ. ಪಂಜಾಬ್ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗಾಗಿ ಡ್ರೋನ್ ಸಹಿತ ಆಧುನಿಕ ತಂತ್ರಜ್ಞಾನಗಳ ದುರ್ಬಳಸುತ್ತಿವೆ. ಭಯೋತ್ಪಾದಕ ಸಂಘಟನೆಗಳಿಗೆ ಯುವಕರ ನೋಂದಣಿ, ಸಂಪರ್ಕ, ಪ್ರಚಾರಕ್ಕಾಗಿ ಇವು ಸಾಮಾಜಿಕ ಜಾಲತಾಣ ಹಾಗೂ ತುರ್ತು ಸಂದೇಶವಾಹಕ ಅಪ್ಲಿಕೇಶನ್‌ಗಳ ಬಳಸುತ್ತಿವೆ. ನಿಗೂಢ ಕಾರ್ಯಾಚರಣೆಗಳಿಗೆ ಎನ್‌ಕ್ರಿಪ್ಶನ್, ಡಾರ್ಕ್ ವೆಬ್ ಮತ್ತು ಕ್ರಿಪ್ಟೋ ವಾಲೆಟ್‌ಗಳಂತಹ ತಂತ್ರಜ್ಞಾನಗಳ ದುರ್ಬಳಸುತ್ತಿವೆ ಎಂದು ಗುಪ್ತಚರ ಪಡೆ ಬೊಟ್ಟು ಮಾಡಿದೆ.



ನಿರಂತರ ತನಿಖಾ ಪ್ರಕ್ರಿಯೆ

ಸಂಭಾವ್ಯ ಭಯೋತ್ಪಾದಕ ದಾಳಿಗಳ ಯಶಸ್ವೀ ಮಟ್ಟ ಹಾಕುವ ನಿಟ್ಟಿನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತು ರಾಜ್ಯ ಪೊಲೀಸ್ ಪಡೆಗಳು ನಿರಂತರ ತನಿಖಾ ಪ್ರಕ್ರಿಯೆಯಲ್ಲಿ ತೊಡಗಿವೆ ಮತ್ತು ಅತ್ಯುಚ್ಚ ಸಂಖ್ಯೆಯಲ್ಲಿ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿವೆ. ಪ್ರಸ್ತುತ ಉಪಕ್ರಮದಲ್ಲಿ, ತರಬೇತಿ ವ್ಯವಸ್ಥೆಯ ಆಧುನೀಕರಣ, ಅತ್ಯಾಧುನಿಕ ತಂತ್ರಜ್ಞಾನಗಳ ಹೊಂದುವುದು ಮತ್ತು ತನಿಖಾ ಸಂಸ್ಥೆಗಳಲ್ಲಿ ನಿಯಮಾವಳಿಗಳ ಕ್ರಮಬದ್ಧಗೊಳಿಸುವಿಕೆ ಇತ್ಯಾದಿ ಪ್ರಮುಖ ಹೆಜ್ಜೆಗಳ ಮುಖೇನ ಸಾಮರ್ಥ್ಯ ವರ್ಧನೆಗೆ ಆದ್ಯತೆ ಕೊಡಲಾಗಿದೆ. ಭಾರತೀಯ ಭಯೋತ್ಪಾದನೆ ವಿರೋಧಿ ಕಾನೂನುಗಳು ಮಾನವ ಹಕ್ಕುಗಳಿಗೆ ಪ್ರಾಮುಖ್ಯತೆ ನೀಡಿದ್ದು, ನಾಡಿನ ಕಾನೂನು ವ್ಯವಸ್ಥೆ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತವೆ. ಜನರ ಮೂಲಭೂತ ಹಕ್ಕುಗಳ ಸಂರಕ್ಷಣೆ ಕಾನೂನು ವ್ಯವಸ್ಥೆಯ ಧ್ಯೇಯವಾಗಿದ್ದು, ಭಾರತ ಈ ಸಿದ್ಧಾಂತಗಳಿಗೆ ಬದ್ಧವಾಗಿದೆ.

ಬೇಹುಗಾರಿಕೆ ಆಧಾರದಲ್ಲಿ ಉಗ್ರನಿಗ್ರಹ

ಭಯೋತ್ಪಾದನೆ ನಿಗ್ರಹಕ್ಕೆ ಭಾರತವು ಕ್ರಿಯಾಪರ ಮತ್ತು ಗುಪ್ತಚರ ಮಾಹಿತಿ ಆಧಾರಿತ ಪ್ರಯತ್ನಗಳ ನಡೆಸುತ್ತಿದೆ. ವಸ್ತುನಿಷ್ಠ ಬೇಹುಗಾರಿಕಾ ಮಾಹಿತಿ ಹಂಚಿಕೆ ಮತ್ತು ಸಂಘಟಿತ ಕಾರ್ಯಾಚರಣೆ ನಿಟ್ಟಿನಲ್ಲಿ, ಗುಪ್ತಚರ ಪಡೆಯಲ್ಲಿನ ಮಲ್ಟಿ ಏಜೆನ್ಸಿ ಸೆಂಟರ್ (ಎಂಎಸಿ) ಮತ್ತು ಬೇಹುಗಾರಿಕೆ ಕುರಿತ ಜಂಟಿ ಕಾರ್ಯಪಡೆ (ಜೆಟಿಎಫ್‌ಐ)ಗಳು ನೋಡಲ್ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

ಸಹಕಾರ ಜಾಲ ಅಗತ್ಯ

ಬೇಹುಗಾರಿಕಾ ಪಡೆ ಸಹಿತ ಕಾನೂನು ಅನುಷ್ಠಾನ ಸಂಸ್ಥೆಗಳ ನಡುವಣ ಸಹಕಾರ ಜಾಲ ಮತ್ತಷ್ಟು ವಿಸ್ತೃತವಾಗಬೇಕು , ನಿಯತಕಾಲಿಕ ಕಾನೂನು ಸುಧಾರಣೆಗಳು, ರಾಜ್ಯ ಉಗ್ರ ನಿಗ್ರಹ ಘಟಕಗಳ ಸಾಮರ್ಥ್ಯ ವರ್ಧನೆ ಅತ್ಯಗತ್ಯವೆಂಬುದು ಗೃಹ ವ್ಯವಹಾರಗಳ ಖಾತೆ ಅಭಿಪ್ರಾಯ. ಯಾವುದೇ ಸಂಭಾವ್ಯ ಭಯೋತ್ಪಾದಕ ಬೆದರಿಕೆಗಳ ಮಟ್ಟ ಹಾಕಲು ತಂತ್ರಜ್ಞಾನ ಮತ್ತು ಪಾಲುದಾರಿಕೆಗಳಿಗೆ ಹೂಡಿಕೆಯನ್ನು ಪ್ರಹಾರ್ ಪ್ರತಿಪಾದಿಸಿದೆ. ಉಗ್ರರಿಗೆ ಹಣಕಾಸು, ಶಸ್ತ್ರಾಸ್ತ್ರ, ಅಡಗುತಾಣಗಳು ಸಿಗದಂತೆ ತಡೆಯುವುದು ಪ್ರಹಾರ್ ಗುರಿಯಾಗಿದೆ.

ಭಯೋತ್ಪಾದನೆ ನಿಗ್ರಹ



ಪ್ರಹಾರ್ ಮುಖೇನ ಸಮನ್ವಯದ ರಾಷ್ಟ್ರೀಯ ಕ್ರಮದ ಬಲವರ್ಧನೆ ಜತೆ ಭಯೋತ್ಪಾದನೆ ನಿಗ್ರಹಕ್ಕೆ ಸಮಗ್ರ ಪ್ರಯತ್ನ ನಡೆಸುವುದು ಭಾರತದ ಧ್ಯೇಯವಾಗಿದೆ. ಏಕಕಾಲಕ್ಕೆ ಪ್ರಜಾತಾಂತ್ರಿಕ ಮೌಲ್ಯಗಳು ಹಾಗೂ ಸಾಮಾಜಿಕ ಚೈತನ್ಯವನ್ನು ಕಾಪಾಡುವುದು ಕೂಡ ಪ್ರಹಾರ್ ಗುರಿಯಾಗಿದೆ.

ಉಗ್ರರಿಗೆ ಹಣಕಾಸು ಪೂರೈಕೆ ತಡೆಯೋದು

ಉಗ್ರರಿಗೆ ನಿಧಿ ಪೂರೈಕೆ ಜಾಲಗಳನ್ನು ಮಟ್ಟಹಾಕಲು ಕಾನೂನು ವ್ಯವಸ್ಥೆ ಮುಖೇನ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ. ಭೂ, ವಾಯು, ಜಲ ಮಾರ್ಗಗಳಿಂದ ಎದುರಾಗೋ ಬೆದರಿಕೆಗಳ ಎದುರಿಸಲು ಗಡಿ ಪಹರೆ ಪಡೆಗಳು ಹಾಗೂ ವಲಸೆ ಅಧಿಕಾರಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒದಗಿಸಲಾಗಿದೆ.

ಉಗ್ರವಾದ ಮಟ್ಟ ಹಾಕಲು ಆದ್ಯತೆ

ಹಿಂಸಾತ್ಮಕ ಉಗ್ರವಾದವನ್ನು ಹತ್ತಿಕ್ಕಲು ಪ್ರಹಾರ್ ಅಗ್ರ ಆದ್ಯತೆ ನೀಡಲಿದೆ. ಇದರನ್ವಯ ಉಚ್ಚ ದರ್ಜೆ ಪ್ರತಿಕ್ರಿಯೆಗಳ ಬೇಹುಗಾರಿಕಾ ಸಂಸ್ಥೆ ಮತ್ತು ಕಾನೂನು ಜಾರಿ ಸಂಸ್ಥೆಗಳು ನೀಡಲಿವೆ. ಇದೇ ವೇಳೆ ಸಮುದಾಯ ನಾಯಕರು, ಎನ್‌ಜಿಒಗಳು ಮತ್ತು ಆದರ್ಶ ಬೋಧಕರು ಉಗ್ರವಾದದ ಹಿಂಸಾಚಾರಗಳಿಂದಾಗುವ ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಿದ್ದಾರೆ. ಜೈಲುಗಳಲ್ಲಿ ಉಗ್ರವಾದದ ಪ್ರಭಾವ ತಡೆಯಲು ಪ್ರಯತ್ನಗಳಾಗುತ್ತಿವೆ. ಯುವಶಕ್ತಿ ಮತ್ತು ಮಹಿಳೆಯರನ್ನು ಕೇಂದ್ರೀಕರಿಸಿ ಶಿಕ್ಷಣ, ಉದ್ಯೋಗ, ಕಲ್ಯಾಣ ಉಪಕ್ರಮಗಳನ್ನು ಕೈಗೊಳ್ಳುವ ಮುಖೇನ ಸಾಮಾಜಿಕ–ಆರ್ಥಿಕ ದೌರ್ಬಲ್ಯ ನಿವಾರಣೆಗೆ ಪ್ರಯತ್ನಿಸಲಾಗುತ್ತಿದೆ.

ಅಂತಾರಾಷ್ಟ್ರೀಯ ಸಹಕಾರವಿನ್ನೂ ಸಂಕೀರ್ಣ

ಉಗ್ರ ನಿಗ್ರಹಕ್ಕಾಗಿ ಬೇಹುಗಾರಿಕಾ ಮಾಹಿತಿ ಹಂಚಿಕೆ, ಗಡಿಪಾರು ವ್ಯವಸ್ಥೆಗಳು ಮತ್ತು ಸಹಕಾರ ಜಾಲಗಳ ಮುಖೇನ ಮಾಡಿಕೊಂಡಿರುವ ಅಂತಾರಾಷ್ಟ್ರೀಯ ಪಾಲುದಾರಿಕೆಗಳು ಸಂಕೀರ್ಣವಾಗುಳಿದಿವೆ. ಭಯೋತ್ಪಾದಕರ ಹೆಡೆಮುರಿ ಕಟ್ಟಲು ಮತ್ತು ಭಯೋತ್ಪಾದನೆ ವಿರೋಧಿ ಕ್ರಮಗಳ ಬಗ್ಗೆ ಒಮ್ಮತಾಭಿಪ್ರಾಯ ಮೂಡಿಸುವಲ್ಲಿ ಭಾರತವು ಜಾಗತಿಕ ಪಾಲುದಾರರೊಂದಿಗೆ ನಿರಂತರ ಶ್ರಮಿಸಲಿದೆ.

ಕಿರುಸುದ್ದಿ

ಘೋಷಿತ ಸಲಿಂಗಿ ರಾಬ್ ಡಚ್ಚರ ನೂತನ ಪ್ರಧಾನಿ!

ದಿ ಹೇಗ್: ನೆದರ್‌ಲೆಂಡ್ಸ್‌ನ ಅತ್ಯಂತ ಕಿರಿಯ ಮತ್ತು ಮೊದಲ ಘೋಷಿತ ಸಲಿಂಗಿ ಪ್ರಧಾನಿಯಾಗಿ ರಾಬ್ ಜೆಟ್ಟನ್ ಸೋಮವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ಮೂರು ಸಣ್ಣ ಪಕ್ಷಗಳ ಮೈತ್ರಿಕೂಟದ ನೇತಾರನಾದ 38 ವರ್ಷದ ರಾಬ್ ಪ್ರಧಾನಿ ಹುದ್ದೆ ಅಲಂಕರಿಸಿದ್ದಾರೆ. 1982ರಲ್ಲಿ ತಮ್ಮ 43ನೇ ವಯಸ್ಸಿನಲ್ಲಿ ಪ್ರಧಾನಿಯಾಗಿ ಆಯ್ಕೆಯಾಗಿದ್ದ ರೂಡ್ ಲುಬ್ಬರ್ಸ್ ಈವರೆಗೂ ನೆದರ್‌ಲೆಂಡ್‌ನ ಅತಿಕಿರಿಯ ಪ್ರಧಾನಿ ದಾಖಲೆ ಹೊಂದಿದ್ದರು. ಇದಲ್ಲದೆ, ಲುಬ್ಬರ್ಸ್ ಸುದೀರ್ಘ ಆಡಳಿತ ನಡೆಸಿದ ಪ್ರಧಾನಿಯೂ ಆಗಿದ್ದರು. 2001ರಲ್ಲೇ ಸಲಿಂಗ ವಿವಾಹವು ನೆದರ್‌ಲೆಂಡ್ಸ್‌ನಲ್ಲಿ ಕಾನೂನುಬದ್ಧವಾಗಿದೆ.

ಶಿವಾಜಿಗೆ ಅಪಮಾನ: ಎಲ್ಲೆಡೆ ಭಾರೀ ಆಕ್ರೋಶ

ಚಂಡೀಗಢ: ಹರ್ಯಾಣದ ಶೌಚಾಲಯವೊಂದರ ಪ್ರವೇಶ ದ್ವಾರದಲ್ಲಿ ಛತ್ರಪತಿ ಶಿವಾಜಿ ಮತ್ತು ಪದ್ಮಿನಿ ದೇವಿಯವರ ಭಾವಚಿತ್ರವನ್ನು ಹೋಲುವ ಶೌಚಾಲಯ ಸೂಚನಾ ಫಲಕ ಹಾಕಿರುವ ವಿಡಿಯೋವೊಂದು ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. ಮಿಲನ್ ಬಾಂಕ್ವೆಟ್ ಹಾಲ್‌ನಲ್ಲಿ ಈ ದೃಶ್ಯ ಕಂಡು ಬಂದಿದೆ. ಈ ವಿಡಿಯೋ ವೈರಲ್ ಆಗುತ್ತಿದ್ದಂತೆ ಭಾರತದಾದ್ಯಂತ ಹಿಂದುತ್ವಕ್ಕಾಗಿ ಹೋರಾಡಿದ ವೀರ ನಾಯಕರಿಗೆ ಮಾಡಿದ ಅವಮಾನವಿದು ಎಂದು ಎಲ್ಲೆಡೆ ತೀವ್ರ ಅಸಮಧಾನ ವ್ಯಕ್ತವಾಗುತ್ತಿದೆ. ಮಹಾರಾಷ್ಟ್ರ ಮತ್ತು ಹರ್ಯಾಣದ ಶಿವಾಜಿ ಮಹಾರಾಜರ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸುತ್ತಾ, ಶೌಚಾಲಯದಂತಹ ಸ್ಥಳಕ್ಕೆ ಶ್ರೇಷ್ಠ ವ್ಯಕ್ತಿಗಳನ್ನು ಹೋಲುವ ಚಿತ್ರಗಳನ್ನು ಬಳಸುವುದು ಉದ್ದೇಶಪೂರ್ವಕ ಅವಮಾನವಾಗಿದೆ ಎಂದಿದ್ದಾರೆ. ರೆಸಾರ್ಟ್ ಆಡಳಿತವು ತಕ್ಷಣವೇ ಚಿತ್ರಗಳನ್ನು ತೆಗೆದುಹಾಕಬೇಕು ಮತ್ತು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ನೇಪಾಳದಲ್ಲಿ ನದಿಗೆ ಉರುಳಿದ ಬಸ್: 18 ಸಾವು

ಕಾಠ್ಮಂಡು: ನೇಪಾಳದ ಕಠ್ಮಂಡುವಿನಿಂದ ಪೋಖರಾಗೆ ಪೃಥ್ವಿ ಹೆದ್ದಾರಿ ಮೂಲಕ ಸಂಚರಿಸುತ್ತಿದ್ದ ಬಸ್‌ವೊಂದು ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಧಾದಿಂಗ್ ಜಿಲ್ಲೆಯಲ್ಲಿ ತ್ರಿಶೂಲಿ ನದಿಗೆ ಉರುಳಿದ್ದು, 18 ಮಂದಿ ಪ್ರಯಾಣಿಕರು ಮೃತಪಟ್ಟಿದ್ದಾರೆ. ಸೇನಾ ಪೊಲೀಸ್ ಪಡೆ (ಎಪಿಎಫ್) ರಕ್ಷಣಾ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ದುರ್ಘಟನೆ ಸೋಮವಾರ ಮುಂಜಾನೆ 1.30ರ ವೇಳೆ ಸಂಭವಿಸಿದೆ. ದುರಂತ ಸ್ಥಳದಿಂದ 17 ಮೃತದೇಹಗಳನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ. 24ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಆದರೆ ಚಾಲಕನ ನಿಯಂತ್ರಣ ತಪ್ಪಲು ಕಾರಣ ಇನ್ನೂ ತಿಳಿದುಬಂದಿಲ್ಲ.

ಫೆ. 26ಕ್ಕೆ ಕೆನಡಾ ಪ್ರಧಾನಿ ಭಾರತಕ್ಕೆ

ಹೊಸದಿಲ್ಲಿ: ಕೆನಡಾದ ಹಿಂದಿನ ಪ್ರಧಾನಿ ಜಸ್ಟಿನ್ ಟ್ರುಡ್ಯೂ ಕಾಲದಲ್ಲಿ ಹಳಸಿದ್ದ ಭಾರತ–ಕೆನಡಾ ಸಂಬಂಧ ಪುನಸ್ಥಾಪಿಸುವ ನಿಟ್ಟಿನಲ್ಲಿ ಅಲ್ಲಿನ ಪ್ರಧಾನಿ ಮಾರ್ಕ್ ಕಾರ್ನಿ, ಈ ಮಾಸಾಂತ್ಯಕ್ಕೆ ಭಾರತಕ್ಕೆ ಆಗಮಿಸಲಿದ್ದಾರೆ. ಒಂದು ಕಡೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟ್ಯಾರಿಫ್ ಗದ್ದಲ ಮತ್ತು ಭೂ ರಾಜಕೀಯ ಅಸ್ಥಿರತೆಗಳ ನಡುವೆಯೇ, ಕಾರ್ನಿ ಅವರ ಭಾರತ ಭೇಟಿ ಮಹತ್ವ ಪಡೆದುಕೊಂಡಿದೆ. ಅಷ್ಟೇ ಅಲ್ಲ, ಇದು ಮಾರ್ಕ್ ಕಾರ್ನಿ ಅವರ ಮೊದ ಭಾರತ ಭೇಟಿಯಾಗಲಿದೆ.

ಪ್ರಧಾನಿ ಕಚೇರಿ ಪ್ರಕಾರ, ಇದೇ 26ರಿಂದ ಮಾರ್ಚ್ 7ರವರೆಗೆ ಕಾರ್ನಿ ಅವರು ಭಾರತ, ಆಸ್ಟ್ರೇಲಿಯಾ ಮತ್ತು ಜಪಾನ್‌ಗೆ ಭೇಟಿ ನೀಡಲಿದ್ದಾರೆ. ಮೊದಲಿಗೆ ಮುಂಬೈಗೆ ಬರಲಿರುವ ಅವರು, ಬಳಿಕ ದಿಲ್ಲಿಗೆ ಆಗಮಿಸಲಿದ್ದಾರೆ. ಇಂಡೋ–ಫೆಸಿಫಿಕ್ ಪ್ರದೇಶದಲ್ಲಿ ವ್ಯಾಪಾರ, ಹೂಡಿಕೆ ಮತ್ತು ತಂತ್ರಾತ್ಮಕ ಸಹಕಾರ ಬಲಪಡಿಸುವುದು ಈ ಪ್ರವಾಸದ ಮುಖ್ಯ ಉದ್ದೇಶವಾಗಿದೆ. ಇತ್ತೀಚಿನ ಅವಧಿಯಲ್ಲಿ ಉಂಟಾದ ರಾಜತಾಂತ್ರಿಕ ಅಡ್ಡಿಗಳ ನಂತರ, ಎರಡೂ ದೇಶಗಳು ದ್ವಿಪಕ್ಷೀಯ ಸಂಬಂಧಗಳನ್ನು ಮರುಸ್ಥಾಪಿಸಲು ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಈ ಭೇಟಿಗೆ ವಿಶೇಷ ಮಹತ್ವ ನೀಡಲಾಗಿದೆ. ಭಾರತದಿಂದ ಆಸ್ಟ್ರೇಲಿಯಾ ಮತ್ತು ಜಪಾನ್‌ಗೆ ತೆರಳಲಿದ್ದಾರೆ. ಒದ ಹಾಗೆ, ಪ್ರಧಾನಿಯಾಗಿ ಕಾರ್ನಿ ಅವರ ಇದು ಮೊದಲ ಭಾರತ ಭೇಟಿ ಆಗಿದ್ದರೂ, ಜಿ7 ಮತ್ತು ಜಿ20 ಶೃಂಗಸಭೆಗಳ ಸಂದರ್ಭದಲ್ಲಿ ಇಬ್ಬರು ನಾಯಕರು ಎರಡು ಬಾರಿ ಭೇಟಿಯಾಗಿದ್ದಾರೆ.

ಸಂಪಾದನೆಯಿಲ್ಲದ ಗೃಹಿಣಿ ನಿರುದ್ಯೋಗಿ ಅಲ್ಲ: ದಿಲ್ಲಿ ಹೈ

ಹೊಸದಿಲ್ಲಿ: ಪತಿಯ ಕೆಲಸ ಕಾರ್ಯಗಳೆಲ್ಲವೂ ಪರಿಣಾಮಕಾರಿಯಾಗಿ ನಡೆಯಲು ನೆರವಾಗುವ ಗೃಹಿಣಿಯ ಕರ್ತವ್ಯವನ್ನು ನಿರ್ಲಕ್ಷಿಸುವುದು ನ್ಯಾಯವಲ್ಲವೆಂದು ದಿಲ್ಲಿ ಹೈಕೋರ್ಟ್ ಸೋಮವಾರ ಹೇಳಿದೆ. ನೌಕರಿಗೆ ಹೋಗದ ಮಹಿಳೆ ನಿರುದ್ಯೋಗಿಯೆಂದು ನಿರ್ಲಕ್ಷಿಸುವುದು ಸರಿಯಲ್ಲ, ಗೃಹಿಣಿಯ ಕರ್ತವ್ಯವನ್ನು ಗೌರವದಿಂದ ಕಾಣುವುದೂ ಅಷ್ಟೇ ಮುಖ್ಯ ಎಂದು ದಿಲ್ಲಿ ಹೈಕೋರ್ಟ್ ಹೇಳಿದೆ. ಕೌಟುಂಬಿಕ ಹಿಂಸಾಚಾರದಿಂದ ಮಹಿಳೆಯರ ರಕ್ಷಣೆ ಕಾಯ್ದೆ ಅನ್ವಯದಲ್ಲಿ ವಿಚ್ಛೇದಿತ ಗೃಹಿಣಿಯೊಬ್ಬರು ಸಲ್ಲಿಸಿದ ಅರ್ಜಿ ವಿಚಾರಣೆಯ ವೇಳೆ ನ್ಯಾಯಾಲಯ ಗೃಹಿಣಿಯರ ಬಗ್ಗೆ ಗೌರವ ಮೂಡಿಸುವ ಮಾತುಗಳನ್ನಾಡಿದೆ. ಗೃಹಿಣಿಯ ನಿರುದ್ಯೋಗವನ್ನು ಖಾಲಿ ಕುಳಿತಿರುವುದು ಅಥವಾ ಜೀವನಕ್ಕಾಗಿ ಪುರುಷನನ್ನು ಅವಲಂಬಿಸಿ ಬದುಕುತ್ತಿದ್ದಾಳೆಂಬ ರೀತಿ ಕಾಣಬಾರದು. ಗೃಹಿಣಿಯ ಕೊಡುಗೆಗಳನ್ನು ಹಣಕಾಸಿನ ಲೆಕ್ಕಾಚಾರದಲ್ಲಿ ದೇಶದ ಕಾನೂನು ಪರಿಗಣಿಸಬೇಕೆಂದು ನ್ಯಾಯಮೂರ್ತಿ ಸ್ವರ್ಣಾ ಕಾಂತ ಶರ್ಮಾ ಅಭಿಪ್ರಾಯಪಟ್ಟರು. ಹಣ ಸಂಪಾದನೆ ಮಾಡದಿರುವುದನ್ನು ಖಾಲಿ ಕುಳಿತಿರುವುದೆಂದು ಹೋಲಿಕೆ ಸರಿಯಲ್ಲ. ಗೃಹಿಣಿಯೊಬ್ಬಳು ಮನೆಗೆಲಸಗಳನ್ನು ನಿರ್ವಹಿಸುವುದು ಉಳಿದೆಲ್ಲಾ ಕೆಲಸಗಳಿಂದ ಹೆಚ್ಚು ಕಷ್ಟದ ಕೆಲಸ ಎಂದು ನ್ಯಾಯಮೂರ್ತಿ ಸ್ವರ್ಣಾ ಹೇಳಿದ್ದಾರೆ. ಮನೆ ನಿರ್ವಹಣೆ, ಮಕ್ಕಳನ್ನು ನೋಡಿಕೊಳ್ಳುವುದು, ಕುಟುಂಬದ ಮೇಲೆ ಕಾಳಜಿ ವಹಿಸುವುದು, ಪತಿಯ ವೃತ್ತಿಜೀವನದಲ್ಲಿ ಬೆಂಬಲಿಸುವುದು ಮತ್ತು ಇನ್ನುಳಿದ ಎಲ್ಲಾ ರೀತಿಯ ಕೆಲಸಗಳನ್ನು ಮಾಡುವುದು. ಈ ಕೆಲಸಗಳಿಂದ ಹಣ ಸಂಪಾದನೆ ಇಲ್ಲದಿರುವುದರಿಂದ ಗಮನಿಸದೇ ಹೋಗಿಬಿಡುವುದು ದುರದೃಷ್ಟಕರ ಎಂದು ಅವರು ಹೇಳಿದ್ದಾರೆ.

ಜೆಎನ್‌ಯುನಲ್ಲಿ ಎಬಿವಿಪಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

ಹೊಸದಿಲ್ಲಿ: ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಭಾನುವಾರ ರಾತ್ರಿ ಎಡಪಂಥೀಯ ಗುಂಪುಗಳು ವಿದ್ಯಾರ್ಥಿಗಳ ಮೇಲೆ ಮಾರಕಾಸ್ತ್ರ, ಕಬ್ಬಿಣದ ರಾಡ್ ಮತ್ತು ಹಾಕಿ ಸ್ಟಿಕ್‌ಗಳಿಂದ ಹಲ್ಲೆ ನಡೆಸಿದ್ದಾರೆ ಎಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಗಂಭೀರ ಆರೋಪ ಮಾಡಿದೆ. ಜೆಎನ್‌ಯು ಆವರಣದಲ್ಲಿ ಸೋಮವಾರ ಎಬಿವಿಪಿ ಸದಸ್ಯರ ಮತ್ತು ಎಡಪಂಥೀಯ ವಿದ್ಯಾರ್ಥಿ ಗುಂಪುಗಳ ನಡುವೆ ಭಾರೀ ಸಂಘರ್ಷ ಏರ್ಪಟ್ಟಿದೆ. ಸಂಘರ್ಷದಿಂದಾಗಿ ಹಲವು ವಿದ್ಯಾರ್ಥಿಗಳ ಸ್ಥಿತಿ ಗಂಭೀರವಾಗಿದೆ. ಜೆಎನ್‌ಯು ಆವರಣದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಸಂಘಟನೆ ಹಿನ್ನೆಲೆ ಆರೋಪ, ಪ್ರತ್ಯಾರೋಪ ನಡೆಯುತ್ತಿದೆ.

300-400 ಮುಸುಕುಧಾರಿಗಳಿಂದ ದಾಳಿ: ಕಳೆದ 7 ದಿನಗಳಿಂದ ಎಡಪಂಥೀಯ ಗುಂಪುಗಳು ಪ್ರತಿಭಟನೆ ನಡೆಸುತ್ತಿದ್ದವು. ಹೊರಗಿನ ಕೆಲವು ವ್ಯಕ್ತಿಗಳನ್ನು ಕರೆಸಲಾಗಿತ್ತು, ಸುಮಾರು 300ರಿಂದ 400 ಮುಸುಕುಧಾರಿಗಳು ವಿದ್ಯಾರ್ಥಿಗಳನ್ನು ಅಟ್ಟಾಡಿಸಿ ಹಲ್ಲೆ ನಡೆಸಿದ್ದಾರೆ. ಸ್ಥಳದಲ್ಲೇ ಇದ್ದ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಎಬಿವಿಪಿ ಜಂಟಿ ಕಾರ್ಯದರ್ಶಿ ವೈಭವ್ ಮೀನಾ ಖಂಡಿಸಿದ್ದಾರೆ.

ಪೂರ್ವನಿಯೋಜಿತ ದಾಳಿ: ಎಬಿವಿಪಿ ರಾಜ್ಯ ಜಂಟಿ ಕಾರ್ಯದರ್ಶಿ ವಿಕಾಸ್ ಪಟೇಲ್ ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಎಡಪಂಥೀಯರ ದಾಳಿ ಪೂರ್ವನಿಯೋಜಿತ ಎಂದು ಆರೋಪಿಸಿದ್ದಾರೆ. ಹೊರಗಿನವರನ್ನು ಮತ್ತು ಎಬಿವಿಪಿಯವರನ್ನು ಉಪ ಕುಲಪತಿ ಶಾಂತಿಶ್ರೀ ಡಿ ಪಂಡಿತ್ ಅವರೇ ಕಳುಹಿಸಿದ್ದಾರೆಂದು ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷೆ ಅದಿತಿ ಮಿಶ್ರಾ ಆರೋಪಿಸಿದ್ದಾರೆ.

ರೈಲ್ವೆ ಮಾಜಿ ಸಚಿವ ಮುಕುಲ್ ರಾಯ್ ನಿಧನ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ತೃಣ ಮೂಲ ಕಾಂಗ್ರೆಸ್‌ನ(ಟಿಎಂಸಿ) ರೈಲ್ವೆ ಮಾಜಿ ಸಚಿವ ಮುಕುಲ್ ರಾಯ್ (71) ಅವರು ಸೋಮವಾರ ಮುಂಜಾನೆ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಕಳೆದ ಎರಡು ವರ್ಷಗಳಿಂದ ಕೆಲವು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಇತ್ತೀಗಷ್ಟೆ ಶಸ್ತ್ರ ಚಿಕಿತ್ಸೆಗೊಳಗಾಗಿ ಕೋಮಾಗೆ ಹೋಗಿದ್ದರು ಎಂದು ಕುಟುಂಬ ಮೂಲಗಳು ತಿಳಿಸಿದೆ.



ಪಶ್ಚಿಮ ಬಂಗಾಳದಿಂದ ಮುಕುಲ್ ರಾಯ್ ಅವರು ಎರಡು ಬಾರಿ ರಾಜ್ಯ ಸಭಾ ಸಂಸದರಾಗಿದ್ದರು. ಅವರ ರಾಜಕೀಯ ವೃತ್ತಿಜೀವನವು ಯುವ ಕಾಂಗ್ರೆಸ್‌ನಿಂದ ಪ್ರಾರಂಭವಾಯಿತು. ಅವರು ಬ್ಯಾನರ್ಜಿಯವರೊಂದಿಗೆ ಕೈಜೋಡಿಸುವ ಮೊದಲು ಅವರು 1998ರಲ್ಲಿ ತೃಣಮೂಲ ಕಾಂಗ್ರೆಸ್ ಅನ್ನು ರಚಿಸಲು ಕಾಂಗ್ರೆಸ್‌ನಿಂದ ಹೊರ ಬಂದರು. ಬಳಿಕ ಟಿಎಂಸಿ ಸಂಸ್ಥಾಪಕ ಸದಸ್ಯರಾಗಿ, ಅದರ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 2017 ಮತ್ತು 2021 ರ ನಡುವೆ, ರಾಯ್ ತೃಣಮೂಲ ಕಾಂಗ್ರೆಸ್ ತೊರೆದು ಭಾರತೀಯ ಜನತಾ ಪಕ್ಷವನ್ನು ಸೇರಿದ್ದರು.

ರಾಹುಲ್ ನಾಯಕತ್ವದ ಬಗ್ಗೆ ಮತ್ತೆ ಅಯ್ಯರ್ ಅಪಸ್ವರ

ಇಂಡಿ ನಾಯಕತ್ವ ಮಮತಾಗೆ ನೀಡಿ

ಕೋಲ್ಕತ್ತಾ: ಹಿರಿಯ ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್ ಅವರು ಮತ್ತೊಮ್ಮೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯ ನಾಯಕತ್ವದ ವಿರುದ್ಧ ಧ್ವನಿ ಎತ್ತಿದ್ದು, ಇಂಡಿ ಮೈತ್ರಿಕೂಟದ ಅಧಿಕಾರವನ್ನು ಪ್ರಾದೇಶಿಕ ಪಕ್ಷಗಳ ನಾಯಕರಿಗೆ ಬಿಟ್ಟುಕೊಡುವಂತೆ ಸಲಹೆ ನೀಡಿದ್ದಾರೆ. ಸರಣಿ ಸೋಲುಗಳ ಹೊರತಾಗಿಯೂ ರಾಹುಲ್ ಗಾಂಧಿಯ ನಾಯಕತ್ವವನ್ನು ಮೇಲೆತ್ತಲು ಕಾಂಗ್ರೆಸ್ ಇನ್ನಿಲ್ಲದ ಕಸರತ್ತುಗಳನ್ನು ನಡೆಸುತ್ತಿರುವಾಗಲೇ ಅಯ್ಯರ್ ಹೇಳಿಕೆ ಕಾಂಗ್ರೆಸಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮೈತ್ರಿಕೂಟದ ಪ್ರಮುಖ ನಾಯಕಿಯಾಗಿದ್ದು, ಒಂದು ವೇಳೆ ಅವರಿಲ್ಲದಿದ್ದರೆ ಇಂಡಿ ಕೂಟದ ದುರ್ಬಲಗೊಳ್ಳಲಿದೆ. ರಾಹುಲ್ ಗಾಂಧಿ ಈಗ ಇಂಡಿ ಕೂಟದ ಅಧಿಕಾರವನ್ನು ಮಮತಾ ಬ್ಯಾನರ್ಜಿ ಅವರಿಗೆ ವಹಿಸಿಕೊಡಬೇಕಿದೆ. ಇಂಡಿ ಕೂಟದಲ್ಲಿ ನಾಯಕತ್ವದ ಪಾತ್ರವನ್ನು ವಹಿಸಬಲ್ಲ ಅನೇಕ ಪ್ರಾದೇಶಿಕ ನಾಯಕರು ಇದ್ದಾರೆ. ರಾಹುಲ್ ಗಾಂಧಿ ಈ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರ ಹೆಸರನ್ನೂ ಅಯ್ಯರ್ ಪ್ರಸ್ತಾವಿಸಿದರು.




ಅಯ್ಯರ್ ಹೇಳಿಕೆ ಕಾಂಗ್ರೆಸಿಗೆ ಇನ್ನಷ್ಟು ಮುಳುವಾಗಲಿದೆಯೇ?: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸನ್ನಿಹಿತವಾಗುತ್ತಿರುವಾಗಲೇ ಮಣಿಶಂಕರ್ ಅಯ್ಯರ್ ಅವರ ಹೇಳಿಕೆ ಹೊರಬಿದ್ದಿದ್ದು , ಕಾಂಗ್ರೆಸಿಗೆ ತೀವ್ರ ಪೇಚುಂಟು ಮಾಡಿದೆ. ಪಶ್ಚಿಮ ಬಂಗಾಳದ ಕಾಂಗ್ರೆಸ್ ನಾಯಕರು ಅಯ್ಯರ್ ಅವರ ಹೇಳಿಕೆಯ ಬಗ್ಗೆ ತೀವ್ರ ಕಿಡಿ ಕಾರಿದ್ದಾರೆ.ಅಯ್ಯರ್ ಅನೇಕ ಸಮಯದಿಂದ ಸಕ್ರಿಯ ಪಕ್ಷದ ರಾಜಕೀಯದಿಂದ ದೂರವಿದ್ದಾರೆ. ಅವರ ಹೇಳಿಕೆ ಪಕ್ಷದ ಅಧಿಕೃತ ಅಭಿಪ್ರಾಯವಲ್ಲ ಎಂದು ಪ್ರಧಾನ ಕಾರ್ಯದರ್ಶಿ ಸುಮನ್ ರಾಯ್ ಚೌಧರಿ ಹೇಳಿದ್ದಾರೆ. ಖಾಲಿ ಇರುವ ರಾಜ್ಯಸಭಾ ಸ್ಥಾನಕ್ಕಾಗಿ ಅಂತಹ ಹೇಳಿಕೆಗಳನ್ನು ನೀಡಿದ್ದಾರೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ಇತ್ತೀಚೆಗೆ ಮಣಿಶಂಕರ್ ಅಯ್ಯರ್ ಅವರು ನೆಹರೂ ಆಡಳಿತದಿಂದ ಹಿಡಿದು ಇಲ್ಲಿಯವರೆಗೆ ಕಾಂಗ್ರೆಸ್‌ನ 'ಗಾಂಧಿ ಕುಟುಂಬ'ದ ಅನೇಕ ಒಳಗುಟ್ಟುಗಳನ್ನು ಹೊರಹಾಕುತ್ತಿದ್ದಾರೆ.

2018ಕ್ಕೂ ಮುಂಚಿನ ವ್ಯಾಜ್ಯ ಬಗ್ಗೆ ಸುಪ್ರೀಂ ಮೌಖಿಕ ಸ್ಪಷ್ಟನೆ

ಭೂಸ್ವಾಧೀನ ಕೇಸ್ ವಾಪಸ್ ತರಲ್ಲ

ಹೊಸದಿಲ್ಲಿ: 2018ಕ್ಕೂ ಮುಂಚಿನ ಭೂಸ್ವಾಧೀನ ಪ್ರಕರಣಗಳನ್ನು ರೈತರಿಗೆ ಬಡ್ಡಿಯೊಂದಿಗೆ ಪರಿಹಾರ ನೀಡುವ ಉದ್ದೇಶದಿಂದ ಮತ್ತೆ ವಿಚಾರಣೆಗೆ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಮೌಖಿಕವಾಗಿ ಅಭಿಪ್ರಾಯಪಟ್ಟಿತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಕಾಯ್ದೆಯಡಿ ಭೂಮಿ ಸ್ವಾಧೀನಗೊಂಡ ಪ್ರಕರಣಗಳ ವಿಚಾರಣೆಯ ವೇಳೆ ಈ ಸೂಚನೆ ನೀಡಲಾಯಿತು.



ಮುಖ್ಯ ನ್ಯಾ.ಸೂರ್ಯ ಕಾಂತ್ ಹಾಗೂ ನ್ಯಾ. ಉಜ್ಜಲ್ ಭುಯನ್ ಒಳಗೊಂಡ ವಿಶೇಷ ಪೀಠವು, ಎನ್‌ಎಚ್‌ಎಐ ಸಲ್ಲಿಸಿದ್ದ ಪರಿಶೀಲನಾ ಅರ್ಜಿಯ ಮುಕ್ತ ನ್ಯಾಯಾಲಯದ ವಿಚಾರಣೆಯನ್ನು ಆರಂಭಿಸಿತು. 2019ರ ತೀರ್ಪಿನ ಅನ್ವಯ ಕುರಿತು ಎನ್‌ಎಚ್‌ಎಐ ಸ್ಪಷ್ಟೀಕರಣ ಕೋರಿತ್ತು. 2019ರಲ್ಲಿ ಸುಪ್ರೀಂ ಕೋರ್ಟ್ ಎನ್‌ಎಚ್‌ಎಐ ಕಾಯ್ದೆಯಡಿ ಭೂಸ್ವಾಧೀನಗೊಂಡ ರೈತರಿಗೆ ಬಡ್ಡಿಯೊಂದಿಗೆ ಪರಿಹಾರ ನೀಡುವ ನಿರ್ಧಾರ ಹಿಂದಿನ ವರ್ಷಗಳಿಗೂ ಅನ್ವಯವಾಗುತ್ತದೆ ಎಂದು ತೀರ್ಪು ನೀಡಿತ್ತು. ಈ ತೀರ್ಪಿನಿಂದ ಸರ್ಕಾರದ ಮೇಲೆ ಸುಮಾರು 32,000 ಕೋಟಿ ರೂ. ಆರ್ಥಿಕ ಹೊರೆ ಬೀಳುತ್ತದೆ ಎಂದು ಎನ್‌ಎಚ್‌ಎಐ ವಾದಿಸಿತು. ಆದ್ದರಿಂದ ತೀರ್ಪು ಮುಂದಿನ ದಿನಾಂಕದಿಂದ ಮಾತ್ರ ಅನ್ವಯವಾಗಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮಂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಕಟ್‌ಆಫ್ ದಿನಾಂಕ 2008ರಂತೆ ಕಾಣುತ್ತಿದ್ದು, ಆ ವೇಳೆಗೆ ಜೀವಂತವಾಗಿದ್ದ ದಾವೆಗಳು ಮುಂದುವರಿಯಬಹುದು. ಆದರೆ 2018ಕ್ಕೂ ಮುಂಚಿನ ವಿಚಾರಗಳನ್ನು ಮರುತೆರೆಯಲು ಸಾಧ್ಯವಿಲ್ಲ. ಸಮಾನತೆ ಆಧಾರದಲ್ಲಿ ಪರಿಹಾರಕ್ಕಾಗಿ ವಿಚಾರಣೆ ನಡೆಸಬಹುದು, ಬಡ್ಡಿ ವಿಚಾರದಲ್ಲಿ ಸಾಧ್ಯವಿಲ್ಲ," ಎಂದು ಸೂಚಿಸಿತು.

ಸಂಕ್ಷಿಪ್ತ ವಾದಗಳನ್ನು ಆಲಿಸಿದ ಕೋರ್ಟ್, ಅಗತ್ಯವಿದ್ದರೆ ಲಿಖಿತ ಸಲ್ಲಿಕೆಗಳನ್ನು ನೀಡಲು ಪಕ್ಷಗಳಿಗೆ ಅವಕಾಶ ನೀಡಿ, ಪರಿಶೀಲನಾ ಅರ್ಜಿಯನ್ನು ಎರಡು ವಾರಗಳ ನಂತರ ವಿಚಾರಣೆಗೆ ನಿಗದಿಪಡಿಸಿತು. ಈ ಹಿಂದೆ ಎನ್‌ಎಚ್‌ಎಐ ವಾದವನ್ನು ತಳ್ಳಿ ಹಾಕಿದ್ದ ಸುಪ್ರೀಂ ಕೋರ್ಟ್, ಇಂತಹ ಪ್ರಯೋಜನಗಳನ್ನು ನಿರಾಕರಿಸುವುದು ಸಂವಿಧಾನದ ವಿಧಿ 14 (ಸಮಾನತೆ ಹಕ್ಕು) ಉಲ್ಲಂಘನೆಯಾಗುತ್ತದೆ ಎಂದು ಹೇಳಿತ್ತು.

ಫೆಬ್ರವರಿ 4, 2025ರಂದು ಕೂಡ ಎನ್‌ಎಚ್‌ಎಐ ಅರ್ಜಿಯನ್ನು ತಳ್ಳಿ ಹಾಕಿದ ಕೋರ್ಟ್, 2019ರ ತೀರ್ಪು ಹಿಂತಿರುಗಿ ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿತ್ತು.

ನಕಲಿ ಹುಲಿ ಉಗುರು ಮಾರಾಟ: ಸೆರೆ

ಉಡುಪಿ: ಹುಲಿ ಉಗುರು ಎಂದು ನಂಬಿಸಿ, ನಕಲಿ ಉಗುರು ಮಾರಾಟ ಮಾಡಲು ಯತ್ನಿಸುತ್ತಿದ್ದ ವಂಚಕನನ್ನು ಉಡುಪಿ ಅರಣ್ಯ ಇಲಾಖೆಯವರು ವಶಕ್ಕೆ ಪಡೆ ದಿದ್ದಾರೆ.

ಸನ್ಯಾಸಿ ವೇಷದಲ್ಲಿದ್ದ ವಂಚಕ ಹುಲಿ ಉಗುರು ಅಸಲಿ ಎಂದು ನಂಬಿಸಿ ಮಾರಾಟ ಮಾಡಲು ಯತ್ನಿಸಿದ್ದಾಗ, ಸ್ಥಳೀಯರು ನಾಗರೀಕ ಸಮಿತಿಯ ಕಾರ್ಯಕರ್ತರಿಗೆ ಮಾಹಿತಿ ನೀಡಿದ್ದರು. ಬಳಿಕ ಪೊಲೀಸರು ಉಡುಪಿ ನಗರದ ಹಳೆ ಬಸ್ಸು ನಿಲ್ದಾಣದಲ್ಲಿ ವಶಕ್ಕೆ ಪಡೆದು ಬಳಿಕ, ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸಿದರು.

IN THE COURT OF THE I ADDITIONAL DISTRICT JUDGE AT MANGALORE

Com. OS No. 236/2025

Between,
Karnataka Grameena Bank ....Plaintiff
And
Zubaida ....Defendants

Defendant
Mrs. ZUBAIDA W/o Abubakkar,aged about 40 years, residing at D.No. 2-109/1,Bismi Manzil,Kotekar, Madoor, Mangaluru -575022

Please take notice, that the above case stands posted to 07-03-2026 for your appearance. If you fail to appear at 11.30 am on the said date before the above said court either in person or through counsel, the same will be proceeded with by setting you exparte.

Green under my hand and seal of the Court this the 18-02-2026

(By the order of the Court)
Sd /- Chief Administrative officer
District Court, D.K., Mangaluru

Sd/- Advocate for Plaintif
(B. Guruprasad Shetty)

Mangaluru 17-02-2026

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ

ನೋ.ಸಂ:ಆರ್.ಎಸ್.ಆರ್.128-009-2001-02
ಪ್ರಧಾನ ಕಛೇರಿ : ದರ್ಬೆ ಪುತ್ತೂರು
ಶಾಖೆ: ಮುಡಿಪು : 08255-260225, 7019002528

ವಾಹನ ಹರಾಜು ಪ್ರಕಟಣೆ

ಈ ಕೆಳಕಂಡ ಮಹನೀಯರು ನಮ್ಮ ಸಹಕಾರಿಯಿಂದ ವಾಹನ ಸಾಲ ಪಡೆದುಕೊಂಡು ಸಮಯಕ್ಕೆ ಸರಿಯಾಗಿ ಮರುಪಾವತಿಸದ ಕಾರಣ, ಈ ಕೆಳಗೆ ಕಾಣಿಸಿದ ವಾಹನವನ್ನು ಮುಟ್ಟುಗೋಲು ಹಾಕಲಾಗಿದ್ದು, ಸದ್ರಿ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲವನ್ನು ದಿನಾಂಕ: 01-03-2026 ರೊಳಗಾಗಿ ಮರುಪಾವತಿಸದಿದ್ದರೆ, ಸದ್ರಿ ವಾಹನವನ್ನು ದಿನಾಂಕ 04-03-2026 ರಂದು ಸಮಯ ಬೆಳಿಗ್ಗೆ 11.30 ಕ್ಕೆ ಮುಡಿಪು ಶಾಖೆಯ ಆವರಣದಲ್ಲಿ ಬಹಿರಂಗ ಯಾ ನೋಟೀಸು ಕೊಡದೇನೆ ಖಾಸಗಿಯಾಗಿ "ಎಲ್ಲಿ ಹೇಗಿದೆಯೋ ಹಾಗೇ" ಇದ್ದಂತೆ ಯಥಾಸ್ಥಿತಿಯಲ್ಲಿ ಹರಾಜು ಮಾಡಲಾಗುವುದು.

ಕ್ರ. ಸಂ.	ವಾಹನ ಸಂಖ್ಯೆ	ಸಾಲಗಾರರ ಹೆಸರು ಮತ್ತು ವಿಳಾಸ	
1	KA19HR5 199 HONDA SHINE 125 OBD DRUM MODEL 2024	ಸಾಲಗಾರರು, ಮೆ. ನಂ. ಎ 34579 **ರಮೇಶ್ ಶೆಟ್ಟಿ** ಪಿ ಬಿನ್ ಪೂವಣಿ ಶೆಟ್ಟಿ, ಎಲ್ ಐ ಸಿ ಏಜೆಂಟ್, ನವಶ್ರೀ ಕಾಂಪೌಂಡ್ ಸರ್ಕಾರಿ ಶಾಲೆಯ ಹತ್ತಿರ, ಕುರ್ನಾಡು ಗ್ರಾಮ, ಕುರ್ನಾಡು ಅಂಚೆ, ಬಂಟ್ವಾಳ ತಾಲೂಕು, ದ.ಕ 574153. **ಸಹ ಜವಾಬ್ದಾರರು,** ಮೆ. ನಂ. ಎ33852 ಸುಬ್ರಮಣ್ಯ ಕಾರಂತ್	

ಸೂಚನೆ: ಸದ್ರಿ ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಯಾ ರದ್ದುಗೊಳಿಸುವ ಅಧಿಕಾರವನ್ನು ಸಹಕಾರಿಯ ಆಡಳಿತ ಮಂಡಳಿ ಕಾಯ್ದಿರಿಸಿದೆ.

ಆಡಳಿತ ಮಂಡಳಿ ಅನುಮತಿ ಮೇರೆಗೆ
ದಿನಾಂಕ: 23-02-2026 ಸಹಿ/-
ಸ್ಥಳ: ಮುಡಿಪು ಮುಖ್ಯ ಕಾರ್ಯನಿರ್ವಹಣಾಧಿಕಾರಿ

The CAMPCO Ltd.
Chocolate Factory, Darbe Post, Kemminje Village, Puttur, D.K., Karnataka India - 574 202.

REQUEST FOR SELECTION OF BIDDERS

Sl No	Description	Last date to receive sealed biddings.
1	The Campco Limited, Mangalore invites bids from the eligible bidders to participate in the Request for Selection (RFS) of Bidders for Design, manufacture, supply, erection, testing and commissioning including warranty, operation & maintenance of 420kWp Roof Top Solar PV power system to be installed at Campco Chocolate Factory, Kemminje, Puttur, D.K., Karnataka in India.	On 03.04.2026 before 5.30 PM

For Bid Information Sheet with details, Conditions of Contract, Technical Specifications and for other details visit www.campco.org. Bid Forms with details are available at Campco Chocolate Factory, Kemminje, Puttur, D.K., Karnataka, India on payment of Rs.1000/- per bid form (non-Refundable) along with applicable GST.

Sealed Bid along with EMD of Rs.8,85,000/-(Rupees Eight Lakh Eighty Five thousand only) demand draft drawn in favour of "The Campco Limited Puttur" payable at Puttur shall be sent to the above address or submitted during the Office hours. The Management reserves its right to accept or reject any quotation without assigning any reason. For any clarification contact +91 98805 18041 (only during office hours).

Place: Puttur. Sd/-
Date: 23.02.2026 MANAGING DIRECTOR

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಾರ್ಯಾಲಯ ,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ - 114.
ಇ-ಮೇಲ್: ddeb.pue@gmail.com, Phone No.: 99014 53065

ಪತ್ರಸಂ;ಶಾಶಿಇ(ಪಪೂ)/ಉನಿ/ಇಬಿ/ಇ-ಟೆಂಡರ್/ಅಲ್ಪಾವಧಿ/ಟೆಂಡರ್/2025-26
ದಿನಾಂಕ: 21-02-2026

ಪತ್ರಿಕಾ ಪ್ರಕಟಣೆ
(ಕೆ.ಟಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ) (ಅಲ್ಪಾವಧಿ ಟೆಂಡರ್ ಅಧಿಸೂಚನೆ)

ಉಪ ನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬಾಗಲಕೋಟೆ ಇವರಿಂದ ಈ ಕೆಳಕಂಡಂತೆ ಆಯ್ದ **06 ಸರ್ಕಾರಿ ಆದರ್ಶ ಪದವಿ ಪೂರ್ವ ಕಾಲೇಜುಗಳಿಗೆ ಯಂತ್ರೋಪಕರಣಗಳು ಮತ್ತು ಸಾಧನ ಸಾಮಾಗ್ರಿಗಳನ್ನು ಖರೀದಿಸಿ ಸರಬರಾಜು ಮತ್ತು ಅಳವಡಿಕೆ ಮಾಡುವ 08 ದಿನಗಳ** ಅಲ್ಪಾವಧಿ ಟೆಂಡರ್‌ನ್ನು KTPP ನಿಯಮಾನುಸಾರ ಖರೀದಿ ಹಾಗೂ ಪೂರೈಸುವ ಕುರಿತು ಇ-ಟೆಂಡರ್‌ನ್ನು ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್ ಸಂಖ್ಯೆ	ಮೊತ್ತ ರೂ. ಲಕ್ಷಗಳಲ್ಲಿ
1	Shelves,Racks and Chairs	PUED/2025-26/IND0111	46.50=00

ಸಂಪೂರ್ಣ ಟೆಂಡರ್ ವಿವರಗಳನ್ನು ಅಂತರ್ಜಾಲ **https://ktpp.karnataka.gov.in** ನಲ್ಲಿ ವೀಕ್ಷಿಸಬಹುದಾಗಿದ್ದು ಇ-ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ; **21-02-2026** ಕೊನೆಯ ದಿನಾಂಕ; **01-03-2026 ಸಂಜೆ 5;30 ಗಂಟೆ** ಆಗಿದೆ. ಹೆಚ್ಚಿನ ವಿವರಗಳಿಗೆ ಇ-ಪ್ರೋಕ್ಯೂರಮೆಂಟ್ ಪೋರ್ಟಲ್‌ನ್ನು ಸಂಪರ್ಕಿಸುವುದು.

ಸಹಿ/-
ಉಪ ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)
ಬಾಗಲಕೋಟೆ-587102

ವಾ.ಸಾ.ಇ./ಬಾಗಲಕೋಟೆ/603/2025-26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ, ಜಲಸಂಪನ್ಮೂಲ ಇಲಾಖೆ
(ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ)

ಸಂ: ಕಾ.ಇಂ/ಭ.ಕಾ/ವಿ-2/PMKSY/ಟೆಂ.ಪ್ರ/2025-26/786
ದಿನಾಂಕ : 20.02.2026

ಟೆಂಡರ್ ಪ್ರಕಟಣೆ IFT-14
(ಕೆ.ಪಿ.ಪಿ.ಪಿ-ಪೋರ್ಟಲ್ ಮುಖಾಂತರ)

ಮಾನ್ಯ ಆಡಳಿತಾಧಿಕಾರಿಗಳು ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ-2, ಭದ್ರಾಕಾಡಾ, ರಾಣೇಬೆನ್ನೂರು ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ/ಪಂಚಾಯಿತಿ ರಾಜ್ಯ ಇಂಜಿನಿಯರಿಂಗ್ ಇಲಾಖೆ/ಜಲಸಂಪನ್ಮೂಲ ಇಲಾಖೆಯಲ್ಲಿ ನೊಂದಾಯಿತರಾದ 2ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 4701-ಪಿ.ಎಂ.ಕೆ.ಎಸ್.ವೈ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ. **318.02** ಲಕ್ಷ, ಟೆಂಡರ್‌ಗಿಟ್ಟ ಮೊತ್ತದ ಹೊಲಗಾಲುವೆ ಕಾಮಗಾರಿಗೆ ಟೆಂಡರ್‌ನ್ನು KW-4 ದಾಖಲಾತಿಯನ್ವಯ ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮ 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಮೂಲಕ ಆಹ್ವಾನಿಸಲಾಗಿದೆ. ವಿವರ ಮುಂದಿನಂತಿದೆ. ಟೆಂಡರನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ **20.02.2026** ರಿಂದ ಭರ್ತಿ ಮಾಡಿದ ಬಿಡ್‌ಗಳನ್ನು ದಿನಾಂಕ : **12.03.2026** ಸಂಜೆ 4.30 ರ ವರೆಗೆ ಅಪ್ ಲೋಡ್ ಮಾಡಬಹುದು, ವಿಚಾರಣೆಗೆ ಕೊನೆಯ ದಿನಾಂಕ : **11.03.2026** ಸಂಜೆ 4.30 ರ ವರೆಗೆ ತಾಂತ್ರಿಕ ಬಿಡ್ಡನ್ನು ದಿನಾಂಕ : **13.03.2026** ಸಂಜೆ 5.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ಕೆಳ ಸಹಿದಾರರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **(http://KPPP.Karnataka.gov.in)** ಮತ್ತು ದೂರವಾಣಿ ಸಂಖ್ಯೆ : **08373-297346** ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಇಂಜಿನೀಯರಿಂಗ್ ವಿಭಾಗ-2 ಭದ್ರಾಕಾಡಾ, ರಾಣೇಬೆನ್ನೂರು-581115.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/737/2025-26

ಕರ್ನಾಟಕ ಸರಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

ಕೆ.ಎಸ್.ಎಸ್.ಟಿ.ಸಂ. ವಿ.ಸಂ. 2(2)/ಸಮವಸ್ತ್ರ/2025-26 ದಿನಾಂಕ: 16.02.2026

ಅಲ್ಪಾವಧಿ ಇ-ಟೆಂಡರು ಪ್ರಕಟಣೆ - Call-3

ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲೂಕು, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವತಿಯಿಂದ ನಡೆಸಲ್ಪಡುವ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಮತ್ತು ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಮವಸ್ತ್ರದ ಬಟ್ಟೆಯನ್ನು ಹೊಲಿದು ನೀಡುವ ಬಗ್ಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://kppp.karnataka.gov.in ವೆಬ್‌ಸೈಟ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ **26.02.2026** ಸಾಯಂಕಾಲ **4.00** ಗಂಟೆ. ಟೆಂಡರನ್ನು ತೆರೆಯುವ ದಿನಾಂಕ **27.02.2026** ಸಾಯಂಕಾಲ **4.00** ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ **+91 8046010000, 8068948777** ಸಂಪರ್ಕಿಸತಕ್ಕದ್ದು.

ಹೊಲಿದು ನೀಡಬೇಕಾದ ಸಮವಸ್ತ್ರದ ವಿವರ :

ಕ್ರ.ಸಂ.	ವಿಷಯ	ದರ
1.	Stiching for Pant & Shirt (Boys)	1 Pair
2.	Stiching for Chudidar with Coat (Half)	1 Pair
3.	Chudidar With Pinafore (Long coat)	1 Pair

ಶರ್ತಗಳು:-
01. ಸರಬರಾಜುದಾರರು ಟೆಂಡರ್‌ನಲ್ಲಿ ತಿಳಿಸಿರುವ ಪ್ರತಿ ವಿಷಯಕ್ಕೂ ಪ್ರತ್ಯೇಕ ದರ ನಮೂದಿಸತಕ್ಕದ್ದು.
02. ಸದ್ರಿ ಟೆಂಡರ್‌ನಲ್ಲಿ ಭಾಗವಹಿಸುವ ಸರಬರಾಜುದಾರರು ಭದ್ರತಾ ಠೇವಣಿ ಮೊಬಲಗು ರೂ. **35,000.00** ಮೊತ್ತವನ್ನು ಇ-ಪೇಮೆಂಟ್ ಮೂಲಕ https://kppp.karnataka.gov.in ಮುಖಾಂತರ ಸಲ್ಲಿತಕ್ಕದ್ದು.
03. ಹೆಚ್ಚಿನ ವಿವರಗಳನ್ನು ದೇವಳದ ಪ್ರಕಟಣಾ ಫಲಕದಿಂದ ತಿಳಿದುಕೊಳ್ಳಬಹುದು.

ಸಹಿ/- ಕಾರ್ಯನಿರ್ವಹಣಾಧಿಕಾರಿ,
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/MPL/1657/25-26

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ

ನೋ.ಸಂ:ಆರ್.ಎಸ್.ಆರ್.128-009-2001-02
ಪ್ರಧಾನ ಕಛೇರಿ : ದರ್ಬೆ ಪುತ್ತೂರು
ಶಾಖೆ: ಮುಡಿಪು : 08255-260225, 7019002528

ಚಿನ್ನಾಭರಣಗಳ ಏಲಂ ನೋಟೀಸ್

ಈ ಕೆಳಗೆ ನಮೂದಿಸಿದ ಸದಸ್ಯರು ಸಹಕಾರಿಯ ಮುಪ ಶಾಖೆಯಿಂದ ಚಿನ್ನಾಭರಣ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಬಡ್ಡಿ ಸಹಿತ ಮರುಪಾವತಿ ಮಾಡದೇ ಇರುವ ಕಾರಣ ಸದ್ರಿಯವರು ಅಡವಿಟ್ಟ ಚಿನ್ನಾಭರಣಗಳನ್ನು ದಿನಾಂಕ 04-03-2026 ರ ಬೆಳಿಗ್ಗೆ ಗಂಟೆ 11.00ಕ್ಕೆ ಸಹಕಾರಿಯ ಮುಪ ಶಾಖೆ ಇಲ್ಲಿ ಬಹಿರಂಗ ಹರಾಜು ಮಾಡಿ ಬಾಕಿಯಾಗಿರುವ ಮೊಬಲಗನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕ್ರ. ಸಂ.	ಸಾಲಗಾರರ ಸದಸ್ಯ ನಂಬ್ರ ಹೆಸರು ಮತ್ತು ವಿಳಾಸ	ಸಾಲದ ನಂಬ್ರ	ಅಸಲು	ಬಡ್ಡಿ + ಇತರ (ದಿ:23/02/2026ರಂತೆ)
1	ಮೆ. ಎ 34579 **ನೋಯೆಲ್ ಕುಟಿನ್ಹಾ** ಬಿನ್ ವಿನ್ಸೆಂಟ್ ಕುಟಿನ್ಹಾ ಮ.ನಂ 4-16/18 ಎ ಆರ್ ಕಾಂಪೌಂಡ್ ಬಬ್ಬುಕಟ್ಟೆ ಸರಕಾರಿ ಶಾಲೆಯ ಹತ್ತಿರ, ಪೆರ್ಮನ್ನೂರು ಅಂಚೆ ಮತ್ತು ಗ್ರಾಮ, ಮಂಗಳೂರು ತಾಲೂಕು, ದ.ಕ 575017.	20/257/ 2509007	ರೂ. 5,89,000/-	ರೂ.6,31,910/-

ಸೂಚನೆ: ಈ ಏಲಂ ಪ್ರಕ್ರಿಯೆಯನ್ನು ರದ್ದುಗೊಳಿಸುವ ಅಥವಾ ಮುಂದೂಡುವ ಅಧಿಕಾರವನ್ನು ಸಹಕಾರಿಯ ಆಡಳಿತ ಮಂಡಲಿ ಕಾಯ್ದಿರಿಸಿದೆ.
ಆಡಳಿತ ಮಂಡಳಿ ಅನುಮತಿ ಮೇರೆಗೆ
ಸ್ಥಳ: ಮುಡಿಪು ಸಹಿ/-
ದಿನಾಂಕ: 23-02-2026 ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ಸರ್ಕಾರ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು
ಜಿಲ್ಲಾ ಪಂಚಾಯತಿಕಟ್ಟಡ,ಕೊಠಡಿ ಸಂಖ್ಯೆ-26, ಮೊದಲನೇ ಮಹಡಿ, ಜ್ಯೋತಿ ನಗರ-577102.
ದೂರವಾಣಿ-08262-220779 E.mail: itdpchikmagalur@gmail.com

ಸಂಖ್ಯೆ: ಗಿಅಯೋಚಿ/ಗಿಕವಿಅ/ಸಿಆರ್11/ಹೊ.ಸಂ.ಟೆ/2025-26 ದಿನಾಂಕ:23-02-2026

ಇ-ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಮೆಟ್ರಿಕ್ ಪೂರ್ವ/ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆ/ಏಕಲವ್ಯ ಮಾದರಿ ವಸತಿ ಶಾಲೆ/ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಡಾ.ಬಿ.ಆರ್.ಅಂಬೇಡ್ಕರ್ ವಸತಿ, ಶಾಲೆಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಂದಾಜು ಮೊತ್ತ ರೂ 4.79 ಕೋಟಿ ಮೊತ್ತದ ಟೆಂಡರ್ ಕರೆಯಲಾಗಿದ್ದು,ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗ ವಹಿಸಬಹುದು.ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ **ದಿನಾಂಕ: 04.03.2026 ಸಂಜೆ5.00**ಗಂಟೆಯವರೆಗೆ ಹಾಗೂ ಟೆಂಡರ್ ದಾಖಲಾತಿಗಳನ್ನು ಪರಿಶೀಲಿಸುವ **ದಿನಾಂಕ:05.03.2026** ರಂದು ಬೆಳಿಗ್ಗೆ **11.00 ಗಂಟೆಗೆ** (ಸಾಧ್ಯವಾದಲ್ಲಿ), ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯ ಬಹುದು ಹಾಗೂ ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದಾಗಿದೆ.

ಸಹಿ/- ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಚಿಕ್ಕಮಗಳೂರು

ಉಪ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ

No:DYES/BGV/OUTSOURCE/2025-26. ದಿನಾಂಕ: 21/02/2026

ಇ- ಟೆಂಡರ್ ಪ್ರಕಟಣೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಳಗಾವಿಯ ಜಿಲ್ಲಾ ಕ್ರೀಡಾಂಗಣ, ತಾಲ್ಲೂಕು ಕ್ರೀಡಾಂಗಣಗಳು ಹಾಗೂ ಕ್ರೀಡಾ ವಸತಿ ನಿಲಯಕ್ಕೆ ಡಾಟಾ ಎಂಟ್ರಿ ಆಪರೇಟರ್, ಕಾವಲುಗಾರರು, ಸ್ವಚ್ಛತಾಗಾರರು, ಪೌರಕಾರ್ಮಿಕರು, ಕೇರ್ ಟೇಕರ (ಮಹಿಳೆ) ಒಟ್ಟು 26 ಜನ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು 2 ವರ್ಷದ ಅವಧಿಗೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು 2000 ರ ಪ್ರಕಾರ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

1	ಟೆಂಡರ್ ಪ್ರಕಟಣೆ ದಿನಾಂಕ	No. DYES/BGV/OUTSOURCE/2025-26 Dtd: 21/02/2026
2	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	09-03-2026 ಸಾಯಂಕಾಲ 5.00 ಗಂಟೆವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	11-03-2026 ಮುಂಜಾನೆ 11.00 ಗಂಟೆಗೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	13-03-2026 ಮುಂಜಾನೆ 11.00 ಗಂಟೆಗೆ
5	ಟೆಂಡರಗೆ ಇಟ್ಟ ಮೊತ್ತ	ಅಂದಾಜು ರೂ.150.51 ಲಕ್ಷಗಳು
6	ಇ.ಎಂ.ಡಿ. ಮೊತ್ತ	ರೂ.2.26 ಲಕ್ಷಗಳು
7	ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ	ಉಪ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಬೆಳಗಾವಿ ದೂ: 0831-2474101

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಬೆಳಗಾವಿ ಇವರಿಂದ ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22501216/25501227 ಹಾಗೂ ಕಛೇರಿಯ ದೂರವಾಣಿ 0831-2950306 ಮೂಲಕ ಪಡೆಯಬಹುದಾಗಿದೆ.

ಸಹಿ/-ಉಪ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಳಗಾವಿ

DIPR/BGM/RO-NO-1913/KSMCA/2025-26

ಪುತ್ತೂರು ಮಾರುಕಟ್ಟೆ ಧಾರಣೆ

23-02-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 485
ಚೋಲ್ ಅಡಿಕೆ	510 - 540
ಡಬಲ್ ಚೋಲ್	510 - 540
ಹೊಸ ಪಟೋರ	365 - 415
ಹಳೆ ಪಟೋರ	400 - 430
ಹೊಸ ಉಳ್ಳಿ	115 - 300
ಹಳೆ ಉಳ್ಳಿ	105 - 305
ಹೊಸ ಕೋಕಾ	330 - 350
ಹಳೆ ಕೋಕಾ	355 - 375
ಹೊಸ ಕರಿಗೋಟು	240 - 270
ಹಳೆ ಕರಿಗೋಟು	240 - 270
ಹಸಿ ಕೊಕ್ಕೋ	80 - 110
ಒಣ ಕೊಕ್ಕೋ	380 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	210.50
ಆರ್‌ಎಸ್‌ಎಸ್ 2	191.00
ಸ್ಕ್ರಾಪ್ 1	133.00
ಸ್ಕ್ರಾಪ್ 2	123.00

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ
ತಾಲೂಕ : ಲಕ್ಷ್ಮೇಶ್ವರ, ಜಿಲ್ಲೆ : ಗದಗ email:apmclaxmeshwar@gmail.com Ph : 08487-273380
ಸಂಖ್ಯೆ:ಕೃಮಾಇ/ಕೃಉಮಾಸ(ಲ):ಅಭಿಕೆ/452/2025-26 ದಿನಾಂಕ : 19-02-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು **KW-2** ರನ್ವಯ **https://kppp.karnataka.gov.in** ಪೋರ್ಟಲ್‌ನಲ್ಲಿ, ಆಹ್ವಾನಿಸಲಾದ ಟೆಂಡರನ ವಿವರ ಈ ಕೆಳಗಿನಂತಿರುತ್ತದೆ.
(1) ಬಿಡ್ ಪೂರ್ವಭಾವಿ (Prebid) ಸಭೆ ದಿನಾಂಕ : **04-03-2026** ಬೆಳಿಗ್ಗೆ 11-30 ಘಂಟೆಗೆ. (2) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ : **13-03-2026** ಸಂಜೆ 5-00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16-03-2026** ಬೆಳಿಗ್ಗೆ 11-00 ಗಂಟೆಗೆ. (4) ಆರ್ಥಿಕ ಬಿಡ್ (ಸಾಧ್ಯವಾದಲ್ಲಿ) ತೆರೆಯುವ ದಿನಾಂಕ : **23-03-2026** ಬೆಳಿಗ್ಗೆ 11-00 ಘಂಟೆಗೆ. (5) ಟೆಂಡರ್ ತೆರೆಯುವ ಸ್ಥಳ : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

Sl. No.	Name of work	Approximate value of work (Rs)	Earnest Money Deposit (Rs.)	Transaction fee, only in case Tenderers who wish to participate (Rs.)	Period of completion
1	PROPOSED CONSTRUCTION OF SHRAMIKA BHAVANA AT MAIN MARKET YARD OF APMC LAXMESHWAR	4490822.00	89850.00	As per e-Procurment Norms KW-2	175 days (inclusive of monsoon)

ಟೆಂಡರ ಷರತ್ತು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಚೇರಿ ವೇಳೆಯಲ್ಲಿ ಅಥವಾ **Karnataka e-Procurement website https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ
ಸಹಿ/- ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/671/2025-26

IN THE COURT OF THE DISTRICT JUDGE D.K MANGALORE (IN THE COURT OF THE SENIOR CIVIL JUDGE MANGALORE)

(In the matter of the immovable property of Minor **Vrishti G. Shetty,** aged 15 years
G &W.C No. 21/2026

Between:
Mrs. Preethi Gunapal Shetty, Aged 49 years, W/o. Late Gunapal Narayan Shetty, R/at. Flat No.405, Shree Heights apartments Panjimogaru, Kulur-Kavoor Road, Mangalore-575013 *...Petitioner*

AND

NIL *... Respondent*

TO WHOMSOEVER IT MAY CONCERN

Take notice that the above named Petitioner has filed an application to this court for grant of guardianship of the above named Minor's property i.e residential flat situated in Padukodi Panjimogaru Village in favour of the Petitioner.

The above petition has been posted to 24th **day of March 2026** for hearing at **11.00 A.M** before this court, persons desiring to oppose the same may appear and file caveat if any on the said date and time, failing the matter will be heard and decided exparte. Given under my hand and the seal of the court on this 23rd day of February 2026.

/BY ORDER OF COURT/
Sd/- Chief Ministerial Officer
Senior Civil Judges Court D. K Mangalore.
Sd/- Advocate for Petitioner.

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ
ಎ. ಪಿ. ಎಂ. ಸಿ ಪ್ರಾಂಗಣ, ಗದಗ. ಪಿನ್ ಕೋಡ್-582101
ಇ-ಮೇಲ್ apmcgadag4@gmail.com ದೂ: 08372-238354
ಸಂ:ಕೃಉಮಾಸ:ಗ:ಅಭಿಕೆ: 1152,1151 & 1150:2025-26 ದಿನಾಂಕ: 19-02-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ, ಆಹ್ವಾನಿಸಲಾದ ಟೆಂಡರ್‌ಗಳ ವಿವರ ಈ ಕೆಳಗಿನಂತಿರುತ್ತದೆ.

1.	ಬಿಡ್ ಪೂರ್ವಭಾವಿ (Prebid) ಸಭೆ ದಿನಾಂಕ	05-03-2026 ಬೆಳಿಗ್ಗೆ 11-30 ಗಂಟೆಗೆ
2.	ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ	27-03-2026 ಸಂಜೆ 5-00 ಗಂಟೆಗೆ
3.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	30-03-2026 ಬೆಳಿಗ್ಗೆ 11-00 ಗಂಟೆಗೆ
4.	ಆರ್ಥಿಕ ಬಿಡ್ (ಸಾಧ್ಯವಾದಲ್ಲಿ) ತೆರೆಯುವ ದಿನಾಂಕ	06-04-2026 ಬೆಳಿಗ್ಗೆ 11-00 ಗಂಟೆಗೆ
5.	ಟೆಂಡರ್ ತೆರೆಯುವ ಸ್ಥಳ	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ

Sl. No	Name of work	Approximate value of work (Rs.)	Earnest Money Deposit (Rs.1.5%)	Indent No
1.	CONSTRUCTION OF CC ROAD AROUND COLD STORAGE SANCTIONED UNDER RIDF-30 AND CONSTRUCTION OF CC ROAD AND DRAIN FROM CATTLE MARKET TO EAST GATE ARCH GATE AND REPAIR OF WEST GATE ARCH GATE OF APMC GADAG	Rs.4,11,07,269/- (Exclusive of GST)	Rs.6,16,610/-	APMC/2025-26/RD/ WORK_INDENT791 KW-4
2.	CONSTRUCTION OF CC ROAD AND DRAIN INFORNT OF FRUITS MARKET AND INFORNT OF 5000 MT GODOWN AND IN SWAMI VIVEKANANDA ASHRAM ROAD AND CONSTRUCTION OF 3 COMPLEX IN FLOWER MARKET IN MMY GADAG	Rs.1,58,26,736/- (Exclusive of GST)	Rs.2,37,500/-	APMC/2025-26/RD/ WORK_INDENT827 KW-4
3.	CONSTRUCTION OF COMPLEX FOR ORGANIC AND GRAIN PRODUCTS IN THE SITE PRESENT NEXT TO MAIN ENTRANCE AND CONSTRUCTION OF SMALL SHOPS BESIDE THE ASHRAMA ROAD	Rs.1,65,60,564/-	Rs.2,48,450/-	APMC/2025-26/BD/ WORK_INDENT829 KW-4

ಟೆಂಡರ್ ಷರತ್ತು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಚೇರಿ ವೇಳೆಯಲ್ಲಿ ಅಥವಾ Karnataka e-Procurement website **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ
ಸಹಿ/- ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ

ವಾ.ಸಾ.ಇ/ಗದಗ/668/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಉಡುಪಿ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ಉಪನಿರ್ದೇಶಕರ ಕಛೇರಿ
ಹಳೇ ಜಿಲ್ಲಾ ಪಂಚಾಯತ್ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ-576101
ಸಂಖ್ಯೆ: ಇ.ಎಸ್.ಟಿ/05/2025-26 ದಿನಾಂಕ: 23/02/2026

ಇ-ಟೆಂಡರ್ ಪ್ರಕಟಣೆ

ವಿಷಯ: 2026-27ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಉಡುಪಿ ಜಿಲ್ಲೆಯ ಅಧೀನ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳಗೆ ಹೊರಗುತ್ತಿಗೆ ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

2026-27ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಉಡುಪಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಅಧೀನ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್-1, ಮೀನುಗಾರಿಕೆ ಸಹಾಯಕರು-5 ಮತ್ತು 'ಡಿ' ಗ್ರೂಪ್-4, ಒಟ್ಟು-10 ಹುದ್ದೆಗಳಿಗೆ ಸಿಬ್ಬಂದಿಗಳನ್ನು ಮಾನವ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಆಸಕ್ತರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

Tender Reference Number & Date: DOF/2025-26/SE3970/CALL-3 Date: 23/02/2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 04/03/2026 ಅಪರಾಹ್ನ 5.30 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 06/03/2026 ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 07/03/2026 ಬೆಳಿಗ್ಗೆ 11.30 ಗಂಟೆಗೆ.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ.

ವಾಸಾಇ/ಸನಿಉ/ಕೆಎಸ್‌ಎಂಸಿಎ/739/25-26 ದಿ: 23.02.2026

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ
ದೂರವಾಣಿ ಸಂ: 08352-259855,
ಇ-ಮೇಲ್:itstaff_dudc_bijapur@yahoo.co.in
dudc_bjp@yahoo.co.in, ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in

ಕ್ರ.ಸಂ:ಜಿನಕೊ-3/ಮಾನವ ಸಂಪನ್ಮೂಲ/ಟೆಂಡರ್/2025-26 ದಿನಾಂಕ:20.02.2026

ಟೆಂಡರ್ ಅಧಿಸೂಚನೆ

ವಿಜಯಪುರ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಕಾರ್ಯಾಲಯಕ್ಕೆ 02 ಜನ ನುರಿತ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸುವ ಕುರಿತು ಆಹ್ವಾನಿಸಿದ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಮತ್ತು ನೊಂದಾಯಿತ ಏಜೆನ್ಸಿದಾರರು ಹೆಚ್ಚಿನ ವಿವರಗಳನ್ನು ಇ-ಪ್ರೋಕರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ. Indent No: DMA/2025-26/SE7356

1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 06.03.2026** ರಂದು ಸಾಯಂಕಾಲ 5.00 ಘಂಟೆಯವರೆಗೆ.
2) ಟೆಂಡರ್ ತೆರೆಯುವ **ದಿನಾಂಕ : 07.03.2026** ರಂದು ಸಾಯಂಕಾಲ 5.15 ಘಂಟೆಗೆ.

ಅವಧಿ ವಿಸ್ತರಣೆ ಮತ್ತು ತಿದ್ದುಪಡಿ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/737/ಕೆಎಸ್‌ಎಂಸಿಎ/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-42) ಡ್ರಾ ಫೆಬ್ರವರಿ 23ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BW 826940 (KOLLAM)

Consolation Prize Rs.5,000/-
BN 826940 BO 826940 BP 826940 BR 826940
BS 826940 BT 826940 BU 826940 BV 826940
BX 826940 BY 826940 BZ 826940

2nd Prize Rs.30,00,000/- [30 Lakhs]
BS 208535 (WAYANADU)

3rd Prize Rs.5,00,000/- [5 Lakhs]
BU 582873 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0564 0839 1309 1411 2301 2664 3138 3337 4246 4249
4353 5656 5729 6101 6641 7012 7561 8397 8717

5th Prize Rs.2,000/-
1340 2505 4122 5058 6076 8690

6th Prize Rs.1,000/-
0278 0438 0857 1707 1778 1856 1904 2133 2688 2697
2765 3471 4351 5069 5415 6217 6627 6732 7499 7715
7811 8157 8233 8539 9961

7th Prize Rs.500/-
0223 0677 0721 0792 0868 0903 1167 1281 1314 1354
1384 1419 1486 1508 1630 1673 1783 1793 1898 2005
2025 2034 2043 2155 2575 2655 2781 3007 3090 3390
3409 3781 3900 3901 3938 3963 4072 4267 4520 4919
5081 5240 5308 5342 5483 5666 5748 5816 5895 5900
5968 6244 6505 6558 6616 6787 6960 6971 7160 7508
7633 7710 7813 7932 8409 8804 8826 8891 8901 9242
9273 9348 9424 9810 9830 9881

8th Prize Rs.200/-
0127 0209 0280 0360 0403 0427 0504 0605 0708 0753
0846 1071 1406 1413 1652 1788 1832 1865 1924 1956
2101 2176 2404 2432 2782 2815 2861 2927 2935 3030
3094 3128 3198 3224 3363 3397 3448 3731 3737 3821
4136 4334 4383 4535 4604 4639 4702 4791 5158 5173
5212 5227 5498 5708 5966 6118 6245 6270 6337 6361
6382 6528 6756 6826 6886 6898 6918 6919 7257 7415
7520 7661 7724 7868 7878 7882 7978 8008 8077 8113
8474 8547 8857 8999 9064 9318 9349 9579 9593 9820
9842 9843 9906 9952

9th Prize Rs.100/-
0107 0122 0137 0352 0355 0604 0642 0657 0735 0797
0813 0923 0925 0993 0997 1001 1094 1204 1215 1223
1258 1417 1474 1476 1555 1678 1698 1727 1792 1844
1859 1923 2058 2213 2444 2629 2707 2733 2997 3079
3186 3280 3340 3375 3388 3541 3720 3773 3775 3869
3877 3936 4007 4017 4201 4240 4247 4252 4388 4401
4537 4577 4590 4596 4769 4777 4780 4867 5003 5185
5334 5352 5365 5398 5422 5461 5474 5528 5600 5624
5632 5713 6053 6184 6282 6351 6434 6458 6507 6535
6603 6626 6680 6685 6695 6752 6763 6797 6832 6933
6939 6967 6983 7000 7112 7247 7399 7408 7418 7620
7653 7672 7699 7744 7780 7886 8034 8054 8161 8189
8221 8236 8267 8271 8592 8695 8860 8898 8987 9009
9052 9074 9084 9148 9190 9264 9295 9379 9714 9734
9833 9890 9940 9977

ಕಿರುಸುದ್ದಿ

ಶ್ರೀನಿವಾಸ ಕಾಲೇಜಿನ ಸ್ಥಾಪಕ ಎ.ರಾಘವೇಂದ್ರರಾವ್‌ಗೆ ಇಂದು ಸಾರ್ವಜನಿಕ ಶ್ರದ್ಧಾಂಜಲಿ

• **ಮಂಗಳೂರು:** ಹೋಟೆಲ್ ಶ್ರೀನಿವಾಸ, ಶ್ರೀನಿವಾಸ ವಿದ್ಯಾ ಸಂಸ್ಥೆ ಹಾಗೂ ಶ್ರೀನಿವಾಸ ಆಸ್ಪತ್ರೆಯ ಸ್ಥಾಪಕ, ಸಾಧಕ ಶ್ರೇಷ್ಠ ಎ. ರಾಘವೇಂದ್ರ ರಾವ್ ಅವರಿಗೆ ಮಂಗಳವಾರ ಸಾರ್ವಜನಿಕ ಶ್ರದ್ಧಾಂಜಲಿ ಸಲ್ಲಿಸಲಾಗುವುದು.ಮಂಗಳೂರಿನ ಕೊಡಿಯಾಲ್‌ಬೈಲ್‌ನ ಶಾರದಾ ವಿದ್ಯಾಲಯದ ಸಭಾಂಗಣದಲ್ಲಿ ಮಂಗಳವಾರ ಸಂಜೆ 4ಗಂಟೆಗೆ ಜನಪ್ರತಿನಿಧಿಗಳು, ಉದ್ಯಮಿಗಳು, ಮತ್ತಿತರ ಗಣ್ಯರು ಹಾಗೂ ಸಾರ್ವಜನಿಕರ ಉಪಸ್ಥಿತಿಯಲ್ಲಿ ಸಾರ್ವಜನಿಕ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರಾಘವೇಂದ್ರ ರಾವ್ ಅವರ ಆತ್ಮೀಯರು, ಹಿತೈಷಿಗಳು, ಅಭಿಮಾನಿಗಳೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಎಸ್.ಪ್ರದೀಪ ಕುಮಾರ ಕಲ್ಕೂರ ವಿನಂತಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ: ಲಾಂಛನ ವಿನ್ಯಾಸ ಸ್ಪರ್ಧೆ

• **ಮಂಗಳೂರು:** ಬಂಟ್ವಾಳದ ಸ್ಪರ್ಶ ಕಲಾ ಮಂದಿರದಲ್ಲಿ ಮಾ. 27 ಮತ್ತು 28ರಂದು ನಡೆಯುವ 28ನೇ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ವಿನ್ಯಾಸಕ್ಕಾಗಿ ಮುಕ್ತ ಸ್ಪರ್ಧೆ ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತರು ವಿನ್ಯಾಸಗೊಳಿಸಿದ ಲಾಂಛನವನ್ನು ಫೆ.27ರ ಒಳಗೆ ವಾಟ್ಸಾಪ್ ಮೂಲಕ ವಿ. ಸು. ಭಟ್ 9483903306 ಇವರಿಗೆ ಕಳುಹಿಸಲು ಕೋರಲಾಗಿದೆ ಎಂದು ದ.ಕ.ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೀನುಗಾರ ಸಾವು: ಪರಿಹಾರಕ್ಕೆ ಆಗ್ರಹ

• **ಮಂಗಳೂರು:** ನಗರದ ಮೀನುಗಾರಿಕಾ ದಕ್ಕೆಯಲ್ಲಿ ಬೀದಿ ದೀಪದ ಕಂಬವೊಂದು ಮುರಿದು ಮೈ ಮೇಲೆ ಬಿದ್ದು ತಮಿಳುನಾಡು ಮೂಲದ ಮೀನು ಕಾರ್ಮಿಕ ಮುರುಗನ್ (35) ಮೃತಪಟ್ಟಿದ್ದು, ಮೃತ ಮೀನುಗಾರನ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂಬ ಆಗ್ರಹ ವ್ಯಕ್ತವಾಗಿದೆ.

'ಹೊಟ್ಟೆಪಾಡಿಗಾಗಿ ಕೆಲಸಕ್ಕೆ ಬಂದಿರುವ ತಮಿಳುನಾಡು ಕಾರ್ಮಿಕನ ಸಾವಿಗೆ ಸರ್ಕಾರದ ಅವ್ಯವಸ್ಥೆಯೇ ನೇರ ಕಾರಣ. ಈ ಘಟನೆ ನಡೆದು ಎರಡು ದಿನಗಳಾದರೂ ಯಾವುದೇ ಸ್ಥಳೀಯ ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಪರಿಹಾರದ ಭರವಸೆ ನೀಡಿಲ್ಲ. ಇಂತಹ ನಿರ್ಲಕ್ಷ್ಯ ಸಲ್ಲದು. ಅಲ್ಲದೆ ಅವ್ಯವಸ್ಥೆಯನ್ನು ಸರ್ಕಾರ ಮತ್ತು ಮೀನುಗಾರಿಕೆ ಇಲಾಖೆ ಕೂಡಲೇ ಸರಿಪಡಿಸಬೇಕು. ಮೃತ ಕಾರ್ಮಿಕನ ಕುಟುಂಬಕ್ಕೆ ಸರ್ಕಾರ ಕೂಡಲೇ ಪರಿಹಾರ ನೀಡಬೇಕು. ತಮಿಳುನಾಡಿನ ವ್ಯಕ್ತಿ ಎಂದು ಪರಿಹಾರ ನೀಡಲು ಹಿಂದೇಟು ಹಾಕಿದಲ್ಲಿ ಸರ್ಕಾರದ ವಿರುದ್ಧ ಮತ್ತು ಮೀನುಗಾರಿಕೆ ಇಲಾಖೆ ವಿರುದ್ಧ ಪ್ರತಿಭಟನೆ ಮಾಡಲಾಗುವುದು ಎಂದು ಭೋವಿ ಮುಖಂಡ ಪವನ್ ಕುಮಾರ್ ಶಿರ್ವ ಹೇಳಿದ್ದಾರೆ.



ಕಾಸರಗೋಡು ತೆರುವತ್ತ್ ಶ್ರೀ ಚೆರುಂಬಾ ಭಗವತೀ ಕ್ಷೇತ್ರದಲ್ಲಿ ಫೆ.23 ರಿಂದ ಮಾರ್ಚ್ 1ರ ತನಕ ನಡೆಯಲಿರುವ ಬ್ರಹ್ಮಕಲಶ - ನಡಾವಳಿ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಸೋಮವಾರ ಸಂಜೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಿಂದ ಶ್ರೀ ಚೇರುಂಬಾ ಭಗವತೀ ಕ್ಷೇತ್ರಕ್ಕೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಜರಗಿತು.

ಅಸಮರ್ಪಕ ಸೋಲಾರ್ ಅಳವಡಿಕೆ: ಗ್ರಾಹಕರ ನ್ಯಾಯಾಲಯ ಅಪೂರ್ವ ಆದೇಶ

• **ಮಂಗಳೂರು:** ನಗರದ ಬಲ್ಮಠದಲ್ಲಿ ಮನೆಯ ಮೇಲೆ ಅಳವಡಿಸಿದ ಸೋಲಾರ್ ಅಸಮರ್ಪಕವಾಗಿದ್ದು, ನಿರೀಕ್ಷಿತ ರೀತಿಯಲ್ಲಿ ಕೆಲಸ ಮಾಡದೇ ಇದ್ದುದರಿಂದ ದೋಷಪೂರಿತ ಅಳವಡಿಕೆ ಎಂದು ಗ್ರಾಹಕ ಪರಿಹಾರ ವೇದಿಕೆ ಆದೇಶ ಮಾಡಿದೆ.

ಪ್ರಕರಣದ ಹಿನ್ನೆಲೆ: ಮಂಗಳೂರಿನ ಪ್ರತಿಷ್ಠಿತ ಸೋಲಾರ್ ಕಂಪೆನಿಯೊಂದು ಗ್ರಾಹಕರನ್ನು ಆಕರ್ಷಿಸಿ ಸೋಲಾರ್ ಅಳವಡಿಕೆಯ ಬಗ್ಗೆ ಜಾಹೀರಾತು ನೀಡಿತ್ತು. ಮನೆಯ ತಾರಸಿಯಲ್ಲಿ ಸೋಲಾರ್ ವ್ಯವಸ್ಥೆ ಅಳವಡಿಸಿದರೆ ಮನೆಯ ವಿದ್ಯುತ್ ಉಚಿತವಾಗಿ ದೊರೆಯುವುದಲ್ಲದೆ, ಹೆಚ್ಚುವರಿ ಉಳಿಕೆಯಾದ ವಿದ್ಯುತ್‌ನ್ನು ಮೆಸ್ಕಾಂಗೆ ನೀಡಿ ಅದರಿಂದ ಲಾಭ ಪಡೆಯಬಹುದು ಎಂದು ಗ್ರಾಹಕರಿಗೆ ಕಂಪೆನಿ ಮನವೊಲಿಸಿ ಸೋಲಾರ್ ಪಾನೆಲ್ ಅಳವಡಿಸಲು ಒತ್ತಾಯಿಸಿತ್ತು. ಅದಕ್ಕೆ ಸ್ಪಂದಿಸಿದ ಗ್ರಾಹಕರಾದ ಮಂಗಳೂರಿನ ಬಲ್ಮಠ ನಿವಾಸಿ ಭಾರತೀಯ ಸೇನೆಯ ನಿವೃತ್ತ ಡಾ.ಜಯರಾಮ್ ಎಸ್. ಅವರು ತಮ್ಮ ಮನೆಯ ಛಾವಣಿಗೆ ಸೋಲಾರ್ ಕಂಪೆನಿಯೊಂದಕ್ಕೆ 8,18,000 ರೂ. ಪಾವತಿಸಿ ಸೋಲಾರ್ ಅಳವಡಿಸಿದರು. ಕರಾರು ಪ್ರಕಾರ ದಿನವೊಂದಕ್ಕೆ 40 ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ ಎಂದು ಕಂಪೆನಿ ಭರವಸೆ ನೀಡಿತ್ತು. ಜೊತೆಗೆ 25 ವರ್ಷಗಳ ಗ್ಯಾರಂಟಿಯನ್ನೂ ನೀಡಿತ್ತು. ಆದರೆ ಕಂಪೆನಿಯ ಭರವಸೆ ಸುಳ್ಳಾಗಿದ್ದು ಸ್ವಲ್ಪ ಕಾಲ ಮಾತ್ರ ಆಶ್ವಾಸನೆ ಪ್ರಕಾರ ವಿದ್ಯುತ್ ಉತ್ಪಾದನೆಯಾಗಿತ್ತು. ಕೊಲ್ಕತ್ತಾದ ವಿಕ್ರಮ್ ಸೋಲಾರ್ ನಿರ್ಮಾಣ ಸಂಸ್ಥೆಯಾಗಿದ್ದು ಬೆಂಗಳೂರಿನ ಡೆಲ್ಟಾ ಪವರ್ ಸೊಲ್ಯೂಶನ್ ಅದರ ಅಧಿಕೃತ ಸರ್ವಿಸ್ ಸೆಂಟರ್ ಆಗಿದ್ದರೂ ಯಾರೊಬ್ಬರೂ ದೂರುದಾರರ ದೂರಿಗೆ ಸರಿಯಾಗಿ ಸ್ಪಂದಿಸದೇ ಇದ್ದ ಕಾರಣ ದೂರುದಾರರು ಗ್ರಾಹಕ ನ್ಯಾಯಾಲಯದ ಮೊರೆ ಹೋಗಿದ್ದರು. ಇದೀಗ ದ.ಕ.ಜಿಲ್ಲಾ ಗ್ರಾಹಕ ಪರಿಹಾರ ವೇದಿಕೆ ದೂರನ್ನು ಮಾನ್ಯ ಮಾಡಿದ್ದು 8,18,000 ರೂ. ಮೊತ್ತದೊಂದಿಗೆ 35,000 ರೂ. ಮಾನಸಿಕ ವೇದನೆಗೆ, ಸೇವಾ ನ್ಯೂನ್ಯತೆಗೆ ಪರಿಹಾರ ಹಾಗೂ 10000 ಕೋರ್ಟು ವಿರ್ಚು ನೀಡಬೇಕೆಂದು ಆದೇಶಿಸಿದೆ. ದೂರುದಾರರ ಪರವಾಗಿ ವಕೀಲ ಶಶಿರಾಜ್ ರಾವ್ ಕಾವೂರು ವಾದಿಸಿದ್ದರು.

ಬೆಳ್ಳೂರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೋಲಾರ್ ಬೇಲಿ | ಸೌಲಭ್ಯ ಉದ್ಘಾಟಿಸಿದ ಸಚಿವ ಶಶೀಂದ್ರನ್

ಸಂತ್ರಸ್ತ ಕೃಷಿಕರಿಗೆ ವಿಶೇಷ ವಿಮಾ ಯೋಜನೆ

• **ಕಾಸರಗೋಡು:** ಕೃಷಿ ಬೆಳೆಗಳಿಗೆ ಹಾನಿಯಾದಾಗ ಲಭ್ಯವಿರುವ ಮೊತ್ತ ಸೀಮಿತವಾಗಿರುವುದರಿಂದ ಅರಣ್ಯ ಪ್ರದೇಶಗಳಲ್ಲಿ ಬೆಳೆ ಹಾನಿಗೊಳಗಾದ ರೈತರಿಗೆ ವಿಶೇಷ ವಿಮಾ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಕೃಷಿಕರಿಗೆ ಹೆಚ್ಚಿನ ಪರಿಹಾರ ಲಭಿಸಲಿದೆ ಎಂದು ಕೇರಳ ಅರಣ್ಯ ಮತ್ತು ವನ್ಯಜೀವಿ ಇಲಾಖೆ ಸಚಿವ ಎ.ಕೆ. ಶಶೀಂದ್ರನ್ ತಿಳಿಸಿದ್ದಾರೆ.

ಬೆಳ್ಳೂರು ಗ್ರಾಮ ಪಂಚಾಯತ್‌ನ ಅರ್ಥಿಕಾಡುಲುವಿನಿಂದ ದೇಶಮುಖ ವರೆಗಿನ 9 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪೂರ್ಣಗೊಂಡ ಸೋಲಾರ್ ನಿರ್ಮಿತ ಬೇಲಿಯನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಇಲಾಖೆ ಮತ್ತು ಗ್ರಾಮ ಪಂಚಾಯತ್ ಒದಗಿಸಿದ ಆರ್ಥಿಕ ನೆರವಿನಿಂದ ಸೌರ ಬೇಲಿಯ ನಿರ್ಮಾಣವನ್ನು ಬಹಳಬೇಗನೆ ಪೂರ್ಣಗೊಳಿಸಲು ಸಾಧ್ಯವಾಯಿತು. ಕೇರಳದಲ್ಲಿ ಅರಣ್ಯ ಪ್ರದೇಶಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರಕಾರವು ಚಟುವಟಿಕೆಗಳ ಜೊತೆಗೆ ಸೌರ ಬೇಲಿ ನಿರ್ಮಾಣಕ್ಕೆ ಸಹಕರಿಸಿದ್ದಕ್ಕಾಗಿ ಕೃಷಿ ಇಲಾಖೆ ಮತ್ತು ಗ್ರಾಮ ಪಂಚಾಯತ್‌ಗೆ ಸಚಿವರು ಧನ್ಯವಾದ ಅರ್ಪಿಸಿದರು. ಕಾಡುಕೋಣಗಳಂತಹ ಪ್ರಾಣಿಗಳನ್ನು ಜನವಸತಿ ಪ್ರದೇಶಗಳಿಂದ ಓಡಿಸಲು ವೈಜ್ಞಾನಿಕ ಚಟುವಟಿಕೆಗಳನ್ನು ನಡೆಸಲು ಸರಕಾರವು ಉದ್ದೇಶಿಸಿದೆ ಎಂದು ಸಚಿವರು ಹೇಳಿದರು.



ಅರಣ್ಯ ಇಲಾಖೆ ಮತ್ತು ಸಾರ್ವಜನಿಕರ ನಡುವಿನ ಬಾಂಧವ್ಯವನ್ನು ಬಲಪಡಿಸಲು ವಿವಿಧ ಯೋಜನೆಗಳು ಕಾರ್ಯಗತಗೊಳ್ಳುತ್ತಿವೆ. ರಾಜ್ಯದ ಅರಣ್ಯ ಭೂಮಿಗೆ ಹೊಂದಿಕೊಂಡಿರುವ 241 ಗ್ರಾಮ ಪಂಚಾಯತ್‌ಗಳಲ್ಲಿ ತೇವರ್ ಯಜ್ಞ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾಡುಪ್ರಾಣಿಗಳ ಉಪಟಳದ ವಿರುದ್ಧ ತಡೆಗಟ್ಟುವ ಕ್ರಮಗಳ ಅಂಗವಾಗಿ ಸಾರ್ವಜನಿಕರ ಭಾಗವಹಿಸುವಿಕೆಯೊಂದಿಗೆ ತೇವರ್ ಯಜ್ಞ ಯೋಜನೆಯು ಜಾರಿಗೆ ಬರುತ್ತಿದೆ. ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಂಡು ರೈತರ ಸಮಸ್ಯೆಗಳನ್ನು ಪರಿಹರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಚಿವರು ನುಡಿದರು.

ಕುಳದಪಾರ ಮುಕ್ತ ವೇದಿಕೆಯಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಬೆಳ್ಳೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಎಂ.ಮಾಲಿನಿ ವಹಿಸಿದ್ದರು. ಕಾರಡ್ಕ ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ವಿ.ಉಷಾ, ಬ್ಲಾಕ್ ಪಂಚಾಯತ್ ಸದಸ್ಯ ಜಯಾನಂದ ಕುಳ, ಬೆಳ್ಳೂರು ಗ್ರಾಮ ಪಂಚಾಯತ್ ಸದಸ್ಯರಾದ ಎಂ.ಶ್ರೀಧರ, ಸತ್ಯವತಿ ರೈ, ಎನ್.ಸುಕುಮಾರ, ಸುಲೈಖಾ, ಎಂ.ಚೈತ್ರಾ, ಎಂ.ಶ್ರೀಜಿತ, ಕಾಸರಗೋಡು ಪ್ರಧಾನ ಕೃಷಿ ಅಧಿಕಾರಿ ಪಿ.ರಾಘವೇಂದ್ರ, ಸಾಮಾಜಿಕ ಅರಣ್ಯ ಇಲಾಖೆಯ ಸಹಾಯಕ ಸಂರಕ್ಷಣಾಧಿಕಾರಿ ವಿ.ಪಿ.ಉದಯಸೂರ್ಯನ್, ಕಾರಡ್ಕ ಕೃಷಿ ಸಹಾಯಕ ಪ್ರಭಾರ ನಿರ್ದೇಶಕ ಬಿ.ಗಿರೀಶ್, ಬೆಳ್ಳೂರು ಕೃಷಿ ಅಧಿಕಾರಿ ಎಂ.ವಿ.ಅದ್ವೈತ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎ.ಕೆ.ಕುಶಲ, ಎಂ.ರಾಮಚಂದ್ರನ್, ಕೆ.ಪಿ.ರವೀಂದ್ರನಾಥ ಶೆಟ್ಟಿ, ಎಂ.ಎಚ್.ಮೊಹಮ್ಮದ್ ಹಾಜಿ ಮಾತನಾಡಿದರು. ಐಎಫ್ಎಸ್ ಉತ್ತರ ವಲಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್.ಅಂಜನ್ ಕುಮಾರ್ ಸ್ವಾಗತಿಸಿ, ಕಾಸರಗೋಡು ವಿಭಾಗೀಯ ಅರಣ್ಯ ಅಧಿಕಾರಿ ಜೋಸ್ ಮ್ಯಾಥ್ಯೂ ವಂದಿಸಿದರು.

ಕಾಸರಗೋಡು ಅರಣ್ಯ ವಿಭಾಗದ ಕಾಸರಗೋಡು ವಲಯ ಪರಪ್ಪ ವಿಭಾಗದಲ್ಲಿ 9 ಕಿಲೋ ಮೀಟರ್ ಉದ್ದದ ಸೌರ ಬೇಲಿಯನ್ನು ಅಳವಡಿಸಲಾಗಿದೆ. ಇದು ಬೆಳ್ಳೂರು ಗ್ರಾಮ ಪಂಚಾಯತ್‌ನ ಕೃಷಿಕರ ದೀರ್ಘಕಾಲದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಮಾನವ - ವನ್ಯಜೀವಿ ಸಂಘರ್ಷ ಹೆಚ್ಚುತ್ತಿರುವ ಪ್ರದೇಶದಲ್ಲಿ ಕೃಷಿ ವಲಯವನ್ನು ರಕ್ಷಿಸಲು ಇಲಾಖೆಗಳ ಸಮನ್ವಯದೊಂದಿಗೆ ಜಾರಿಗೆ ತರಲಾದ ಮಾದರಿ ಯೋಜನೆಯಾಗಿದೆ. ಬೆಳ್ಳೂರು ಗ್ರಾಮ ಪಂಚಾಯತ್‌ನ ಈ ಪ್ರದೇಶವು ಮುಖ್ಯವಾಗಿ ಭತ್ತದ ಕೃಷಿಯನ್ನು ಅವಲಂಬಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಕಾಡುಕೋಣಗಳು ಸೇರಿದಂತೆ ಕಾಡುಪ್ರಾಣಿಗಳ ಆಕ್ರಮಣವು ಕೃಷಿಗೆ ವ್ಯಾಪಕ ಹಾನಿಯನ್ನುಂಟುಮಾಡಿದೆ. ಇದು ಅನೇಕ ಮಂದಿ ರೈತರು ತಮ್ಮ ಜೀವನೋಪಾಯವನ್ನು ತ್ಯಜಿಸುವಂತೆ ಮಾಡಿತ್ತು. ಇದರಿಂದಾಗಿ ಅರಣ್ಯ ಇಲಾಖೆಯು ಕಾಡುಪ್ರಾಣಿಗಳನ್ನು ಕೃಷಿ ಬೆಳೆಗಳಿಗೆ ರಕ್ಷಣೆ ಒದಗಿಸಲು ವೈಜ್ಞಾನಿಕ ಆಧಾರದಲ್ಲಿ ಸೌರ ಬೇಲಿಗಳನ್ನು ಸ್ಥಾಪಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ.

ಕೃಷಿ ಇಲಾಖೆ ಮತ್ತು ಬೆಳ್ಳೂರು ಗ್ರಾಮ ಪಂಚಾಯತ್ ನೆರವು

ಸೋಲಾರ್ ಬೇಲಿ ನಿರ್ಮಾಣ ಯೋಜನೆಯನ್ನು ಕೃಷಿ ಇಲಾಖೆ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಜಂಟಿ ಸಹಯೋಗದೊಂದಿಗೆ ಜಾರಿಗೆ ತರಲಾಗಿದೆ. ಕೃಷಿ ಇಲಾಖೆಯ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ)ಯಡಿ 37 ಲಕ್ಷ ರೂ. ಮತ್ತು ಬೆಳ್ಳೂರು ಗ್ರಾಮ ಪಂಚಾಯತ್‌ನಿಂದ 1.88 ಲಕ್ಷ ರೂ.ಗಳ ಆರ್ಥಿಕ ನೆರವು ನೀಡಲಾಗಿದೆ. ಈ ಯೋಜನೆಯು ವನ್ಯಜೀವಿ ದಾಳಿಯ ಭಯವಿಲ್ಲದೆ ಭತ್ತದ ಕೃಷಿ ಮತ್ತು ಸಂಬಂಧಿತ ಕೃಷಿ ಚಟುವಟಿಕೆಗಳನ್ನು ಮುಂದುವರಿಸಲು ಕೃಷಿಕರಿಗೆ ಆತ್ಮವಿಶ್ವಾಸವನ್ನು ನೀಡಲಿದೆ. ಅರಣ್ಯ ಪ್ರದೇಶದಿಂದ ವನ್ಯಜೀವಿಗಳು ನಾಡಿಗಿಳಿಯದಂತೆ ಮತ್ತು ಮಾನವ - ವನ್ಯಜೀವಿ ಸಂಘರ್ಷವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದಾದ ಯೋಜನೆ ಇದಾಗಿದೆ. ಬೆಳೆ ಹಾನಿ ಕಡಿಮೆಯಾಗುವುದರೊಂದಿಗೆ ಕೃಷಿಕರ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ.

ಮಾ.2ರಿಂದ 11: ಉಜಿರೆ ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕಲಶೋತ್ಸವದ ಸಂಭ್ರಮ

• **ಬೆಳ್ತಂಗಡಿ :** ಸುಮಾರು 1000 ವರ್ಷಗಳ ಇತಿಹಾಸವಿರುವ ಉಜಿರೆಯಲ್ಲಿನ ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕಲಶೋತ್ಸವ ಸಮಾರಂಭ 2026ನೇ ಮಾರ್ಚ್ 2 ರಿಂದ 11 ರವರೆಗೆ ನಡೆಯಲಿದೆ. ಈ ಸಂದರ್ಭ ಉಜಿರೆಯ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರರಾಗಿದ್ದ ಕೀರ್ತಿಶೇಷ ಯು. ವಿಜಯರಾಘವ ಪಡ್ವೆಟ್ನಾಯರ ಕನಸು ಮತ್ತು ಸಂಕಲ್ಪದಂತೆ ಭಕ್ತರ ಸಹಕಾರದಿಂದ ನೂತನವಾದ ರಾಜಗೋಪುರ 'ವಿಜಯಗೋಪುರ' ನಿರ್ಮಾಣವಾಗಿದ್ದು ಇದರ ಲೋಕಾರ್ಪಣೆ ಕಾರ್ಯಕ್ರಮ ಈ ಸಂದರ್ಭ ನಡೆಯಲಿದೆ. ಈಗಾಗಲೇ ಪೂರ್ವ ತಯಾರಿ ಭರದಿಂದ ಸಾಗುತ್ತಿದೆ ಎಂದು ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ ತಿಳಿಸಿದರು.

ಅವರು ಸೋಮವಾರ ಕೃಷ್ಣಾನುಗ್ರಹ ಸಭಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಾ. 2ರಂದು ಬ್ರಹ್ಮಕಲಶೋತ್ಸವದ ಕಾರ್ಯಾಲಯದ ಉದ್ಘಾಟನೆ ನಡೆಯಲಿದೆ. ಅಂದು ಪರಮಪೂಜ್ಯ ಶ್ರೀ ವಾಸುದೇವ ಸದಾಶಿವಾಶ್ರಮ ಸ್ವಾಮೀಜಿ ಹಂಗಾರಕಟ್ಟೆ ಆಶೀರ್ವಚನ ನೀಡಲಿದ್ದಾರೆ. ಮಾ.3ರಂದು ಗ್ರಹಣ ಇರುವುದರಿಂದ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಮಾ. 4 ರಂದು ಎಡನೀರು ಮಠದ ಶ್ರೀಗಳ ಸಮ್ಮುಖದಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ವಿಜಯಗೋಪುರವನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಅದೇ ರೀತಿ ಉಜಿರೆಯ ಕಿರಣ್ ರಾವ್ ಮತ್ತು ಕುಟುಂಬದವರು ದೇವರಿಗೆ ಸಮರ್ಪಿಸುವ ನೂತನ ಬ್ರಹ್ಮರಥದ ಸಮರ್ಪಣೆ ಮತ್ತು ಬೆನಕ ಕನ್‌ಸ್ಟ್ರಕ್ಷನ್ಸ್‌ನ ಗಣೇಶ್ ಗೌಡ ಮತ್ತು ಕುಟುಂಬದವರು ದೇವರಿಗೆ ಸಮರ್ಪಿಸುವ ನೂತನ ಪುಷ್ಪರಥದ ಸಮರ್ಪಣೆಯು ಮಾ. 8ರಂದು ಉಡುಪಿ ಪುತ್ತಿಗೆ ಮಠದ ಉಭಯ ಶ್ರೀಗಳ ಅಮೃತಹಸ್ತದಿಂದ ನಡೆಯಲಿದೆ. ಮಾ.11ರಂದು ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀಗಳು, ಉಡುಪಿಯ ಶ್ರೀ ಸೋದೆ ಶ್ರೀಗಳು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ, ಶಶಿಧರ್ ಶೆಟ್ಟಿ ಕಾರ್ಯಾಧ್ಯಕ್ಷತೆಯಲ್ಲಿ ಬ್ರಹ್ಮಕಲಶ ನಡೆಯಲಿದೆ ಎಂದರು.



ಎಲ್ಲಧಾರ್ಮಿಕಕಾರ್ಯಕ್ರಮಗಳುತಂತ್ರಿವರೇಣ್ಯರಾದಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿ ನೇತೃತ್ವ ನಡೆಯಲಿದೆ. 10 ದಿನಗಳ ಕಾಲ ನಡೆಯುವ ಸಭಾ ಕಾರ್ಯಕ್ರಮದಲ್ಲಿ ದ.ಕ. ಜಿಲ್ಲೆಯ ಮೂಡಬಿದ್ರೆ ಡಾ. ಸ್ವಸ್ತಿ ಶ್ರೀ ಭಟ್ಟಾರಕಚಾರು ಕೀರ್ತಿ ಶ್ರೀಗಳು, ಶ್ರೀಧಾಮ ಮಾಣಿಲ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ, ಒಡಿಯೂರು ಮಠದ ಶ್ರೀ ಗುರುದೇವಾನಂದ ಸ್ವಾಮೀಜಿ, ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ, ಮಂಗಳೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಧರ್ಮಪಾಲನಾಥ ಸ್ವಾಮೀಜಿ, ಕನ್ಯಾಡಿಯ ಮಹಾಮಂಡಲೇಶ್ವರ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಭಾಗವಹಿಸಿ ಆಶೀರ್ವಚನ ನೀಡಲಿದ್ದಾರೆ. ಡಾ.ಮೋಹನ ಆಳ್ವ ಅವರು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಾಡಿನ ಗಣ್ಯರು ಮಹನೀಯರು ಮತ್ತು ವಿವಿಧ ಸೇವಾಕರ್ತರು ವಿಶೇಷ ಅಭ್ಯಾಗತರಾಗಿ ಈ ಸಂದರ್ಭ ಭಾಗವಹಿಸಲಿದ್ದಾರೆ.

ಪ್ರತಿನಿತ್ಯ ಎರಡು ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಶ್ರೀ ಕೃಷ್ಣಾನುಗ್ರಹ ವೇದಿಕೆ ಮತ್ತುಪ್ರಧಾನವೇದಿಕೆ 'ಸುದರ್ಶನ'ದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ. ಇದರ ಜೊತೆಗೆ ಸುನಾದ ಭಜನಾ ಕುಟೀರದಲ್ಲಿ ನಿರಂತರ ಭಜನಾ ಸೇವೆ ನಡೆಯಲಿದೆ. ವಿವಿಧ ಸಂಘ ಸಂಸ್ಥೆ ಮತ್ತು ಭಕ್ತರು ಹೊರೆಕಾಣಿಕೆ ಈ ಸಂದರ್ಭ ಸಮರ್ಪಿಸಲಿದ್ದಾರೆ. ಈ ಎಲ್ಲಾ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವ ದೃಷ್ಟಿಯಿಂದ ಅನೇಕ ಸಮಿತಿಗಳ ರಚಿಸಿದ್ದು, ವಿಶೇಷವಾಗಿ ಭೋಜನ ಶಾಲೆಯ ನಿರ್ಮಾಣವಾಗಿದೆ.

ರಾಜಗೋಪುರ ನಿರ್ಮಾಣ ಸಮಿತಿ, ಬ್ರಹ್ಮಕಲಶ ಸಮಿತಿಯ ಮಾರ್ಗದರ್ಶನದಲ್ಲಿ ಊರವರ ಮತ್ತು ಭಕ್ತರ ಸಂಪೂರ್ಣ ಸಹಕಾರದಿಂದ ಈ ಬ್ರಹ್ಮಕಲಶ ವಿಶೇಷ ರೀತಿಯಲ್ಲಿ ನಡೆಯಲಿದೆ. ಭಗವಂತನ ಸೇವೆ ಮಾಡುವುದಕ್ಕೆ ಭಕ್ತರಿಗೆ ಅವಕಾಶವಿದ್ದು, ಕಲಶಸೇವೆ, ಅನ್ನದಾನ ಸೇವೆ ಮತ್ತು ತ್ರಿಕರಣಪೂರ್ವಕವಾದ ಯಾವುದೇ ವಿಧವಾದ ಸೇವೆ ಮಾಡುವವರು ದೇವಸ್ಥಾನದ ಕಾರ್ಯಾಲಯ ಸಂಪರ್ಕಿಸಬಹುದು. ಈಗಾಗಲೇ ಮೋಹನ್ ಕುಮಾರ್ ನೇತೃತ್ವದಲ್ಲಿ ಅಲಂಕಾರ, ಶ್ರಮದಾನಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ. ಮಂಜುನಾಥ್ ಕನ್ಯಾಡಿಯವರ ಸಂಚಾಲಕತ್ವದ ಬೆಂಗಳೂರು ಸಮಿತಿ ವಿಶೇಷ ರೀತಿಯ ಸೇವಾ ಕಾರ್ಯದಲ್ಲಿ ಕೈಜೋಡಿಸಲಿದೆ. ವಾಹನ ನಿಲುಗಡೆಗಾಗಿ ವಿವಿಧ ಕಡೆ ಸುಮಾರು 8 ಎಕರೆ ಜಾಗ ನಿಗದಿಗೊಳಿಸಲಾಗಿದೆ ಎಂದರು.

ಗೋಷ್ಠಿಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕೆ. ಪ್ರತಾಪ್ ಸಿಂಹ ನಾಯಕ್ , ಪ್ರಧಾನ ಸಂಚಾಲಕ ಕೆ. ಮೋಹನ್ ಕುಮಾರ್, ರಾಜಗೋಪುರ ನಿರ್ಮಾಣ ಸಮಿತಿ, ಉಪಾಧ್ಯಕ್ಷ ಮೋಹನ್ ಶೆಟ್ಟಿಗಾರ್, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಸಪಲ್ಯ, ಬ್ರಹ್ಮಕಲಶೋತ್ಸವ ಕಾರ್ಯಕಾರಿ ಸಮಿತಿ ಕಾರ್ಯದರ್ಶಿ ರವೀಂದ್ರ ಶೆಟ್ಟಿ ಸುರಭಿ, ವೆಂಕಟರಮಣ ಶೆಟ್ಟಿ, ಪ್ರಚಾರ ಸಮಿತಿಯ ಭಾಸ್ಕರ ಹೆಗಡೆ,ಪ್ರಕಾಶ್ ಮುದ್ದಣ್ಣಾಯ, ಉಪಸ್ಥಿತರಿದ್ದರು.

ಬ್ರಹ್ಮರಥೋತ್ಸವ

ಮಾ. 8 ರಂದು ಬೆಳಿಗ್ಗೆ ಶ್ರೀ ಜನಾರ್ದನ ದೇವರ ಪುನಃ ಪ್ರತಿಷ್ಠೆ, ಬ್ರಹ್ಮ ರಥ ಹಾಗೂ ಪುಷ್ಪರಥ ಸಮರ್ಪಣೆ, ಶ್ರೀ ಮಂಜುಳೇಶನಲ್ಲಿ ಅಷ್ಟಬಂಧ ಕ್ರಿಯೆ, ಬ್ರಹ್ಮಕಲಶಾಭಿಷೇಕ, ಅಮ್ಮನವರಲ್ಲಿ ಬ್ರಹ್ಮಕಲಶ, ಗಣಪತಿಯಲ್ಲಿ ಅಷ್ಟಬಂಧಕ್ರಿಯೆ, ಬ್ರಹ್ಮಕಲಶ ನಡೆಯಲಿದೆ. ಮಾ. 11 ರಂದು ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕಲಶ, ಸಂಜೆ ನೂತನ ಬ್ರಹ್ಮರಥದಲ್ಲಿ ಉಭಯ ದೇವರ ಬ್ರಹ್ಮರಥೋತ್ಸವ ನೆರವೇರಲಿದೆ.

> **2001 ರಲ್ಲಿ ಹಾಗೂ 2013 ರಲ್ಲಿ ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕಲಶ ನಡೆದಿತ್ತು. ಈ ಬಾರಿಯ ಬ್ರಹ್ಮಕಲಶೋತ್ಸವದ ದಿನಗಳಲ್ಲಿ ಸುಮಾರು ಎರಡೂವರೆ ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಈಗಾಗಲೇ ಉಜಿರೆ ಆಸುಪಾಸು ಸುಮಾರು 4,500 ಮನೆಗಳಿಗೆ ಇಲ್ಲಿನ ಆಡಳಿತ ಮೊಕ್ತೇಸರರೇ ಆಮಂತ್ರಣ ನೀಡಿದ್ದಾರೆ. ಈಗಾಗಲೇ ಸಿದ್ಧತೆಗಳು ಪೂರ್ಣಗೊಂಡಿದೆ. ಸಮಿತಿಯವರ ಕಲ್ಪನೆಯ ರೀತಿ ಕೆಲಸ ಕಾರ್ಯಗಳು ನಡೆದಿವೆ.**
> ■ ಪ್ರತಾಪಸಿಂಹ ನಾಯಕ್, ಅಧ್ಯಕ್ಷರು ಬ್ರಹ್ಮಕಲಶ ಸಮಿತಿ

ನಿಧನ ಸುದ್ದಿ

ವೇ.ಮೂ. ಸುಬ್ರಹ್ಮಣ್ಯ ಭಟ್



ಮುಲ್ಕಿ: ತೋಕೂರು ನಿವಾಸಿ ವೇದ ಮೂರ್ತಿ ಸುಬ್ರಹ್ಮಣ್ಯ ಭಟ್(54) ಹೃದಯಾಘಾತದಿಂದ ಭಾನುವಾರ ರಾತ್ರಿ ನಿಧನರಾದರು. ಅವರು ಪತ್ನಿ ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಅವರು ವೇದ ವಿದ್ವಾಂಸರಾಗಿ, ಆಚಾರವಂತ, ವಿಚಾರವಂತ, ಷೋಡಶ ಸಂಸ್ಕಾರ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ಯಕ್ಷಗಾನ ವೇಷಧಾರಿಯಾಗಿ ಹಾಗೂ ತಾಳಮದ್ದಳೆಯಲ್ಲಿ, ಅರ್ಥದಾರಿಯಾಗಿದ್ದರು, ಭಾಗವತ ಪ್ರವಚನದಲ್ಲಿ ಸೈ ಎನಿಸಿಕೊಂಡಿದ್ದರು. ಕರಾವಳಿ ಭಾಗದ ಅಪರಕ್ರಿಯೆಯಲ್ಲಿ ಯಾವುದೇ ಜಿಜ್ಞಾಸೆಗಳಿದ್ದರೂ ಇದಮಿತ್ತಮ್ ಎಂದು ಉತ್ತರ ನೀಡುತ್ತಿದ್ದರು. ಪೂರ್ವಾಶ್ರಮದಲ್ಲಿ ಪೇಜಾವರ ಶ್ರೀಗಳಿಗೆ ನಿಕಟವರ್ತಿಯಾಗಿದ್ದರು. ಅವರಿಗೆ ಅಪಾರ ಶಿಷ್ಯ ವರ್ಗದವರು ಇದ್ದಾರೆ. ಇವರ ನಿಧನಕ್ಕೆ ಬೆಂಗಳೂರಿನ ಆಧ್ಯಾತ್ಮಿಕ ವಿಶ್ವಗುರು ಶ್ರೀ ಚಂದ್ರಶೇಖರ ಸ್ವಾಮೀಜಿ, ವೇದಮೂರ್ತಿ ವಾದಿರಾಜ ಉಪಾಧ್ಯಾಯ ಕೊಲಕಾಡಿ, ಮುಲ್ಕಿ ಸೀಮೆಯ ಅರಸರಾದ ದುಗ್ಗಣ್ಣ ಸಾವಂತ ಅರಸರು,ಶಾಸಕ ಉಮಾನಾಥ ಕೋಟ್ಯಾನ್, ಮಾಜೀ ಸಚಿವ ಅಭಯ ಚಂದ್ರ ಜೈನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ, ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್ ಕೊಳುವೈಲು, ಕಟೀಲು ಶಿವಳ್ಳಿ ಸಭಾದ ಅಧ್ಯಕ್ಷ ಅನಂತಪದ್ಮ ನಾಭ ಆಚಾರ್ಯ ಹಾಗೂ ಸದಸ್ಯರು, ಉದ್ಯಮಿ ಅರವಿಂದ ಪೂಂಜಾ, ಕೆಪಿಸಿಸಿ ಕೋ ಆರ್ಡಿನೇಟರ್ ವಸಂತ್ ಬೆರ್ನಾಡ್,ತೋಕೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಗುರುರಾಜ್ ಎಸ್ ಪೂಜಾರಿ, ಮಾಜಿ ಅಧ್ಯಕ್ಷ ಹರಿದಾಸ್ ಭಟ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕೆ. ಮುತ್ತಯ್ಯ ಖಾರ್ವಿ



ಉಪ್ಪುಂದ: ಸಮಾಜದ ಹಿತವನ್ನೇ ಧ್ಯೇಯವನ್ನಾಗಿ ಕೊಂಡು ನಿಸ್ವಾರ್ಥ ಸಮಾಜಸೇವೆಗೈದ ಮೀನುಗಾರ ಸಮಾಜದ ಮುಖಂಡ ಕೆ. ಮುತ್ತಯ್ಯ ಖಾರ್ವಿ (67) ಅಲ್ಪಕಾಲದ ಅನಾರೋಗ್ಯದಿಂದ ಸೋಮವಾರ ನಿಧನರಾದರು. ಕರ್ನಾಟಕ ಸಾಂಪ್ರದಾಯಿಕ ಮೀನುಗಾರರ ಒಕ್ಕೂಟದ ಕಾರ್ಯದರ್ಶಿಯಾಗಿ, ಉಪ್ಪುಂದ ಪಂಚಾಯತ್ ಉಪಾಧ್ಯಕ್ಷರಾಗಿ, ನಾಡದೋಣಿ ಮೀನುಗಾರರ ಸಂಘ ಬೈಂದೂರು ವಲಯದ ಅಧ್ಯಕ್ಷರಾಗಿ, ಉಪ್ಪುಂದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ, ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಓಲಗ ಮಂಟಪದ ಅಧ್ಯಕ್ಷರಾಗಿ, ಬಿಜೆಪಿ ಮುಖಂಡರಾಗಿ, ಊರಿನ ಹಲವಾರು ಸಂಘ ಸಂಸ್ಥೆಯ ಸೇವೆ ಸಲ್ಲಿರು. ಸಮಾಜದ ಕುರಿತು ದೂರದೃಷ್ಟಿ ಹೊಂದಿದ ಕಾಯಕಜೀವಿ. ಶಿಕ್ಷಣ, ಸಂಘಟನೆ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಪ್ರತಿನಿಧಿತ್ವದ ಯಶಸ್ವಿ ರೂವಾರಿಯಾಗಿದ್ದರು. ಓರ್ವ ಸಹೋದರನನ್ನು ಅಗಲಿದ್ದಾರೆ.

ಕೆ.ಎಂ.ಗೋಪಾಲಕೃಷ್ಣ ಭಟ್



ಕಾಸರಗೋಡು: ಕಾರಡ್ಕ ಸಮೀಪದ ಪೊನ್ನೆಪ್ಪಲ ಕೆ.ಎಂ. ಗೋಪಾಲಕೃಷ್ಣ ಭಟ್ (84) ವಯೋಸಹಜ ಕಾಯಿಲೆಗಳಿಂದ ಸೋಮವಾರ ಮಧ್ಯಾಹ್ನ ಕಾಸರಗೋಡಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರು ಕೆಲವು ವರ್ಷಗಳಿಂದ ಮುಳ್ಳೇರಿಯದಲ್ಲಿ ತನ್ನ ಪುತ್ರನಾದ ವೈದ್ಯ, ಸಾಹಿತಿ, ಕನ್ನಡ ಹೋರಾಟಗಾರ ಡಾ.ನರೇಶ್ ಮುಳ್ಳೇರಿಯ ಅವರೊಂದಿಗೆ ವಾಸಿಸುತ್ತಿದ್ದರು. ಕೆ.ಎಂ. ಗೋಪಾಲಕೃಷ್ಣ ಭಟ್ ಅವರು ಹಿರಿಯ ನಾಗರಿಕ ವೇದಿಕೆಯ ಅಧ್ಯಕ್ಷರು, ಕನ್ನಡ ಹೋರಾಟಗಾರರು, ಕನ್ನಡ ಅಂಕಣ ಬರಹಗಾರರು ಆಗಿದ್ದರು. ಮೃತರು ಪುತ್ರ ಅಲ್ಲದೆ ಬಂಧು ಬಳಗವನ್ನು ಆಗಲಿದ್ದಾರೆ. ಅವರ ನಿಧನಕ್ಕೆ ಕಾಸರಗೋಡಿನ ಕನ್ನಡಿಗರು ಹಾಗೂ ಕಾಸರಗೋಡು ಬ್ರಾಹ್ಮಣ ಮಹಾಸಭಾ ಗಾಢ ಸಂತಾಪ ವ್ಯಕ್ತಪಡಿಸಿದೆ.

ನಿರ್ಮಲಾ ಶಿವಾನಂದ



ಕೋಟ: ಇಲ್ಲಿನ ಕಾಂತಾವರ ಶಿವಾನಂದ ಶೆಣೈ ಇವರ ಪತ್ನಿ ನಿರ್ಮಲಾ ಶಿವಾನಂದ (64) ಅನಾರೋಗ್ಯದಿಂದ ಶನಿವಾರ ಸ್ವಗೃಹದಲ್ಲಿ ನಿಧನರಾದರು. ಪತಿ,ಪುತ್ರ,ಪುತ್ರಿ ಹಾಗೂ ಬಂಧುವರ್ಗದವರನ್ನು ಅಗಲಿದ್ದಾರೆ.

ಕಲ್ಯಾಣಿ

ಉಪ್ಪಳ: ಉಪ್ಪಳ ನಿಡುಮದಿ ನಿವಾಸಿ ಕಲ್ಯಾಣಿ (90) ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಮಕ್ಕಳಾದ ಮೋಹನ, ಸುಮಿತ್ರಾ, ಲಲಿತಾ ಅವರನ್ನು ಆಗಲಿದ್ದಾರೆ.



ಸುಬ್ರಹ್ಮಣ್ಯದ ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಜಾತ್ರೋತ್ಸವ ಬಳಿಕ ದೈವಗಳ ನೇಮೋತ್ಸವವು ಭಾನುವಾರ ಶ್ರದ್ಧಾ ಭಕ್ತಿಯಿಂದ ನೆರವೇರಿತು. ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸುಬ್ರಹ್ಮಣ್ಯ ಭಟ್, ಕೆ. ದಯಾನಂದ ಕಟ್ಟೆಮನೆ, ಗುಣವರ್ಧನ ಕೆದಿಲ ಮತ್ತಿತರರಿದ್ದರು.

ಗಂಜಿಮಠದಲ್ಲಿ ರಾಷ್ಟ್ರೀಯ ಮಟ್ಟದ ಐಎಂಎಸ್‌ಸಿ ಆಫ್ ರೋಡ್ ಟ್ರೋಫಿ

ಮಂಗಳೂರು: ಇಂಡಿಯನ್ ಮೋಟಾರ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ರಾಷ್ಟ್ರೀಯ ಮಟ್ಟದ 400ನೇ 'ಐಎಂಎಸ್‌ಸಿ ಆಫ್ ರೋಡ್ ಟ್ರೋಫಿ–2026' ರ‍್ಯಾಲಿ ಮಾ.28 ಮತ್ತು 29ರಂದು ಬೆಳಗ್ಗೆ 9ರಿಂದ ಸಂಜೆ 5.30ರವರೆಗೆ ಮಂಗಳೂರಿನ ಗಂಜಿಮಠದ ಒಡ್ದೂರು ಫಾರ್ಮ್‌ನಲ್ಲಿ ಆಯೋಜಿಸಲಾಗಿದೆ.

ಕ್ಲಬ್ 25ನೇ ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ಈ ರಾಷ್ಟ್ರಮಟ್ಟದ ಸ್ಪರ್ಧೆಯನ್ನು ಏರ್ಪಡಿಸಿದ್ದು, ಈ ರೋಮಾಂಚನಕಾರಿ ರ‍್ಯಾಲಿಯಲ್ಲಿ ಮಹಾರಾಷ್ಟ್ರ, ಗೋವಾ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳ 400ಕ್ಕೂ ಅಧಿಕ ಸ್ಪರ್ಧಾಳುಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಇಂಡಿಯನ್ ಮೋಟಾರ್ ಸ್ಪೋರ್ಟ್ಸ್ ಕ್ಲಬ್ ಕಾರ್ಯದರ್ಶಿ ಅಶ್ವಿನ್ ನ್ಯಾಕ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಮೊದಲ ದಿನವಾದ ಮಾ.28ರಂದು ಮಹಿಳಾ ವಿಭಾಗ, ಜೂನಿಯರ್ ವಿಭಾಗ, ಮಾಸ್ಟರ್ಸ್ ವಿಭಾಗ, ಜಿಮ್ನಿ ವಿಭಾಗ, ಥಾರ್ 2020, ಎಸ್‌ಯುವಿ, ಸ್ಟಾಕ್ ಡೀಸೆಲ್, ಸ್ಟಾಕ್ ಪೆಟ್ರೋಲ್ ವಿಭಾಗಗಳಲ್ಲಿ, ಎರಡನೇ ದಿನವಾದ ಮಾ.29ರಂದು ಮೋಡಿಫೈಡ್ ಪೆಟ್ರೋಲ್, ಮೋಡಿಫೈಡ್ ಡೀಸೆಲ್, ಓಪನ್ ಕ್ಲಾಸ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಒಟ್ಟು 15 ಲಕ್ಷ ರೂ. ನಗದು ಬಹುಮಾನ, ಟ್ರೋಫಿಯನ್ನು ವಿಜೇತರಿಗೆ ನೀಡಲಾಗುವುದು. ಸುಮಾರು 5 ಸಾವಿರಕ್ಕೂ ಅಧಿಕ ಪ್ರೇಕ್ಷಕರು ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿದರು. ಕ್ಲಬ್‌ನ ಅಧ್ಯಕ್ಷ ಮೂಸಾ ಶರೀಫ್ ಮಾತನಾಡಿ, ಐಎಂಎಸ್‌ಸಿ ಕಳೆದ 25 ವರ್ಷಗಳಿಂದ ಭಾರತೀಯ ಮೋಟಾರ್ ಸ್ಪೋರ್ಟ್ಸ್ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಿದೆ. ರ‍್ಯಾಲಿ, ಆಟೋಕ್ರಾಸ್, ಹಿಲ್ ಕ್ಲೈಂಬ್, ಮೋಟೋಕ್ರಾಸ್ ಸೇರಿದಂತೆ ವಿವಿಧ ಮಾದರಿಯ ಸ್ಪರ್ಧೆಗಳ ಮೂಲಕ ಜಮ್ಮು ಕಾಶ್ಮೀರ ಸೇರಿದಂತೆ ದೇಶದಾದ್ಯಂತ ಪ್ರತಿಭಾವಂತರಿಗೆ ವೇದಿಕೆ ಒದಗಿಸುತ್ತಿದ್ದು ಸುರಕ್ಷಿತ ಹಾಗೂ ವೃತ್ತಿಪರ ಕ್ರೀಡಾ ಸಂಸ್ಕೃತಿಗೆ ಉತ್ತೇಜನ ನೀಡುತ್ತಿದೆ ಎಂದರು. ಕ್ಲಬ್‌ನ ಸದಸ್ಯ ಸಂಜಯ್ ಉಪಸ್ಥಿತರಿದ್ದರು.

ಮೆಚ್ಚುಗೆಗೆ ಪಾತ್ರವಾಗಿದೆ ಬುಡಕಟ್ಟು ಜನಾಂಗದವರಿಗೆ ಆರೋಗ್ಯ ತಪಾಸಣೆ, ಚಿಕಿತ್ಸಾ ಶಿಬಿರ

ಕಾಳಜಿಯಲ್ಲಿ ಎಎನ್‌ಎಫ್ ಸಕ್ರಿಯ!

ಉಡುಪಿ: ಈಗಾಗಲೇ ಕರ್ನಾಟಕ ನಕ್ಸಲ್ ಮುಕ್ತ ರಾಜ್ಯವೆಂದು ಘೋಷಣೆಯಾಗಿದ್ದರೂ, ನಕ್ಸಲ್ ನಿಗ್ರಹ ಪಡೆ ಪ್ರಸ್ತುತ ಸಕ್ರಿಯವಾಗಿದೆ. ಭವಿಷ್ಯದಲ್ಲಿ ಇನ್ನ್ಯಾರೋ ತಮಗೆ ಮೂಲಭೂತ ಹಕ್ಕು ಸಿಕ್ಕಿಲ್ಲ ಎಂದು ಮತ್ತೆ ನಕ್ಸಲ್ ಚಟುವಟಿಕೆಗಳಿಗೆ ಇಳಿಯಬಾರದು ಎಂಬ ಹಿತದೃಷ್ಟಿಯಿಂದ ಈ ಪಡೆ ಕಾರ್ಯ ನಿರ್ವಹಿಸುತ್ತಿದೆ. ಈ ಹಿನ್ನೆಲೆಯಲ್ಲಿ ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ಬುಡಕಟ್ಟು ಜನಾಂಗದವರಿಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಕಾರ್ಕಳ ತಾಲೂಕಿನ ಕುಕ್ಕುಂದೂರಿನ ಜೆ.ಸಿ.ಯು ತರಬೇತಿ ಶಾಲೆಯಲ್ಲಿ ನಡೆದ ಈ ಶಿಬಿರಕ್ಕೆ ಜನರ ಅಭೂತಪೂರ್ವ ಸ್ಪಂದನೆ ದೊರೆತಿದೆ. ಈ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಎಸ್.ಪಿ. ಹರಿರಾಮ್ ಶಂಕರ್, ನಕ್ಸಲ್ ಪೀಡಿತ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನಾಂಗದವರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಅವರ ಮನೆಬಾಗಿಲಿಗೆ ತಲುಪಿಸುವ ಮತ್ತು ಅವರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಈ ಕಾರ್ಯಕ್ರಮವನ್ನು ಕೆ.ಅಮರನಾಥ್ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರು ಹಾಗೂ ಎ.ಬಿ ಶೆಟ್ಟಿ ಡೆಂಟಲ್ ಕಾಲೇಜಿನ ಅಸೋಸಿಯಟ್ ಡೀನ್ ಆಗಿರುವ ಡಾ.ಅಮರ ಶ್ರೀ ಅಮರನಾಥ್ ಶೆಟ್ಟಿ ಉದ್ಘಾಟಿಸಿದರು. ಈ ವೇಳೆ ಎ.ಬಿ ಶೆಟ್ಟಿ ಡೆಂಟಲ್ ಕಾಲೇಜಿನ ಡಾ. ದಿಶಾ, ಎಜೆ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ವಿಕಿರಣ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಕಮಲಾಕ್ಷಿ, ಉಡುಪಿ ಪ್ರಸಾದ್ ನೇತ್ರಾಲಯದ ಡಾ. ಪ್ರೇಮ್, ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡಾ. ಮನಿಷಾ, ಕೆ. ಅಮರನಾಥ್ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಟ್ರಸ್ಟಿಗಳಾದ ಜಯಶ್ರೀ ಅಮರನಾಥ್ ಶೆಟ್ಟಿ ಹಾಗೂ ಲಕ್ಷ್ಮೀ ಮೆಮೋರಿಯಲ್ ಟ್ರಸ್ಟ್‌ನ ಟ್ರಸ್ಟಿ ಮತ್ತು ಎ.ಜೆ ಆಸ್ಪತ್ರೆಯ ನಿರ್ದೇಶಕಿ ಆಶ್ರಿತಾ ಪಿ. ಶೆಟ್ಟಿ ಉಪಸ್ಥಿತರಿದ್ದರು.

ಪ್ರಮುಖ ಆಸ್ಪತ್ರೆಗಳ ಸಹಯೋಗ ಶಿಬಿರದಲ್ಲಿ ಉಡುಪಿಯ ಪ್ರಸಾದ್ ನೇತ್ರಾಲಯ, ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಆಸ್ಪತ್ರೆ, ಮೂಡುಬಿದಿರೆಯ ಕೆ. ಅಮರನಾಥ್ ಶೆಟ್ಟಿ ಚಾರಿಟೇಬಲ್ ಟ್ರಸ್ಟ್, ಮಂಗಳೂರಿನ ಎ.ಬಿ. ಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್ ಮತ್ತು ಎಜೆ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಹಾಗೂ ಭಾರತೀಯ ಕ್ಯಾನ್ಸರ್ ಸೊಸೈಟಿಯ ಸುಮಾರು 60 ಪರಿಣಿತ ವೈದ್ಯರ ತಂಡ ಭಾಗ ವಹಿಸಿ ಜನರಿಗೆ ವೈದಕೀಯ ಸೇವೆ ನೀಡಿದರು.



ದಂತ ಚಿಕಿತ್ಸೆ

65 ಜನರು ತಪಾಸಣೆಗೆ ಒಳಪಟ್ಟಿದ್ದು, ಹೆಚ್ಚಿನ ಚಿಕಿತ್ಸೆ ಅಗತ್ಯವಿರುವ 18 ಜನರನ್ನು ಎ.ಬಿ. ಶೆಟ್ಟಿ ಡೆಂಟಲ್ ಕಾಲೇಜು ಮತ್ತು ಬೈಲೂರು ಕಾಲೇಜಿಗೆ ಉಲ್ಲೇಖಿಸಲಾಗಿದೆ. 74 ಜನರು ತಪಾಸಣೆ ನಡೆಸಿಕೊಂಡಿದ್ದು ಇವರಲ್ಲಿ ಐವರಿಗೆ ಕೆ.ಎಂ.ಸಿ. ಮಣಿಪಾಲ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸ್ಸು ಮಾಡಲಾಗಿದೆ.

ಕ್ಯಾನ್ಸರ್ ತಪಾಸಣೆ

ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಬಗ್ಗೆ 105 ಜನರಿಗೆ ಜಾಗೃತಿ ಮತ್ತು ಪರೀಕ್ಷೆ ನಡೆಸಲಾಯಿತು. ಒಬ್ಬರಿಗೆ ಸ್ತನ ಕ್ಯಾನ್ಸರ್ ಶಂಕೆ ಕಂಡು ಬಂದಿದ್ದು, ಹೆಚ್ಚಿನ ಪರೀಕ್ಷೆಗಾಗಿ ಮಂಗಳೂರಿನ ಎ.ಜೆ.ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿಕಿತ್ಸೆ ಗಾಗಿ ಶಿಫಾರಸ್ಸು ಮಾಡಲಾಗಿದ್ದು, 28 ಮಹಿಳೆಯರ ಗರ್ಭಕೋಶದ ಕ್ಯಾನ್ಸರ್ ಪರೀಕ್ಷಾ ಮಾದರಿಗಳನ್ನು ಸಂಗ್ರಹಿಸಿ ಮುಂದಿನ ಚಿಕಿತ್ಸೆಗೆ ತಯಾರಿ ನಡೆಸಲಾಗುತ್ತಿದೆ.

ಯಾವೆಲ್ಲಾ ತಪಾಸಣೆ ಹಾಗೂ ಚಿಕಿತ್ಸೆ

ಶಿಬಿರದಲ್ಲಿ ಕ್ಯಾನ್ಸರ್, ಕಣ್ಣು, ಕಿವಿ, ಮೂಗು, ದಂತ, ಬಿ.ಪಿ., ಶುಗರ್, ಪ್ರಸೂತಿ ಮತ್ತು ಸ್ತ್ರೀರೋಗ ಹಾಗೂ ಚರ್ಮರೋಗಕ್ಕೆ ಸಂಬಂಧಿಸಿದಂತೆ ಸಮಗ್ರ ತಪಾಸಣೆ ನಡೆಸಲಾಯಿತು. ಒಟ್ಟು 105 ಜನರ ನೇತ್ರ ತಪಾಸಣೆ ನಡೆಸಲಾಗಿದ್ದು, 60 ಜನರಿಗೆ ಉಚಿತವಾಗಿ ಕನ್ನಡಕ ವಿತರಿಸಲು ಹಾಗೂ 15 ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದು, ಅವರಿಗೆ ಉಡುಪಿಯ ಪ್ರಸಾದ್ ನೇತ್ರಾಲಯದಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲು ತೀರ್ಮಾನಿಸಲಾಗಿದೆ.

ವಿಶೇಷ ಸಾರಿಗೆ ವ್ಯವಸ್ಥೆ

ಉಡುಪಿ ಮತ್ತು ಚಿಕ್ಕಮಗಳೂರು ಭಾಗದ ನಕ್ಸಲ್ ಪೀಡಿತ ಪ್ರದೇಶಗಳ ಮಲೆಕುಡಿಯ, ಹಸಲರು ಮತ್ತು ಗೌಡು ಬುಡಕಟ್ಟು ಜನಾಂಗದ ಒಟ್ಟು 136 ಜನರು ಈ ಶಿಬಿರದ ಪ್ರಯೋಜನ ಪಡೆದರು. ದುರ್ಗಮ ಪ್ರದೇಶಗಳಿಂದ ಬರಲು ಸಾಧ್ಯವಾಗದ ಗ್ರಾಮಸ್ಥರನ್ನು ಎಎನ್‌ಎಫ್ ಘಟಕದ ವಾಹನಗಳ ಮೂಲಕ ಕರೆತರಲಾಯಿತು.

ಸಿಎಂ ಸಿದ್ದರಾಮಯ್ಯ ನಾಳೆ ಕಾರ್ಕಳಕ್ಕೆ

ಕಾರ್ಕಳ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಫೆ.25ರಂದು ಕಾರ್ಕಳಕ್ಕೆ ಆಗಮಿಸಲಿದ್ದು, ಕಾರ್ಕಳದಲ್ಲಿ ನೂತನವಾಗಿ ನಿರ್ಮಾಣಗೊಂಡ ಅಂಬೇಡ್ಕರ್ ಭವನದ ಉದ್ಘಾಟನೆ, ಕಿಸಾನ್ ಸಭಾ ಸಭಾಂಗಣದ ಉದ್ಘಾಟನೆ ಹಾಗೂ ಮಹಾತ್ಮಗಾಂಧಿ ವಸತಿ ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ ಎಂದು ಮಾಜಿ ಸಿಎಂ ವೀರಪ್ಪ ಮೊಯ್ಲಿ ಹೇಳಿದ್ದಾರೆ.



ಅವರು ಕಾರ್ಕಳದ ಮಹಾತ್ಮಗಾಂಧಿ ವಸತಿ ಪ್ರೌಢಶಾಲೆಯಲ್ಲಿ ನಡೆದ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಫೆ.25ರಂದು ಬೆಳಿಗ್ಗೆ 11 ಗಂಟೆಗೆ ಅಂಬೇಡ್ಕರ್ ಭವನದ ಉದ್ಘಾಟನೆ, ಕಿಸಾನ್ ಸಭಾ ಸಭಾಂಗಣದ ಉದ್ಘಾಟನೆಯ ಬಳಿಕ ಮಹಾತ್ಮಗಾಂಧಿ ವಸತಿ ಪ್ರೌಢಶಾಲೆಯ ವಾರ್ಷಿಕೋತ್ಸವದಲ್ಲಿ ಭಾಗಿಯಾಗಲಿದ್ದು, ಈ ಸಮಾರಂಭದಲ್ಲಿ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಸಚಿವ ಎಚ್.ಸಿ. ಮಹದೇವಪ್ಪ, ಶಾಸಕ ಸುನಿಲ್ ಕುಮಾರ್, ಜಯಪ್ರಕಾಶ್ ಹೆಗ್ಡೆ ಭಾಗಿಯಾಗಲಿದ್ದಾರೆ ಎಂದರು.

ಮಹಾತ್ಮ ಗಾಂಧಿ ವಸತಿ ಪ್ರೌಢಶಾಲೆಯ ಕುರಿತು ಮಾಹಿತಿ ಹಂಚಿಕೊಂಡ ಮೊಯ್ಲಿ, ಅತ್ಯಂತ ಕಡುಬಡತನದ ಕುಟುಂಬಗಳಿಂದ ಬಂದ ಶೈಕ್ಷಣಿಕವಾಗಿ ತೀರಾ ಹಿಂದುಳಿದ ಶೋಷಿತ ಸಮುದಾಯದ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಸಹಿತ ಗುಣಮಟ್ಟದ ಉಚಿತ ಶಿಕ್ಷಣ ನೀಡುವ ನಿಟ್ಟಿನಲ್ಲಿ 1992ರಲ್ಲಿನ ಸ್ಥಾಪನೆಯಾದ ಮಹಾತ್ಮಗಾಂಧಿ ವಸತಿ ಪ್ರೌಢಶಾಲೆ ಇಂದು ಯಶಸ್ವಿ 34 ವರ್ಷಗಳನ್ನು ಪೂರೈಸಿದೆ. ಇದಲ್ಲದೇ ಈ ಶಿಕ್ಷಣ ಸಂಸ್ಥೆಯು 19 ಬಾರಿ ಫಲಿತಾಂಶದಲ್ಲಿ ಶೇ.100ರ ಸಾಧನೆ ಮಾಡಿದ್ದು, ಈ ನಿಟ್ಟಿನಲ್ಲಿ ಈ ಬಾರಿ ಅದ್ದೂರಿ ವಾರ್ಷಿಕೋತ್ಸವ ಹಮ್ಮಿಕೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಿಸಾನ್ ಸಭಾ ಟ್ರಸ್ಟ್‌ನ ಅಧ್ಯಕ್ಷ ಹರ್ಷ ಮೊಯ್ಲಿ, ನಾರಾಯಣಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ, ಕಾಂಗ್ರೆಸ್ ಮುಖಂಡ ಮುನಿಯಾಲು ಉದಯ ಕುಮಾರ್ ಶೆಟ್ಟಿ, ನೀರೆಕೃಷ್ಣಶೆಟ್ಟಿ, ಶುಭದಾರಾವ್, ಬಿಪಿನ್ ಚಂದ್ರಪಾಲ್, ರವಿಶಂಕರ್ ಶೇರಿಗಾರ್, ಸದಾಶಿವ ದೇವಾಡಿಗ, ಕೃಷ್ಣಮೂರ್ತಿ, ಹೆಬ್ರಿ ಎಸ್.ಆರ್. ಕಾಲೇಜು ಅಧ್ಯಕ್ಷ ನಾಗರಾಜ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಚುಟುಕು ವಿಶ್ವಕಪ್
ಟಿ-20 ವಿಶ್ವಕಪ್ 2026

ಇಂದಿನ ಪಂದ್ಯ
ಇಂಗ್ಲೆಂಡ್ VS ಪಾಕಿಸ್ತಾನ
ಸಂಜೆ 7 (ಪಲ್ಲೆಕೆಲೆ)

ಸೂಪರ್-8 ಅಂಕಪಟ್ಟಿ (ಗುಂಪು 1)

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ದ.ಆಫ್ರಿಕಾ	1	1	0	0	2	+3.80
ವಿಂಡೀಸ್	1	1	0	0	2	+2.60
ಜಿಂಬಾಬ್ವೆ	1	0	1	0	0	−2.60
ಭಾರತ	1	0	1	0	0	−3.80

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್	1	1	0	0	2	+2.55
ಕಿವೀಸ್	1	0	0	1	1	0.00
ಪಾಕಿಸ್ತಾನ	1	0	0	1	1	0.00
ಶ್ರೀಲಂಕಾ	1	0	1	0	0	−2.55

ಇಂದು ಕರ್ನಾಟಕ-ಜಮ್ಮು ಮತ್ತು ಕಾಶ್ಮೀರ ಮಧ್ಯೆ ಫೈನಲ್ ಕದನ
ರಣಜಿ ರಾಜ ಯಾರು?

▸ ವಿಜಯಕುಮಾರ್ ಬೆಳ್ಳೇರಿಮಠ

• **ಹುಬ್ಬಳ್ಳಿ:** 15 ವರ್ಷ ಬಳಿಕ ಫೈನಲ್‌ಗೇರಿರುವ ಕರ್ನಾಟಕ ಮತ್ತು ಕೂಟದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದ ಜಮ್ಮು ಮತ್ತು ಕಾಶ್ಮೀರ ಪ್ರತಿಷ್ಠಿತ ರಣಜಿ ಚಾಂಪಿಯನ್ ಪಟ್ಟವನ್ನು ಕಟ್ಟಿಕೊಳ್ಳಲು ಕಾದಾಟ ನಡೆಸಲಿವೆ. 'ದಾವಣಗೆರೆ ಎಕ್ಸ್‌ಪ್ರೆಸ್' ಆರ್.ವಿನಯಕುಮಾರ್ ನಾಯಕತ್ವದಲ್ಲಿ ಸತತ ಎರಡು ವರ್ಷ ಟ್ರೋಫಿ ಗೆದ್ದ ನಂತರ ಒಂದು ದಶಕಕ್ಕೂ ಅಧಿಕ ಕಾಲ ಪ್ರಶಸ್ತಿಯ ಬರ ಎದುರಿಸುತ್ತಿರುವ ಕರ್ನಾಟಕ ತಂಡ ಟ್ರೋಫಿ ಮುಡಿಗೇರಿಸಿಕೊಳ್ಳಲು ಅಣಿಯಾಗಿದೆ.

ಇಲ್ಲಿನ ನೃಪತುಂಗ ಬೆಟ್ಟದ ಹಸಿರು ತಪ್ಪಲಿನಲ್ಲಿರುವ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ದೇಶೀ ಕ್ರಿಕೆಟ್‌ನ ಅತ್ಯುನ್ನತ ಪಂದ್ಯಾವಳಿಯ ಅಂತಿಮ ಪಂದ್ಯವೂ ಇದೇ ಮೊದಲ ಬಾರಿಗೆ ನಡೆಯುತ್ತಿದೆ. ಕಳೆದ ವಾರ ಲಖನೌನ ಏಕನಾ ಮೈದಾನದಲ್ಲಿ ಉತ್ತರಾಖಂಡ ವಿರುದ್ಧ ನಡೆದಿದ್ದ ಸೆಮಿನಲ್ಲಿ ಕರ್ನಾಟಕ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ ಫೈನಲ್‌ಗೇರಲು ಬೇಕಾದ ಮುನ್ನಡೆ ಗಳಿಸಿ ಪ್ರಶಸ್ತಿ ಸುತ್ತಿಗೇರಿದೆ. ಇತ್ತ ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ಮತ್ತೊಂದು ಸೆಮಿಫೈನಲ್‌ನಲ್ಲಿ ಆತಿಥೇಯ ಬಂಗಾಳ ವಿರುದ್ಧ ಜಮ್ಮು ಮತ್ತು ಕಾಶ್ಮೀರ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 26 ರನ್‌ಗಳ ಹಿನ್ನಡೆ ಅನುಭವಿಸಿದರೂ ಬೌಲರ್‌ಗಳ ಸಾಂಘಿಕ ಪ್ರದರ್ಶನದಿಂದ ಎದುರಾಳಿಯನ್ನು ಎರಡನೇ ಇನ್ನಿಂಗ್ಸ್‌ನಲ್ಲಿ 100ರೊಳಗೆ (99) ಕಟ್ಟಿ ಹಾಕಿ, 126ರ ಗುರಿಯನ್ನು ನಾಲ್ಕು ವಿಕೆಟ್ ಕಳೆದುಕೊಳ್ಳುವ ಮೂಲಕ ಜಯಗಳಿಸಿ ಇತಿಹಾಸ ಸೃಷ್ಟಿಸಿತ್ತು.

9ನೇ ಟ್ರೋಫಿ ಗೆಲ್ಲುವುದೇ ಕರ್ನಾಟಕ?: ಮುಂಬೈ ಹೊರತುಪಡಿಸಿ (45 ಬಾರಿ ಪ್ರಶಸ್ತಿ) ದೇಶದಲ್ಲೇ ಅತಿ ಹೆಚ್ಚು ಬಾರಿ ಪ್ರಶಸ್ತಿ ಗಳಿಸಿರುವ ಎರಡನೇ ತಂಡ (8 ಬಾರಿ) ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಆತಿಥೇಯ ಕರ್ನಾಟಕ 9ನೇ ಪ್ರಶಸ್ತಿಯ ಮೇಲೆ ಕಣ್ಣಿರಿಸಿದೆ.





ಕರ್ನಾಟಕಕ್ಕೆ ನೀಗುವುದೇ ಟ್ರೋಫಿಯ ಬರ?

ಬಲಿಷ್ಠ ಬ್ಯಾಟಿಂಗ್ ಪಡೆ
ಮೂರೂ ವಿಭಾಗದ ಆಟಗಾರರು ಯಾವುದೇ ಬವಣೆ ಎದುರಿಸಲು ಬಿಟ್ಟಿಲ್ಲ. ಬ್ಯಾಟಿಂಗ್‌ನಲ್ಲಿ ಯುವಕರ ಆಗ್ರೆಶನ್‌ಗೆ ಹಿರಿಯರ ಅನುಭವ ಸಿಕ್ಕಂತಾಗಿರುವುದು ವಿಶ್ವಾಸ ಹೆಚ್ಚಿಸಿದೆ. ನಾಯಕ ದೇವದತ್ತ ಪಡಿಕ್ಕಲ್ ಈ ಋತುವಿನಲ್ಲಿ 532ರನ್ ಗಳಿಸಿದ್ದಾರೆ. ಆರ್.ಸ್ಮರಣ್ ಟೂರ್ನಿಯಲ್ಲಿ (950 ರನ್) ಅತೀ ಹೆಚ್ಚು ರನ್ ಗಳಿಸಿದ್ದಾರೆ, ಇದರಲ್ಲಿ 4 ಶತಕಗಳಿವೆ. ಮಯಾಂಕ್ ಅಗರವಾಲ್ (518 ರನ್), ಕರುಣ್ ನಾಯರ್ (699 ರನ್), ರಾಷ್ಟ್ರೀಯ ತಂಡದಲ್ಲಿದ್ದುದರಿಂದ ಕೆಲವು ಪಂದ್ಯಗಳನ್ನು ತಪ್ಪಿಸಿಕೊಂಡಿದ್ದ ಕೆ.ಎಲ್. ರಾಹುಲ್ (457ರನ್) ಸಹ ಉಪಯುಕ್ತ ಕೊಡುಗೆ ನೀಡಿದ್ದಾರೆ.

ನಾಯಕ ಪರಾಸ್ ಡೋಗ್ರಾ ನಾಯಕತ್ವದ ಜಮ್ಮು-ಕಾಶ್ಮೀರ ತಂಡ ಪ್ರಸಕ್ತ ಸಾಲಿನಲ್ಲಿ ಅಷ್ಟೇ ಉತ್ತಮ ಪ್ರದರ್ಶನ ತೋರಿದೆ. ಐಪಿಎಲ್‌ನ ಹೈದರಾಬಾದ್ ತಂಡ ಆಟಗಾರ ಅಬ್ದುಲ್ ಸಮದ್ ಜಮ್ಮು-ಕಾಶ್ಮೀರ ಪರ (655 ರನ್) ಹೆಚ್ಚು ರನ್‌ಗಳಿಸಿ ಬ್ಯಾಟರ್ ಆಗಿದ್ದಾರೆ. ನಾಯಕ ಪಾರಸ್ ಡೋಗ್ರಾ (551 ರನ್), ವಿಕೆಟ್ ಕೀಪರ್ ಕನ್ಹಯ್ ವಾಧ್ವಾನ್ ಹಾಗೂ ಆರಂಭಿಕ ಆಟಗಾರ ಶುಭಂ ಖಜೂರಿಯಾ (369ರನ್) ಗಳಿಸಿದ್ದಾರೆ.

ಬೌಲಿಂಗ್‌ನಲ್ಲಿ ಆಖಿಬ್ ನಬಿ ದಾರ್ (55 ವಿಕೆಟ್) ಟೂರ್ನಿಯಲ್ಲಿ ಎರಡನೇ ಹೆಚ್ಚು ವಿಕೆಟ್ ಪಡೆದಿದ್ದಾರೆ. ಎಸ್.ಆರ್. ಕುಮಾರ (29 ವಿಕೆಟ್) ಹಾಗೂ ಅಬಿದ್ ಮುಷ್ತಾಕ್ (417 ರನ್– 20 ವಿಕೆಟ್) ಆಲ್‌ರೌಂಡ್ ಆಟ ಆಡಿದ್ದು, ಫೈನಲ್ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಶುಭಂಗೆ ಗಾಯ
ಎರಡು ತಂಡದ ಆಟಗಾರರು ಸೋಮವಾರವೂ ಅಭ್ಯಾಸ ನಡೆಸಿದರು. ಜಮ್ಮು ಮತ್ತು ಕಾಶ್ಮೀರ ತಂಡ ಆರಂಭಿಕ ಆಟಗಾರ ಶುಭಂ ಖಜೂರಿಯಾ ಫೀಲ್ಡಿಂಗ್ ಅಭ್ಯಾಸದ ವೇಳೆ ಡೈವ್ ಮಾಡಿ ದಾಗ ಬೆನ್ನು ನೋವು ಅನುಭವಿಸಿದರು. ತಕ್ಷಣ ಇತರ ಆಟಗಾರರು ಹಾಗೂ ಮೈದಾನ ಸಿಬ್ಬಂದಿ ಅವರನ್ನು ಹೊತ್ತು ಆಸ್ಪತ್ರೆಗೆ ಕರೆದೊಯ್ದರು.

ಸಮಯೋಚಿತ, ಸಮತೋಲಿತ ಬೌಲಿಂಗ್
ಕರ್ನಾಟಕದ ಬೌಲರ್‌ಗಳೂ ಪರಿಣಾಮಕಾರಿ ಪ್ರದರ್ಶನ ನೀಡಿದ್ದು, ಲೆಗ್ ಸ್ಪಿನರ್ ಶ್ರೇಯಸ್ ಗೋಪಾಲ್ 46 ವಿಕೆಟ್ ಪಡೆದಿದ್ದಾರೆ. ವೇಗಿಗಳಾದ ವಿದ್ವತ್ ಕಾವೇರಪ್ಪ ಹಾಗೂ ಶಿಖರ್ ಶೆಟ್ಟಿ (ತಲಾ 21 ವಿಕೆಟ್) ಉಪಯುಕ್ತ ಬೌಲಿಂಗ್ ಮಾಡಿದ್ದು, ವಿದ್ಯಾಧರ್ ಪಾಟೀಲ್ ಆಲ್ ರೌಂಡ್ ಪ್ರದರ್ಶನದಿಂದ ಗಮನ ಸೆಳೆದಿದ್ದಾರೆ. ರಾಷ್ಟ್ರೀಯ ತಂಡದಲ್ಲಿರುವ ವೇಗಿ ಪ್ರಸಿದ್ಧ ಕೃಷ್ಣ ಮೇಲೆ ಅಂತಿಮ ಪಂದ್ಯದಲ್ಲೂ ನಿರೀಕ್ಷೆ ಇದೆ.



ತಂಡಗಳು
• **ಕರ್ನಾಟಕ:** ದೇವದತ್ತ ಪಡಿಕಲ್ (ನಾಯಕ), ಕೆ.ಎಲ್. ರಾಹುಲ್, ಕರುಣ್ ನಾಯರ್, ಮಯಾಂಕ್ ಅಗರವಾಲ್, ಆರ್. ಸ್ಮರಣ್, ಕೆ.ವಿ. ಅನೀಶ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ(ವಿಕೆಟ್ ಕೀಪರ್), ಪ್ರಸಿದ್ಧ ಕೃಷ್ಣ ವಿದ್ವತ್ ಕಾವೇರಪ್ಪ, ವಿದ್ಯಾಧರ ಪಾಟೀಲ್, ಮೊಹಿಸಿನ್ ಖಾನ್, ಶಿಖರ್ ಶೆಟ್ಟಿ, ಶ್ರೀಜಿತ್ ಕೆ.ಎಲ್.(ವಿಕೆಟ್ ಕೀಪರ್) , ವೈಶಾಖ್ ವಿಜಯಕುಮಾರ್.

• **ಜಮ್ಮು ಮತ್ತು ಕಾಶ್ಮೀರ:** ಪಾರಸ್ ಡೋಗ್ರಾ (ನಾಯಕ), ಶುಭಂ ಖಜುರಿಯಾ, ಶುಭಂ ಪುಂಡಿರ್, ಯಾರಾ ಹಸನ್, ಅಬ್ದುಲ್ ಸಮದ್, ಎಸ್.ಆರ್. ಕುಮಾರ್, ಕನ್ಹಯ್ ವಾಧ್ವಾನ್ (ವಿಕೆಟ್ ಕೀಪರ್), ಅಬಿದ್ ಮುಷ್ತಾಕ್, ಅಖಿಬ್ ನಬಿ, ವೈ. ಸಿಂಗ್, ವಿ. ಶರ್ಮಾ, ಸುನೀಲ್ ಕುಮರ್, ಕೆ. ಸಿಂಗ್, ಸಾಹಿಲ್ ಲೋತ್ರಾ, ಡಿ. ಕುಂಡಲ್, ಉಮರ್ ನಜೀರ್.

ಕಿರುಸುದ್ದಿ

ಟೂರ್ನಿಯ ಪ್ರದರ್ಶನವೇ ನಮಗೆ ವಿಶ್ವಾಸ: ಪಡಿಕ್ಕಲ್
• **ಹುಬ್ಬಳ್ಳಿ:** ನಮ್ಮ ತಂಡ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದೆ. ಫೈನಲ್‌ನಲ್ಲಿಯೂ ಅತ್ಯುತ್ತಮ ಪ್ರದರ್ಶನ ನೀಡಲಿದ್ದೇವೆ. ಹಿಂದೆ ಹುಬ್ಬಳ್ಳಿಯಲ್ಲಿ ಆಡಿದಾಗ ಉತ್ತಮ ಫಲಿತಾಂಶ ಸಿಕ್ಕಿದೆ. ಪಂದ್ಯ ಆರಂಭವಾಗುವುದಕ್ಕಿಂತ ಮುಂಚೆ ಎಷ್ಟು ರನ್ ಗಳಿಸುತ್ತೇವೆ ಎಂಬುದನ್ನು ಹೇಳಲಾಗುವುದಿಲ್ಲವೆಂದು ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ ತಿಳಿಸಿದರು. ಪಂದ್ಯಕ್ಕೂ ಮುನ್ನ ನಡೆದ ಮಧ್ಯಮಗೋಷ್ಠಿಯಲ್ಲಿ ಪಿಚ್ ಸೇರಿದಂತೆ ತಂಡದ ತಯಾರಿ ಕುರಿತಂತೆ ಮಾತನಾಡಿ, ಹುಬ್ಬಳ್ಳಿಯಲ್ಲಿ ಆಡುವುದು ಖುಷಿ ನೀಡುತ್ತಿದೆ, ಗಾಯದಿಂದ ನಾನು ಚೇತರಿಸಿಕೊಂಡಿದ್ದೇನೆ ಎಂದರು. ಜಮ್ಮು ಮತ್ತು ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಮಾತನಾಡಿ, ತಂಡದ ಆಟಗಾರರ ಉತ್ತಮ ಪ್ರದರ್ಶನದಿಂದ ಫೈನಲ್ ತಲುಪಿದ್ದೇವೆ. ಎರಡು ಬಾರಿಯ ಚಾಂಪಿಯನ್ ತಂಡ ಪಶ್ಚಿಮ ಬಂಗಾಳವನ್ನು ಸೋಲಿಸಿದ್ದರಿಂದ ನಮ್ಮ ತಂಡದ ಆಟಗಾರರದಲ್ಲಿ ಸಹಜವಾಗಿ ಆತ್ಮವಿಶ್ವಾಸ ಹೆಚ್ಚಿದೆ. ಕರ್ನಾಟಕ ತಂಡದಲ್ಲಿ ಖ್ಯಾತ, ಅನುಭವಿ ಆಟಗಾರರಿದ್ದರೆ. ಆದರೆ, ನಾವು ನಮ್ಮ ಆಟ ಆಡುತ್ತೇವೆ ಎಂದರು.

ಟಿಕೆಟ್ ದರ: ಪಂದ್ಯ ವೀಕ್ಷಣೆ ಮೈದಾನ ಮೂರನೇ ಗೇಟ್‌ನಲ್ಲಿ 100 ಹಾಗೂ 4 ನೇ ಗೇಟ್‌ನಲ್ಲಿ 200 ದರ ನಿಗದಿ ಪಡಿಸಲಾಗಿದೆ ಎಂದು ಕೆ.ಎ ಧಾರವಾಡ ವಲಯದ ಅಧ್ಯಕ್ಷ ಅಲ್ತಾಫ್ ಕಿತ್ತೂರು ತಿಳಿಸಿದರು. ಮಂಗಳವಾರ ಬೆಳಿಗ್ಗೆ 8.30 ಕ್ಕೆ ಟಿಕೆಟ್ ನೀಡಲು ಆರಂಭಿಸಲಾಗುವುದು. ಪ್ರತಿ ದಿನ 4500 ಟಿಕಟ್ ಮಾತ್ರ ನೀಡಲಗುವುದು ಎಂದರು.


ಡೋಪಿಂಗ್: ನಾಲ್ವರ ಶಿಕ್ಷೆ ಕಡಿತ
• **ಹೊಸದಿಲ್ಲಿ:** ಡೋಪಿಂಗ್ ಪ್ರಕರಣ ಸಂಬಂಧ ನೈತಿಕ ವಾಗಿ ತಪ್ಪೊಪ್ಪಿಕೊಂಡು ಸುಧಾರಿಸಿಕೊಳ್ಳುವ ಆಶ್ವಾಸನೆ ನೀಡಿದ ಬಳಿಕ ನಾಲ್ಕು ಅಥ್ಲೀಟ್‌ಗಳಿಗೆ ನಾಡಾ(ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆ) ವಿಧಿಸಿದ್ದ ನಿಷೇಧ ಶಿಕ್ಷೆಯನ್ನು ಕ್ರಮವಾಗಿ ಇಳಿಸಲಾಗಿದೆ. ಅಥ್ಲೀಟ್‌ಗಳಾದ ಹಿಮಾಂಶು ರಾಥಿ, ಬಸಂತಿ ಕುಮಾರಿ ಮತ್ತು ಶಶಿ ಭೂಷಣ್ ಅವರಿಗೆ ಡೋಪಿಂಗ್ ಮಾಡಿದ ಅಪರಾಧದಲ್ಲಿ ಸರಿಸುಮಾರು 3 ವರ್ಷಗಳ ನಿಷೇಧ ಹೇರಿತ್ತು ನಾಡಾ. ಬಲವಿಂದರ್ ಸಿಂಗ್ ಎಂಬುವವರಿಗೆ 5 ವರ್ಷದ ನಿಷೇಧ ಹೇರಲಾಗಿತ್ತು. ಆದರೆ ತಾವು ಮಾಡಿದ ಅಪರಾಧವನ್ನು 20ದಿನದ ಒಳಗಾಗಿ ಒಪ್ಪಿಕೊಂಡ ನಂತರ ತಲಾ ಒಂದು ವರ್ಷದ ಶಿಕ್ಷೆ ಕಡಿತಗೊಳಿಸಲಾಗಿದೆ. ಇದು ನಾಡಾ ಸಂಪ್ರದಾಯ ಮತ್ತು ನಿಯಮವಾಗಿದೆ. ತಪ್ಪೊಪ್ಪಿ ಕೊಂಡು ನಡೆಯುವವರ ಶಿಕ್ಷೆಯನ್ನು ಕಡಿತ ಗೊಳಿಸಿ ಅವರಿಗೆ ಪ್ರೇರೋಪ ನೀಡುವುದು ಇದರ ಉದ್ದೇಶ. ಉತ್ತೇಜಕ ಮೆಫೆನ್ಟೆರ್ಮೈನ್ ಸೇವಿಸಿರುವುದು ದೃಢಪಟ್ಟ ನಂತರ ಮಿಡಲ್ ಡಿಸ್ಟೆನ್ಸ್ ರನ್ನರ್ ಹಿಮಾಂಶು ರಾಥಿ ಅವರನ್ನು ನವೆಂಬರ್‌ನಲ್ಲೇ ನಿಷೇಧ ಹೇರಲಾಗಿತ್ತು. ವಿಶ್ವ ಯುನಿವರ್ಸಿಟಿ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ಬಸಂತಿ ಕುಮಾರಿ 19-ನೊರಾಂಡ್ರೊಸ್ಟೆರಾನ್ ಸೇವಿಸಿ ರುವುದು ದೃಢಪಟ್ಟ ನಂತರ ಮೂರು ವರ್ಷದ ನಿಷೇಧ ನವೆಂಬರ್‌ನಲ್ಲೇ ಆರಂಭವಾಗಿತ್ತು. 1500 ಮೀ. ಓಟದಲ್ಲಿ ಬೆಳ್ಳಿ ಗೆದ್ದಿರುವ ರಾಷ್ಟ್ರೀಯ ರನ್ನರ್ ಭೂಷಣ್ ಅವರ ನಿಷೇಶ ಸೆಪ್ಟೆಂಬರ್‌ನಲ್ಲೇ ಆರಂಭವಾಗಿತ್ತು. ನಾಡಾ ಆ್ಯಂಟಿ ಡೋಪಿಂಗ್ ರೂಲ್ಸ್ 2021ರ ಆರ್ಟಿಕಲ್ 8.3 ಮತ್ತು 10.8ರ ಕೇಸ್ ರೆಸೂಲೇಶನ್ ಅಡಿಯಲ್ಲಿ ಶಿಕ್ಷೆ ಕಡಿತಗೊಳಿಸಲಾಗಿದೆ.

ಟಿಟಿ: ಭಾರತಕ್ಕೆ ಮಿಶ್ರ ಫಲ
• **ಹೊಸದಿಲ್ಲಿ:** ಸಿಂಗಾಪೂರ್ ಸ್ಮ್ಯಾಷ್ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಯಾವುದೇ ಭಾರತೀಯ ಷಟ್ಲರ್‌ಗಳು ಕೂಡ ಮುಂದಿನ ಸುತ್ತಿಗೆ ಹೋಗಲಾಗಲಿಲ್ಲ. ಆದರೆ ಡಬಲ್ಸ್ ವಿಭಾಗದಲ್ಲಿ ಮಿಂಚಿತು. ಕಳೆದ ಕಂಟೆಂಡರ್ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಭಾರತದ ಆಟಗಾರರು ನಿರೀಕ್ಷೆಯೊಂದಿಗೆ ಕಣಕ್ಕಿಳಿದಿದ್ದರು. ಭರವಸೆಯ ಆಟಗಾರ ಮಾನವ್ ಟಕ್ಕರ್ ಚೀನಾದ ಹುವಾಂಗ್ ಅವರೊಂದಿಗೆ 1–3 (8–11, 11–9, 6–11, 3–11) ರಿಂದ ಸೋತರು. ಮಹಿಳೆಯರ ವಿಭಾಗದಲ್ಲಿ ಮನಿಕಾ ಬಾತ್ರಾ ಚೀನಾದ ಝು ಯುಲಿಂಗ್ ಅವರೊಂದಿಗೆ 1–3 (10–12, 8–11, 11–4, 9–11) ರಿಂದ ಸೋತರು. ಇನ್ನು ಭಾರತದ ನಂಬರ್ 1 ಆಟಗಾರ್ತಿ ಶ್ರೀಜಾ ಅಕೂಲಾ ಅನ್ನಾ ಅವರೊಂದಿಗೆ 1–3 (8–11, 5–11, 11–8, 5–11)ರಿಂದ ಸೋತರು. ಮಹಿಳಾ ವಿಭಾಗದಲ್ಲಿ ದಿಯಾ ಮತ್ತು ಯಶಸ್ವಿನಿ ಘೋರ್ಪಡೆ ಜೋಡಿ ಆಸ್ಟ್ರೇಲಿಯಾದ ಮಿನ್ಹ್ಯೂಂಗ್ ಜೀ ಮತ್ತು ಕಾನ್ಸ್ಟಾಂಟಿನಾ ಸೈಹೋಗಿಯೋಸ್ ವಿರುದ್ಧ 3–1 (6–11, 11–5, 11–6, 11–8) ಅಂತರದಲ್ಲಿ ಜಯಗಳಿಸಿ 16ರ ಸುತ್ತು ತಲುಪಿತು. ಮಿಶ್ರ ಡಬಲ್ಸ್‌ನಲ್ಲಿ, ಮೊದಲ ಸುತ್ತಿನಲ್ಲಿ ಬೈ ಪಡೆದ ಆರನೇ ಶ್ರೇಯಾಂಕದ ದಿಯಾ ಮತ್ತು ಮನುಷ್ ಶಾ ಜೋಡಿ, ಸಿಂಗಾಪುರದ ವೈಲ್ಡ್‌ಕಾರ್ಡ್‌ಗಳಾದ ಪಾಂಗ್ ಕೊಯೆನ್ ಮತ್ತು ಝೆಂಗ್ ಜಿಯಾನ್ ಅವರನ್ನು 3–0 (11–8, 11–4, 11–5) ಅಂತರದಲ್ಲಿ ಸೋಲಿಸಿ ಕ್ವಾರ್ಟರ್ ಫೈನಲ್‌ಗೆ ತಲುಪಿತು.

ಇಂದಿನಿಂದ ಕಬಡ್ಡಿ ಕಬಡ್ಡಿ...
• **ವಡೋದರ:**72 ನೇ ಸೀನಿಯರ್ ರಾಷ್ಟ್ರೀಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್ ಪಂದ್ಯಾವಳಿಯು ಮಂಗಳವಾರದಿಂದ ಶುರವಾಗಲು ಸಜ್ಜಾಗಿದೆ.

ವಡೋದರದ ಸಾಮಾ ಒಳಾಂಗಣ ಸಂಕೀರ್ಣ ಪಂದ್ಯಾವಳಿಯನ್ನು ಆಯೋಜಿಸುವುದಕ್ಕೆ ಸಜ್ಜಾಗಿದೆ. ಚಾಂಪಿಯನ್‌ಶಿಪ್‌ನಲ್ಲಿ ದೇಶದ 31 ಬಲಿಷ್ಠ ತಂಡಗಳು ಭಾಗವಹಿಸಲಿದ್ದು, ಸುಮಾರು 400 ಆಟಗಾರರು ಪ್ರಶಸ್ತಿಯನ್ನು ಪಡೆಯಲು ತೀವ್ರ ಸೆಣಸಾಟ ನಡೆಸಲಿದ್ದಾರೆ. ಫೈನಲ್ ಪಂದ್ಯ 27ರಂದು ನಡೆಯಲಿದೆ. ಅಮೆಚೂರ್ ಕಬಡ್ಡಿ ಫೆಡರೇಶನ್ ಆಫ್ ಇಂಡಿಯಾ (ಎಕೆಎಫ್‌ಐ) ಆಶ್ರಯದಲ್ಲಿ ಆಯೋಜಿಸಲಾಗಿರುವ ಈ ಪಂದ್ಯಾವಳಿಯಲ್ಲಿ ಅನುಭವಿಗಳು ಮತ್ತು ಉದಯೋನ್ಮುಖ ತಾರೆಗಳು ಭಾಗವಹಿಸುತ್ತಿರುವುದು ಪಂದ್ಯಾವಳಿಗೆ ರೋಚಕ ಜೀವ ತುಂಬಿದೆ. ಇನ್ನೂ ವಿಶೇಷವಾಗಿ ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಸೀಸನ್ 12 ರಲ್ಲಿ ಅಸಾಧಾರಣ ಪ್ರದರ್ಶನ ನೀಡಿದ ಆಟಗಾರರೂ ಸಹ ಇಲ್ಲಿ ಆಡಲಿದ್ದಾರೆ.

ಯಾರ್ಯಾರು ಬಲಿಷ್ಠರು?: ಪಿಕೆಎಲ್ ಸೀಸನ್ 12ರ ಅಗ್ರ ಮೂರು ರೈಡರ್‌ಗಳಲ್ಲಿ ಅಯಾನ್ ಲೋಹ್ಚಾಬ್ (ಹರಿಯಾಣ) ಪರಿಣಾಮಕಾರಿಯಾದ 316 ರೈಡ್ ಪಾಯಿಂಟ್‌ಗಳನ್ನು ಗಳಿಸಿದಾರೆ, ದೇವಾಂಕ್ ದಲಾಲ್ (ಸರ್ವೀಸಸ್) 271 ರೈಡ್ ಪಾಯಿಂಟ್‌ಗಳನ್ನು ಗಳಿಸಿದ್ದಾರೆ ಹಾಗೂ ಭರತ್ ಹೂಡಾ 230 ರೈಡ್ ಪಾಯಿಂಟ್‌ಗಳೊಂದಿಗೆ ಸೀಸನ್ ಅನ್ನು ಕೊನೆಗೊಳಿಸಿದ್ದಾರೆ. ಕಳೆದ ಋತುವಿನಲ್ಲಿ ದಬಾಂಗ್ ದೆಹಲಿ ಪ್ರಶಸ್ತಿ ಗೆಲ್ಲುವಲ್ಲಿ ಪ್ರಮುಖ ಕಾರಣವಾಗಿದ್ದ ಆಶು ಮಲಿಕ್ ರೈಲ್ವೆಯನ್ನು ಪ್ರತಿನಿಧಿಸಲಿದ್ದು, ಅರ್ಜುನ್ ದೇಶ್ವಾಲ್ ಮತ್ತೊಮ್ಮೆ ಉತ್ತರ ಪ್ರದೇಶದ ನಾಯಕರಾಗಿ ತಂಡವನ್ನು ಮುನ್ನಡೆಸಲಿದ್ದಾರೆ. ಬೆಂಗಳೂರು ಬುಲ್ಸ್ ಪರ 64 ಟ್ಯಾಕಲ್ ಪಾಯಿಂಟ್‌ಗಳನ್ನು ದಾಖಲಿಸಿದ ಮತ್ತು ಪಿಕೆಎಲ್ 12 ರಲ್ಲಿ ಋತುವಿನ ಹೊಸ ಯುವ ಆಟಗಾರ ಎಂದು ಹೆಸರಿಸಲ್ಪಟ್ಟ ದೀಪಕ್ ಶಂಕರ್ (ತಮಿಳುನಾಡು) ಅವರಂತಹ ಉದಯೋನ್ಮುಖ ಪ್ರತಿಭೆಗಳ ಮೇಲೆಯೂ ಈ ಪಂದ್ಯಾವಳಿ ಬೆಳಕು ಚೆಲ್ಲಲಿದೆ. ಮಹಾರಾಷ್ಟ್ರವನ್ನು ಪುಣೇರಿ ಪಲ್ಟನ್‌ನ ರೈಡರ್ ಆದಿತ್ಯ ಶಿಂಧೆ ಪ್ರತಿನಿಧಿಸಲಿದ್ದು, ಅವರು ಐದು ಸೂಪರ್ ರೈಡ್‌ಗಳೂ ಸೇರಿದಂತೆ 159 ರೈಡ್ ಪಾಯಿಂಟ್‌ಗಳನ್ನು ಸಂಗ್ರಹಿಸಿದ್ದಾರೆ. 65 ಟ್ಯಾಕಲ್ ಪಾಯಿಂಟ್‌ಗಳು ಮತ್ತು ಐದು ಹೈ 5 ಗಳ ಜೊತೆ ಅದ್ಭುತವಾದ ಪ್ರದರ್ಶನ ನೀಡಿದ ಹರಿಯಾಣದ ಡಿಫೆಂಡರ್ ಆದ ನಿತೇಶ್ ಕುಮಾರ್, ಭರವಸೆಯ ಆಟಗಾರರಾದ ಅನಿಲ್ (ಹಿಮಾಚಲ ಪ್ರದೇಶ) ಮತ್ತು ಉದಯ್ ಪಾರ್ತೆ (ಮಧ್ಯಪ್ರದೇಶ) ಕೂಡ ಚಾಂಪಿಯನ್‌ಶಿಪ್‌ನ ಭಾಗವಾಗಲಿದ್ದಾರೆ.



ರಾಷ್ಟ್ರೀಯ ಕಬಡ್ಡಿ ಚಾಂಪಿಯನ್ ಶಿಪ್

ಹೆಟ್ಮೇರ್ ಅಬ್ಬರಕ್ಕೆ ಬೆಚ್ಚಿದ ಜಿಂಬಾಬ್ವೆ
• **ಮುಂಬೈ:**ಶ್ರೀಲಂಕಾ, ಆಸ್ಟ್ರೇಲಿಯಾ ಅಂತಹ ತಂಡಗಳೆದುರು ಎಲ್ಲಿಲ್ಲದ ಸಾಹಸ ಪ್ರದರ್ಶಿಸಿದ ಜಿಂಬಾಬ್ವೆ ವಿಂಡೀಸ್ ವಿರುದ್ಧ ಮಂಕಾಯಿತು. ಇದರೊಂದಿಗೆ ಜಿಂಬಾಬ್ವೆ ವಿಶ್ವಕಪ್‌ನಲ್ಲಿ ಮೊದಲ ಸೋಲು ಕಂಡಿದೆ.

ಅಜೇಯ ಗೆಲುವಿನೋಟದಿಂದ ಅಚ್ಚರಿ ಮೂಡಿಸಿದ್ದ ಜಿಂಬಾಬ್ವೆಯ ಆಟ ಸೂಪರ್-8 ಮೊದಲ ಪಂದ್ಯದಲ್ಲಿ ನಿಂತಿತು. ಬಂದ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ದಂಡಿಸಿದ ಶಿಮ್ರಾನ್ ಹೆಟ್ಮೇರ್, ವಿಂಡೀಸ್ ತಂಡವನ್ನು ದಾಖಲೆ ಮೊತ್ತದತ್ತ ದೂಗಿದರು. ರೋಮನ್ ಪೋವೆಲ್ ಮತ್ತು ರುದರ್ ಫೋರ್ಡ್ ಅದಕ್ಕಿಷ್ಟು ಕಿಕ್ ನೀಡಿದ ನಂತರ ಮೊದಲು ಬ್ಯಾಟಿಂಗ್ ಮಾಡಿರುವ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ ಬರೋಬ್ಬರಿ 254 ರನ್ ಚಚ್ಚಿತು. ಗುರಿ ಬೆನ್ನತ್ತಿದ ಜಿಂಬಾಬ್ವೆ 147 ರನ್‌ಗಳಿಗೆ ಪತನಗೊಂಡಿತು. ಹೆಟ್ಮೇರ್ ಪಂದ್ಯದ ರೂವಾರಿಯಾದರು, ಬೌಲಿಂಗ್‌ನಲ್ಲಿ ವಿಂಡೀಸ್ ತಂಡದ ಗುಡಕೇಶ್ 4 ವಿಕೆಟ್ ಪಡೆದು ಮಿಂಚಿದರು. ಈ ಗೆಲುವಿನೊಂದಿಗೆ ವಿಂಡೀಸ್ ಪಡೆಯ ಸೆಮಿ ಅವಕಾಶಗಳು ಹೆಚ್ಚಿವೆ. ಭಾರತಕ್ಕೆ ಭಾರೀ ಹಿನ್ನಡೆಯಾಗಿದೆ.

ವಿಂಡೀಸ್ ದಾಖಲೆ: ಬರೋಬ್ಬರಿ 254 ರನ್ ಬಾರಿಸಿದ ವೆಸ್ಟ್ ಇಂಡೀಸ್ ದಾಖಲೆ ಮಾಡಿತು. ಟಿ20 ವಿಶ್ವಕಪ್ ಇತಿಹಾಸದಲ್ಲಿ ತನ್ನ ಅತಿ ಹೆಚ್ಚು ರನ್ ಬಾರಿಸಿದ ದಾಖಲೆ ಮಾಡಿದ ವಿಂಡೀಸ್, ವಿಶ್ವಕಪ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಗುರಿ ನೀಡಿದ ಎರಡನೇ ತಂಡ ಎನಿಸಿತು. ಇದಲ್ಲದೆ, ಸಿಕ್ಸರ್ ಬಾರಿಸುವುದರಲ್ಲಿ ಮತ್ತು, 19 ಬಾಲ್‌ಗಳಲ್ಲಿ ವೇಗವಾಗಿ ಅರ್ಧ ಶತಕ ಬಾರಿಸುವುದರಲ್ಲಿ ಹೆಟ್ಮೇರ್ ಕೂಡ ದಾಖಲೆ ಮಾಡಿದ್ದಾರೆ.



ತತ್ತರಿಸಿದ ಜಿಂಬಾಬ್ವೆ
ಗುರಿ ಬೆನ್ನತ್ತಿದ ಜಿಂಬಾಬ್ವೆ ಮೊದಲಿನಿಂದಲೂ ತತ್ತರಿಸಿತು. 3ನೇ ಕ್ರಮಾಂಕದಲ್ಲಿ ಬಂದ ಮೇಯ್ಸ್ 28 ರನ್ ಗಳಿಸಿದ್ದು ಬಿಟ್ಟರೆ ಇನ್ನುಳಿದ ಬ್ಯಾಟರ್‌ಗಳು ಆಘಾತ ಎದುರಿಸಿದರು. ಕೊನೆಯಲ್ಲಿ ಇವಾನ್ಸ್ 43 ರನ್ ಗಳಿಸಿ ಅಂತರ ಕುಗ್ಗಿಸಿದರು. ವಿಂಡೀಸ್ ಪರ ಗುಡಕೇಶ್ 4, ಹೋಸೈನ್ 3 ವಿಕೆಟ್ ಕಿತ್ತರು.

ಸ್ಫೋಟಕ ಆರಂಭ
ಮೊದಲು ಬ್ಯಾಟಿಂಗ್‌ಗಿಳಿದ ವಿಂಡೀಸ್‌ಗೆ ಆಕ್ರಮಣಕಾರಿ ಆರಂಭ ಸಿಗಲಿಲ್ಲ. 12 ಬಾಲ್‌ಗಳಲ್ಲಿ 9 ರನ್ ಗಳಿಸಿದ್ದ ಕಿಂಗ್ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಜಿಂಬಾಬ್ವೆ ಸಂಭ್ರಮ ನಿಂತಿತು, ಹೆಟ್ಮೇರ್ ಆಟ ಶುರುವಾಯಿತು. ಸಿಂಗಲ್‌ಗಳ ಮೂಲಕ ಸೆಟ್ ಆಗಿ ನಂತರ ಬೌಂಡರಿ ಬಾರಿಸುವ ಔಪಚಾರಕತೆಗೆ ಬೀಳಲ ಇಲ್ಲ. ಬರುವ ಎಲ್ಲ ಬಾಲ್‌ಗಳನ್ನು ಸಿಕ್ಸರ್‌ಗಟ್ಟುತ್ತೇನೆ ಎಂಬ ಅವರ ಆಕ್ರಮಣಕಾರಿ ಮನಸ್ಥಿತಿ ಸ್ಪಷ್ಟವಾಗಿ ಗೋಚರಿಸಿತು. ಬಾನಿನೆತ್ತರಕ್ಕೆ ಬಾಲ್ ತಾಕಿದ ಅವರು 7 ಬೌಂಡರಿ ಮತ್ತು 7 ಸಿಕ್ಸರ್ ಬಾರಿಸಿದರು. 34 ಬಾಲ್‌ಗಳಲ್ಲಿ 85 ರನ್ ಸಿಡಿಸಿದರು. ಅವರಿಗೆ ಮಧ್ಯಮ ಕ್ರಮಾಂಕದಲ್ಲಿ ರೋಮಾನ್ ಪೋವೆಲ್ ಸಾಥ್ ಸಿಕ್ಕಿತು. ಜಿಂಬಾಬ್ವೆ ತಂಡವನ್ನು ಇನ್ನಷ್ಟು ದಂಡಿಸಿದ ಅವರು, 35 ಬಾಲ್‌ಗಳಲ್ಲಿ 59 ರನ್ ಗಳಿಸಿದರು. ಅಂತಿಮದಲ್ಲಿ ಸ್ಕೋರ್ ಹೆಚ್ಚಿಸುವ ಜವಾಬ್ದಾರಿ ಹೊತ್ತಿಕೊಂಡ ರುದರ್‌ಫೋರ್ಡ್ 13 ಬಾಲ್‌ಗಳಲ್ಲಿ 31 ರನ್ ಬಾರಿಸಿದರು.

ಹೀಗಿದೆ ಭಾರತ ಸೆಮಿ ಲೆಕ್ಕಾಚಾರ
• **ಮುಂಬೈ:** ಬಂದ ತಂಡವನ್ನೆಲ್ಲಾ ಸೋಲಿಸುತ್ತಾ ನಾಗಾಲೋಟದೊಂದಿಗೆ ವಿಶ್ವಚಾಂಪಿಯನ್ ಆಗಿ ಮೆರೆಯುತ್ತಿದ್ದ ಭಾರತ ತಂಡವನ್ನು ಕಟ್ಟಿಹಾಕಿದ ದ.ಆಫ್ರಿಕಾ ತಂಡವು ವಿಶ್ವಕಪ್‌ನಲ್ಲಿನ ಗೆಲುವಿನೋಟಕ್ಕೆ ತಡೆಯೊಡ್ಡಿದೆ. ಇದು ತಡೆಯೊಡ್ಡಿರುವುದಕ್ಕಷ್ಟೇ ಸೀಮಿತವಾಗಿರದೆ, ಪಂದ್ಯಾವಳಿಯಲ್ಲಿ ಹೊಸ ತಿರುವು ನೀಡಿದೆ. ರೋಚಕ ತಿರುವು, ಬಲಿಷ್ಠ ಭಾರತ ಹಾಲಿ ಚಾಂಪಿಯನ್‌ಗಳನ್ನು ಹೊರಹಾಕಬಲ್ಲ ತಿರುವಾಗಿದೆ. ಪಾಕಿಸ್ತಾನ ವಿರುದ್ಧ ಹೊರತು ಪಡಿಸಿ ಒಂದೂ ಪಂದ್ಯದಲ್ಲಿಯೂ ಸಮತೋಲಿತ ಬ್ಯಾಟಿಂಗ್ ಮಾಡದಿದ್ದರೂ ಒಮ್ಮೆ ಸೂರ್ಯ, ಒಮ್ಮೆ ಕಿಶನ್, ಒಮ್ಮೆ ದುಬೆ ಹೀಗೆ ಒಬ್ಬೊಬ್ಬರ ಸಹಾರೆ ಪಡೆದ ಭಾರತ ಎಂದಿನಂತೆ ಅಜೇಯವಾಗಿತ್ತು. ಯಾವುದೇ ತಂಡವನ್ನು ಸೋಲಿಸಬಲ್ಲ ಆತ್ಮವಿಶ್ವಾಸವನ್ನು ಹೊಂದಿ, ಸೆಮಿಗೆ ಲೀಲಾಜಾಲವಾಗಿ ಲಗ್ಗೆ ಹಾಕಲು ಅಣಿಯಾಗಿತ್ತು. ಆದರೆ ಭಾನುವಾರದ ಪಂದ್ಯವನ್ನು ಎಲ್ಲ ಲೆಕ್ಕಾಚಾರಗಳನ್ನೂ ತಿರುವುಸಿದೆ. ಭಾರತ ಸೆಮಿ ಲಗ್ಗೆಯ ಕನಸಿಗೆ ಬರೆ ಎಳೆದಿದೆ. ಹಾಗಿದ್ದರೆ ಭಾರತ ಸೆಮಿಗೇರಬೇಕಾದರೆ ಏನು ಮಾಡಬೇಕು?

ಎರಡು ರೀತಿ ಹಾದಿ: ಭಾರತಕ್ಕೆ ಸೆಮಿ ಅವಕಾಶ ಅಸಾಧ್ಯವಾಗಿಲ್ಲವಾದರೂ ಕಷ್ಟ. ಅವಲಂಬನೆ ಕೂಡ ಎದುರಿಸುವ ಹಾದಿಯಲ್ಲಿ ಎರಡೂ ಪಂದ್ಯಗಳನ್ನು ಗೆಲ್ಲಲೇಬೇಕಿದೆ ಭಾರತ. ಅದರಲ್ಲೂ ಹೀಗಾಗಲೇ ಬೇಕು.

ಮೊದಲನೇ ಹಾದಿ: ದ.ಆಫ್ರಿಕಾ ತನಗಿರುವ ಎರಡೂ ಪಂದ್ಯಗಳನ್ನು ಗೆದ್ದುಬಿಟ್ಟರೆ ಮುಗಿತು. ಭಾರತಕ್ಕೆ 2 ಗೆಲುವುಗಳು ಸೆಮಿ ಹಾದಿ ತೋರಿಸಿಬಿಡುತ್ತವೆ. ಹೇಗೆಂದರೆ, ಒಂದು ಗುಂಪಿನಲ್ಲಿ 4 ತಂಡಗಳಿವೆ. ದ.ಆಫ್ರಿಕಾ ಮೂರೂ ಪಂದ್ಯಗಳನ್ನು ಗೆದ್ದುಬಿಟ್ಟರೆ, ಉಳಿದ ತಂಡಗಳೆಲ್ಲ ಕನಿಷ್ಠ ಒಂದು ಪಂದ್ಯ ಸೋಲುತ್ತವೆ. ಭಾರತ ಎರಡು ಪಂದ್ಯಗಳನ್ನು ಗೆದ್ದರೆ, ಜಿಂಬಾಬ್ವೆ, ವಿಂಡೀಸ್ ಸೋಲಿನ ಸಂಖ್ಯೆ ಎರಡಾಗುತ್ತವೆ. ಅಂಕ ಹೆಚ್ಚಿಸಿಕೊಳ್ಳುವ ಭಾರತ ಸೆಮಿಗೇರುತ್ತದೆ. ಆದು ತೀರಾ ಸರಳವಾದ ಕೆಲಸ.

ಎರಡನೇಯದ್ದು: ಭಾರತಕ್ಕೆ ಕಷ್ಟವೆನ್ನಿಸುವ ಹಾದಿ ಇದೆ. ಒಂದು ವೇಳೆ ದ.ಆಫ್ರಿಕಾ ಒಂದು ಪಂದ್ಯದಲ್ಲಿ ಸೋತುಬಿಟ್ಟರೆ, ಅದೂ ಜಿಂಬಾಬ್ವೆ ಹಾಗೂ ವಿಂಡೀಸ್ ಪಂದ್ಯ ವಿಜೇತರೊಂದಿಗೆ. ಅಂದರೆ ಭಾರತಕ್ಕೆ ಕಷ್ಟವಾಗಬಹುದು. ಏಕೆಂದರೆ ಜಿಂಬಾಬ್ವೆ-ವಿಂಡೀಸ್ ಪಂದ್ಯದ ವಿಜೇತರೂ ಕೂಡ 4 ಅಂಕಗಳನ್ನು ಪಡೆಯುತ್ತಾರೆ. ಅವಾಗ ರನ್‌ರೇಟ್ ನಿರ್ಧರಿಸಬೇಕಾಗುತ್ತದೆ.

ದ.ಆಫ್ರಿಕಾ ವಿರುದ್ಧ ಸೋಲಿನಿಂದ ಸೂರ್ಯ ಪಡೆಗೆ ಬಲವಾದ ಪೆಟ್ಟು

ಭಾರತ ಮೂಲದವರ ಬಗ್ಗೆ ಮೋದಿ ಮೆಚ್ಚುಗೆ
▸▸ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಬೇರೆ ದೇಶಗಳನ್ನು ಪ್ರತಿನಿಧಿಸುತ್ತಿರುವವರ ಬಗ್ಗೆ ಪ್ರಸ್ತಾಪ
▸▸ ಮನ್ ಕಿ ಬಾತ್‌ನಲ್ಲಿ ಹೊಗಳಿದ ಪ್ರಧಾನಿ ಮೋದಿ

• **ಹೊಸದಿಲ್ಲಿ:** ಟಿ20 ವಿಶ್ವಕಪ್‌ನಲ್ಲಿ ಭಾರತ ಮೂಲದ ವರದ್ದೇ ದರ್ಬಾರ್ ನಡೆಯುತ್ತಿರುವ ಮಧ್ಯೆ ಪ್ರಧಾನಿ ನರೇಂದ್ರ ಮೋದಿ, ಬಿಸಿಸಿಐ ಅಲ್ಲದ ಸಂಸ್ಥೆಗಳನ್ನು ಪ್ರತಿನಿಧಿಸುತ್ತಿರುವ ಆಟಗಾರರನ್ನು ಪಾಡಿದ್ದಾರೆ.

ಟಿ20 ವಿಶ್ವಕಪ್ ಪಂದ್ಯಾವಳಿ ಭಾರತ ಹಾಗೂ ಶ್ರೀಲಂಕಾದಲ್ಲಿ ನಡೆಯುತ್ತಿದೆ. ಪಂದ್ಯಗಳು ಸಹಸ್ರಾರು ಅಭಿಮಾನಿಗಳನ್ನು ರಂಜಿಸುತ್ತಿವೆ. ಆಟಗಾರರು ಅಭಿಮಾನಿಗಳ ಚಿತ್ತ ಕದಿಯುತ್ತಿದ್ದಾರೆ. ಆಕರ್ಷಣೆಯಾಗುತ್ತಿದ್ದಾರೆ. ಒಮ್ಮೆ ಬ್ಯಾಟಿಂಗ್ ಮೂಲಕ, ಒಮ್ಮೆ ಬೌಲಿಂಗ್ ಮೂಲಕ ಒಮ್ಮೆ ಕ್ಯಾಚ್‌ಗಳ ಮೂಲಕ ಜನರ ಮನದಲ್ಲಿ ಬೆಸೆದು ಹೋಗುತ್ತಾರೆ. ಬೇರೆ ಬೇರೆ ದೇಶಗಳ ಆಟಗಾರರ ಆಟವೂ ನಮ್ಮ ದೇಶದಲ್ಲಿ ಚರ್ಚೆಗೆ ಬರುತ್ತದೆ. ಈ ಬಾರಿ ಹಾಗೇ ಕೇಳಲು ಬಂದ ಹೆಸರುಗಳನ್ನು ಗಮನಿಸಿದಾಗ ನಮ್ಮ ದೇಶದವರೇ ಆಡುತ್ತಿರುವುದು ಗಮನಕ್ಕೆ ಬರುತ್ತಿದೆ. ಮನ್ ಕಿ ಬಾತ್‌ನಲ್ಲಿ ಈ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿ, ನಾವು ವಿಶ್ವಕಪ್ ಅನ್ನು ನೋಡುತ್ತೇವೆ. ಅಲ್ಲಿ ಬೇರೇ ದೇಶದ ಜೆರ್ಸಿಯಲ್ಲಿ ಆಟಗಾರರೊಬ್ಬರು ಮಿಂಚುತ್ತಾರೆ. ಹೆಸರು ಗಮನಿಸಿದಾಗ ಇವರು ನಮ್ಮ ದೇಶದವರೇ ಅನ್ನಿಸುತ್ತದೆ.

40 ಭಾರತೀಯರನ್ನು ಶ್ಲಾಘಿಸಿದ ಪ್ರಧಾನಿ ಮೋದಿ: ಈ ಪಂದ್ಯಾವಳಿಯಲ್ಲಿ ಭಾರತೀಯ ಮೂಲದ 40 ಆಟಗಾರರು ವಿವಿಧ ತಂಡಗಳನ್ನು ಪ್ರತಿನಿಧಿಸಿದರು. ಹಲವಾರು ಭಾರತೀಯ ಮೂಲದ ಆಟಗಾರರು ತಮ್ಮ ಕರ್ಮ ಭೂಮಿಯನ್ನು ಪ್ರತಿನಿಧಿಸುವುದನ್ನು ನೋಡುವುದಕ್ಕೆ ಹೆಮ್ಮೆಯನ್ನಿಸುತ್ತದೆ ಎಂದರು. ಕೆನಡಾ ತಂಡವು ಅತಿ ಹೆಚ್ಚು ಭಾರತೀಯ ಮೂಲದ ಆಟಗಾರರನ್ನು ಹೊಂದಿದೆ. ಆ ತಂಡದ ನಾಯಕ ದಿಲ್‌ಪ್ರೀತ್ ಬಾಜ್ವಾ ಪಂಜಾಬ್‌ನ ಗುರುದಾಸ್ಪುರದವರು. ನವನೀತ್ ಧಲಿವಾಲ್ ಚಂಡೀಗಢದವರು. ಭಾರತೀಯ ಮೂಲದವರ ದೊಡ್ಡ ಪಟ್ಟಿಯನ್ನೇ ಗಮನಿಸಿದೆ. ಹೆಮ್ಮೆ ಎನಿಸಿತು ಎಂದರು. ಯುಎಸ್‌ಎ ತಂಡದಲ್ಲಿ ನಾಯಕ ಮೋನಾಂಕ್ ಪಟೇಲ್, ಸೌರಭ್ ನೇತ್ರವಲ್ಕರ್ ಮತ್ತು ಹರ್‌ಪ್ರೀತ್ ಸಿಂಗ್ ಸೇರಿದಂತೆ ಭಾರತದ ದೇಶೀಯ ಕ್ರಿಕೆಟ್‌ನ ಅನೇಕ ಪ್ರತಿಭಾನ್ವಿತ ಆಟಗಾರರು ಇದ್ದಾರೆ. ಒಮನ್ ತಂಡದಲ್ಲಿರುವ ಹಲವಾರು ಭಾರತೀಯ ಮೂಲದ ಆಟಗಾರರ ಬಗ್ಗೆಯೂ ಪ್ರಧಾನಿ ಪ್ರಸ್ತಾಪಿಸಿದರು, ಇತರ ದೇಶಗಳಲ್ಲಿ ಕ್ರಿಕೆಟ್ ಗುಣಮಟ್ಟವನ್ನು ಹೆಚ್ಚಿಸಲು ಅವರು ಕೊಡುಗೆ ನೀಡುತ್ತಿರುವ ರೀತಿಗೆ ಹೆಮ್ಮೆ ವ್ಯಕ್ತಪಡಿಸಿದರು.

ತನ್ವಿ, ಶ್ರೀಕಾಂತ್ ಮೇಲೆ ಭಾರೀ ನಿರೀಕ್ಷೆ
• **ಹೊಸದಿಲ್ಲಿ:** ಮಂಗಳವಾರದಿಂದ ನಡೆಯಲಿರುವ ಬಹು ನಿರೀಕ್ಷಿತ ಜರ್ಮನ್ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಅನುಭವಿ ಆಟಗಾರ, ಭರವಸೆಯ ಕಿಡಂಬಿ ಶ್ರೀಕಾಂತ್ ಮತ್ತು ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ಬೆಳ್ಳಿ ವಿಜೇತೆ ಉದಯೋನ್ಮುಖ ಸ್ಟಾರ್ ತನ್ವಿ ಶರ್ಮ ಭಾರತೀಯರಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದಾರೆ.


ಮಲೇಷ್ಯಾ ಮಾಸ್ಟರ್ಸ್ ಹಾಗೂ ಸೈಯದ್ ಮೋದಿ ಇಂಟರ್‌ನ್ಯಾಷಲ್ ಪಂದ್ಯಾವಳಿಯಲ್ಲಿ ಭರ್ಜರಿ ಪ್ರದರ್ಶನ ತೋರಿಸುವುದರೊಂದಿಗೆ 2025 ರಲ್ಲಿ ಮಿಂಚಿರುವ ಕಿಡಂಬಿ ಶ್ರೀಕಾಂತ್ ಅವರು ಮಿಂಚಲು ಸಜ್ಜಾಗಿದ್ದಾರೆ. ತೀರಾ ಅಸಾಮಾನ್ಯ ಪ್ರದರ್ಶನದೊಂದಿಗೆ ಕಂಬ್ಯಾಕ್ ಮಾಡಿ ಗೆಲ್ಲುವುದು ಅವರ ರೂಢಿ. ಎದುರಾಳಿ ಮೇಲೆ ವೇಗವಾಗಿ ಪ್ರಬಲ್ಯ ಸಾಧಿಸುವುದು ಅವರ ಶಕ್ತಿ. ಇವರ ಈ ಎಲ್ಲ ಚಾಣಾಕ್ಷ ಪ್ರದರ್ಶನ ಭಾರತದ ಅಭಿಮಾನಿಗಳ ಆಸೆ ಹೆಚ್ಚಿಸಿದೆ. ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಫೈಟ್ ನಡೆಸಲಿದ್ದಾರೆ.

ತನ್ವಿ ಮೇಲೆ ಎಲ್ಲರ ಕಣ್ಣು: ಷಟ್ಲರ್‌ಗಳ ಹುಮ್ಮಸ್ಸನ್ನು ಕಾಯ್ದುಕೊಂಡಿದ್ದಲ್ಲದೆ, ಅಭಿಮಾನಿಗಳ ನಿರೀಕ್ಷೆಯನ್ನು ಮಹಿಳೆಯರ ವಿಭಾಗದಲ್ಲಿ ತನ್ವಿ ಶರ್ಮ ಹೆಚ್ಚಿಸಿದ್ದಾರೆ. ಇತ್ತೀಚಿನ ಟೂರ್ನಿಗಳಲ್ಲಿ ಭಾರತ ಕಡೆಯಿಂದ ದೊಡ್ಡ ಸವಾಲು ನೀಡುವ ಆಟಗಾರ್ತಿ ಅನ್ನಿಸಿಕೊಂಡಿರುವ ಅವರು, ಸೂಪರ್-500, ಸೂಪರ್-300 ಪಂದ್ಯಗಳಲ್ಲೂ ವಿಶೇಷ ಪ್ರದರ್ಶನಗಳೊಂದಿಗೆ ಮಿಂಚಿ ಮೆರೆದಿದ್ದಾರೆ. ಅವರೀಗ ಉದಯೋನ್ಮುಖ ಆಟಗಾರ್ತಿ ಅಲ್ಲದೆ, ಸ್ಟಾರ್ ಆಟಗಾರ್ತಿ ಕೂಡ ಹೌದು. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಭಾಗವಹಿ ಸಲಿರುವ ಅವರು, ಮಲೇಷ್ಯಾದ ವೋಂಗ್ ಲಿಂಗ್ ಚಿಂಗ್ ಅವರನ್ನು ಎದುರಿಸಲಿದ್ದಾರೆ. ಭಾರತದ ಮತ್ತೋರ್ವ ಆಟಗಾರ್ತಿ ಮಾಳ್ವಿಕಾ ಬನ್ಸೋದ್ ತಮ್ಮ ವಾರ್ಷಿಕ ಆರನೇ ಟೂರ್ನಿ ಆಡುವುದಕ್ಕೆ ಅಣಿಯಾಗಿದ್ದಾರೆ. ಜೂನ್‌ನಲ್ಲಿ ನಡೆದಿದ್ದ ಇಂಡೋನೇಷ್ಯಾ ಓಪನ್ ಪಂದ್ಯಾವಳಿಯ ವೇಳೆ ತೀರಾ ಹಿನ್ನಡೆ ತಂದುಕೊಟ್ಟಿದ್ದ ಮೊಣಕಾಲು ಗಾಯ ಅವರನ್ನು ಬ್ಯಾಡ್ಮಿಂಟನ್‌ನಿಂದ ತೀರಾ ದೂರವಿಟ್ಟಿತ್ತು. ಮೊದಲ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಹೋಜ್‌ಮಾರ್ಕ್ ಅವರನ್ನು ಎದುರಿಸಲಿದ್ದಾರೆ. ಇನ್ನೊಂದೆಡೆ ಇಶಾರಾಣಿ ಥೈಲ್ಯಾಂಡ್‌ನ ಕೊಚುವೊಂಗ್ ಅವರನ್ನು ಎದುರಿಸಲಿದ್ದಾರೆ.



ಇನ್ನುಳಿದ ಪಂದ್ಯಗಳು:ಪುರುಷರ ಸಿಂಗಲ್ಸ್ ಡ್ರಾ: ಕಿರಣ್ ಜಾರ್ಜ್ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಅವರನ್ನು ಎದುರಿಸಲಿದ್ದಾರೆ, ತರುಣ್ ಮನ್ನೆಪಲ್ಲಿ ಚೈನೀಸ್ ತೈಪೆಯ ವಾಂಗ್ ತ್ಸು ವೀ ಅವರನ್ನು ಎದುರಿಸಲಿದ್ದಾರೆ. ಅರ್ಹತಾ ಸುತ್ತಿನಲ್ಲಿ, ಆಕರ್ಷಿ ಕಶ್ಯಪ್ ಚೈನೀಸ್ ತೈಪೆಯ ಪೈ ಯು ಪೊ ಅವರನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ, ಭಾರತದ ಆಶ್ವಿನಿ ಭಟ್ ಮತ್ತು ಶಿಖಾ ಗೌತಮ್ ಜೋಡಿ ಚೈನೀಸ್ ತೈಪೆಯ ಹ್ಸು ಯಿನ್-ಹುಯಿ ಮತ್ತು ಲಿನ್ ಜಿಹ್ ಯುನ್ ಅವರನ್ನು ಎದುರಿಸಲಿದೆ.

ಪದಬಂಧ
▸▸ ರಾಜಾ ಸಂಗಮೇಶ ಹಿರೇಮಠ



5905

ಎಡದಿಂದ ಬಲಕ್ಕೆ
2.ಮಿಡಿತ–ಸ್ಪಂದನೆ (3)
5.ಪದಾರ್ಥ ತುಂಬಲು ಮಾಡಿದ ಸೆಣಬಿನ ದೊಡ್ಡ ಸಂಚಿ (4)
6.ಕಣದ ನಡುವೆ ಹಸ್ತಕವಚವಿದೆ (4)
7.ದಿಕ್ಕು ಮುಗಿದಂತೆ ಕಾಣುವ ಎಲ್ಲೆ (3)
8.ಸುಟ್ಟ ವಾಸನೆಯಿಲ್ಲಿ ತಿರುಗಿ ಬರುತ್ತಿದೆ (3)
10.ಆಭರಣ–ಪೂಜಾಸಾಮಗ್ರಿಗಾಗಿ ಬಳಸುವ ಲೋಹ (3)
12.ಪುರುಷವ್ಯಕ್ತಿಯನ್ನು ಹೀಗೆನ್ನುತ್ತೇವೆ (3)
15.ಜೀವನಕ್ಕೆ ಸರಿದಾರಿ ತೋರಿಸುವ ತತ್ವ (4)
16.ಅಪರಾಧ ತನಿಖೆ ಮಾಡುವ ಅಧಿಕಾರಿ (4)
17.ಅತ್ತಲೂ ಇಲ್ಲದ ಇತ್ತಲೂ ಇಲ್ಲದ ಸ್ಥಿತಿ (3)

ಮೇಲಿನಿಂದ ಕೆಳಕ್ಕೆ
1.ಇದು ಬೌದ್ಧರ ದೇವಾಲಯ (3)
2.ಭಗವಂತನು ಮಾಡುತ್ತಿರುವ ಒತ್ತಾಯ (4)
3.ಕರು ಒಳಗೊಂಡ ಆಕ್ಷೇಪಣೆ (4)
4.ಅಣ್ಣನು ಬೆಳೆಸುತ್ತಿರುವ ನಾಯಿಕೊಡೆ (3)
7.ಪಾವತಿಪತ್ರವಿಲ್ಲಿ ತಲೆಕೆಳಗಾಗಿದೆ (3)
9.ಇನ್ನೂ ಕರು ಹಾಕದ ಹಸು (3)
11.ಕೇಡಿಗೆ ಗುರಿಯಾದವನು ತಲೆಕೆಳಗಾಗಿದ್ದಾನೆ (4)
12. ಇದು ಸುವಾಸನೆಯುಳ್ಳ ಎಲೆ (4)
13.ವಸ್ತು–ಸರಕುಗಳನ್ನು ಶೇಖರಿಸಿಡುವ ಸ್ಥಳ (3)
14.ಮೊಗ್ಗು ಬಿರಿದು ಹೂವಾಗುವುದು (3)

5904 ಉತ್ತರ

ಎಡದಿಂದ ಬಲಕ್ಕೆ:
3.ಅಮರಮುನಿ 6.ಗರತಿ
7.ಜಟಾಧರ 8. ಕಂದ
9.ಸುತ 12.ನಾಕ 14.ಮಾನ
15.ಜನಮತ 17.ಗಾಯಕಾ
18.ಸರ್ಪಕಾವಲು

ಮೇಲಿನಿಂದ ಕೆಳಕ್ಕೆ :
1.ಜಗಜಗಿಸು 2.ಕ್ಷಿತಿಜ
4.ಮಧುರಸ್ವಪ್ನ
5.ನಿನಾದ 8.ಕಂಪನಾ
10.ತಪನ 11.ವನಜಭವ
13.ಕವಡೆಕಾಸು 14.ಮಾನಸ
16.ತಗಾದೆ

ಕಿರುಸುದ್ದಿ

ಅಧಿಕಾರ ಹಂಚಿಕೆ ವಿಚಾರ ಸಾರ್ವಜನಿಕ ಚರ್ಚೆಯ ವಸ್ತು ಆಗಬಾರದು: ಮೊಯ್ಲಿ

ಉಡುಪಿ: ಅಧಿಕಾರ ಹಂಚಿಕೆ ವಿಚಾರ ಸಾರ್ವಜನಿಕ ಚರ್ಚೆಯ ವಸ್ತು ಆಗಬಾರದು ಎಂದು ಸಲಹೆ ನೀಡುತ್ತೇನೆ. ಅನಿವಾರ್ಯ, ಅವಶ್ಯಕತೆ ಇದ್ದರೆ ಹೈಕಮಾಂಡ್ ಮತ್ತು ಕಾಂಗ್ರೆಸ್ ಶಾಸಕರು ತೀರ್ಮಾನ ಮಾಡಬೇಕೆ ಹೊರತು ಸಾರ್ವಜನಿಕವಾಗಿ ಮಾತನಾಡುವುದು ಸರಿಯಲ್ಲ.



ಇದರಿಂದ ಜನರಲ್ಲಿ ಅಭದ್ರತೆ ಮೂಡುತ್ತದೆ ಮತ್ತು ಸರಕಾರದ ಸುಭದ್ರತೆಗೆ ತೊಂದರೆ ಬರುತ್ತದೆ ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ತಿಳಿಸಿದ್ದಾರೆ. ಕಾರ್ಕಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರದಲ್ಲಿ ಯಾವುದೇ ಗೊಂದಲ ಇಲ್ಲ. ವೈಯಕ್ತಿಕವಾಗಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅಪ್ಪಿಕೊಳ್ಳಲಿ ಅಥವಾ ಮುನಿಸಿಕೊಳ್ಳಲಿ. ಜನರಿಗೆ ಬೇಕಾಗಿರುವುದು ಆಡಳಿತ. ಸಚಿವ ಸಂಪುಟ ಸಭೆ ವಾರ ವಾರ ಮತ್ತು ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿದೆ. ಒಂದು ವೇಳೆ ಇವರ ಮಧ್ಯೆ ಬಿಕ್ಕಟ್ಟು ಇದ್ದರೆ ಸಚಿವ ಸಂಪುಟ ಸಭೆ ಹೇಗೆ ನಡೆಯುತ್ತದೆ. ಬಹಳ ಸುಸೂತ್ರವಾಗಿ ಸಚಿವ ಸಂಪುಟ ಸಭೆ ನಡೆಯುತ್ತಿರುವುದೇ ಸರಕಾರದ ಸುಭದ್ರತೆಗೆ ಸಾಕ್ಷಿಯಾಗಿದೆ ಎಂದರು.

ಹೆಚ್ಚಿನ ಲಾಭಗಳಿಸುವ ಆಮಿಷ: ಮಹಿಳೆಗೆ 19.06 ಲಕ್ಷ ರೂ. ವಂಚನೆ

ಮಂಗಳೂರು: ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಗಳಿಸುವ ಆಮಿಷವೊಡ್ಡಿ ಮಹಿಳೆಯೊಬ್ಬರಿಗೆ 19.06 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ಉರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೂರುದಾರ ಮಹಿಳೆಯು ಸಾಫ್ಟೋನಿಕ್ ವೆಬ್‌ಸೈಟ್ ಹುಡುಕಾಡಿ ಎಪಿಕೆ ಫೈಲ್ ಡೌನ್ಲೋಡ್ ಮಾಡಿದ್ದರು. ಬಳಿಕ ಸಾಫ್ಟೋನಿಕ್ ಆ್ಯಪ್ ಬಳಸಿ ಬ್ಯಾಂಕ್ ಖಾತೆಯ ವಿವರ ನೀಡಿದ್ದರು. ಹೆಚ್ಚಿನ ಲಾಭದ ಉದ್ದೇಶದಿಂದ ಈ ಆ್ಯಪ್‌ನಲ್ಲಿರುವ ನಾನಾ ಕಂಪೆನಿಗಳಿಗೆ ಒಟ್ಟು 19,06,166 ಲಕ್ಷ ರು. ಹೂಡಿಕೆ ಮಾಡಿದ್ದರು. ಕೊನೆಗೆ ಮೋಸ ಹೋಗಿರುವ ಅರಿವಾಗಿ ಉರ್ವ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮಧ್ಯ ವಯಸ್ಕನ ಅಪಹರಣ: ನಾಲ್ವರು ಆರೋಪಿಗಳ ಬಂಧನ

ಮಂಜೇಶ್ವರ: ಮಂಜೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯ ಪಾವೂರಿನಿಂದ ಅಪಹರಣಕ್ಕೀಡಾದ ಮಧ್ಯ ವಯಸ್ಕನನ್ನು ಪೊಲೀಸರು ರಕ್ಷಿಸಿದ್ದಾರೆ. ಅಪಹರಣ ಪ್ರಕರಣಕ್ಕೆ ಸಂಬಂಧಿಸಿ ನಾಲ್ಕು ಮಂದಿಯನ್ನು ಪೊಲೀಸ್ ಇನ್‌ಸ್ಪೆಕ್ಟರ್ ಅಜಿತ್‌ಕುಮಾರ್ ನೇತೃತ್ವದಲ್ಲಿ ಬಂಧಿಸಲಾಗಿದೆ. ಅಪಹರಣಕ್ಕೆ ಬಳಸಿದ ಎರಡು ಕಾರುಗಳನ್ನು ಕಸ್ಟಡಿಗೆ ತೆಗೆಯಲಾಗಿದೆ. ಮಂಜೇಶ್ವರ ಪಾವೂರು ನಿವಾಸಿಗಳಾದ ಅಬ್ದುಲ್ ಗಫೂರ್ (25), ಅಬ್ದುಲ್ ಅನಸ್ (27), ಮುಹಮ್ಮದ್ ಶಿಹಾಬ್ (40) ಮತ್ತು ಮುಹಮ್ಮದ್ ರಫೀಕ್ (40) ಬಂಧಿತರು. ಪಾವೂರು ಕೊಂಬಂಕುಳಿಯ ಸಾಮಿಯಾ ಕ್ವಾರ್ಟರ್ಸ್‌ನಲ್ಲಿ ವಾಸಿಸುವ ಅಬ್ದುಲ್ ರಹ್ಮಾನ್‌ನನ್ನು ಶುಕ್ರವಾರ ರಾತ್ರಿ ವೇಳೆ ಪೊಲೀಸ್ ಸಮವಸ್ತ್ರ ಧರಿಸಿ ತಲುಪಿದ ತಂಡ ಹಾಗೂ ಓರ್ವ ಮಹಿಳೆ ಒಳಗೊಂಡ ತಂಡ ಅಪಹರಿಸಿ ಕೊಂಡೊಯ್ದಿತ್ತು. ಮನೆಗೆ ಅತಿಕ್ರಮಿಸಿ ನುಗ್ಗಿದ ತಂಡ ಬಲಪ್ರಯೋಗಿಸಿ ಅಬ್ದುಲ್ ರಹ್ಮಾನ್‌ನನ್ನು ಅಪಹರಣಗೈದಿರುವುದಾಗಿ ಪತ್ನಿ ತಾಹಿರಾ ಮಂಜೇಶ್ವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದರು. ಅದರಂತೆ ಕೇಸು ದಾಖಲಿಸಿ ತನಿಖೆ ನಡೆಸುತ್ತಿದ್ದ ವೇಳೆ ನಾಲ್ಕು ಮಂದಿಯನ್ನು ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ಒಂದು ಕೋಟಿ ರೂಪಾಯಿಗಳ ವ್ಯವಹಾರವಿದ್ದುದಾಗಿ ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಸಮಗ್ರ ತನಿಖೆ ನಡೆಸುವುದಾಗಿ ಪೊಲೀಸರು ತಿಳಿಸಿದರು.

ಬೇಸಗೆಯಲ್ಲಿ ಶೇ.1ರಷ್ಟು ಮಾತ್ರ ಬಿತ್ತನೆ ಗುರಿ ಸಾಧನೆ | ಭಣಗುಡುತ್ತಿವೆ ಅನ್ನದ ಬಟ್ಟಲು

ಕೃಷಿ ಬದುಕು ಮಳೆಗಾಲಕ್ಕೆ ಸೀಮಿತ?

ದಿಗಂತ ವಿಶೇಷ

▸ ಸುದೀಪ್ ರಾಜ್ ಸುಳ್ಯ

ಉಡುಪಿ: ಉಡುಪಿ ಜಿಲ್ಲೆಯ ಕೃಷಿ ಬದುಕು ಮಳೆಗಾಲಕ್ಕೆ ಮಾತ್ರ ಸೀಮಿತವಾಗುತ್ತಿದೆಯೇ ಎಂಬ ಆತಂಕ ಎದುರಾಗಿದೆ. ಜಿಲ್ಲೆಯಲ್ಲಿ ಒಟ್ಟು ಸಾಗುವಳಿ ಯೋಗ್ಯ ಭೂಮಿಯಲ್ಲಿ ಮಳೆಗಾಲದ ಅವಧಿಯಲ್ಲಿ ಸುಮಾರು 30 ರಿಂದ 35 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಹಾಗೂ ಇತರ ಬೆಳೆಗಳನ್ನು ಬೆಳೆಯಲಾಗುತ್ತದೆ. ಆದರೆ, ಮಳೆಗಾಲ ಮುಗಿಯುತ್ತಿದ್ದಂತೆ ಜಿಲ್ಲೆಯ ಕೃಷಿ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಳ್ಳುತ್ತಿವೆ.

ಪ್ರಸಕ್ತ ಸಾಲಿನಲ್ಲಿ ಕೃಷಿ ಇಲಾಖೆಯು ಬೇಸಿಗೆಯ ಹಂಗಾಮಿನಲ್ಲಿ ದ್ವಿದಳ ಧಾನ್ಯ ಹಾಗೂ ತರಕಾರಿ ಬೆಳೆಗಾಗಿ 170 ಹೆಕ್ಟೇರ್ ಗುರಿ ಹೊಂದಿದ್ದರೂ, ಸದ್ಯದ ಅಂಕಿಅಂಶಗಳ ಪ್ರಕಾರ ಕೇವಲ 16 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಕೃಷಿ ನಡೆಯುತ್ತಿದೆ. ಅಂದರೆ ಜಿಲ್ಲೆಯ ಒಟ್ಟು ಸಾಗುವಳಿ ಭೂಮಿಯ ಶೇ. 1ರಷ್ಟು ಭಾಗದಲ್ಲೂ ಬೇಸಿಗೆ ಕೃಷಿ ನಡೆಯುತ್ತಿಲ್ಲ. ಸಾವಿರಾರು ಹೆಕ್ಟೇರ್ ಭೂಮಿ ಮಳೆಗಾಲದ ನಂತರ 'ಹಡೀಲು' ಬಿದ್ದಿರುವುದು ಕೃಷಿ ಇಲಾಖೆಯ ಗುರಿ ಮತ್ತು ವಾಸ್ತವದ ನಡುವಿನ ಅಜಗಜಾಂತರ ವ್ಯತ್ಯಾಸವನ್ನು ಸಾರುತ್ತಿದೆ.



ಕಾಡುಪ್ರಾಣಿಗಳ ನಿರಂತರ ಉಪಟಳ

ಮಂಗ, ಕಾಡುಹಂದಿಗಳು ಮತ್ತು ನವಿಲುಗಳ ದಾಳಿಯಿಂದಾಗಿ ಬೆಳೆದ ಅಲ್ಪಸ್ವಲ್ಪ ಬೆಳೆಯೂ ರೈತರ ಕೈಗೆ ಸಿಗುತ್ತಿಲ್ಲ. ಕೃಷಿ ಕೆಲಸಕ್ಕೆ ಸ್ಥಳೀಯವಾಗಿ ಕಾರ್ಮಿಕರು ಸಿಗುತ್ತಿಲ್ಲ. ಅನ್ಯ ಜಿಲ್ಲೆಗಳಿಂದ ಬರುವ ಕಾರ್ಮಿಕರಿಗೆ ನೀಡಬೇಕಾದ ಕೂಲಿ ದರವು ಬೆಳೆಯಿಂದ ಬರುವ ಲಾಭಕ್ಕಿಂತ ಹೆಚ್ಚಾಗಿರುತ್ತದೆ. ಕೃಷಿ ಚಟುವಟಿಕೆಗಳು ಯಾಂತ್ರೀಕರಣಗೊಳ್ಳದ ಕಾರಣ ಸಣ್ಣ ಹಿಡುವಳಿದಾರರು ಕಾರ್ಮಿಕರನ್ನು ನಂಬಿ ಕೃಷಿ ಮಾಡಲು ಸಾಧ್ಯವಾಗುತ್ತಿಲ್ಲ.

ಅಂತರ್ಜಲ ಕುಸಿತ ಮತ್ತು ನೀರಿನ ಅಭಾವ

ಮಳೆಗಾಲ ಮುಗಿಯುತ್ತಿದ್ದಂತೆ ಕರಾವಳಿಯ ನದಿಗಳಲ್ಲಿ ನೀರಿನ ಮಟ್ಟ ಕುಸಿಯುತ್ತದೆ. ಅಂತರ್ಜಲ ಮಟ್ಟ ಕುಸಿದಿರುವುದರಿಂದ ಬಾವಿ ಮತ್ತು ಕೊಳವೆಬಾವಿಗಳು ಬತ್ತಿ ಹೋಗುತ್ತಿದ್ದು, ನೀರಾವರಿ ಸೌಲಭ್ಯದ ಕೊರತೆಯಿಂದ ರೈತರು ಬೇಸಿಗೆ ಬೆಳೆ ಬೆಳೆಯಲು ಹಿಂದೇಟು ಹಾಕುತ್ತಿದ್ದಾರೆ.

> ನದಿಪಾತ್ರದ ಕೃಷಿಕರು ಕೂಡ ಬೇಸಿಗೆಯಲ್ಲಿ ಬಿತ್ತನೆಯಲ್ಲಿ ಆಸಕ್ತಿ ತೋರುತ್ತಿಲ್ಲ. ಕಳೆದ 2024 ಹಾಗೂ 2025ರಲ್ಲೂ ಇಷ್ಟೇ ಪ್ರಮಾಣದ ಗುರಿ ಸಾಧನೆಯಾಗಿತ್ತು. ಹೆಚ್ಚಿನ ಕೃಷಿಕರಿಗೆ ಬೇಸಿಗೆಯ ಕೃಷಿ ಹೊರೆಯಾಗುತ್ತಿದೆ.
> ■ **ಪೂರ್ಣಿಮಾ,** ಉಡುಪಿ ಜಿಲ್ಲಾ ಕೃಷಿ ಉಪನಿರ್ದೇಶಕರು

16 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಕೃಷಿ

ಪ್ರಸಕ್ತ 2025-26ನೇ ಸಾಲಿನಲ್ಲಿ ಕೃಷಿ ಇಲಾಖೆಯು ಜಿಲ್ಲೆಯಾದ್ಯಂತ ಒಟ್ಟು 170 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯುವ ಗುರಿ ಹೊಂದಿತ್ತು. ಆದರೆ ಕೇವಲ 16 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಕೃಷಿ ಚಟುವಟಿಕೆ ನಡೆದಿದ್ದು, ಇದು ನಿಗದಿಪಡಿಸಿದ ಗುರಿಯ ಹತ್ತನೇ ಒಂದು ಭಾಗದಷ್ಟೂ ಇಲ್ಲದಿರುವುದು ಆತಂಕಕಾರಿ ವಿಷಯವಾಗಿದೆ. ತಾಲೂಕುವಾರು ಗಮನಿಸಿದರೆ, 95 ಹೆಕ್ಟೇರ್ ಗುರಿ ಹೊಂದಿದ್ದ ಉಡುಪಿ ತಾಲೂಕಿನಲ್ಲಿ ಕೇವಲ 6 ಹೆಕ್ಟೇರ್ ಹಾಗೂ 45 ಹೆಕ್ಟೇರ್ ಗುರಿ ಹೊಂದಿದ್ದ ಕಾರ್ಕಳದಲ್ಲಿ ಕೇವಲ 3 ಹೆಕ್ಟೇರ್ ಸಾಧನೆಯಾಗಿದೆ. ಕುಂದಾಪುರ ತಾಲೂಕಿನಲ್ಲಿ 30 ಹೆಕ್ಟೇರ್ ಗುರಿಗೆ ಎದುರಾಗಿ 7 ಹೆಕ್ಟೇರ್‌ನಲ್ಲಿ ಕೃಷಿ ನಡೆದಿದ್ದು, ಇದು ಜಿಲ್ಲೆಯಲ್ಲೇ ಸದ್ಯದ ಗರಿಷ್ಠ ಸಾಧನೆಯಾಗಿದೆ.

ಬೆಳೆಗಳ ಆಧಾರದಲ್ಲಿ ವಿಶ್ಲೇಷಿಸಿದರೆ, ಜಿಲ್ಲೆಯಲ್ಲಿ ದ್ವಿದಳ ಧಾನ್ಯಗಳ ಬೆಳೆ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದೆ. ಉದ್ದು, ಹೆಸರು ಮತ್ತು ಅಲಸಂದೆ ಬೆಳೆಗಳಿಗಾಗಿ ಒಟ್ಟು 125 ಹೆಕ್ಟೇರ್‌ನಷ್ಟು ದೊಡ್ಡ ಗುರಿಯನ್ನು ಇಲಾಖೆ ನೀಡಿದ್ದರೂ, ಈ ವಿಭಾಗದಲ್ಲಿ ಸಾಧನೆ ಶೂನ್ಯವಾಗಿದೆ. ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 75 ಹೆಕ್ಟೇರ್ ಪ್ರದೇಶದಲ್ಲಿ ಉದ್ದು ಬೆಳೆಯುವ ಗುರಿ ಇತ್ತಾದರೂ, ರೈತರು ಈ ಬೆಳೆಯತ್ತ ಆಸಕ್ತಿಯನ್ನೇ ತೋರಿಲ್ಲ. ಭತ್ತದ ಕೃಷಿಯೂ 35 ಹೆಕ್ಟೇರ್ ಗುರಿಗೆ ಎದುರಾಗಿ ಕೇವಲ 7 ಹೆಕ್ಟೇರ್‌ಗೆ ಸೀಮಿತವಾಗಿದ್ದು, ಅದು ಕೇವಲ ಕುಂದಾಪುರ ತಾಲೂಕಿನಲ್ಲಿ ಮಾತ್ರ ದಾಖಲಾಗಿದೆ. ಆಶಾದಾಯಕ ವಿಷಯವೆಂದರೆ ಎಣ್ಣೆಕಾಳುಗಳ ವಿಭಾಗದಲ್ಲಿ 10 ಹೆಕ್ಟೇರ್ ಗುರಿಗೆ 9 ಹೆಕ್ಟೇರ್ ಸಾಧನೆಯಾಗಿದ್ದು, ಎಳ್ಳು ಬೆಳೆಯುವಲ್ಲಿ ರೈತರು ಸ್ವಲ್ಪ ಮಟ್ಟಿನ ಆಸಕ್ತಿ ತೋರಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಭಾರಿ ನಿರೀಕ್ಷೆಯೊಂದಿಗೆ ರೂಪಿಸಲಾದ ಬೇಸಿಗೆ ಕೃಷಿ ಯೋಜನೆಯು ಉಡುಪಿ ಜಿಲ್ಲೆಯಲ್ಲಿ ಗುರಿ ತಲುಪುವಲ್ಲಿ ತೀವ್ರ ಹಿನ್ನಡೆ ಅನುಭವಿಸಿದೆ.

ಶಿರಾಳಕೊಪ್ಪದಿಂದ ಕೇರಳದ ಹೊಸಂಗಡಿಗೆ ಅಕ್ರಮ ಸಾಗಾಟ

34 ಗೋವುಗಳ ಸಹಿತ ಮೂವರ ಸೆರೆ

ಮಂಗಳೂರು: ಶಿವಮೊಗ್ಗದ ಶಿರಾಳ ಕೊಪ್ಪದಿಂದ ಮಂಗಳೂರು ಮೂಲಕ ಕೇರಳದ ಹೊಸಂಗಡಿಗೆ ಅಕ್ರಮವಾಗಿ ಜಾನುವಾರು ಸಾಗಾಟ ಮಾಡುತ್ತಿದ್ದ ಲಾರಿಯನ್ನು ಕದ್ರಿ ಪೊಲೀಸರು ಪತ್ತೆ ಹಚ್ಚಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ದಸ್ತಗೀರ್ ಸಾಬ್, ಖತೀಬ್ ಪಾಷಾ, ಅಯೂಬ್ ಖಾನ್ ಬಂಧಿತರು.

ಪದವು ಬಳಿ ಕಾರ್ಯಾಚರಣೆ

ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಶಿವಮೊಗ್ಗದಿಂದ 34 ಗೋವುಗಳನ್ನು ಈಚರ್ ಲಾರಿಯಲ್ಲಿ ಸಾಗಿಸುತ್ತಿರುವ ಮಾಹಿತಿ ಪಡೆದ ಪೊಲೀಸರು ನಗರದ ಪದವು ಬಳಿ ಕಾರ್ಯಾಚರಣೆ ನಡೆಸಿ ಗೋವುಗಳನ್ನು ರಕ್ಷಿಸಿದ್ದಾರೆ. ಒಟ್ಟು 34 ಹೋರಿ ಮತ್ತು ಕೋಣಗಳನ್ನು ರಕ್ಷಿಸಲಾಗಿದೆ. ಸ್ವಾಧೀನ ಪಡಿಸಿದ ಸೊತ್ತುಗಳ ಒಟ್ಟು ಮೌಲ್ಯ 21 ಲಕ್ಷ 85 ಸಾವಿರ ರೂ. ಆಗಿದೆ.



ಕೈಕಾಲು ಹಗ್ಗದಿಂದ ಕಟ್ಟಿ ಅಕ್ರಮ ಸಾಗಾಟ

ಆರೋಪಿಗಳು ಜಾನುವಾರುಗಳ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿ ಹಿಂಸಾತ್ಮಕ ರೀತಿಯಲ್ಲಿ ಒಂದರ ಮೇಲೊಂದರಂತೆ ಲಾರಿಯಲ್ಲಿ ತುಂಬಿಸಿ, ಯಾವುದೇ ಪರವಾನಿಗೆಯಿಲ್ಲದೇ ಸಾಗಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳ ವಿರುದ್ಧ ಕದ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನದ ವ್ಯಾಪಾರಿಯಿಂದ 41 ಲಕ್ಷ ರೂಪಾಯಿ ದರೋಡೆ: ಮೂವರು ಆರೋಪಿಗಳ ಬಂಧನ

ಕಾಸರಗೋಡು: ಚಿನ್ನ ವ್ಯಾಪಾರಿಯನ್ನು ಕಾರಿನಲ್ಲಿ ಅಪಹರಿಸಿ 41 ಲಕ್ಷ ರೂ. ದರೋಡೆಗೈದ ಪ್ರಕರಣಕ್ಕೆ ಸಂಬಂಧಿಸಿ ಕಾಸರಗೋಡಿನ ಮೂವರನ್ನು ಕೊಯಂಬತ್ತೂರು ಪೊಲೀಸರು ಬಂಧಿಸಿದ್ದಾರೆ.

ಚೆರ್ವತ್ತೂರು ಮುಂಡಕಂಡ ಕಿಳಕ್ಕೇವೀಟಿಲ್ ನಿವಾಸಿ ನಿತಿನ್ (33), ನೀಲೇಶ್ವರ ಚಾತಮ್ಮತ್ ಮೀತಲ್ ವೀಟಿಲ್‌ನ ಶ್ರೀಕುಮಾರ್ (33) ಮತ್ತು ನೀಲೇಶ್ವರ ಪಳ್ಳಿಕೆರೆ ಕನಕವೀಟಿಲ್‌ನ ಸುಧೀಶ್ (39) ಬಂಧಿತ ಆರೋಪಿಗಳು. ದರೋಡೆಗೈದ ಹಣದ ಪೈಕಿ 20 ಸಾವಿರ ರೂ. ಅಪಹರಣಕ್ಕಾಗಿ ಉಪಯೋಗಿಸಲಾದ ಕಾರು ಮತ್ತು ಮೊಬೈಲ್ ಫೋನ್‌ನ್ನು ಪೊಲೀಸರು ಪತ್ತೆಹಚ್ಚಿ ವಶಪಡಿಸಿಕೊಂಡಿದ್ದಾರೆ.

ಚಿನ್ನ ವ್ಯಾಪಾರಿ ಪಟ್ಟಾಂಬಿ ನಡುವಟ್ಟಂ ನಿವಾಸಿ ಲುಕ್ಮಾನ್ ಮುಹಮ್ಮದ್ (56) ಎಂಬವರು ಕೊಯಂಬತ್ತೂರಿನಲ್ಲಿ ಚಿನ್ನ ಮಾರಾಟ ಮಾಡಿ ಫೆ.19ರಂದು ರಾತ್ರಿ ದ್ವಿಚಕ್ರ ವಾಹನದಲ್ಲಿ ತಮ್ಮ ಊರಿಗೆ ಹಿಂತಿರುಗುತ್ತಿದ್ದ ದಾರಿಮಧ್ಯೆ, ಪಾಲಕ್ಕಾಡ್ - ಕೊಯಂಬತ್ತೂರು ರಸ್ತೆಯ ಮದುಕರ ಮರಪ್ಪಾಲಗ ತಲುಪಿದಾಗ ಕಾರಿನಲ್ಲಿ ಬಂದ ಆಕ್ರಮಿಗಳ ತಂಡ ಅವರನ್ನು ತಡೆದು ನಿಲ್ಲಿಸಿ ಬಲವಂತವಾಗಿ ಕಾರಿಗೇರಿಸಿ ಅಪಹರಿಸಿ ಕೊಳಿಞಂಬಾರ ಮನೋನ್‌ಪಾರ ಎಂಬಲ್ಲಿಗೆ ಕೊಂಡುಹೋಗಿ ಅಲ್ಲಿ ಲುಕ್ಮಾನ್ ಮುಹಮ್ಮದ್‌ಗೆ ಹಲ್ಲೆ ನಡೆಸಿ ಹಣ, ಮೊಬೈಲ್ ಫೋನ್ ಮತ್ತು ದ್ವಿಚಕ್ರ ವಾಹನವನ್ನು ದರೋಡೆಗೈದ ಬಳಿಕ ಅವರನ್ನು ಅಕ್ರಮಿಸಿ ಅಲ್ಲೇ ಉಪೇಕ್ಷಿಸಿ ಪರಾರಿಯಾದರೆಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ. ಬಂಧಿತ ಮೂವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಹೊಸ ಮಳಿಗೆ ಆರಂಭಿಸುವ ಖುಷಿಯಲ್ಲಿದ್ದ ಯುವಕ ಸಾವು

ಉಳ್ಳಾಲ: ಸಹೋದರ ಹಾಗೂ ಸ್ನೇಹಿತನ ಜತೆಗೂಡಿ ನೂತನ ವಸ್ತ್ರಮಳಿಗೆಯೊಂದನ್ನ ತೆರೆಯುವ ಸಂಭ್ರಮದಲ್ಲಿದ್ದ ಯುವಕ ನೋರ್ವ ಅದೇ ಮಳಿಗೆಯಲ್ಲಿ ವಿದ್ಯುತ್ ಆಘಾತಕ್ಕೊಳಗಾಗಿ ಮೃತ ಪಟ್ಟಿರುವ ದಾರುಣ ಘಟನೆ ತೊಕ್ಕೊಟ್ಟುವಿನ ಹೃದಯಭಾಗದ ಖಾಸಗಿ ವಾಣಿಜ್ಯ ಸಂಕೀರಣದಲ್ಲಿ ಸೋಮ ವಾರ ಮುಂಜಾನೆ ನಡೆದಿದೆ.



ಮಂಗಳೂರು ಪಾಂಡೇಶ್ವರ ಶಿವ ನಗರದ ಅಪಾರ್ಟ್ ಮೆಂಟ್ ಒಂದರಲ್ಲಿ ನೆಲೆಸಿದ್ದ ಸಲ್ಮಾನ್ ಫಾರಿಶ್ (20) ಮೃತ ಯುವಕ.

ಮಧ್ಯರಾತ್ರಿ ಸುಮಾರು 1.30 ಗಂಟೆ ವೇಳೆ ಸಲ್ಮಾನ್‌ಗೆ ವಿದ್ಯುತ್ ಆಘಾತವಾಗಿದ್ದು, ಆತನನ್ನ ಜತೆಯಲ್ಲಿದ್ದವರು ಕೂಡಲೇ ಆಟೋ ರಿಕ್ಷಾದಲ್ಲಿ ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ಕರೆದೊಯ್ದರೂ ಸಹ ದಾರಿಯಲ್ಲೇ ಸಲ್ಮಾನ್ ಮೃತಪಟ್ಟಿದ್ದಾರೆ. ಸಲ್ಮಾನ್ ಫಾರಿಶ್ ಅವರ ಕುಟುಂಬವು ಈ ಹಿಂದೆ ಪಜೀರು ಗ್ರಾಮದ ಬೆಂಗೋಡಿ ಪದವಿನ ಬಾಡಿಗೆ ಮನೆಯಲ್ಲಿ ನೆಲೆಸಿತ್ತು. ಮೃತ ಸಲ್ಮಾನ್ ಫಾರಿಶ್ ತಾಯಿ, ತಂದೆ, ಮೂವರು ಸಹೋದರಿಯರು, ಓರ್ವ ಸಹೋದರನನ್ನು ಅಗಲಿದ್ದಾರೆ. ಉಳ್ಳಾಲ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು,ಮೃತ ಸಲ್ಮಾನ್ ಫಾರಿಶ್ ತಂದೆ ಮಹಮ್ಮದ್ ಹನೀಫ್ ನೀಡಿದ ದೂರಿನಂತೆ ಪ್ರಕರಣ ದಾಖಲಿಸಿದ್ದಾರೆ.

ಏನಾಯಿತು ಭಾನುವಾರ ರಾತ್ರಿ?

ಮಂಗಳೂರಿನ ಬಂದರಿನ ಲಕ್ಷ್ಮೀ ಎಂಟರ್ ಪ್ರೈಸಸ್‌ನಲ್ಲಿ ಉದ್ಯೋಗಿಯಾಗಿದ್ದ ಸಲ್ಮಾನ್ ಫಾರಿಶ್ ತೊಕ್ಕೊಟ್ಟಿನ ಖಾಸಗಿ ವಾಣಿಜ್ಯ ಮಳಿಗೆಯಲ್ಲಿ ತನ್ನ ಸಹೋದರ ಅಬ್ದುಲ್ ರಹಿಮಾನ್ ಹಾಗೂ ಸ್ನೇಹಿತ ಸಿನಾನ್ ಜತೆಗೂಡಿ ನೂತನ ವಸ್ತ್ರ ಮಳಿಗೆಯೊಂದನ್ನು ಫೆ.27ರಂದು (ಶುಕ್ರವಾರ) ತೆರೆಯಲು ತಯಾರಿ ನಡೆಸಿದ್ದರು. ಆ ನಿಟ್ಟಿನಲ್ಲಿ ಭಾನುವಾರ ರಾತ್ರಿಯೂ ನೂತನ ಮಳಿಗೆಯ ಒಳ ವಿನ್ಯಾಸ ಕಾಮಗಾರಿ ಹಾಗೂ ಇಲೆಕ್ಟ್ರೀಷಿಯನ್ ಕೆಲಸ ಭರದಲ್ಲಿ ನಡೆಯುತ್ತಿತ್ತು. ಮೃತ ಸಲ್ಮಾನ್ ಫಾರಿಶ್, ಸಹೋದರ ಅಬ್ದುಲ್ ರಹಿಮಾನ್, ಸ್ನೇಹಿತ ಸಿನಾನ್ ಹಾಗೂ ಇಲೆಕ್ಟ್ರೀಷಿಯನರ್ ಆಗಿರುವ ಅಬ್ದುಲ್ ರಝಾಕ್ ಎಂಬವರು ಭಾನುವಾರ ರಾತ್ರಿವರೆಗೂ ಮಳಿಗೆಯೊಳಗೆ ಕೆಲಸ ನಿರ್ವಹಿಸುತ್ತಿದ್ದರು. ಈ ವೇಳೆ ಅವಘಡ ನಡೆದಿದೆ.

ಮಂಗಳೂರಿನ ಮೊದಲ ಇವಿ ಬಸ್ ಸ್ವಾಗತಕ್ಕೆ ಸಜ್ಜಾಗುತ್ತಿದೆ ರೂಟ್ ನಂ. 27

ಕುಡ್ಲದಲ್ಲೂ ಹಸಿರು ಬಸ್‌ಗೆ ಒಲವು

ಮಂಗಳೂರು: ಸಾರಿಗೆ ಕ್ಷೇತ್ರದ ಇತಿಹಾಸದ ಪುಟಗಳಲ್ಲಿ ಈಗಾಗಲೇ ಹಲವು ದಾಖಲೆ ಬರೆದಿರುವ ಮಂಗಳೂರು ನಗರ ಇದೀಗ ಮತ್ತೊಂದು ದಾಖಲೆ ಬರೆಯಲು ಸರ್ವ ರೀತಿಯಲ್ಲಿ ಸಜ್ಜಾಗಿದೆ.

ಈ ಹಿಂದೆ 1914ರಲ್ಲಿ ಮಂಗಳೂರು, ತನ್ನ ಪಕ್ಕದ ಬಂಟ್ವಾಳಕ್ಕೆ ಮೊದಲ ಖಾಸಗಿ ಬಸ್ ಸೇವೆ ಆರಂಭಿಸುವ ಮೂಲಕ ಕರಾವಳಿಯ ಸಾರಿಗೆಯಲ್ಲಿ ಹೊಸ ಅಧ್ಯಾಯ ಬರೆದಿತ್ತು. ಇದೀಗ ಅಂತಹದ್ದೇ ಇನ್ನೊಂದು ಐತಿಹಾಸಿಕ ಹೆಜ್ಜೆ ದಾಖಲಿಸಲು ಸಿದ್ಧತೆ ಖಾಸಗಿ ವಲಯದಿಂದ ನಡೆಯುತ್ತಿದೆ.

ನಗರದಲ್ಲಿ ಮೊತ್ತ ಮೊದಲ ಖಾಸಗಿ ಇಲೆಕ್ಟ್ರಿಕ್ ಬಸ್ ಓಡಾಟ ಆರಂಭಕ್ಕೆ ಈಗ ವೇದಿಕೆ ಸಜ್ಜಾಗಿದ್ದು, ಉದ್ಯಮಿ ದಿಲ್‌ರಾಜ್ ಆಳ್ವ ಅವರ ಮಾಲಕತ್ವದ ಬಸ್ 'ಗಣೇಶ್ ಪ್ರಸಾದ್'ನ ಸ್ವಾಗತಕ್ಕೆ ನಗರದ ರೂಟ್ ನಂ.27ರ ಸಜ್ಜಾಗುತ್ತಿದೆ.

ಈ ಇ-ಬಸ್ ಒಟ್ಟು 9 ಮೀಟರ್ ಉದ್ದವಿದ್ದು, ಇದರಲ್ಲಿ 32ರಿಂದ 41 ಅತ್ಯಾಧುನಿಕ ಮಾದರಿಯ ಆಸನಗಳಿವೆ. ಒಂದೇ ಚಾರ್ಜ್‌ನಲ್ಲಿ ಇದು 200 ಕಿ.ಮೀ. ವರೆಗೆ ಸಂಚರಿಸಬಲ್ಲದು. ವಿಶೇಷವೆಂದರೆ ಕೇವಲ ಎರಡು ಗಂಟೆಗಳಲ್ಲಿ ಬ್ಯಾಟರಿ ಸಂಪೂರ್ಣ ರೀಚಾರ್ಜ್ ಆಗುತ್ತದೆ. ಇದಲ್ಲದೆ ಹವಾ ನಿಯಂತ್ರಿತ ವ್ಯವಸ್ಥೆ ಪ್ರಯಾಣಿಕರಿಗೆ ಸುಗಮ ಅನುಭವವನ್ನು ನೀಡಲಿವೆ. ಆಕರ್ಷಕವಾಗಿರುವ ಈ ಬಸ್‌ನ ಬಾಡಿ ವಿನ್ಯಾಸವನ್ನು ಪುಣೆಯಲ್ಲಿ ನಡೆಸಲಾಗಿದೆ.





ಪ್ರಾಯೋಗಿಕವಾಗಿ ಆರಂಭವಾಗುತ್ತಿರುವ ಈ ಪ್ರಯತ್ನ ಯಶಸ್ವಿಯಾದರೆ, ನಗರದಲ್ಲಿ ಇನ್ನಷ್ಟು ಇಲೆಕ್ಟ್ರಿಕ್ ಬಸ್‌ಗಳ ಓಡಾಟ ಕಾಣಿಸಿಕೊಳ್ಳಲಿದೆ.

ಬರಲಿದೆ ಕೆಎಸ್ಸಾರ್ಟಿಸಿ

ದೇಶಾದ್ಯಂತ ವಾಹನ ವಾಯು ಮಾಲಿನ್ಯ ತಗ್ಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ವಿದ್ಯುತ್ ಚಾಲಿತ ಬಸ್‌ಗಳಿಗೆ ಒತ್ತು ನೀಡುತ್ತಿದೆ. ಪ್ರಧಾನ ಮಂತ್ರಿ ಇ-ಬಸ್ ಸೇವಾ ಯೋಜನೆಯಡಿ ರಾಜ್ಯಕ್ಕೆ ಈಗಾಗಲೇ 750 ಇಲೆಕ್ಟ್ರಿಕ್ ಬಸ್‌ಗಳು ಮಂಜೂರಾಗಿವೆ. ಅವುಗಳಲ್ಲಿ 100 ಬಸ್‌ಗಳು ಮಂಗಳೂರಿಗೆ ಹಂಚಿಕೆ ಆಗಲಿವೆ. ಕುಂಟಿಕಾನದಲ್ಲಿರುವ ಕೆಎಸ್ಸಾರ್ಟಿಸಿ ಡಿಪ್ಪೋ ಹಾಗೂ ಬಿಜೈ ಬಸ್ ನಿಲ್ದಾಣಗಳಲ್ಲಿ ಮೆಸ್ಕಾಂ ಹಾಗೂ ಕೆಪಿಟಿಸಿಎಲ್ ಚಾರ್ಜಿಂಗ್ ಪಾಯಿಂಟ್‌ಗಳಿಗೆ ಈಗಾಗಲೇ ಅನುಮೋದನೆ ಸಿಕ್ಕಿದೆ. ಇಲ್ಲಿ ಎಲ್ಲವೂ ನಿರೀಕ್ಷೆಯಂತೆ ನಡೆದರೆ, ಮುಂದಿನ ಆರು ತಿಂಗಳೊಳಗೆ ನಗರದಲ್ಲಿ ಸರ್ಕಾರಿ ಇಲೆಕ್ಟ್ರಿಕ್ ಬಸ್‌ಗಳೂ ಸಂಚಾರ ಆರಂಭಿಸಲಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 23° | ಉಡುಪಿ 31° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 24, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಕಾಯರ್‌ಗೋಳಿಯಲ್ಲಿ ಆಮೆಂಬಳ ಬಾಳಪ್ಪರ ಪುತ್ಥಳಿ ನಿರ್ಮಾಣ


ಪುಟ 6
ಉಡುಪಿ ಜಿಲ್ಲೆಯ ದೊಡ್ಡ ಪಂಚಾಯತ್‌ಗೆ ಕಸ ವಿಲೇವಾರಿಯೇ ಹೊರೆ

ಎಲ್ಲರ ಆಕರ್ಷಣೆಯ ಕೇಂದ್ರಬಿಂದುವಾಗುತ್ತಿದೆ ಮಂಗಳೂರಿನ ಈ 'ಸರಸ್ ಮೇಳ'!


ಮಂಗಳೂರು ನಗರದ ಕರಾವಳಿ ಉತ್ಸವ ಮೈದಾನದಲ್ಲಿ ನಡೆಯುತ್ತಿರುವ ಸ್ವಸಹಾಯ ಗುಂಪಿನ ಮಹಿಳೆಯರು ತಯಾರಿಸಿದ ಉತ್ಪನ್ನಗಳ ರಾಷ್ಟ್ರಮಟ್ಟದ ವಸ್ತು ಪ್ರದರ್ಶನ 'ಸರಸ್ ಮೇಳ' ಈಗ ಭಾರೀ ಜನಾಕರ್ಷಣೆಯನ್ನು ಪಡೆದುಕೊಂಡಿದೆ. ಇಲ್ಲಿನ ಪ್ರದರ್ಶನ ಮಳಿಗೆ ಕಾಣಲು ಊರು ಪರವೂರುಗಳಿಂದಲೂ ಜನ ಆಗಮಿಸುತ್ತಿದ್ದು ಖರೀದಿಗಳು ಕೂಡಾ ಭರ್ಜರಿಯಾಗಿ ನಡೆಯುತ್ತಿದೆ. ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್.

ಸುತ್ತಮುತ್ತ

ದಕ್ಷಿಣ ಕನ್ನಡದಲ್ಲಿ ತಾಪಕೋಪ ಏರಿಕೆ: 175ರಲ್ಲಿ ಎಕ್ಯೂಐ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಸಿಲಿನ ತಾಪ ಮಂಗಳವಾರ ಮತ್ತಷ್ಟು ತೀವ್ರಗೊಂಡಿದ್ದು ಶೋಮವಾರ ತಾಪಮಾನ ಗರಿಷ್ಟ 35 ಡಿಗ್ರಿ ಸೆಲ್ಸಿಯಸ್‌ನ್ನೂ ದಾಟಿ ಮುಂದಡಿಯಿಟ್ಟಿದೆ.

ಹದೆಗೆಡುತ್ತಿದೆ ಗಾಳಿ ಗುಣಮಟ್ಟ

ಈ ನಡುವೆ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಗಾಳಿಯ ಗುಣಮಟ್ಟದಲ್ಲೂ ಕುಸಿತವಾಗುತ್ತಿದ್ದು, ಹೊಸ ಆತಂಕ ಮೂಡಿಸಿದೆ. ಸೋಮವಾರ ದಕ್ಷಿಣ ಕನ್ನಡದ ಎಕ್ಯೂಐ ಸೂಚ್ಯಂಕ 175ರಲ್ಲಿ ಕಾಣಿಸಿಕೊಂಡಿತ್ತು.

ತುಂಬೆಯ ಅಣೆಕಟ್ಟಿನಲ್ಲಿದೆ ಜಲಸಮೃದ್ಧಿ
ಬೇಕಿಲ್ಲ ಬಿಸಿಲ ಭಯ
ಜಲಕ್ಷಾಮ ನೀಗಿಸಲು 'ನಾಲ್ಕು' ಬ್ಯಾಕಪ್!

ಬಂಟ್ವಾಳ: ಕರಾವಳಿ ಭಾಗದಲ್ಲಿ ಸತತ ತಾಪಮಾನ ಏರಿಕೆಯಾಗುತ್ತಿದ್ದು, ಈಗ ಎಲ್ಲೆಡೆ ಅಂತರ್ಜಲದ ಮಟ್ಟ ಕುಸಿತದ ಚಿಂತೆ ಕಾಡುತ್ತಿದೆ. ಈ ನಡುವೆ ಮಂಗಳೂರು ಮಹಾನಗರಕ್ಕೆ ನೀರು ಪೂರೈಸುವ ತುಂಬೆ ವೆಂಟೆಡ್ ಡ್ಯಾಂನಲ್ಲಿ ನೇತ್ರಾವತಿ ನದಿ ನೀರಿನ ಮಟ್ಟ ಸೋಮವಾರ ಸಂಜೆಯ ವೇಳೆಗೆ 6 ಮೀಟರ್ ಸನಿಹದಲ್ಲಿದ್ದು, ಸದ್ಯದ ಮಟ್ಟಿಗೆ ಮಂಗಳೂರು ಮಹಾ ನಗರದ ಜನತೆಗೆ ಜಲಾತಂಕ ಕಾಡದು ಎಂದು ಮೂಲಗಳು ತಿಳಿಸಿವೆ.

ಯಥಾಸ್ಥಿತಿಯಲ್ಲಿ ಜೀವಜಲದ ಮಟ್ಟ

ಕಳೆದ ವರ್ಷ ಕೂಡಾ ಫೆಬ್ರವರಿ ತಿಂಗಳ ಅಂತ್ಯದಲ್ಲಿ ಇಲ್ಲಿ ಸರಿಸುಮಾರು 5.30 ರಿಂದ 6 ಮೀಟರ್‌ನಷ್ಟು ಅಜುಬಾಜಿನಲ್ಲಿ ನೀರು ಶೇಖರಣೆ ಯಾಗಿದ್ದು ಈ ವರ್ಷದ ಫೆಬ್ರವರಿ ಅಂತ್ಯದಲ್ಲೂ ಅಷ್ಟೇ ಪ್ರಮಾಣದಲ್ಲಿ ನೀರು ತುಂಬೆ ಡ್ಯಾಂನಲ್ಲಿದೆ.

ನಾಳೆ ಸಂಜೆಯ ತನಕ ನೀರು ಬಂದ್

ಮಂಗಳೂರು ಮಹಾನಗರಪಾಲಿಕೆ ನೀರು ಸರಬರಾಜು ವ್ಯವಸ್ಥೆಯ ತುಂಬೆ ಎಚ್‌ಎಲ್ ಪಿಎಸ್‌ನಂ–2 80 ಎಂಎಲ್‌ಡಿ ಸ್ಥಾವರದಲ್ಲಿ ಹಾಗೂ ಎಚ್‌ಎಲ್‌ಪಿಎಸ್ ನಂ–2 18ಎಂಜಿಡಿ ಮೆಸ್ಕಾಂ ತುರ್ತು ದುರಸ್ತಿ ಕಾಮಗಾರಿ ನಡೆಸಲಾಗುತ್ತಿದ್ದು ನೀರು ಪೂರೈಕೆ ಸ್ಥಗಿತವಾಗಲಿದೆ. »ಪುಟ 6



ಸದ್ಯಕ್ಕೆ ಇಲ್ಲಿ ಎಲ್ಲಾ 30 ಗೇಟುಗಳು ಬಂದ್!

ಕಳೆದೊಂದು ತಿಂಗಳಿನಿಂದ ಹೆಚ್ಚುತ್ತಿರುವ ಬಿಸಿಲಿನ ಝಳಕ್ಕೆ ನಾಡಿನ ಜಲಮೂಲಗಳು ಬತ್ತುತ್ತಿದ್ದು, ಈ ನಡುವೆ ನೇತ್ರಾವತಿಯ ನೀರಿನ ಮಟ್ಟದಲ್ಲಿ ಕೂಡಾ ಏರಿಳಿತ ಕಂಡಿದ್ದು, ಕಳೆದೆರಡು ದಿನಗಳಿಂದ ತುಂಬೆ ಡ್ಯಾಂನಲ್ಲಿ ಎಲ್ಲಾ 30 ಗೇಟುಗಳನ್ನು ಮುಚ್ಚಿ ನೀರು ಶೇಖರಿಸಿಡಲಾಗುತ್ತಿದೆ.

ಮೋಡ ಮುಸುಕಿದ ಬಾನು ಕಳೆದೆರಡು ದಿನಗಳಲ್ಲಿ ಜಿಲ್ಲೆಯ ಕೆಲಭಾಗದಲ್ಲಿ ಮಳೆ ಸುರಿದಿದೆ. ಸೋಮವಾರವು ಕೂಡಾ ಬಂಟ್ವಾಳದಾದ್ಯಂತ ಮೋಡ ಕವಿದ ವಾತಾವರಣ ಇತ್ತಾದರೂ ಮಳೆಯ ಸುಳಿವು ಮಾತ್ರ ಇರಲಿಲ್ಲ.

ಸಿನಿಮೀಯ ಶೈಲಿ ನಡೆದ ಅಪಘಾತ
ಡಿವೈಡರ್‌ನ ಏರಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ ಕಾರು!
ಚಾಲಕ ಪವಾಡ ಸದೃಶವಾಗಿ ಪಾರು

ಕಾರ್ಕಳ: ನಗರದ ಕಡೆಯಿಂದ ಜೋಡುರಸ್ತೆ ಕಡೆಗೆ ಅತೀ ವೇಗವಾಗಿ ಸಾಗುತ್ತಿದ್ದ ಇಕೋ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಡಿವೈಡರ್ ಏರಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಘಟನೆ ಸೋಮವಾರ ಮಧ್ಯಾಹ್ನ ಸಂಭವಿಸಿದೆ. ಕಾರು ಡಿಕ್ಕಿಯಾದ ರಭಸಕ್ಕೆ ವಿದ್ಯುತ್ ಕಂಬ ತುಂಡಾಗಿ ಕಾರಿನ ಮೇಲೆ ವಾಲಿದ್ದು, ಚಾಲಕ ಪವಾಡಸದೃಶ ಪಾರಾಗಿದ್ದಾರೆ. ಟಯರಿಗೆ ಕಲ್ಲು ಬಡಿದ ಪರಿಣಾಮ ಟಯರ್ ಸ್ಫೋಟಗೊಂಡು



ಕಾರು ಕಂಬಕ್ಕೆ ಡಿಕ್ಕಿಯಾಗಿದೆ ಎನ್ನಲಾಗಿದೆ. ಸಿನಿಮೀಯ ಶೈಲಿಯಲ್ಲಿ ನಡೆದ ಈ ಅಪಘಾತ ನೋಡುಗರನ್ನು ಬೆಚ್ಚಿಬೀಳಿಸಿತ್ತು.

ಲಾಭ ಆಸೆಯಲ್ಲಿ ₹5,39,200 ಕಳೆದುಕೊಂಡರು!

ಕುಂದಾಪುರ: ಲಾಭದ ಆಸೆಯಿಂದ ವ್ಯಕ್ತಿಯೊಬ್ಬರು ಲಕ್ಷಾಂತರ ರೂಪಾಯಿ ಮೋಸ ಹೋದ ಘಟನೆ ನಡೆದಿದೆ.

ಹೇಗೆ ನಡೆಯಿತು ವಂಚನೆ?

ಬೆಳಗಾವಿಯ ಸವದತ್ತಿ ಕಾಗಿಹಾಳ ತಾಂಡೆ ಗ್ರಾಮದ ಪರಶುರಾಮ್ ಲಮಾಣಿ ಎಂಬುವರಿಗೆ ಕಾವೇರಿ ಎಂಬವರು ಕರೆ ಮಾಡಿ ಲಿಂಕ್‌ನ್ನು ಕ್ಲಿಕ್ ಮಾಡಿ ಟಾಸ್ಕ್‌ನಲ್ಲಿ ಭಾಗವಹಿಸಿ ಅದರಿಂದ ನನಗೆ ಲಾಭ ಬಂದಿರುವುದಾಗಿ ತಿಳಿಸಿದಂತೆ ಪರಶುರಾಮ್ ಅವರು ಗುಲಾಮ್ ಹುಸೈನ್ ಅವರ ಬ್ಯಾಂಕ್ ಅಕೌಂಟಿಗೆ 2 ಲಕ್ಷ, ಮೋನು ಯಾದವ್ ಅವರ ಖಾತೆಗೆ 240000 ರೂಪಾಯಿ ಮತ್ತು ಕುಲದೀಪ್ ಅವರ ಖಾತೆಗೆ 99,200 ರೂಪಾಯಿ ಸೇರಿದಂತೆ ಒಟ್ಟು ಸುಮಾರು 5,39,200 ರೂಪಾಯಿ ಹಣವನ್ನು ತೊಡಗಿಸಿದ್ದರು. ಬಳಿಕ ಪರಶುರಾಮ್ ಅವರಿಗೆ ಯಾವುದೇ ಲಾಭದ ಹಣವನ್ನು ಹಾಗೂ ಅಸಲನ್ನು ನೀಡದೇ ಯಾರೋ ಸೈಬರು ವಂಚಕರು ಪಡೆದುಕೊಂಡಿರುವುದಾಗಿ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆ್ಯಂಬುಲೆನ್ಸ್ ವಾಹನದಲ್ಲೇ ಗಂಡು ಮಗುವಿಗೆ ಜನ್ಮ ನೀಡಿದರು ಮಹಿಳೆ

ಬೆಳ್ತಂಗಡಿ: ಮಂಗಳೂರು ಆಸ್ಪತ್ರೆಗೆ ಆ್ಯಂಬುಲೆನ್ಸ್‌ನಲ್ಲಿ ಕರೆದೊಯ್ಯುತ್ತಿದ್ದಾಗ ದಾರಿ ಮಧ್ಯೆ ಮಹಿಳೆಗೆ ಹೆರಿಗೆಯಾದ ಘಟನೆ ನಡೆದಿದೆ.

ಬೆಳ್ತಂಗಡಿ ತಾಲೂಕು ಸರಕಾರಿ ಆಸ್ಪತ್ರೆಗೆ ಫೆ.23 ರಂದು ಬೆಳಗ್ಗಿನ ಜಾವ ಹೆರಿಗೆಗೆಂದು ಬಂದಿದ್ದ ಬೆಳ್ತಂಗಡಿ ನಗರದ ಸುದೆಮುಗೇರು ನಿವಾಸಿ ಲೀಲಾವತಿ ಎಂಬಾಕೆ ಬಳಿಕ ಆಸ್ಪತ್ರೆಗೆ ದಾಖಲಾಗಿದ್ದರು. ವೈದ್ಯರ ಸೂಚನೆ ಮೇರೆಗೆ ಆಕೆಯನ್ನು ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಗೆ ಅಲ್ಲಿನ ಇಬ್ಬರು ಶುಶ್ರೂಶಕಿಯರ ಜೊತೆಯಲ್ಲಿ ಬೆಳ್ತಂಗಡಿ ತಾಲೂಕು ಆಸ್ಪತ್ರೆಗೆ ಸೇರಿದ ತುರ್ತು ವಾಹನದಲ್ಲಿ ಕಳುಹಿಸಿ ಕೊಡಲಾಗಿತ್ತು. »ಪುಟ 6



ಸಿಬ್ಬಂದಿ ಕಾಳಜಿಗೆ ಮೆಚ್ಚುಗೆ

ಬೆಳ್ತಂಗಡಿ ತಾಲೂಕು ಸರಕಾರಿ ಆಸ್ಪತ್ರೆಯ ಆ್ಯಂಬುಲೆನ್ಸ್ ಚಾಲಕ, ಸಿಬ್ಬಂದಿಯ ಕಾಳಜಿಗೆ ನಾಗರಿಕರಿಂದ ವ್ಯಾಪಕ ಮೆಚ್ಚುಗೆ ಸಿಕ್ಕಿದೆ.

ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಒಣಹವೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದಲ್ಲಿ ಮುಂದಿನ ಎರಡು ದಿನಗಳ ಕಾಲ ಒಣಹವೆ ಮುಂದುವರಿಯಲಿದೆ ಎಂದು ಕೇಂದ್ರ ಹವಾಮಾನ ಇಲಾಖೆ ವರದಿ ತಿಳಿಸಿದೆ.

ಸರಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ 'ವಿದ್ಯಾಕಿರಣಂ' ಯೋಜನೆ
ಉದ್ಘಾಟನೆಗೆ ಸಿದ್ಧಗೊಂಡಿವೆ ಏಳು ಕಟ್ಟಡಗಳು

ಕಾಸರಗೋಡು: ಸರಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ವಿದ್ಯಾಕಿರಣಂ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ. ಈ ನಿಟ್ಟಿನಲ್ಲಿ ಕಿಫ್‌ಬಿ ಆರ್ಥಿಕ ಅನುದಾನದೊಂದಿಗೆ ಕಾಸರಗೋಡು ಜಿಲ್ಲೆಯಲ್ಲಿ ಏಳು ಶಾಲಾ ಕಟ್ಟಡಗಳು ನಿರ್ಮಾಣ ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧವಾಗಿವೆ.

ವಿದ್ಯಾಕಿರಣಂ ಯೋಜನೆಯು ಜಿಲ್ಲೆಯ ಸಾಮಾನ್ಯ ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಬದಲಾವಣೆಗಳಿಗೆ ನಾಂದಿ ಹಾಡಿದೆ. ಕಿಫ್‌ಬಿಯ ಆರ್ಥಿಕ ನೆರವಿನೊಂದಿಗೆ ಜಾರಿಗೆ ತರಲಾದ ಯೋಜನೆಯ ಭಾಗವಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಚಟುವಟಿಕೆಗಳು ತ್ವರಿತಗತಿಯಲ್ಲಿ ಪ್ರಗತಿಯಲ್ಲಿವೆ. ಜಿಲ್ಲೆ ಯೋಜನೆಯಲ್ಲಿ ಸೇರಿಸಲಾದ 85 ಶಾಲೆಗಳಲ್ಲಿ 54 ಕಟ್ಟಡಗಳ ನಿರ್ಮಾಣ ಪೂರ್ಣಗೊಂಡಿದೆ. ಇವುಗಳಲ್ಲಿ 7 ಶಾಲೆಗಳು ಉದ್ಘಾಟನೆಗೆ ಸಿದ್ಧವಾಗಿವೆ.



5 ಕೋ. ರೂ. ಯೋಜನೆಗಳಂತೆ ಮಂಜೂರಾದ ಐದು ಶಾಲೆಗಳ ಕಟ್ಟಡ ನಿರ್ಮಾಣ ಪೂರ್ಣಗೊಂಡಿದೆ. 3 ಕೋಟಿ ರೂ. ಯೋಜನೆಗಳಡಿ ಮಂಜೂರಾದ 27 ಶಾಲೆಗಳಲ್ಲಿ 14 ಶಾಲೆಗಳ ಕಟ್ಟಡ ನಿರ್ಮಾಣ ಪೂರ್ತಿಯಾಗಿದೆ. ಇವುಗಳಲ್ಲಿ 10 ಶಾಲೆಗಳ ನಿರ್ಮಾಣ ಪ್ರಗತಿಯಲ್ಲಿದೆ. ಒಂದು ಕಟ್ಟಡ ತಾಂತ್ರಿಕ ಅನುಷ್ಠಾನದ ಹಂತದಲ್ಲಿದೆ. 1 ಕೋಟಿ ರೂ. ಯೋಜನೆಯಲ್ಲಿ ಸೇರಿಸಲಾದ 53 ಶಾಲೆಗಳ 35 ಕಟ್ಟಡಗಳು ಪೂರ್ಣಗೊಂಡಿವೆ. ಎಂಟು ಕಟ್ಟಡಗಳ ನಿರ್ಮಾಣ ಪ್ರಗತಿಯಲ್ಲಿದೆ. »ಪುಟ 6

ಉತ್ತಮ ಯೋಜನೆ

ವಿದ್ಯಾಕಿರಣಂ ಯೋಜನೆ ಸರಕಾರಿ ಶಾಲೆಗಳನ್ನು ಶ್ರೇಷ್ಠತೆಯ ವಿದ್ಯಾಕೇಂದ್ರಗಳಾಗಿ ಪರಿವರ್ತಿಸುವ, ಕಲಿಕೆ, ಬೋಧನಾ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸುವ ಗುರಿ ಹೊಂದಿರುವ ವ್ಯಾಪಕ ಚಟುವಟಿಕೆಗಳನ್ನು ಒಳಗೊಂಡಿದೆ.

● ಟಿ.ಪ್ರಕಾಶನ್, ವಿದ್ಯಾಕಿರಣಂ ಜಿಲ್ಲಾ ಸಂಯೋಜಕ

ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಕೈ ಜೋಡಿಸಿ: ಡಾ. ಪ್ರಣವ್ ಮಲ್ಯ 2
ಸಾಮರಸ್ಯಕ್ಕಾಗಿ ಹಿಂದು ಸಮಾಜ ಸಂಘಟಿತವಾಗಬೇಕು 3

ಸುತ್ತ ಮುತ್ತ

ಇಂದು ಉಪ್ಪಿನಂಗಡಿ ದೇವಳದಲ್ಲಿ ಪ್ರತಿಷ್ಠಾ ಮಹೋತ್ಸವ

ಉಪ್ಪಿನಂಗಡಿ: ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ ದೇವಾಲಯದಲ್ಲಿ ಇಂದು ಶ್ರೀ ದೇವರ ಪ್ರತಿಷ್ಠಾ ಮಹೋತ್ಸವವು ನಡೆಯಲಿದೆ. ಪ್ರತಿಷ್ಠಾ ಮಹೋತ್ಸವದ ಅಂಗವಾಗಿ ಗಣಪತಿ ಹೋಮ, ಶತರುದ್ರಾಭಿಷೇಕ, ಸಿಯಾಳಾಭಿಷೇಕ ಹಾಗೂ ಮಹಾಕಾಳಿ ಅಮ್ಮನವರಿಗೆ ಚಂಡಿಕಾ ಹೋಮ ನಡೆಯಲಿದ್ದು, ಮಧ್ಯಾಹ್ನ ಮಹಾಪೂಜೆಯ ಬಳಿಕ ಅನ್ನಸಂತರ್ಪಣೆಯು ನಡೆಯಲಿದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ತಿಳಿಸಿದ್ದಾರೆ. ಫೆ.28ಕ್ಕೆ ದೇವಳದ ವಾರ್ಷಿಕ ಜಾತ್ರೆ ಅಂಗವಾಗಿ ಧ್ವಜಾರೋಹಣ ನಡೆಯಲಿದ್ದು, ಸಂಜೆ ಟೀಮ್ ದಕ್ಷಿಣ ಕಾಶಿ ಇದರ ಆಶ್ರಯದಲ್ಲಿ 6ನೇ ವರ್ಷದ ಉಬಾರ್ ಉತ್ಸವ ನಡೆಯಲಿದೆ ಎಂದು ತಿಳಿಸಿದ್ದಾರೆ.

ಇಂದಿನಿಂದ ಮಾನಂಪಾಡಿ ದೇವಳದಲ್ಲಿ ವರ್ಷಾವಧಿ ಜಾತ್ರೆ ಆರಂಭ

ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಮಾನಂಪಾಡಿ ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದಲ್ಲಿ ವರ್ಷಾವಧಿ ಮಹೋತ್ಸವ ಹಾಗೂ ಚಂಡಿಕಾಯಾಗವು ಫೆ.24ರಿಂದ 25ರವರೆಗೆ ನಡೆಯಲಿದೆ. ಫೆ.24ಕ್ಕೆ ಬೆಳಿಗ್ಗೆ ಕಾರ್ನಾಡು ಕಟ್ಟೆಯಲ್ಲಿ ಶ್ರೀ ದೇವಿಯ ಪ್ರತಿಬಿಂಬ ಪ್ರತಿಷ್ಠೆ, ಸಂಜೆ ತನಕ ಪೂಜೆ,ಬೆಳಿಗ್ಗೆ ದೇವಳದಲ್ಲಿ ಚಂಡಿಕಾಯಾಗ,ಬಪ್ಪನಾಡು ಕ್ಷೇತ್ರಕ್ಕೆ ಫಲ,ಪುಷ್ಪ ಕಾಣಿಕೆ ಸಮರ್ಪಣೆ, ಶ್ರೀ ಮಹಾಗಣಪತಿ ದೇವರಿಗೆ ಮಹಾಪೂಜೆ ಶ್ರೀ ವೀರಭದ್ರ ದೇವರಿಗೆ ಮಹಾಪೂಜೆ, ಚಂಡಿಕಾಯಾಗ ಪೂರ್ಣಾಹುತಿ, ಪ್ರಸಾದ ವಿತರಣೆ, ಮಹಮ್ಮಾಯಿ ಸನ್ನಿಧಿಯಲ್ಲಿ ಮಹಾ ಪೂಜೆ, ದರ್ಶನ, ಮಧ್ಯಾಹ್ನ ಶ್ರೀ ಧೂಮಾವತಿ ದೈವದ ಭಂಡಾರ ಇಳಿದು, ಅನ್ನಸಂತರ್ಪಣೆ, ಸಂಜೆ ಕಾರ್ನಾಡು ಕಟ್ಟೆಯಿಂದ ಶ್ರೀ ದೇವಿಯ ಪ್ರತಿಬಿಂಬದ ಮೆರವಣಿಗೆ ಹೊರಟು ಮುಲ್ಕಿ ಬಸ್ ಸ್ಟಾಂಡ್, ಪಂಚಮಹಲ್ ಮಾರ್ಗದಿಂದ ಅಕ್ಕ ಸಾಲಿಗರಕೇರಿಯ ಮಾರ್ಗವಾಗಿ ಶ್ರೀ ಕ್ಷೇತ್ರಕ್ಕೆ ತಲುಪುವುದು. ರಾತ್ರಿ ಶ್ರೀ ವೀರಭದ್ರ ದೇವರಿಗೆ ರಂಗಪೂಜೆ. ಶ್ರೀ ಧೂಮಾವತಿ ದೈವದ ನೇಮ, ಶ್ರೀ ಮಹಾಮ್ಮಾಯ ಸನ್ನಿಧಿಯಲ್ಲಿ ಮಹಾಪೂಜೆ, ದರ್ಶನ, ಫೆ.25ಕ್ಕೆ ಮಧ್ಯಾಹ್ನ ಶ್ರೀ ದೇವಿಯ ಮಹಾಪೂಜೆ, ದರ್ಶನ, ಸಂಜೆ ದೇವಿಯ ಪ್ರತಿಬಿಂಬ ವಿಸರ್ಜನೆ, ಓಕುಳಿ ಸ್ನಾನ ನಡೆಯಲಿದೆ ಎಂದು ಕ್ಷೇತ್ರದ ಆಡಳಿತ ಮೊಕ್ತೇಸರ ಪುರಂದರ ಶೆಟ್ಟಿಗಾರ್ ತಿಳಿಸಿದ್ದಾರೆ

ಕಿಲೆಂಜಾರು: ಫೆ.26ರಿಂದ ಪ್ರತಿಷ್ಠಾ ಮಹೋತ್ಸವ

ಕೈಕಂಬ: ಕಿಲೆಂಜಾರು ಕುಪ್ಪೆಪದವು ಶ್ರೀ ಗರುಡ ಮಹಾಕಾಳಿಕಾಂಬ ದೇವಸ್ಥಾನದಲ್ಲಿ ಶ್ರೀ ಗರುಡ ಮಹಾಕಾಳಿಕಾಂಬಾ ಅಮ್ಮನವರ 54ನೇ ವರ್ಷದ ಪ್ರತಿಷ್ಠಾ ಮಹೋತ್ಸವ ನಾಗದರ್ಶನವು ಫೆ.26ರಿಂದ 28ರವರೆಗೆ ನಡೆಯಲಿದೆ. ಗುರುವಾರ ಬೆಳಿಗ್ಗೆ ತೋರಣ ಪ್ರತಿಷ್ಠೆ, ರಾತ್ರಿ ವಾಸ್ತು ರಾಕ್ಷೋಘ್ನ ಹೋಮ, ನವಗ್ರಹ ಸುದರ್ಶನ ಕಾಂತಿ ಹೋಮ, ಅಲಂಕಾರ ಪೂಜೆ, ಪುಷ್ಪ ಪೂಜೆ, ಮಹಾಪೂಜೆ, ಕುಂಭಕಂಠಿನಿ ಕೊಡಮಣಿತ್ತಾಯ, ಸತ್ಯದೇವತೆ, ಮಂತ್ರದೇವತೆ, ವಾರಾಹಿ ಜೊತೆ ವಾಷಾಣಮೂರ್ತಿ ದೈವಗಳ ಪೂಜೆ, ಮೂರ್ತಿಬಲಿ, ಪ್ರಸಾದ ವಿತರಣೆ. ಶುಕ್ರವಾರ ಬೆಳಗ್ಗೆ ಕಲಶ ಪ್ರತಿಷ್ಠೆ ಅಗ್ನಿ ಪ್ರತಿಷ್ಠೆ ಕಲಾಹೋಮ, ಅಭಿಷೇಕ, ಅಲಂಕಾರ ಪೂಜೆ, ತುಲಾಭಾರ ಸೇವೆ, ಮಹಾಪೂಜೆ, ಪ್ರಸಾದ ವಿತರಣೆ, ಮಧ್ಯಾಹ್ನ ಅನ್ನಸಂತರ್ಪಣೆ ರಾತ್ರಿ ಶ್ರೀ ಅಮ್ಮನವರಿಗೆ ಅಲಂಕಾರ ಪೂಜೆ, ಮಹಾಪೂಜೆ, ದೇವಿ ದರ್ಶನ, ಪ್ರಸಾದ ವಿತರಣೆ ನಡೆಯಲಿದೆ. ಶನಿವಾರ ನಾಗದೇವರಿಗೆ ಕಲಾಹೋಮ, ಅಭಿಷೇಕ, ಅಲರಿಕಾರ ಪೂಜೆ, ಮಹಾಪೂಜೆ, ನಾಗದರ್ಶನ, ಪ್ರಸಾದ ವಿತರಣೆ ನಡೆಯಲಿದೆ. ರಾತ್ರಿ ಭಜನೆ, ಮಹಾದೇವಿಗೆ ಸರ್ವಾಲಂಕಾರ ಪೂಜೆ, ಪುಷ್ಪಪೂಜೆ, ರಂಗಪೂಜೆ, ಮಹಾಪೂಜೆ, ದೇವಿ ದರ್ಶನ, ಕುಂಭಕಂಠಿನಿ ಕೊಡಮಣಿತ್ತಾಯ ಭೇಟಿ, ಪ್ರಸಾದ ವಿತರಣೆ ನಡೆಯಲಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಫೆ.26: ಜನಸಂಪರ್ಕ ಸಭೆ

ಕಡಬ: ಮೆಸ್ಕಾಂ ಕಡಬ ಉಪವಿಭಾಗ ಕಚೇರಿಯಲ್ಲಿ ಫೆ.26ಕ್ಕೆ ಬೆಳಗ್ಗೆ 11ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದೆ. ಮೆಸ್ಕಾಂನ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ. ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಬಹುದಾಗಿದ್ದು, ದೂ.ಸಂ.: 08251-200159ಗೆ ಕರೆ ಅಹವಾಲು ಸಲ್ಲಿಸಬಹುದಾಗಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಹಂಪನಕಟ್ಟೆ ವಿವಿ ಕಾಲೇಜಿನಲ್ಲಿ ಜನ್ಮದಿನ ಆಚರಣೆ | ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಭರವಸೆ

ಕಾಯರ್‌ಗೋಳಿಯಲ್ಲಿ ಅಮ್ಮೆಂಬಳ ಬಾಳಪ್ಪ ಪುತ್ಥಳಿ ನಿರ್ಮಾಣ



ಮಂಗಳೂರು: ಸ್ವಾತಂತ್ರ್ಯ ಹೋರಾಟಗಾರ ಅಮ್ಮೆಂಬಳ ಬಾಳಪ್ಪ ಅವರ ಹೆಸರು ಚಿರಸ್ಥಾಯಿಯಾಗಿಸಲು ಮುಡಿಪು ಕಾಯರ್‌ಗೋಳಿಯಲ್ಲಿರುವ ಸರ್ಕಲ್‌ಗೆ ಅಮ್ಮೆಂಬಳ ಬಾಳಪ್ಪ ಅವರ ನಾಮಕರಣ ಮಾಡಿ ಪುತ್ಥಳಿ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ ಎಂದು ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರ, ಪತ್ರಕರ್ತ ಹಾಗೂ ಕಾರ್ಮಿಕ ಮುಖಂಡ ಡಾ.ಅಮ್ಮೆಂಬಳ ಬಾಳಪ್ಪ ಅವರ ಜನ್ಮ ದಿನಾಚರಣೆ ಪ್ರಯುಕ್ತ ಸೋಮವಾರ ಮಂಗಳೂರು ವಿಶ್ವವಿದ್ಯಾಲಯ, ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ ಮಂಗಳಗಂಗೋತ್ರಿ, ಸ್ವಾತಂತ್ರ್ಯ ಯೋಧ ಡಾ.ಅಮ್ಮೆಂಬಳ ಬಾಳಪ್ಪ ಸೇವಾ ಪ್ರತಿಷ್ಠಾನ ಹಾಗೂ ವಿವಿ ಕಾಲೇಜಿನ ಇತಿಹಾಸ ವಿಭಾಗದ ವತಿಯಿಂದ ಹಂಪನಕಟ್ಟೆ ವಿವಿ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಆದರ್ಶ ಮೈಗೂಡಿಸಿ

ತ್ಯಾಗ, ಬದ್ಧತೆ, ಛಲ, ಸರಳತೆ ಹಾಗೂ ಪ್ರಾಮಾಣಿಕತೆ ಮುಖೇನ ಅಮ್ಮೆಂಬಳ ಬಾಳಪ್ಪ ಅವರು ಸಮಾಜಕ್ಕೆ ನೀಡಿದ ಕೊಡುಗೆ ಅಪೂರ್ವ. ವಿದ್ಯಾರ್ಥಿಗಳಿಗೆ ಅವರ ಆದರ್ಶ ನಡತೆ ಹಾಗೂ ಚಳವಳಿ ಮಾದರಿ ಎಂದರು.

ಮಾತನಾಡಲು ಸ್ವಾತಂತ್ರ್ಯ ಇದೆ ಎಂಬ ಕಾರಣ ನೀಡಿ ಬೇಕಾಬಿಟ್ಟಿ ಮಾತನಾಡುವ ಪ್ರಮೇಯ ಇಗ ಜಾಸ್ತಿ ಆಗಿದೆ. ಅಧಿವೇಶನದಿಂದ ಆರಂಭವಾಗಿ ಎಲ್ಲಾ ಕಡೆ ಇದೇ ಆಗಿದೆ. ಅನಾವಶ್ಯಕವಾಗಿ ಮಾತನಾಡಿ ಅದು ವಿವಾದ ಆಗುವುದು ಬಳಿಕ ಅದನ್ನು ಸರಿ ಮಾಡುವುದೇ ನಮ್ಮ ಕೆಲಸ ಎಂಬಂತಾಗಿದೆ. ದೇಶ ಸರಿ ಇದೆ. ಮೊದಲು ನಾವು ಸರಿ ಆಗಬೇಕು ಎಂದರು.

ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅವರು ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ತುಕಾರಾಮ ಪೂಜಾರಿ ಅವರು ವಿಶೇಷ ಉಪನ್ಯಾಸ ನೀಡಿದರು. ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ರಘುರಾಜ್ ಕದ್ರಿ, ವಿವಿ ಕಾಲೇಜು ಪ್ರಾಂಶುಪಾಲ ಪ್ರೊ.ಗಣಪತಿ ಗೌಡ, ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಮಾತೃ ಸಂಘದ ಅಧ್ಯಕ್ಷ ಮಯೂರ್ ಉಳ್ಳಾಲ್, ನಿವೃತ್ತ ಡೆಪ್ಯೂಟಿ ಕಮಾಂಡೆಂಟ್ ಚಂದಪ್ಪ ಮೂಲ್ಯ, ಇತಿಹಾಸ ವಿಭಾಗ ಮುಖ್ಯಸ್ಥ ಡಾ.ಜಯರಾಜ್ ಎನ್. ಸಹಿತ ಗಣ್ಯರು ಉಪಸ್ಥಿತರಿದ್ದರು. ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಸುರೇಶ್ ಕುಮಾರ್ ಬಿ.ನಾವೂರು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು.

> **ಸಮಾಜದ ಸ್ವಾಸ್ಥ್ಯ ಕಾಪಾಡಿ**
>
> ಹಿರಿಯರ ಪುಸ್ತಕಗಳನ್ನು ಓದುವ ಮೂಲಕ ವಿದ್ಯಾರ್ಥಿಗಳು ಭವಿಷ್ಯದ ಹೆಜ್ಜೆಯನ್ನು ಗಟ್ಟಿಗೊಳಿಸಬೇಕು. ಇಂದಿನ ದಿನದಲ್ಲಿ ಅಧಿಕ ಶಿಕ್ಷಣ ಪಡೆದವರಿಂದಲೇ ನಿಜವಾದ ಸಮಸ್ಯೆ ಎಂಬ ಸ್ಥಿತಿ ನಿರ್ಮಾಣವಾಗಿದೆ. ಅನಾವಶ್ಯಕ ಮಾತನಾಡಿ ಸಮಾಜದಲ್ಲಿ ಸ್ವಾಸ್ಥ್ಯ ಹಾಳು ಮಾಡುವುದು ಹಾಗೂ ಭಯೋತ್ಪಾದನೆ ಇನ್ನಿತರ ಚಟುವಟಿಕೆಯಲ್ಲಿ ಶಿಕ್ಷಿತರೇ ಇದ್ದಾರೆ.
>
> ● ಯು.ಟಿ. ಖಾದರ್, ಸ್ಪೀಕರ್

> **ಬಾಳಪ್ಪ ಬದುಕು ಸಮಾಜಕ್ಕೆ ಮಾದರಿ**
>
> ಸ್ಥಾನಾಪೇಕ್ಷೆ ಬಿಟ್ಟು ತತ್ವಾಪೇಕ್ಷಿಯಾಗಿದ್ದ ಅಮ್ಮೆಂಬಳ ಬಾಳಪ್ಪನವರ ಬದುಕು, ಆದರ್ಶ ಸಮಾಜಕ್ಕೆ ಮಾದರಿ. ನಮ್ಮ ನೆಲ, ನಮ್ಮ ದೇಶದ ಬಗ್ಗೆ ಅಭಿಮಾನ ಇರಬೇಕು ಎಂಬುದು ಅವರ ಬಲವಾದ ನಿಲುವಾಗಿತ್ತು. ಸ್ವಾಭಿಮಾನಿಯಾಗಿದ್ದ ಬಾಳಪ್ಪ ಯಾವುದೇ ಪ್ರಭಾವಕ್ಕೂ ಜಗ್ಗುತ್ತಿರಲಿಲ್ಲ. ಇಂತಹ ಅನುಕರಣೀಯ ವ್ಯಕ್ತಿತ್ವ ಹೊಂದಿದ್ದ ಅಮ್ಮೆಂಬಳ ಬಾಳಪ್ಪ ಹೆಸರಿನಲ್ಲಿ ಮಂಗಳೂರು ವಿವಿಯಲ್ಲಿ ಅಧ್ಯಯನ ಪೀಠ ಅಥವಾ ಇನ್ನಾವುದಾದರೂ ಕಾರ್ಯಕ್ರಮ ನಡೆಸುವ ಬಗ್ಗೆ ಯೋಚಿಸಬೇಕು.
>
> ● ಪ್ರೊ.ತುಕಾರಾಮ ಪೂಜಾರಿ

ಬಡಗಬೆಳ್ಳೂರು ಶ್ರೀ ಆದಿಶಕ್ತಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬ್ರಹ್ಮಕಲಶ



ಬಂಟ್ವಾಳ: ತಾಲೂಕಿನ ಬಡಗಬೆಳ್ಳೂರು ಗ್ರಾಮದ ಶ್ರೀ ಆದಿಶಕ್ತಿ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ದೇವರ ಬಿಂಬ ಪ್ರತಿಷ್ಠೆ, ಪರಿಕಲಶಾಭಿಷೇಕ ಸಹಿತ ಬ್ರಹ್ಮಕಲಶಾಭಿಷೇಕ ವೈಭವದಿಂದ ನಡೆಯಿತು.

ಬಳಿಕ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಮಾಣಿಲ ಶ್ರೀ ಮೋಹನದಾಸ ಪರಮಹಂಸಸ್ವಾಮೀಜಿ ಆಶೀರ್ವಚನ ನೀಡಿ, ದೇವಸ್ಥಾನದ ಗರ್ಭ ಗುಡಿಗಿಂತಲೂ ಹೆಚ್ಚಾಗಿ ಭಕ್ತನ ಹೃದಯದಲ್ಲಿ ಚಾಮುಂಡೇಶ್ವರಿ ನೆಲೆಸುತ್ತಾಳೆ. ಅಂತಹ ತಾಯಿಯ ಕ್ಷೇತ್ರ ಇಂದು ಅಭಿವೃದ್ಧಿಗೊಂಡಿದ್ದು, ಹೃದಯ ತುಂಬಿ ಬಂದಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ರಘು ಎಲ್.ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್, ಮಾಜಿ ಸಚಿವ ರಮಾನಾಥ ರೈ, ದೇವಸ್ಥಾನದ ಸಂಸ್ಥಾಪಕರ ಪತ್ನಿ ಶಾರದಾ ಸದಾಶಿವ ಕರ್ಕೇರ, ಮಧುಗಿರಿ ಶ್ರೀ ಸಾಮ್ರಾಜ್ಯ ಲಕ್ಷ್ಮೀ ಮಹಾಸಂಸ್ಥಾನದ ಕೃಪಾನಿಧಿ ಗುರೂಜಿ, ತಪೋನಿಧಿ ಬಾಬಾ ವಿಠಲ ಗಿರಿ ಮಹಾರಾಜ್, ಬಡಗಬೆಳ್ಳೂರು ಗ್ರಾ.ಪಂ. ಅಧ್ಯಕ್ಷೆ ರೂಪಶ್ರೀ ನಾರಾಯಣ ನಾಯ್ಕ, ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರ ಡಾ. ಮಂಜಯ್ಯ ಶೆಟ್ಟಿ, ಭರತ್ ಬಂಗೇರ ಅಮ್ಮುಂಜೆ, ಧೀರಜ್ ನಾಯ್ಕ್, ಮಾಜಿ ಮೇಯರ್ ಭಾಸ್ಕರ್ ಕೆ., ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸಂಜೀವ ಪೂಜಾರಿ, ಟ್ರಸ್ಟ್ ಅಧ್ಯಕ್ಷ ವಸಂತ ಎಂ. ಬೆಳ್ಳೂರು, ಕಾರ್ಯಾಧ್ಯಕ್ಷ ಸಂದೀಪ್ ಸದಾಶಿವ ಬೆಳ್ಳೂರು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ಕ್ಷೇತ್ರದ ಸೇವಾಕರ್ತರನ್ನು ಗೌರವಿಸಲಾಯಿತು. ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದೇವಪ್ಪ ಪೂಜಾರಿ ಬಾಳಿಕೆ ಸ್ವಾಗತಿಸಿದರು. ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಹಾಸ ಪಳ್ಳಿಪ್ಪಾಡಿ ಪ್ರಾಸ್ತಾವಿಕ ಮಾತನಾಡಿದರು. ಟ್ರಸ್ಟಿ ಶಶಿಕಿರಣ್ ವಂದಿಸಿದರು. ಪ್ರವೀಣ್ ಎಸ್. ಕುಂಪಲ ನಿರೂಪಿಸಿದರು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ,ವಿ.ಪ.ಸದಸ್ಯ ಕಿಶೋರ್ ಕುಮಾರ್ ಬೋಟ್ಯಾಡಿ,ಬಂಟ್ವಾಳ ತಾ.ಪಂ. ಮಾಜಿ ಉಪಾಧ್ಯಕ್ಷ ದಿನೇಶ್ ಅಮ್ಟೂರು ಸಹಿತ ಹಲವಾರು ಗಣ್ಯರು ಆಗಮಿಸಿ ದೇವರ ದರುಶನ ಪಡೆದು ಪ್ರಸಾದ ಸ್ವೀಕರಿಸಿದರು.

ಅತ್ತಾವರ ಶ್ರೀ ಅಯ್ಯಪ್ಪಸ್ವಾಮಿ ಕ್ಷೇತ್ರದ ಬ್ರಹ್ಮಕಲಶ: ವಿಜ್ಞಾಪನಾ ಪತ್ರ ಬಿಡುಗಡೆ



ಮಂಗಳೂರು: ನೂರಾರು ವರ್ಷಗಳ ಇತಿಹಾಸವುಳ್ಳ ಅತ್ತಾವರ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಬ್ರಹ್ಮಕಲಶಾಭಿಷೇಕ ಏ.23ರಂದು ನಡೆಯಲಿದ್ದು, ಇದರ ಪ್ರಯುಕ್ತ ವಿಜ್ಞಾಪನಾ ಪತ್ರ ಬಿಡುಗಡೆಯು ಭಾನುವಾರ ಶ್ರೀಕ್ಷೇತ್ರದಲ್ಲಿ ನಡೆಯಿತು.

ಅತ್ತಾವರ ಚಕ್ರಪಾಣಿ ಗೋಪಿನಾಥ ದೇವಸ್ಥಾನದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಭಟ್ ಆಶೀರ್ವಚನ ನೀಡಿದರು.

ಜಿಲ್ಲೆಯ ಮೊದಲ ಅಯ್ಯಪ್ಪ ಕ್ಷೇತ್ರ

ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ವಿಜ್ಞಾಪನ ಪತ್ರ ಬಿಡುಗಡೆಗೊಳಿಸಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲ ಅಯ್ಯಪ್ಪ ದೇವಸ್ಥಾನ ಇದಾಗಿದ್ದು, ಇದರ ಬ್ರಹ್ಮಕಲಶಾಭಿಷೇಕ ಶುಭಕಾರ್ಯ ಒದಗಿರುವುದು ನಮ್ಮೆಲ್ಲರ ಭಾಗ್ಯ. ಈ ದೇವತಾ ಕಾರ್ಯದಲ್ಲಿ ಅಯ್ಯಪ್ಪ ಭಕ್ತ ಅಭಿಮಾನಿಗಳು ಊರಾ ಹಾಗೂ ಪರ ಊರ ಭಕ್ತಾ ಅಭಿಮಾನಿಗಳು ಎಲ್ಲರೂ ಒಟ್ಟಿಗೆ ಸೇರಿ ದೇವತಾ ಕಾರ್ಯದಲ್ಲಿ ಕೈ ಜೋಡಿಸೋಣ ಎಂದರು. ಮುಖ್ಯ ಅತಿಥಿಗಳಾಗಿ ಚಕ್ರಪಾಣಿ ಗೋಪಿನಾಥ ದೇವಸ್ಥಾನದ ಆಡಳಿತ ಮಂಡಳಿಯ ಧರ್ಮಣ್ಣ ನಾಯ್ಕ್, ಕಾರ್ಪೊರೇಟರ್ ಅಬ್ದುಲ್ ರವೂಫ್, ಸ್ವಾಗತ ಸಮಿತಿ ಗೌರವಾಧ್ಯಕ್ಷ ರತೀಂದ್ರನಾಥ್, ಬ್ರಹ್ಮಕಲಶದ ಅಧ್ಯಕ್ಷ ಸೂರಜ್ ರಾಘವನ್, ಕಾರ್ಯಾಧ್ಯಕ್ಷ ಗೋಕುಲದಾಸ್ ಮತ್ತು ಮುರಲೀಧರ್, ಗೌರವ ಕೋಶಾಧಿಕಾರಿ ಸಂತೋಷ್ ಶೆಟ್ಟಿ, ಸ್ವಾಗತ ಸಮಿತಿ ಅಧ್ಯಕ್ಷ ರಾಜರತ್ನ ಸನಿಲ್, ಗೌರವ ಕಾರ್ಯದರ್ಶಿ ಜನಾರ್ಧನ್ ಅತಾವರ ಮತ್ತು ಮೋಹನ್ ಪೂಜಾರಿ, ಅಯ್ಯಪ್ಪ ದೇವಸ್ಥಾನ ಪಡೀಲ್ ಇದರ ಅಧ್ಯಕ್ಷ ಮೋಹನ ಪಡೀಲ್, ಅಯ್ಯಪ್ಪ ಸೇವಾ ಸಮಿತಿಯ ಜಿಲ್ಲಾ ಅಧ್ಯಕ್ಷ ಗಣೇಶ್, ಕ್ಷಿತಿ ಮಮ್ಮೂರು, ಅಮೃತ ಪ್ರಕಾಶ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ ಡಾ. ಮಾಲತಿ ಶೆಟ್ಟಿ ಮಾಣೂರು, ಭಕ್ತ ಸಮಿತಿ ಅಧ್ಯಕ್ಷ ಸೂರ್ಯಕಾಂತ್ ಇದ್ದರು. ರಘುವೀರ್ ಬಾಬುಗುಡ್ಡೆ ಸ್ವಾಗತಿಸಿ, ಕಾರ್ಯಕ್ರಮ ವಂದಿಸಿದರು.

ಸಮಾಜ ಸೇವಾ ಸಹಕಾರಿ ಸಂಘದ 204 ಸದಸ್ಯರ ಮಕ್ಕಳಿಗೆ 'ವಿದ್ಯಾನಿಧಿ'



ಬಂಟ್ವಾಳ: ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸೇವಾ ಸಹಕಾರಿ ಸಂಘದ ಸ್ಥಾಪಕಾಧ್ಯಕ್ಷ ಸಮಾಜ ಸೇವಾ ರತ್ನ ಡಾ. ಅಮ್ಮೆಂಬಳ ಬಾಳಪ್ಪರವರ ಜನ್ಮ ದಿನದ ಪ್ರಯುಕ್ತ ಸ್ಥಾಪಕರ ದಿನಾಚರಣೆ ಬಂಟ್ವಾಳ ಬೈಪಾಸ್‌ನ ಸಮಾಜ ಸೇವಾ ಸಹಕಾರಿ ಸಂಘದ ಕೇಂದ್ರ ಕಚೇರಿಯ ಡಾ. ಬಾಳಪ್ಪ ವೇದಿಕೆಯಲ್ಲಿ ನಡೆಸಲಾಯಿತು.

ಈ ಸಂದರ್ಭ ಉನ್ನತ ಶಿಕ್ಷಣ ಪಡೆಯುತ್ತಿರುವ ಸಂಘದ 204 ಸದಸ್ಯರ ಮಕ್ಕಳಿಗೆ ಸಂಘದ ವಿದ್ಯಾನಿಧಿಯಿಂದ ಒಟ್ಟು ರೂ. 8,80 ಲ.ರೂ. ವಿದ್ಯಾರ್ಥಿ ವೇತನ ವಿತರಿಸಲಾಯಿತು. ಐ.ಸಿ.ಐ.ಸಿ.ಐ. ಬ್ಯಾಂಕ್ ಸಹಯೋಗದೊಂದಿಗೆ ಸಂಘದ ಐ.ಎಫ್.ಎಸ್.ಸಿ ಕೋಡ್ ಮತ್ತು ಸಂಘದ ಸದಸ್ಯರ ಖಾತೆಗೆ ಯುಪಿಐ, ಐಎಂಪಿಎಸ್ ಮತ್ತು ನೆಫ್ಟ್ ಮೂಲಕ ನೇರವಾಗಿ ಜಮೆ ಮಾಡುವ ಇ.ಕಲೆಕ್ಷನ್ ಸೌಲಭ್ಯ ಬಿಡುಗಡೆ ಮಾಡಲಾಯಿತು. ಸಂಘದ ಅಧ್ಯಕ್ಷ ಸುರೇಶ್ ಕುಲಾಲ್ ಅಧ್ಯಕ್ಷತೆ ವಹಿಸಿದ್ದರು. ಐ.ಸಿ.ಐ.ಸಿ.ಐ. ಬ್ಯಾಂಕ್ ನರಿಜನಲ್ ಹೆಡ್ ಪ್ರಶಾಂತ್ ಕಿಣಿ, ಸಂತೋಷ್ ಈ ಸೌಲಭ್ಯದ ಬಗ್ಗೆ ಮಾಹಿತಿ ನೀಡಿದರು. ಐಸಿಐಸಿಐ ಬಿ.ಸಿ.ರೋಡು ಶಾಖಾ ವ್ಯವಸ್ಥಾಪಕ ರವಿ, ದ.ಕ. ಜಿಲ್ಲಾ ಸಹಕಾರಿ ಯೂನಿಯನ್‌ನ ಕಾರ್ಯದರ್ಶಿ ಎಸ್.ಎಸ್. ಹೀರೇಮಠ್ ಮತ್ತು ಡಾ. ಅಮ್ಮೆಂಬಳ ಬಾಳಪ್ಪರವರ ಸೊದರ ಸಂಬಂಧಿ ರವೀಂದ್ರನಾಥ್ ಅವರು ಅತಿಥಿಗಳಾಗಿ ಭಾಗವಹಿಸಿದ್ದರು. ಇದೇ ವೇಳೆ 2024-25ನೇ ಸಾಲಿನ ಸಂಘದ ಲಾಭಂಶದಿಂದ ಕೊಡಲ್ಪಡುವ ಸಹಕಾರಿ ಶಿಕ್ಷಣ ನಿಧಿಗೆ 7,56,853 ರೂ.ವಿನ ಚೆಕ್ ಅನ್ನು ಸಹಕಾರಿ ಯೂನಿಯನ್ ಕಾರ್ಯದರ್ಶಿ ಎಸ್.ಎಸ್.ಹೀರೇಮಠ್‌ಗೆ ಹಸ್ತಾಂತರಿಸಲಾಯಿತು. ಸಂಘದ ಉಪಾಧ್ಯಕ್ಷ ಜನಾರ್ಧನ ಬೊಂಡಾಲ, ನಿರ್ದೇಶಕ ಬಿ. ರಮೇಶ್ ಸಾಲ್ಯಾನ್, ರಮೇಶ್ ಸಾಲ್ಯಾನ್, ಸುರೇಶ್ ಕುಲಾಲ್ ಎನ್., ಭೋಜ ಸಾಲ್ಯಾನ್, ಪ್ರೇಮನಾಥ ಬಂಟ್ವಾಳ್, ವಿದ್ಯಾ, ಮಾಲತಿ ಮಚ್ಚೇಂದ್ರ, ರೇಖಾ ನಾಯಕ್, ಎಂ.ಕೆ. ಗಣೇಶ್ ಸಮಗಾರ, ಜಗನ್ನಿವಾಸ ಗೌಡ ಇದ್ದರು. ಸಂಘದ ನಿರ್ದೇಶಕ ಅರುಣ್ ಕುಮಾರ್ ಮಾತನಾಡಿದರು. ದೀಪಿಕಾ ಪ್ರಾರ್ಥಿಸಿ, ನಿರ್ದೇಶಕ ಸತೀಶ್ ಪಲ್ಲಮಜಲು ಸ್ವಾಗತಿಸಿ, ಪ್ರಧಾನ ವ್ಯವಸ್ಥಾಪಕ ಭೋಜ ಮೂಲ್ಯ ಪ್ರಸ್ತಾಪಿಸಿದರು. ಸಹಾಯಕ ಪ್ರಧಾನ ವ್ಯವಸ್ಥಾಪಕ ಮೋಹನ್ ಎಂ.ಕೆ. ನಿರ್ವಹಿಸಿದರು. ಉಪ್ಪಿನಂಗಡಿ ಶಾಖಾ ಪ್ರಭಾರ ವ್ಯವಸ್ಥಾಪಕ ಶಿವರಾಮ ವಂದಿಸಿದರು.

ಗೌರವಧನ ನೀಡುವಂತೆ ಪಶು ಸಖಿಯರಿಂದ ಶಾಸಕರಿಗೆ ಮನವಿ ಸಲ್ಲಿಕೆ



ಪುತ್ತೂರು: ಪಶು ವೈದ್ಯಕೀಯ ಇಲಾಖೆಯಲ್ಲಿ ಪಶು ಸಖಿಯರಾಗಿ ಸೇವೆ ಸಲ್ಲಿಸುತ್ತಿರುವರಿಗೆ ಗೌರವಧನ ನೀಡಲು ಸರಕಾರದ ಮಟ್ಟದಲ್ಲಿ ಒತ್ತಾಯಿಸುವಂತೆ ಶಾಸಕ ಅಶೋಕ್ ರೈಗೆ ಮನವಿ ಸಲ್ಲಿಸಿದ್ದಾರೆ.

ಸಿಗದ ಸೂಕ್ತ ಸೌಲಭ್ಯ

ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಸಿಬ್ಬಂದಿಗಳಾಗಿ 2022-23 ನೇ ಸಾಲಿನಿಂದ ಎನ್.ಆರ್.ಎಲ್.ಎಂ ಹಾಗೂ ಒಗ್ಗೂಡಿಸುವಿಕೆ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದು ಇದರೊಂದಿಗೆ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಕಾರ್ಯ ಚಟುವಟಿಕೆಗಳಾದ ಲಸಿಕಾ ಕಾರ್ಯಕ್ರಮ, ಪಶುಧನ ಅಪ್ ನಲ್ಲಿ ಜಾನುವಾರುಗಳ ಟ್ಯಾಗ್ ಎಂಟ್ರಿ, ಕರುಗಳ ನೋಂದಣಿ, ರೇಬೀಸ್ ಲಸಿಕಾ ಕಾರ್ಯಕ್ರಮ, ಜಾನುವಾರು ಗಣತಿ ರೈತರಿಗೆ ಇಲಾಖೆಯ ಮಾಹಿತಿಗಳು ಹಾಗೂ ಇತರ ಇಲಾಖಾ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಸಂಬಂಧಪಟ್ಟ ಗ್ರಾ.ಪಂ. ವ್ಯಾಪ್ತಿಯ ರೈತರ ಮತ್ತು ಇಲಾಖೆಯ ನಡುವೆ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಪ್ರಸ್ತುತ ಎನ್.ಆರ್.ಎಲ್.ಎಂ. ಯೋಜನೆಯಡಿ ಸಂಜೀವಿನಿ ಒಕ್ಕೂಟಗಳ ಮುಖಾಂತರ ಮಾಸಿಕ ಗೌರವಧನವನ್ನು ಮಾತ್ರ ಪಡೆಯುತ್ತಿದ್ದು ಪಶುಪಾಲನಾ ಇಲಾಖೆಯಿಂದ ಯಾವುದೇ ಗೌರವಧನವನ್ನಾಗಲೀ, ಪ್ರಯಾಣ ಭತ್ಯೆಯನ್ನಾಗಲಿ ಹಾಗೂ ಮೊಬೈಲ್ ಇಂಟರ್ ನೆಟ್ ಭತ್ಯೆಯನ್ನಾಗಲೀ ಪಡೆಯುತ್ತಿಲ್ಲ, ಆದ್ದರಿಂದ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಗಮನ ಸೆಳೆಯುವಂತೆ ಪಶು ಸಖಿಯರು ಮನವಿಯಲ್ಲಿ ವಿನಂತಿಸಿದ್ದಾರೆ.

ಮೂಡುಬಿದಿರೆಯಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿಯ ಆರಂಭ



ಮೂಡುಬಿದಿರೆ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ದಕ್ಷಿಣ ಕನ್ನಡ ಜಿಲ್ಲೆ, ನ್ಯಾಯಾಂಗ ಇಲಾಖೆ ಮೂಡುಬಿದಿರೆ ಹಾಗೂ ವಕೀಲರ ಸಂಘ ಮೂಡುಬಿದಿರೆ ಇದರ ಸಂಯುಕ್ತಾಶ್ರಯದಲ್ಲಿ ನೂತನ ತಾಲೂಕು ಕಾನೂನು ಸೇವೆಗಳ ಸಮಿತಿಯ ಉದ್ಘಾಟನೆಯನ್ನು ಪ್ರಧಾನ ಜಿಲ್ಲಾ ನ್ಯಾಯಾಧೀಶ ಬಸವರಾಜ್ ಅವರು ಮೂಡುಬಿದಿರೆ ನ್ಯಾಯಾಲಯದ ಆವರಣದಲ್ಲಿ ನಡೆಸಿದರು.

ಸಮಾಜಕ್ಕೆ ಬೇಕಾದ ಕಾನೂನು ನೆರವು ಮೂಡಿಸುವುದು, ಅರಿವು ಮೂಡಿಸುವುದು, ಲೋಕ ಅದಾಲತ್ ನಡೆಸುವುದು ಇವೇ ಮೊದಲಾದ ಜವಾಬ್ದಾರಿ ಕಾನೂನು ಸೇವೆಗಳ ಸಮಿತಿಗೆ ಇದೆ. ಎಲ್ಲಾ ವಕೀಲರು ಇದಕ್ಕೆ ಪೂರ್ಣ ಪ್ರಮಾಣದ ಸಹಕಾರ ನೀಡುವಂತಾಗಲಿ ಎಂದು ಆಶಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾಯಾಧೀಶೆ ಜೈಬುನ್ನೀಸಾ ಅವರು ಮಾತನಾಡಿ, ಬಹುದಿನಗಳ ಆಸೆ ನೆರವೇರಿದೆ. ಕಾನೂನಿಗೆ ಸಂಬಂಧಿಸಿದ, ಬಡವರಿಗೆ ನೆರವು ಅರಿವು ನೀಡುವ ಸಮಿತಿ ಇದಾಗಿದೆ. ನ್ಯಾಯಾಂಗ ಹಾಗೂ ವಕೀಲರ ಸಹಯೋಗದಲ್ಲಿ ನಡೆಯುವ ಬಹುದೊಡ್ಡ ಕಾರ್ಯವಾಗಿದೆ. ಸಾರ್ವಜನಿಕರಿಗೆ ತ್ವರಿತವಾಗಿ ನ್ಯಾಯ ಹಾಗೂ ಕಾನೂನು ಅರಿವು ನೀಡುವ ಒಂದು ವ್ಯವಸ್ಥೆಯಾಗಿದೆ ಎಂದರು. ಮೂಡುಬಿದಿರೆಯ ಹಿರಿಯ ಸಿವಿಲ್ ನ್ಯಾಯಾಧೀಶ ಮಧುಕರ್ ಭಾಗವತ್ ಮಾತನಾಡಿ, ಎಲ್ಲರ ಕನಸಾಗಿದ್ದ ಕಾನೂನು ಸೇವೆಗಳ ಸಮಿತಿ ತನ್ನ ಅವಧಿಯಲ್ಲಿ ಆರಂಭಗೊಂಡಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು. ವಕೀಲರ ಸಂಘದ ಸೀನಿಯರ್ ಕಮಿಟಿ ಚೇರ್ ಮ್ಯಾನ್ ಎಂ. ಬಾಹುಬಲಿ ಪ್ರಸಾದ್, ಹಿರಿಯ ವಕೀಲ ಕೆ.ಆರ್. ಪಂಡಿತ್, ಸಹಾಯಕ ಸರಕಾರಿ ಅಭಿಯೋಜಕರಾದ ನೇತ್ರಾವತಿ, ಶೋಭಾ ಎಸ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ಭಂಡಾರಿ ವೇದಿಕೆಯಲ್ಲಿದ್ದರು. ವಕೀಲರ ಸಂಘದ ಅಧ್ಯಕ್ಷ ಹರೀಶ್ ಪಿ. ಅಧ್ಯಕ್ಷತೆ ವಹಿಸಿದ್ದರು.

ಅಜ್ಜಾವರ ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮುರುಳ್ಯ ಚಾಲನೆ



ಸುಳ್ಯ: ಅಜ್ಜಾವರ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸೋಮವಾರ ಶಾಸಕಿ ಭಾಗೀರಥಿ ಮುರುಳ್ಯ ಗುದ್ದಲಿಪೂಜೆ ಮತ್ತು ಕಾಮಗಾರಿಗಳನ್ನು ಉದ್ಘಾಟಿಸಿದರು.

ಶಾಸಕಿ ಸುಮಾರು ರೂ.20 ಲಕ್ಷ ಅನುದಾನದಲ್ಲಿ ಅಜ್ಜಾವರ ಗ್ರಾಮದ ಕರಿಯಮೂಲೆ ಎಂಬಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ಅಂಗನವಾಡಿ ಕೇಂದ್ರಕ್ಕೆ ಗುದ್ದಲಿಪೂಜೆ ನಡೆಸಿದರು. ಅಜ್ಜಾವರದ ದ.ಕ. ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಗೆ ನೂತನವಾಗಿ ನಿರ್ಮಾಣಗೊಂಡ ಕೊಠಡಿ ಉದ್ಘಾಟಿಸಿದರು. ಈ ಸಂದರ್ಭ ಪದ್ಮನಾಭ ಸ್ವಾಮಿ ಮೇನಾಲ, ಮಾಜಿ ಗ್ರಾ.ಪಂ ಅಧ್ಯಕ್ಷೆ ದೇವಕಿ, ಗೀತಾ, ಸರೋಜಿನಿ, ಪ್ರಸಾದ್ ಕುಮಾರ್ ರೈ ಮೇನಾಲ, ಕಿಟ್ಟಣ್ಣರೈ ಮೇನಾಲ ಇರಂತಮಜಲು, ದಾಸಪ್ಪ ತುದಿಯಡ್ಕ, ಸುಬೋದ್ ಶೆಟ್ಟಿ ಮೇನಾಲ, ರಾಜೇಶ್ ಶೆಟ್ಟಿ ಮೇನಾಲ, ವೆಂಕಟರಮಣ, ಸುಕುಮಾರ್, ಪ್ರಬೋದ್ ಶೆಟ್ಟಿ ಮೇನಾಲ, ಸುನೀಲ್ ರೈ ಇರಂತಮಜಲ, ಸುಧಾಕರ ಪಲ್ಲತಡ್ಕ, ರತ್ನಾಕರ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಪುಷ್ಪಾ ಕರ್ಲಪ್ಪಾಡಿ, ಪಂ. ಅಭಿವೃದ್ಧಿ ಅಧಿಕಾರಿ ಜಯಮಾಲಾ, ಗುತ್ತಿಗೆದಾರ ಇಬ್ರಾಹಿಂ ಮತ್ತಿತರರು ಭಾಗವಹಿಸಿದ್ದರು.

ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ

ವಿಜೃಂಭಣೆಯ ಪಲ್ಲಕಿ ಉತ್ಸವ, ಮಹಾರಥೋತ್ಸವ ಸಂಪನ್ನ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವದ ಪ್ರಯುಕ್ತ ಪಲ್ಲಕ್ಕಿ ಉತ್ಸವ ಮಹಾ ರಥೋತ್ಸವ ವಿಜೃಂಭಣೆಯಿಂದ ಭಾನುವಾರ ರಾತ್ರಿ ನಡೆಯಿತು.



ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಕೊಡವೂರು ರಾಧಾಕೃಷ್ಣ ಉಪಾಧ್ಯಾಯ ಮಾರ್ಗದರ್ಶನದಲ್ಲಿ ಅರ್ಚಕ ವಾಸುದೇವ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಭಾನುವಾರ ಬೆಳಿಗ್ಗೆ 7ಕ್ಕೆ ಕವಾಟೋದ್ಘಾಟನೆ, ತುಲಾಭಾರ ಸೇವೆ, ಮಧ್ಯಾಹ್ನ ನವಕ ಪ್ರಧಾನ ಮಹಾಪೂಜೆ ಮಹಾ ಅನ್ನಸಂತರ್ಪಣೆ ನಡೆಯಿತು. ರಾತ್ರಿ ಶ್ರೀ ದೇವರು ಪಲ್ಲಕ್ಕಿಯಲ್ಲಿ ವಿರಾಜಮಾನ ರಾಗಿ ಪಲ್ಲಕಿ ಉತ್ಸವ, ಕಟ್ಟೆ ಪೂಜೆ ನಡೆದು ಮಹಾ ರಥೋತ್ಸವ, ತೆಪ್ಪೋತ್ಸವ, ಧ್ವಜಾವರೋಹಣ ನಡೆಯಿತು. ಈ ಸಂದರ್ಭ ವಿದ್ವಾನ್ ಕೃಷ್ಣ ಭಟ್ ಪಾವಂಜೆ, ದೇವಸ್ಥಾನದ ಆಡಳಿತ ಮೊಕ್ತೇಸರ ಸೂರ್ಯ ಕುಮಾರ್, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್ ಕೊಳುಬೈಲು, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಡಾ.ಶಿವಾನಂದ ಪ್ರಭು, ಯಾದವ ದೇವಾಡಿಗ, ಸುಭಾಷ್ ಕೋಟ್ಯಾನ್, ಜಯಕೃಷ್ಣ ಕೋಟ್ಯಾನ್, ಸುಕುಮಾರ್, ತನುಜಾ ಶೆಟ್ಟಿ, ರತ್ನ ಎಸ್. ಕೋಟ್ಯಾನ್, ಹಳೆಯಂಗಡಿ ಬಿಲ್ಲವ ಸಂಘದ ಅಧ್ಯಕ್ಷ ಚಂದ್ರಶೇಖರ್ ನಾಣಿಲ್, ಪ್ರೇಮಲತಾ ಯೋಗೀಶ್, ಎಸ್ ಕೆಪಿಎ ವಿವಿಧೋದ್ದೇಶ ಸಹಕಾರಿ ಸಂಘದ ಸದಸ್ಯ ಮೋಹನ್ ರಾವ್ ಸಹಿತ ನೂರಾರು ಭಕ್ತರು ಮತ್ತಿತರರು ಉಪಸ್ಥಿತರಿದ್ದರು. ಫೆಬ್ರವರಿ 23 ಸೋಮವಾರ ಸಂಜೆ ಸಂಪ್ರೋಕ್ಷಣೆ ಮಹಾ ಮಂತ್ರಾಕ್ಷತೆ ನಡೆಯಿತು.

ಆರು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮ

ಶಿಮಂತೂರು ಕ್ಷೇತ್ರ: ಮಾ.1ರಿಂದ ಜಾತ್ರೆ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶಿಮಂತೂರು ಶ್ರೀ ಆದಿ ಜನಾರ್ದನ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವ ಮಾ.2ರಿಂದ 7ರವರೆಗೆ ನಡೆಯಲಿದೆ.



ಮಾರ್ಚ್ 1ಕ್ಕೆ ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ತೋರಣ ಮುಹೂರ್ತ, ರಂಗ ಪೂಜೆ, ಅಂಕುರಾರೋಹಣೆ, ಮಾ.2ಕ್ಕೆ ಮಧ್ಯಾಹ್ನ 11:30ಕ್ಕೆ ಧ್ವಜಾರೋಹಣ, ಅನ್ನ ಸಂತರ್ಪಣೆ, ರಾತ್ರಿ ಉತ್ಸವ ಬಲಿ, ಮಾ.3ಕ್ಕೆ ಬೆಳಿಗ್ಗೆ 11 ಗಂಟೆಗೆ ಮಹಾಪೂಜೆ, ಚಂದ್ರ ಗ್ರಹಣ ಪ್ರಯುಕ್ತ ಫಲಹಾರ, ಸಂಜೆ 3 ಗಂಟೆಗೆ ಗ್ರಹಣ ನಿಮಿತ್ತ ಶಾಂತಿ ಹೋಮ, ಪ್ರಾಯಶ್ಚಿತ್ತ, ಸಂಜೆ 7 ಗಂಟೆಗೆ ಶುದ್ಧಕಲಶಾಭಿಷೇಕ, ಅಲಂಕಾರ ಪೂಜೆ, ರಾತ್ರಿ 8 ಗಂಟೆಗೆ ಉತ್ಸವ ಬಲಿ, ಬಾಕಿಮಾರು ದೀಪ, ಕೆರೆ ದೀಪ, ಮಾ. 4 ಬುಧವಾರ ಬೆಳಿಗ್ಗೆ 9: ಗಂಟೆಯಿಂದ ಚಂಡಿಕಾಯಾಗ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಸಂಜೆ 4 ಗಂಟೆಗೆ ಬಲಿ, ಶ್ರೀ ದೇವರ ಕುಬೆವೂರು ಸವಾರಿ ನಡೆಯಲಿದೆ.

ಮಾ.5ಕ್ಕೆ ರಥೋತ್ಸವ

ಮಾ. 5 ಗುರುವಾರ ಸಂಜೆ ಪಂಜಿನಡ್ಕ ಸವಾರಿ, ಮಾ. 6 ಶುಕ್ರವಾರ ಹಗಲು ರಥೋತ್ಸವ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ಉತ್ಸವ ಬಲಿ, ಭೂತ ಬಲಿ, ಶಯನ ಮತ್ತು ಕವಟ ಬಂಧನ, ಮಾ.7 ಶನಿವಾರ ಬೆಳಿಗ್ಗೆ 7 ಗಂಟೆಗೆ ಕವಾಟೊದ್ಘಾಟನೆ, ತುಲಾಭಾರ ಸೇವೆ, ಮಧ್ಯಾಹ್ನ ಮಹಾಪೂಜೆ ಮಹಾ ಅನ್ನಸಂತರ್ಪಣೆ, ರಾತ್ರಿ ಮಹಾ ರಥೋತ್ಸವ, ಅವಭೃತ ಸ್ನಾನ, ಧ್ವಜಾವರೋಹಣ, ಮಾ.8ಕ್ಕೆ ಮಹಾ ಸಂಪ್ರೋಕ್ಷಣೆ ಮತ್ತು ಮಂತ್ರಾ ಕ್ಷತೆ, ಅನ್ನ ಸಂತರ್ಪಣೆ ನಡೆಯಲಿದೆ ಎಂದು ಕ್ಷೇತ್ರದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡು ನಗರಸಭೆಯ ಸಾಮಾನ್ಯಸಭೆಯಲ್ಲಿ ಬಿಜೆಪಿ ಸದಸ್ಯರಿಂದ ತೀವ್ರ ಪ್ರತಿಭಟನೆ, ಆಕ್ರೋಶ

ಅನಧಿಕೃತ ಕಟ್ಟಡ ನಿರ್ಮಾಣ ತೆರವುಗೊಳಿಸಬೇಕೆಂದು ಆಗ್ರಹ

ಕಾಸರಗೋಡು: ಕಾಸರಗೋಡು ಹೊಸ ಬಸ್ ನಿಲ್ದಾಣದಲ್ಲಿ ನಗರಸಭೆಯ ಸ್ವಾಮ್ಯದ 6/1046 ಬಿ ಸಂಖ್ಯೆಯ ಕಟ್ಟಡಕ್ಕೆ ಲೈಸನ್ಸ್ (ಬಾಡಿಗೆ) ಪಡೆದು ನಗರಸಭೆಯ ತಿಳುವಳಿಕೆ ಮತ್ತು ಅನುಮತಿಯಿಲ್ಲದೆ ರಿಷಾಲ್ ಕೆ.ಎಂ.

ಎಂಬವರು ಕಟ್ಟಡದ ಮುಂಭಾಗದಲ್ಲಿ ಶೀಟ್ ಬಳಸಿ ನಿರ್ಮಿಸಿದ ಅನಧಿಕೃತ ನಿರ್ಮಾಣವನ್ನು ತೆರವುಗೊಳಿಸುವ ಆದೇಶದ ವಿರುದ್ಧ ಹಾಗೂ ಆ ಕ್ರಮವನ್ನು ಸ್ಥಗಿತಗೊಳಿಸಲು ರಿಷಾಲ್ ಕೆ.ಎಂ. ಅವರು ನಗರಸಭಾ ಅಧ್ಯಕ್ಷರಿಗೆ ಸಲ್ಲಿಸಿದ ಅಪೀಲ್ ಅರ್ಜಿಯನ್ನು ಪರಿಗಣಿಸುವ ಕುರಿತ ವಿಷಯದಲ್ಲಿ ಬಿಜೆಪಿ ಮತ್ತು ಮುಸ್ಲಿಂಲೀಗ್ ಸದಸ್ಯರ ನಡುವೆ ಕಾಸರಗೋಡು ನಗರಸಭೆಯ ಸಾಮಾನ್ಯ ಸಭೆಯಲ್ಲಿ ತೀವ್ರ ವಾಗ್ವಾದ ನಡೆಯಿತು.

ಅನುಮತಿ ಇಲ್ಲದೆ ನಿರ್ಮಾಣ

ಕಾಸರಗೋಡು ನಗರಸಭೆಯ ಸ್ವಾಮ್ಯದ ಕಾಸರಗೋಡು ಹೊಸ ಬಸ್ ನಿಲ್ದಾಣದ 6/1046 ಬಿ ಸಂಖ್ಯೆಯ ಕಟ್ಟಡಕ್ಕೆ ಲೈಸನ್ಸ್(ಬಾಡಿಗೆ) ಪಡೆದ ನಂತರ ನಗರಸಭೆಯ ತಿಳುವಳಿಕೆ ಮತ್ತು ಅನುಮತಿಯಿಲ್ಲದೆ ರಿಷಾಲ್ ಕೆ.ಎಂ. ಅವರು ಶೀಟ್ ಬಳಸಿ ಅನಧಿಕೃತ ನಿರ್ಮಾಣ ನಡೆಸಿರುವುದಾಗಿ ಕೇರಳ ಸ್ಟೇಟ್ ಬಸ್ ಆಪರೇಟಿವ್ ಫೆಡರೇಶನ್‌ನ ಪದಾಧಿಕಾರಿಗಳು ಜಿಲ್ಲಾ ಲೀಗಲ್ ಸರ್ವೀಸ್ ಅಥೋರಿಟಿಗೆ ದೂರು ನೀಡಿದ್ದರು.

ಈ ದೂರಿನ ಆಧಾರದ ಮೇಲೆ ಕಾಸರಗೋಡು ನಗರಸಭೆಯ ಕಾರ್ಯದರ್ಶಿಯನ್ನು ಪ್ರತಿವಾದಿಯಾಗಿ ಸೇರಿಸಿ ಪಿಎಲ್‌ಪಿ 4005/2025 ಸಂಖ್ಯೆಯ ಪ್ರಕರಣವನ್ನು ದಾಖಲಿಸಲಾಗಿದೆ. ಆದ್ದರಿಂದ ಕಾಸರಗೋಡು ನಗರಸಭೆಯ ಕಾರ್ಯದರ್ಶಿಯವರು 20-01-2026ರಂದು ರಿಷಾಲ್ ಕೆ.ಎಂ. ಅವರಿಗೆ ಸಂಬಂಧಿಸಿದ ಅನಧಿಕೃತ ನಿರ್ಮಾಣ ಕುರಿತು ನೋಟೀಸ್ ನೀಡಿದ್ದಾರೆ.



- ನಿಯಮಾನುಸಾರವಾಗಿ ನಗರಸಭಾ ಕಾರ್ಯದರ್ಶಿ ತೆಗೆದುಕೊಂಡ ತೀರ್ಮಾನ ಅಮಾನ್ಯ
- ಮತ್ತೆ ಕಟ್ಟಡದಲ್ಲಿ ಕಾರ್ಯಾಚರಣೆಗೆ ಅನುಮತಿ ಒದಗಿಸಲು ನಗರಸಭಾ ಅಧ್ಯಕ್ಷರ ತಯಾರಿ
- ಕೂಡಲೇ ಎದ್ದುನಿಂತ ಬಿಜೆಪಿ ಸದಸ್ಯರಿಂದ ಅನುಮತಿ ಕೊಡಬಾರದು ಎಂದು ಆಗ್ರಹ

ಅನಧಿಕೃತ ನಿರ್ಮಾಣವನ್ನು 15 ದಿನಗಳೊಳಗೆ ತೆರವುಗೊಳಿಸಿ ಈ ಕಚೇರಿಗೆ ತಿಳಿಸಬೇಕೆಂದೂ ಇಲ್ಲವಾದಲ್ಲಿ ಕಾಸರಗೋಡು ನಗರಸಭೆಯಿಂದ ರಿಷಾಲ್ ಕೆ.ಎಂ. ಅವರಿಗೆ ನೀಡಿದ ಲೈಸನ್ಸ್ (ಬಾಡಿಗೆ) ರದ್ದುಪಡಿಸಿ ಸಂಬಂಧಿತ ಕಟ್ಟಡವನ್ನು ನಗರಸಭೆಯು ಸ್ವಾಧೀನಪಡಿಸಿಕೊಳ್ಳುವುದಾಗಿ ಹಾಗೂ ನಗರಸಭೆಯಲ್ಲಿ ಜಮಾ ಮಾಡಿದ ಡಿಪಾಸಿಟ್ ಮೊತ್ತವನ್ನು ನಗರಸಭೆಯ ನಿಧಿಗೆ ಸೇರಿಸಲಾಗುವುದಾಗಿ 20-01-2026ರಂದು 4857246-2026 ಸಂಖ್ಯೆಯ ನೋಟೀಸ್ ಮೂಲಕ ತಿಳಿಸಲಾಗಿದೆ ಎಂಬುದನ್ನು ಬಿಜೆಪಿ ಕೌನ್ಸಿಲರ್‌ಗಳು ಪ್ರತಿಭಟನಾ ಧರಣಿಯ ಸಂದರ್ಭ ಸಮಗ್ರ ಮಾಹಿತಿ ನೀಡಿದರು.

ಆದರೆ 31-01-2026 ರಂದು ರಿಷಾಲ್ ಕೆ.ಎಂ. ಅವರು ನಗರಸಭೆಯ ಅಧ್ಯಕ್ಷರಿಗೆ ಅಪೀಲ್ ಅರ್ಜಿ ಸಲ್ಲಿಸಿರುವುದರಿಂದ ಆ ಅಪೀಲ್ ಅರ್ಜಿಯ ಮೇಲೆ ಸೋಮವಾರ ನಡೆದ ನಗರಸಭಾ ಸಾಮಾನ್ಯ ಸಭೆಯಲ್ಲಿ ಸಂಪೂರ್ಣ ಚರ್ಚೆ ನಡೆಸಲಾಯಿತು.

ಬಿಜೆಪಿಯಿಂದ ಪ್ರಬಲ ಆಕ್ಷೇಪ

ನಿಯಮಾನುಸಾರವಾಗಿ ನಗರಸಭಾ ಕಾರ್ಯದರ್ಶಿ ತೆಗೆದುಕೊಂಡ ತೀರ್ಮಾನವನ್ನು ಅಮಾನ್ಯಗೊಳಿಸಿ ರಿಷಾದ್ ಕೆ.ಎಂ. ಅವರಿಗೆ ಪುನಹ ಕಟ್ಟಡದಲ್ಲಿ ಕಾರ್ಯಾಚರಿಸಲು ಅನುಮತಿ ಒದಗಿಸಲು ನಗರಸಭಾ ಅಧ್ಯಕ್ಷರು ತಯಾರಾದಾಗ ಕೂಡಲೇ ಎದ್ದುನಿಂತ ಬಿಜೆಪಿ ಸದಸ್ಯರು ಅನುಮತಿ ಕೊಡಬಾರದು ಎಂದು ಪ್ರಬಲ ಆಕ್ಷೇಪ ವ್ಯಕ್ತಪಡಿಸಿದರು.

ಕಾನೂನಿಗೆ ವಿರುದ್ಧ ಆರೋಪ

ಅಧಿಕಾರ ಬಲದಿಂದ ರಿಷಾದ್ ಕೆ.ಎಂ. ಎಂಬವರು ನಿರ್ಮಿಸಿದ ಅನಧಿಕೃತ ಹಾಗೂ ಅಕ್ರಮ ಕಟ್ಟಡ ನಿರ್ಮಾಣಕ್ಕೆ ಬಹಿರಂಗ ಬೆಂಬಲ ಸೂಚಿಸಿ ಕಾನೂನು ವಿರುದ್ಧವಾಗಿರುವುದನ್ನು ಸರಿ ಎಂದು ಸಾರುವ ಮುಸ್ಲಿಂಲೀಗ್ ಆಡಳಿತದ ವಿರುದ್ಧ ನಗರಸಭಾ ಸಾಮಾನ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ರವೀಂದ್ರ ಪೂಜಾರಿಯವರ ನೇತೃತ್ವದಲ್ಲಿ ಪ್ರತಿಭಟಿಸಲಾಯಿತು.

ಸುತ್ತಮುತ್ತ

ತೆಂಕ ಎರ್ಮಾಳು ವೀರಭದ್ರ ದೇವಸ್ಥಾನ ವಾರ್ಷಿಕ ಮಹೋತ್ಸವ

ಪಡುಬಿದ್ರಿ: ತೆಂಕ ಎರ್ಮಾಳು ಶ್ರೀ ಆದಿಶಕ್ತಿ ವೀರಭದ್ರ ದೇವಸ್ಥಾನದ ವಾರ್ಷಿಕ ಮಹೋತ್ಸವ ದೇವಳದ ತಂತ್ರಿ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ ಮಾರ್ಗದರ್ಶನದಲ್ಲಿ ಪ್ರಧಾನ ಅರ್ಚಕರಾದ ವೇದಮೂರ್ತಿ ಗಣಪತಿ ಭಟ್ ಮತ್ತು ವೇದಮೂರ್ತಿ ಗುರುರಾಜ್ ಭಟ್ ಸಹಭಾಗಿತ್ವದಲ್ಲಿ ಫೆ.26ರಂದು ನಡೆಯಲಿದೆ. ಬೆಳಗ್ಗೆ 8 ಗಂಟೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ, ಮಧ್ಯಾಹ್ನ ಮಹಾಪೂಜೆ, 11 ಗಂಟೆಯಿಂದ ಎರ್ಮಾಳು ಬಡಾ ಶ್ರೀನಿಧಿ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸಂಜೆ 6ರಿಂದ ಉತ್ಸವಬಲಿ, ರಂಗಪೂಜೆ, ಭೂತಬಲಿ, ತಂಬಿಲ ಸೇವೆ ಎಂದು ಪ್ರಕಟಣೆ ತಿಳಿಸಿದೆ.

ಫೆ.27: ಸಾರ್ವಜನಿಕ ಸಮಾಲೋಚನಾ ಸಭೆ

ಪುತ್ತೂರು: ನಗರಸಭೆಯ 2026-27ನೇ ಸಾಲಿನ ಆಯವ್ಯಯ ತಯಾರಿಸುವ ಸಂಬಂಧ ಸಾರ್ವಜನಿಕವಾಗಿ ಸಮಾಲೋಚನೆ ಮಾಡಲು ನೋಂದಾಯಿತ ಸ್ಥಳೀಯ ಸಂಘ ಸಂಸ್ಥೆಗಳು, ನೋಂದಾಯಿತ ಸರಕಾರೇತರ ಸಂಘ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು ಹಾಗೂ ಇತರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ನಗರದ ಗಣ್ಯ ವ್ಯಕ್ತಿಗಳನ್ನು ಒಳಗೊಂಡಂತೆ 2ನೇ ಸುತ್ತಿನ 'ಸಾರ್ವಜನಿಕ ಸಮಾಲೋಚನಾ ಸಭೆ' ಯನ್ನು ಫೆ.27ರಂದು ಶುಕ್ರವಾರ ಪೂರ್ವಾಹ್ನ 10.30ಕ್ಕೆ ಕರೆಯಲಾಗಿದೆ. ನಗರಸಭೆ ಆಡಳಿತಾಧಿಕಾರಿಯಾಗಿರುವ ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅಧ್ಯಕ್ಷತೆಯಲ್ಲಿ ನಗರಸಭೆಯ ಸಭಾಭವನದಲ್ಲಿ ಸಭೆ ನಡೆಯಲಿದೆ. ಸಭೆಗೆ ಆಗಮಿಸುವ ಗಣ್ಯರು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು 2026-27 ನೇ ಸಾಲಿನ ಆಯವ್ಯಯ ತಯಾರಿಕೆಗೆ ನಗರಕ್ಕೆ ಅಗತ್ಯವೆನಿಸುವ ಯೋಜನೆಗಳು ಹಾಗೂ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ತಮ್ಮ ಸಲಹೆ-ಸೂಚನೆಗಳನ್ನು ನೀಡಲು ಮನವಿ ಮಾಡಲಾಗಿದೆ.

ಶ್ರೀ ವನಶಾಸ್ತಾರ, ಶ್ರೀ ವೀರಭದ್ರ ಸ್ವಾಮಿ ದೇಗುಲ: ಧರ್ಮಸ್ಥಳದ ನೆರವು

ಬೆಳ್ತಂಗಡಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಗುರುವಾಯನಕೆರೆ ತಾಲೂಕು, ಕಣಿಯೂರು ವಲಯದ ಉರುವಾಲು ಗ್ರಾಮದ ಕಾರಿಂಜ ಶ್ರೀ ವನಶಾಸ್ತಾರ ಮತ್ತು ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ದಿಂದ ಮಂಜೂರಾದ 2.50ಲಕ್ಷದ ಡಿ.ಡಿ ಯನ್ನು ಜಿಲ್ಲಾ ನಿರ್ದೇಶಕ ದಿನೇಶ್.ಡಿ ಹಾಗೂ ಯೋಜನಾಧಿಕಾರಿ ಅಶೋಕ್ ರವರು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಯೋಗೀಶ್ ಪೂಜಾರಿ ಕಡ್ತಿಲ ಅವರಿಗೆ ಹಸ್ತಾಂತರ ಮಾಡಿದರು. ಈ ಸಂಧರ್ಭದಲ್ಲಿ ಕಾರ್ಯಾಧ್ಯಕ್ಷ ಸುನಿಲ್ ಅಣವು ,ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ದಾಸಪ್ಪ ಗೌಡ ಕೋಡಿಯಡ್ಕ, ಆಡಳಿತ ಸಮಿತಿ ಅಧ್ಯಕ್ಷ ಕೊರಗಪ್ಪ ಪೂಜಾರಿ,ಪ್ರಧಾನ ಕಾರ್ಯದರ್ಶಿ ಯಶವಂತ್,ಜಗದೀಶ್ ಶೆಟ್ಟಿ ಮೈರಾ ಕರಾಯ,ವಿಠಲ ಸಾಲ್ಯಾನ್,ಕೃಷ್ಣಪ್ರಸಾದ್, ನವಜೀವನ ಸಮಿತಿ ರಮೇಶ್,ಒಕ್ಕೂಟದ ಅಧ್ಯಕ್ಷರಾದ ಪ್ರಶಾಂತ್ ,ಮೋಹನ ಶೆಟ್ಟಿ,ವಲಯದ ಮೇಲ್ವಿಚಾರಕರಾದ ಶಿಲ್ಪಾ,ಸೇವಾಪ್ರತಿನಿಧಿಗಳಾದ ಸೀತಾರಾಮ ಆಳ್ವ ಸವಿತಾ ಉಪಸ್ಥಿತರಿದ್ದರು.

ನಾಳೆಯಿಂದ ಮಾನಂಪಾಡಿ ದೈವಸ್ಥಾನ ಬ್ರಹ್ಮಕಲಶ

ಮುಲ್ಕಿ: ಮಾನಂಪಾಡಿ ದೈವರಾಜ ಶ್ರೀ ಕೋರ್ದಬ್ಬು ದೈವಸ್ಥಾನ ಜೀರ್ಣೋದ್ಧಾರ ಸಮಿತಿಯ ನೇತೃತ್ವದಲ್ಲಿ ಮಾನಂಪಾಡಿ ಮಾನಾಡಿಗೋಳಿ ಶ್ರೀ ಕೋರ್ದಬ್ಬು ಹಾಗೂ ಪರಿವಾರ ದೈವಗಳ ಪುನಃ ಪ್ರತಿಷ್ಠೆ ಬ್ರಹ್ಮಕಲಶ ಅಭಿಷೇಕ ಹಾಗೂ ನೇಮವು ಫೆ. 25ರಿಂದ 28ರ ತನಕ ನಡೆಯಲಿವೆ.ಫೆಬ್ರವರಿ 25 ರಂದು ಹಸಿರು ಹೊರೆಕಾಣಿಕೆ ಮೆರವಣಿಗೆ ಬಪ್ಪನಾಡು ದೇವಸ್ಥಾನದಿಂದ ಗೇರುಕಟ್ಟೆ ಮಾರ್ಗವಾಗಿ ವೆಂಕಟರಮಣ ದೇವಸ್ಥಾನವಾಗಿ ದೈವಸ್ಥಾನ ತಲುಪುವುದು. ಫೆ. 26ರಂದು ಧಾರ್ಮಿಕ ವೈದಿಕ ಕಾರ್ಯಕ್ರಮ, ದೈವಗಳ ಪುನಃ ಪ್ರತಿಷ್ಠೆ ಧಾರ್ಮಿಕ ಸಭೆ ನಡೆಯುವುದು. ರಾತ್ರಿ ಶ್ರೀ ಕೊರ್ದಬ್ಬು ತನ್ನಿಮಾನಿಗ ದೈವದ ನೇಮ ಫೆ. 27ರಂದು ಶ್ರೀ ಗುಳಿಗ ದೈವದ ನೇಮ ಸಂಜೆ ಶ್ರೀ ಧೂಮಾವತಿ ಹಾಗೂ ಬಂಟ ದೈವಗಳ ನೇಮ, 28ರಂದು ಶುದ್ದಿ ಹೋಮ, ಕುರಿ ತಂಬಿಲ ನಡೆಯಲಿದೆಯೆಂದು ಪ್ರಕಟಣೆ ತಿಳಿಸಿದೆ.

ಫೆ. 26-ಮಾ. 1: ಬೃಹತ್ ಬೈಬಲ್ ಅಧಿವೇಶನ

ಮಂಗಳೂರು: ನಗರದ ಕುಲಶೇಖರ ಕೋರ್ಡೆಲ್ ಹೋಲಿ ಕ್ರಾಸ್ ಚರ್ಚ್‌ನ ಬಯಲು ಮೈದಾನದಲ್ಲಿ ಫೆ. 26ರಿಂದ ಮಾ. 1ರವರೆಗೆ ಸಂಜೆ 4ರಿಂದ 8.30ರವರೆಗೆ ಬೃಹತ್ ಬೈಬಲ್ ಅಧಿವೇಶನ ನಡೆಯಲಿದೆ. ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯದ ಕಾರಿಸ್ಮಾಟಿಕ್ ಸರ್ವಿಸ್ ಕಮ್ಯುನಿಯನ್ ಮತ್ತು ಬೈಬಲ್ ಆಯೋಗದ ಸಹಯೋಗದಲ್ಲಿ ಈ ಅಧಿವೇಶನ ನೆರವೇರಲಿದೆ. ಅಧಿವೇಶನಕ್ಕೆ 'ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ನೆಲೆಸಿದೆ' ಶೀರ್ಷಿಕೆ ಆಯ್ಕೆ ಮಾಡಲಾಗಿದೆ ಎಂದು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ಫಾ.ಜೆ.ಬಿ. ಸಲ್ಡಾನಾ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅಧಿವೇಶನದಲ್ಲಿ ಎಂಟು ಮಂದಿ ಧರ್ಮಗುರುಗಳು ದೇವರ ವಾಕ್ಯವನ್ನು ಬೋಧಿಸಲಿದ್ದಾರೆ ಹಾಗೂ ನಾಲ್ಕು ಜನ ಧರ್ಮಗುರುಗಳು ಬೈಬಲ್ ಆಧಾರಿತ, ದಿವ್ಯಸಂಸ್ಕಾರದ ಆರಾಧನೆಯ ನೇತೃತ್ವ ವಹಿಸಲಿದ್ದಾರೆ. 8-10 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು. ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ರೋಯ್ ಕ್ಯಾಸ್ತಲಿನೊ, ವಿಕಾರ್ ಜನರಲ್ ಫಾ.ಮ್ಯಾಕ್ಸಿಂ ನೊರೊನ್ಹ, ಬೈಬಲ್ ಆಯೋಗದ ಕಾರ್ಯದರ್ಶಿ ವಿನ್ಸೆಂಟ್ ಸಿಕ್ವೇರಾ, ಧರ್ಮಪ್ರಾಂತ್ಯದ ಧಾರ್ಮಿಕ ಆಚರಣೆಗಳ ನಿರ್ದೇಶಕ ಕ್ಲಿಫರ್ಡ್ ಫರ್ನಾಂಡಿಸ್, ಡೋಲ್ಫಿ ಲೋಬೊ, ಎಲಿಯಾಸ್ ಫರ್ನಾಂಡಿಸ್ ಉಪಸ್ಥಿತರಿದ್ದರು.

ಫೆ.28, ಮಾ.1ರಂದು 'ಮೊಗೇರ ದುಡಿ ಆಯನ' ರಾಜ್ಯ ಸಮ್ಮೇಳನ



ಪುತ್ತೂರು: 50 ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮೊಗೇರ ಸಂಘದ ನೇತೃತ್ವದಲ್ಲಿ ಫೆ.28 ಮತ್ತು ಮಾ.1ರಂದು ಎರಡು ದಿವಸಗಳ ಕಾಲ ಸುಳ್ಯದ ಗೌಡ ಸಮುದಾಯ ಭವನದಲ್ಲಿ 'ಮೊಗೇರ ದುಡಿ ಆಯನ' ರಾಜ್ಯ ಸಮ್ಮೇಳನವು ನಡೆಯಲಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷ ಮತ್ತು ರಾಜ್ಯಾಧ್ಯಕ್ಷ ನಂದರಾಜ ಸಂಕೇಶ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾದಯ ಸಾಂಸ್ಕೃತಿಕ ಪರಂಪರೆಗೆ ಗಣನೀಯವಾದ ಕೊಡುಗೆಯನ್ನು ಸಮಾಜವು ನೀಡುತ್ತಾ ಬಂದಿದೆ. ಮೊಗೇರ ಸಮಾಜಕ್ಕೆ ಪಾರಂಪರಿಕವಾಗಿ ಬಂದಿರುವ ಹೋರಾಟದ ಪರಂಪರೆ, ಕಥೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಇವೇ ಮೊದಲಾದ ವಿಷಯಗಳಲ್ಲಿ ಸಮಾಜವನ್ನು ಕಟ್ಟಿ ಬೆಳೆಸುವುದು. ಕರ್ನಾಟಕ ರಾಜ್ಯದ 7 ಜಿಲ್ಲೆಯಲ್ಲಿರುವ ಮೊಗೇರ ಸಮಾಜವನ್ನು ತಳಮಟ್ಟದಿಂದ ವಿಶಾಲ ತಳಹದಿಯಲ್ಲಿ ವಿಸ್ತರಣೆಗೊಳಿಸುವುದು, ಹೀಗೆ ವಿವಿಧ ವಿಚಾರಗಳನ್ನು ಮುಂದಿಟ್ಟುಕೊಂಡು ನಡೆಯಲಿದೆ ಎಂದರು.

ಫೆ.28ರಂದು ಮೊಗೇರ ಸಂಘದ ಸ್ಥಾಪಕ ಸದಸ್ಯ ಗಣಪ ಕೆ. ಮೂಡುಶೆಡ್ಡೆ ಧ್ವಜಾರೋಹಣಗೈಯಲಿದ್ದಾರೆ. ಪ್ರಮುಖರಾದ ಶುಭೋದಯ ಕೂಡ್ಲು ದುಡಿ ಆಯನ- 2026 ಉದ್ಘಾಟಿಸಲಿರುವರು. ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸಲಿರುವ ಪ್ರತಿನಿಧಿಗಳು ಸಮ್ಮೇಳನದ ವಿವಿಧ ಕಲಾಪಗಳಲ್ಲಿ ಭಾಗವಹಿಸಲಿರುವರು. ಮೊಗೇರ ಸಮಾಜದ ಸಾಂಸ್ಕೃತಿಕ ಪರಂಪರೆಯಾದ ದುಡಿ ಕುಣಿತ ವಿವಿಧ ಸಾಂಸ್ಕೃತಿಕ ನೃತ್ಯ, ಜನಪದ ಕ್ರೀಡೆ, ವಿವಿಧ ಆಟೋಟಗಳ ಪ್ರಕಾರಗಳು, ಸಾಧಕರಿಗೆ ಸನ್ಮಾನ ಮುಂತಾದ ಕಾರ್ಯಕ್ರಮಗಳು ನಡೆಯಲಿವೆ.ಮಾ.1ರಂದುಸುಳ್ಯದಜ್ಯೋತಿ ವೃತ್ತದಿಂದ ಚೆನ್ನಕೇಶವ ದೇವಸ್ಥಾನದವರೆಗೆ ಮೆರವಣಿಗೆ ನಡೆಯಲಿದೆ. 11ಕ್ಕೆ ಬಹಿರಂಗ ಸಭೆಯು ವಿವಿಧ ಜನಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಯಲಿದೆ. ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್, ಸಚಿವ ಡಾ.ಎಚ್.ಸಿ. ಮಹದೇವಪ್ಪ ಮತ್ತಿತರ ಗಣ್ಯರು ಭಾಗವಹಿಸಲಿದ್ದು, ಕಾರ್ಯಕ್ರಮದಲ್ಲಿ ಸುಮಾರು 7 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದಾರೆ ಎಂದರು.

ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ, ಸುಳ್ಯ ತಾಲೂಕು ಮೊಗೇರ ಸಂಘದ ಅಧ್ಯಕ್ಷ ಕರುಣಾಕರ ಪಲ್ಲತಡ್ಕ, ಪುತ್ತೂರು ತಾಲೂಕು ಅಧ್ಯಕ್ಷ ಸುಂದರ ಕೇಪುಳು, ಚಂದ್ರ ಬಿರೀಗ, ಕೋಶಾಧಿಕಾರಿ ಬಿ. ರಾಘವ, ಪ್ರಧಾನ ಕಾರ್ಯದರ್ಶಿ ಮುಕೇಶ್ ಕೆಮ್ಮಿಂಜೆ, ಉಪಾಧ್ಯಕ್ಷೆ ಸುಮತಿ ಸರ್ವೆ ಉಪಸ್ಥಿತರಿದ್ದರು.

ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಕೈಜೋಡಿಸಿ: ಡಾ. ಪ್ರಣವ್ ಮಲ್ಯ



ಬಂಟ್ವಾಳ: ಸ್ವತಂತ್ರ ಭಾರತದಲ್ಲಿ ನಡೆಯುತ್ತಿರುವ ಜಿಹಾದಿ ಘಟನೆಗಳು, ಭಯೋತ್ಪಾದನೆ, ಮತಾಂತರ, ಲವ್ ಜಿಹಾದ್, ಗೋ ಹತ್ಯೆಯಂತಹ ಸವಾಲುಗಳಿಗೆ 'ಹಿಂದೂ ರಾಷ್ಟ್ರ'ವೇ ಏಕೈಕ ಪರಿಹಾರವಾಗಿದ್ದು, ಸಮಸ್ತ ಹಿಂದೂ ಸಮಾಜ ಜಾತಿ-ಪಂಥ ಮರೆತು ಒಗ್ಗೂಡಬೇಕು. ಛತ್ರಪತಿ ಶಿವಾಜಿ ಮಹಾರಾಜರ ಸ್ವರಾಜ್ಯದ ಸಂಕಲ್ಪದೊಂದಿಗೆ, ದಿನಕ್ಕೆ ಒಂದು ಗಂಟೆಯಾದರೂ ಧರ್ಮ ಕಾರ್ಯಕ್ಕಾಗಿ ಮೀಸಲಿಟ್ಟು ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಕೈಜೋಡಿಸಿ ಎಂದು ಡಾ. ಪ್ರಣವ್ ಮಲ್ಯ ಕರೆ ನೀಡಿದ್ದಾರೆ.

ಬಂಟ್ವಾಳ ತಾಲೂಕಿನ ಆರಳ ಶ್ರೀ ಗರುಡ ಮಹಾಕಾಳಿ ದೇವಸ್ಥಾನದ ಸಭಾಗೃಹದಲ್ಲಿ ನಡೆದ ಹಿಂದೂ ರಾಷ್ಟ್ರ ಜಾಗೃತಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪುತ್ತೂರಿನ ನ್ಯಾಯವಾದಿ ಗಿರೀಶ್ ಮಳಿ ಮಾತನಾಡಿ, ಅವರು ಹಿಂದೂ ಸಮಾಜವು, ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿದ್ದರೂ ಅನೇಕ ಶೋಷಣೆ ಮತ್ತು ಸವಾಲುಗಳನ್ನು ಎದುರಿಸುತ್ತಿದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲು ಧರ್ಮ ಶಿಕ್ಷಣವನ್ನು ವಿಸ್ತರಿಸುವುದು ಹಾಗೂ ಪ್ರತಿ ಹಿಂದೂ ಮನೆಯಲ್ಲಿ ಗೋಸಂವರ್ಧನೆಯ ಸಂಕಲ್ಪ ಮಾಡುವುದು ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

ಸನಾತನ ಧರ್ಮದ ಪ್ರತಿಯೊಂದು ಆಚರಣೆಯ ಹಿಂದೆ ವಿಜ್ಞಾನ ಮತ್ತು ಆಧ್ಯಾತ್ಮಿಕ ಅಧಿಷ್ಠಾನವಿದೆ ಎಂದು ಸನಾತನ ಸಂಸ್ಥೆಯ ನ್ಯಾ. ತೀರ್ಥೇಶ್ ತಿಳಿಸಿದರು.

ರಾಯಿ ಗ್ರಾ.ಪಂ. ಅಧ್ಯಕ್ಷರಾದ ಸಂತೋಷ್ ಕುಮಾರ್ ರಾಯಿ, ಉದ್ಯಮಿ ದುರ್ಗಾದಾಸ್ ಶೆಟ್ಟಿ ಮಾವಂತೂರು, ಗರುಡ ಮಹಾಕಾಳಿ ಟ್ರಸ್ಟಿ ಜಗದೀಶ್ ಆಳ್ವ, ರಂಜನ್ ಶೆಟ್ಟಿ ಆರಳ ಹಾಗೂ ಸುಕುಮಾರ್ ಶೆಟ್ಟಿ ಆರಳ ಅವರು ಉಪಸ್ಥಿತರಿದ್ದರು.

ಫೆ. 26ರಂದು ಕಾಸರಗೋಡಿನ ಕನ್ನಡ ಅಸ್ಮಿತೆ ವಿಚಾರ ಸಂಕಿರಣ

ಮಂಜೇಶ್ವರ: ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಮತ್ತು ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಸಹಯೋಗದಲ್ಲಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜ್‌ನ ಕನ್ನಡ ವಿಭಾಗ ಮತ್ತು ಗಿಳಿವಿಂಡು ಕನ್ನಡ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವೇದಿಕೆಯ ಸಹಕಾರದೊಂದಿಗೆ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜ್‌ನಲ್ಲಿ ಫೆ.26ರಂದು 'ಕಾಸರಗೋಡಿನಲ್ಲಿ ಕನ್ನಡ ಅಸ್ಮಿತೆ ಯುವಶಕ್ತಿ ಮತ್ತು ಭವಿಷ್ಯ' ಎಂಬ ವಿಷಯದ ಕುರಿತು ಒಂದು ದಿನದ ವಿಚಾರ ಸಂಕಿರಣ ನಡೆಯುವುದು.

ಬೆಳಗ್ಗೆ10 ಗಂಟೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಅಧ್ಯಕ್ಷ ಡಾ. ರಮಾನಂದ ಬನಾರಿ ಅಧ್ಯಕ್ಷತೆ ವಹಿಸುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲ, ಸಾಹಿತಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅತಿಥಿಗಳಾಗಿರುವರು. ಸಾಹಿತಿ ಡಾ. ರಮಾನಂದ ಬನಾರಿ ಸಾರಥ್ಯದಲ್ಲಿ ಪ್ರಕಟಗೊಳ್ಳುತ್ತಿರುವ 'ಕನ್ನಡಿಯಲ್ಲಿ ಕನ್ನಡಿಗ ' ಕೃತಿ ಸರಣಿಯ ಆರನೇ ಸಂಚಿಕೆಯನ್ನು ಸಾಹಿತಿ, ನಿವೃತ್ತ ಪ್ರಾಧ್ಯಾಪಿಕೆ ಡಾ.ಪ್ರಮೀಳಾ ಮಾಧವ್ ಬಿಡುಗಡೆ ಮಾಡುವರು. ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜ್‌ನ ಪ್ರಾಂಶುಪಾಲ ಡಾ. ಮಹಮ್ಮದಾಲಿ ಪ್ರಾಸ್ತಾವಿಕ ಭಾಷಣ ಮಾಡುವರು. ಜಿಲ್ಲಾ ಕನ್ನಡ ಲೇಖಕರ ಸಂಘದ ಕಾರ್ಯದರ್ಶಿ ಡಾ.ಕಿಶೋರ್ ಕುಮಾರ್ ರೈ ಶೇಣಿ, ಕೋಶಾಧಿಕಾರಿ ವಿಶಾಲಾಕ್ಷ ಪುತ್ರಕಳ, ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜ್‌ನ ಕನ್ನಡ ವಿಭಾಗದ ಮುಖ್ಯಸ್ಥ ಶಿವಶಂಕರ ಪಿ. ಉಪಸ್ಥಿತರಿರುವರು. ಬಳಿಕ ಕಾಸರಗೋಡಿನ ಕನ್ನಡದ ಇತಿಹಾಸ ಮತ್ತು ಸವಾಲುಗಳ ಕುರಿತು ವಿಚಾರಗೋಷ್ಠಿ ನಡೆಯುವುದು. ಆಕಾಶವಾಣಿಯ ವಿಶ್ರಾಂತ ನಿರ್ದೇಶಕ ಡಾ. ಸದಾನಂದ ಪೆರ್ಲ (ಕಾಸರಗೋಡಿನ ಕನ್ನಡ ಹೋರಾಟದ ಇತಿಹಾಸ), ಕಾಸರಗೋಡು ಸರಕಾರಿ ಕಾಲೇಜ್‌ನ ಪ್ರಾಧ್ಯಾಪಕ ರಾಧಾಕೃಷ್ಣ ಬೆಳ್ಳೂರು (ಕನ್ನಡ ಸಾಹಿತ್ಯ ಮತ್ತು ಕನ್ನಡ ಅಸ್ಮಿತೆ), ಡಾ.ಬಾಲಕೃಷ್ಣ ಹೊಸಂಗಡಿ (ಶೈಕ್ಷಣಿಕ ಮತ್ತು ಔದ್ಯೋಗಿಕ ಸವಾಲುಗಳು) ಡಾ. ಶ್ರೀಧರ ಎನ್. (ಸಾಂಸ್ಕೃತಿಕ ಮತ್ತು ರಾಜಕೀಯ ಸವಾಲುಗಳು), ದೀಕ್ಷಿತಾ (ಕನ್ನಡ ವಿದ್ಯಾರ್ಥಿಗಳ ಸಮಸ್ಯೆಗಳು), ಅನಿರುದ್ಧ (ಕನ್ನಡದ ಅಸ್ತಿತ್ವ - ವಿದ್ಯಾರ್ಥಿಗಳ ಪಾತ್ರ) ಪ್ರಬಂಧ ಮಂಡನೆ ಮಾಡುವರು. ಸಹಾಯಕ ಪ್ರಾಧ್ಯಾಪಕ ಡಾ ಸುಜೀಶ್ ಎಸ್. ಸಮನ್ವಯಕಾರರಾಗಿರುವರು.

ಅಪರಾಹ್ನ ಸಾಂಸ್ಕೃತಿಕ ವಲಯದ ಕನ್ನಡ ಅಸ್ಮಿತೆ ಸಂವಾದ ನಡೆಯುವುದು. ಸಾಹಿತಿ ಡಾ.ಮಹೇಶ್ವರಿ ಯು., ಯಕ್ಷಗಾನ ಗುರು ಶಿವಶಂಕರ ದಿವಾಣ, ರಂಗ ನಿರ್ದೇಶಕ ಉದಯ ಸಾರಂಗ್, ಗಮಕಿ ಶಶಿರಾಜ ನೀಲಂಗಳ, ವಿದುಷಿ ಅನುಪಮಾ ರಾಘವೇಂದ್ರ ಉಡುಪುಮೂಲೆ, ಶ್ರೀಧರ ರೈ ಕಾಸರಗೋಡು ಸಂಪನ್ಮೂಲ ವ್ಯಕ್ತಿಗಳಾಗಿರುವರು. ಕಾರ್ತಿಕ್ ಪಿ.ಕೆ., ಶ್ರದ್ಧಾ ಭಟ್, ದೇವಿಕಾ ಪಿ., ಆದಿಶ್ರೀ ಎಸ್.ಎನ್., ಎ.ವಿವೇಕ್, ಮನೀಶ್, ಪೂಜಾ, ಶಿವಾನಿ ಕೆ., ಕೃಷ್ಣ ಪ್ರಣಾಮ್ ಪಾಲ್ಗೊಳ್ಳುವರು. ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಖ್ಯಾತ ವಿಮರ್ಶಕ ಡಾ.ಎಸ್.ಆರ್. ವಿಜಯಶಂಕರ್ ಬೆಂಗಳೂರು ಸಮಾರೋಪ ಭಾಷಣ ಮಾಡುವರು. ಪ್ರೊ.ಪಿ.ಎನ್.ಮೂಡಿತ್ತಾಯ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಮಿತಿ ಅಧ್ಯಕ್ಷ ಮುರಳೀಧರ ಬಳ್ಳಕ್ಕುರಾಯ, ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ ಎ., ಜಯಂತಿ ಕೆ., ಆಯಿಶಾ ಪೆರ್ಲ ಉಪಸ್ಥಿತರಿರುವರು.

'ಯುಎಸ್ ಸಾಮ್ರಾಜ್ಯಶಾಹಿ ಭಾರತ ಜನತೆಯ ಶತ್ರು' ಪುಸ್ತಕದ ಬಿಡುಗಡೆ



ಕುಂದಾಪುರ: ಭಾರತದಲ್ಲಿ ಈ ಬಾರಿ ಯುಎಸ್ ಸಾಮ್ರಾಜ್ಯಶಾಹಿ ವಿರೋಧಿ ಪುಸ್ತಕ ಓದುವುದು ಫೆ. 21ರಿಂದ ಆರಂಭಗೊಂಡಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಹೇಳಿದರು.

ಕುಂದಾಪುರ ಕಾರ್ಮಿಕರ ಸಂಘದ ಬೆವರು ಕಚೇರಿಯಲ್ಲಿ ರೆಡ್ ಬುಕ್ ಡೇ ದಿನದ ಅಂಗವಾಗಿ ಯುಎಸ್ ಸಾಮ್ರಾಜ್ಯಶಾಹಿ ಭಾರತ ಜನತೆಯ ಶತ್ರು ಎಂಬ ಪುಸ್ತಕ ಓದು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯ ವಿರುದ್ಧ ಹೋರಾಟ ನಡೆಸಿ ಸ್ವಾತಂತ್ರ್ಯ ಗಳಿಸಿದ ಇತಿಹಾಸ ನಮ್ಮ ದೇಶದ್ದು, ಆದರೆ ಇಂದು ಯುಎಸ್ ಸಾಮ್ರಾಜ್ಯಶಾಹಿ ನಮ್ಮನ್ನು ನೇರವಾಗಿ ಆಳ್ವಿಕೆ ಮಾಡದಿದ್ದರೂ ನಮ್ಮ ದೇಶದ ನೀತಿ ನಿರೂಪಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆಯೇ? ಎಂದು ತಿಳಿಯಬೇಕಿದೆ. ಅಮೆರಿಕಾ ಸಾಮ್ರಾಜ್ಯಶಾಹಿಯು ಮಿಲಿಟರಿ ದಾಳಿಯ ಬೆದರಿಕೆ ಹಾಕಿ ಒಂದು ದೇಶದ ಸರ್ಕಾರದ ನೀತಿಗಳನ್ನು ಬದಲಾಯಿಸಲು ಒತ್ತಡ ಹಾಕುವುದು ನೋಡುತ್ತಿದ್ದೇವೆ. ಈ ಒತ್ತಡ ಭಾರತ ದೇಶದ ಮೇಲೂ ಹಾಕುತ್ತಿದ್ದು ಕಾರ್ಮಿಕರ ರೈತರ ಹಕ್ಕುಗಳನ್ನು ಕಾಯ್ದೆಗಳನ್ನು ರದ್ದುಗೊಳಿಸುವ, ಕಡಿಮೆ ಬೆಲೆಗೆ ತೈಲ ಪಡೆಯುವುದನ್ನು ತಪ್ಪಿಸಿ ಅಮೆರಿಕಾದಿಂದಲೇ ದುಬಾರಿ ಬೆಲೆಗೆ ತೈಲ ಆಮದು ಮಾಡಿಕೊಳ್ಳುವ ಪರಿಸ್ಥಿತಿಗಳನ್ನು ನಿರ್ಮಿಸುತ್ತಿರುವುದು ಅಮೇರಿಕಾ ಸಾಮ್ರಾಜ್ಯಶಾಹಿ ನೀತಿಗಳು ಎಂದರು.

ಚಿಕ್ಕ ಮೊಗವೀರ ಅಧ್ಯಕ್ಷತೆ ವಹಿಸಿದ್ದರು. ಕೃಷ್ಣ ಪೂಜಾರಿ, ಅಣ್ಣಪ್ಪ ಅಬ್ಬಿಗುಡ್ಡಿ, ರಹೆಮಾನ್, ರಾಧ, ನಾಗೇಶ್ ಕುಲಾಲ್ ಇದ್ದರು. ರಾಘವೇಂದ್ರ ದೋಣಿಮನೆ ಪುಸ್ತಕ ಓದು ನಡೆಸಿಕೊಟ್ಟರು. ಉಮೇಶ್ ಆಚಾರ್ಯ ವಂದಿಸಿದರು.

ಧರ್ಮಸ್ಥಳದಿಂದ ಮುಜುಂಗಾವು ಶ್ರೀಭಾರತೀ ವಿದ್ಯಾಪೀಠಕ್ಕೆ ಧನಸಹಾಯ



ಕುಂಬಳೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಕಾಸರಗೋಡು ಬದಿಯಡ್ಕ ವಲಯದ ವತಿಯಿಂದ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಡಿ ಮುಜುಂಗಾವು ಶ್ರೀ ಭಾರತೀ ವಿದ್ಯಾಪೀಠಕ್ಕೆ ಶ್ರೀ ಕ್ಷೇತ್ರದಿಂದ ಮಂಜೂರಾದ 3 ಲಕ್ಷ ರೂಪಾಯಿ ಮೊತ್ತವನ್ನು ಶಾಲಾ ಕಾರ್ಯದರ್ಶಿ ಸುಬ್ರಹ್ಮಣ್ಯ ಪ್ರಸಾದ್ ಅವರಿಗೆ ತಾಲೂಕು ಯೋಜನಾಧಿಕಾರಿ ದಿನೇಶ್ ಬಿ. ಹಸ್ತಾಂತರಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕಾಸರಗೋಡು ತಾಲೂಕು ಅಧ್ಯಕ್ಷ ಅಖಿಲೇಶ್ ನಗುಮುಗಂ, ಸದಸ್ಯ ಸುಧಾಕರ, ಬದಿಯಡ್ಕ ವಲಯ ಮೇಲ್ವಿಚಾರಕಿ ಸುಗುಣ ಓ. ಹವಲ್ದಾರ್, ಸೇವಾ ಪ್ರತಿನಿಧಿ ನಳಿನಾಕ್ಷಿ, ಶಾಲಾ ಮುಖ್ಯೋಪಾಧ್ಯಾಯ ಶ್ಯಾಮ ಭಟ್ ದರ್ಭೆಮಾರ್ಗ ಹಾಗೂ ಅಧ್ಯಾಪಕ ವೃಂದದವರು ಜೊತೆಗಿದ್ದರು.



ಪುತ್ತೂರಿನಲ್ಲಿ 44 ಸೆಂಟ್ಸ್ ಜಾಗವನ್ನು ಕಚೇರಿ ನಿರ್ಮಾಣಕ್ಕೆ ಮಂಜೂರುಗೊಳಿಸಲಾಗಿದ್ದು, ಶಾಸಕ ಅಶೋಕ್ ರೈ ಪಹಣಿ ಪತ್ರವನ್ನು ಇಂಟೆಲಿಜೆನ್ ಎಸ್ಪಿ ಅವರಿಗೆ ತಮ್ಮ ಕಚೇರಿಯಲ್ಲಿ ಹಸ್ತಾಂತರಿಸಿದರು. ಈ ಸಂದರ್ಭ ತಹಶೀಲ್ದಾರ್ ಎಸ್.ಬಿ. ಕೂಡಲಗಿ ಇದ್ದರು.

ಗೋಣಿಕೊಪ್ಪದಲ್ಲಿ ಆಯೋಜಿಸಲಾಗಿದ್ದ ಹಿಂದೂ ಸಂಗಮದಲ್ಲಿ ಆರೆಸ್ಸೆಸ್ ಪ್ರಚಾರಕ್ ಮನೋಹರ್ ಮಠದ್ ಹೇಳಿಕೆ

ಹಿಂದೂ ಸಂಗಮ ಇತರ ಧರ್ಮಗಳ ವಿರುದ್ಧ ಹೋರಾಡುವ ಸಮಾವೇಶವಲ್ಲ

ಮಡಿಕೇರಿ: ಹಿಂದೂ ಸಂಗಮ ಇತರ ಧರ್ಮಗಳ ವಿರುದ್ಧದ ಹೋರಾಟವಲ್ಲ, ಹಿಂದುಗಳ ಸಂಘಟನೆಯ ಬಲವನ್ನು ಹೆಚ್ಚಿಸುವ ಕಾರ್ಯಕ್ರಮವಾಗಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕ್ ಮನೋಹರ್ ಮಠದ್ ನುಡಿದರು.

ಗೋಣಿಕೊಪ್ಪದಲ್ಲಿ ಆಯೋಜಿಸಲಾಗಿದ್ದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, 'ಹಿಂದೂ ರಾಷ್ಟ್ರ ಭಾರತ ತನ್ನದೇ ಆದ ಪರಂಪರೆ ಮತ್ತು ಅಪಾರ ಸಂಸ್ಕೃತಿ ವಿಚಾರಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಿಂದಲೇ ಪ್ರಪಂಚಕ್ಕೆ ಭಾರತ ಧಾರ್ಮಿಕತೆಯ ಮಾದರಿ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದು ಅವರು ಹೇಳಿದರು. ಕೇವಲ ಆಚಾರಗಳನ್ನು ಮುಂದುವರಿಸುವುದು ಹಿಂದು ಧರ್ಮದ ಪ್ರಾಮುಖ್ಯತೆಯಲ್ಲ; ಸಂಸ್ಕೃತಿ, ಸಂಭ್ರಮ, ಸಹೋದರತ್ವ, ಜೀವನದ ಬಾಂಧವ್ಯಗಳನ್ನು ಒಟ್ಟುಗೂಡಿಸುವ ಮತ್ತು ಬದುಕಿನ ಮೌಲ್ಯಗಳನ್ನು ಕೇಂದ್ರೀಕರಿಸುವ ಸಂಗಮವಾಗಿಸುವ ಉದ್ದೇಶವೇ ಧರ್ಮದ ಮೂಲವಾಗಿದೆ ಎಂದರು. ಸ್ವದೇಶಿ ವಸ್ತುಗಳನ್ನು ಬಳಸುವ ಮೂಲಕ ಈ ಮಣ್ಣಿನ ಧಾರ್ಮಿಕತೆಯ ಪಾವಿತ್ರ್ಯವನ್ನು ಎತ್ತಿ ಹಿಡಿಯಬೇಕು ಎಂದೂ ಅವರು ಕರೆ ನೀಡಿದರು.



ಶಿಕ್ಷಕಿ ಬೆಂಜಾಂಡ ರಶ್ಮಿ ದೇವಯ್ಯ ಮಾತನಾಡಿ, ಮಹಿಳೆಯರು ದೇಶದ ಶಕ್ತಿ. ಮಹಿಳೆಯರು ಈ ದೇಶದ ಶಕ್ತಿಯಾಗಿದ್ದಾರೆ. ಹಿಂದು ರಾಷ್ಟ್ರದ ಐಕ್ಯತೆ ಮನೋಭಾವನೆಯನ್ನು ಮಕ್ಕಳಲ್ಲಿ ಬಿತ್ತುವ ಕಾರ್ಯ ಮಹಿಳೆಯರಿಂದ ನಡೆಯಲಿ ಎಂದರು.

ಉದ್ಯಮಿ ಎಂ.ಪಿ. ಪ್ರಮೋದ್ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಹಿಂದೂ ಸಂಗಮ ಆಯೋಜನಾ ಸಮಿತಿ ಪ್ರಮುಖರಾದ, ಗುಮ್ಮಟಿರ ಕಿಲನ್ ಗಣಪತಿ, ಸುಬ್ರಮಣಿ, ಸುರೇಶ್ ರೈ, ಸೋಮಯ್ಯ, ಅಖಿಲ್, ಪ್ರಸಾದ್ ಭಟ್, ನೆಲ್ಲೀರ ಚಲನ್, ಜ್ಯೋತಿ ಮತ್ತಿತರರು ಭಾಗಿಯಾಗಿದ್ದರು.

ಆಕರ್ಷಕ ಶೋಭಾಯಾತ್ರೆ: ಗೋಣಿಕೊಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಿಂದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಮೈದಾನದವರೆಗೆ ನಡೆದ ಶೋಭಾಯಾತ್ರೆ ಹಿಂದುತ್ವ ಬಲವರ್ಧನೆ ಸಾಕ್ಷಿ ನುಡಿಯಿತು. ಎರಡು ಸಾವಿರಕ್ಕೂ ಅಧಿಕ ಕೈಗಳಲ್ಲಿ ಕೇಸರಿ ಧ್ವಜಗಳ ಹಾರಾಟ, ಮುಗಿಲೆತ್ತರಕ್ಕೆ ಧ್ವನಿಸಿದ ಘೋಷಣೆಗಳು ಹಿಂದೂ ಸಂಗಮದ ಮೆರುಗಾಗಿತ್ತು. ಮೆರವಣಿಗೆಯ ಉದ್ದಕ್ಕೂ ಪಾನಕ, ಮಜ್ಜಿಗೆ, ನೀರು ವಿತರಣೆ ನಡೆಯಿತು. ಪ್ರಸನ್ನ ಗಣಪತಿ ಸೇವಾ ಸಂಘ, ಭಗತ್ ಸಿಂಗ್ ಯುವಕ ಸಂಘ, ಶಿವಾಜಿ ಯುವ ಸೇನೆ, ಚಿನ್ನ ಬೆಳ್ಳಿ ವರ್ತಕರ ಸಂಘ ಸೇರಿದಂತೆ ಹಲವು ಸಂಘಟನೆಗಳೂ ಮೆರವಣಿಗೆಯ ಭಾಗವಾಗಿದ್ದವು. ಸ್ಥಳೀಯ ಸೈಕ್ಲೋನ್ ನೃತ್ಯ ಸಂಸ್ಥೆಯ ವಿದ್ಯಾರ್ಥಿಗಳಿಂದ ರಾಮನ ಹಾಗೂ ಶಿವನ ನೃತ್ಯ ಪ್ರದರ್ಶನ ಮತ್ತು ಕಾವೇರಿ ಕಾಲೇಜು ವಿದ್ಯಾರ್ಥಿಗಳು ನಡೆಸಿಕೊಟ್ಟ ಕತ್ತಿಯಾಟ್, ಉಮ್ಮತ್ತಾಟ್ ಗಮನ ಸೆಳೆಯಿತು.

ಸೋಮೇಶ್ವರ ಪುರಸಭೆ ಸಾಮಾನ್ಯ ಸಭೆ, ವಿವಿಧ ವಿಚಾರ ಚರ್ಚೆ | ಶೇ.3ರಷ್ಟು ತೆರಿಗೆ ಇಳಿಸಲು ನಿರ್ಣಯ

ಆರೋಗ್ಯ ಕೇಂದ್ರ ನಿರ್ಮಾಣ, ಭೂ ತೆರಿಗೆ ಇಳಿಕೆಗೆ ಒತ್ತಾಯ

ಉಳ್ಳಾಲ: ಸೋಮೇಶ್ವರ ಪುರಸಭೆ ಅಧ್ಯಕ್ಷ ಕಮಲಾ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಪುರಸಭೆ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರ ನಿರ್ಮಾಣ, ಭೂ ತೆರಿಗೆಯ ಇಳಿಕೆ, ಕಸ ಎಸೆಯುವವರ ವಿರುದ್ಧ ಕಠಿಣ ಕ್ರಮಕ್ಕೆ ಸಮರ್ಪಕ ಸಿಸಿ ಕ್ಯಾಮೆರ ಅಳವಡಿಸಲು ಪುರಸಭಾ ಸದಸ್ಯರು ಆಗ್ರಹಿಸಿದರು.



ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಆಗ್ರಹ

ವಿಪಕ್ಷ ಸದಸ್ಯ ಸಲಾಮ್ ಉಚ್ಚಿಲ ಮಾತನಾಡಿ, ಸೋಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರವೇ ಇಲ್ಲದಂತಾಗಿದೆ. 30 ಸಾವಿರ ಜನರಿಗೆ ಒಂದರಂತೆ ಆರೋಗ್ಯ ಕೇಂದ್ರವಿರಬೇಕೆಂದು ಸರಕಾರದ ಅಧಿಸೂಚನೆಯಿದೆ. ಆದರೆ ಪುರಸಭೆ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರ ಮಾತ್ರವಲ್ಲದೆ, ಆರೋಗ್ಯಾಧಿಕಾರಿ, ಆಶಾ ಕಾರ್ಯಕರ್ತೆಯರ ಕೊರತೆ ಇದೆಯೆಂದರು.ಇದಕ್ಕೆ ಉತ್ತರಿಸಿದ ಆರೋಗ್ಯ ಅಧಿಕಾರಿಯು ಹತ್ತಿರದಲ್ಲೇ ಕೋಟೆಕಾರ್ ಪಟ್ಟಣ ಪಂಚಾಯತ್ ವ್ಯಾಪ್ತಿಯ ಬೀರಿಯಲ್ಲಿ ಆರೋಗ್ಯ ಕೇಂದ್ರ ಕಾರ್ಯಾಚರಿಸುತ್ತಿದೆ. ಸೋಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರ ನಿರ್ಮಿಸಲು ಸಮರ್ಪಕ ನಿವೇಶನದ ಕೊರತೆ ಇದೆಯೆಂದರು. ಈ ವೇಳೆ ಮಧ್ಯ ಪ್ರವೇಶಿಸಿದ ಪುರಸಭೆ ಉಪಾಧ್ಯಕ್ಷ ರವಿಶಂಕರ್, ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಬೇಕಾದ ನಿವೇಶನವನ್ನು ಕಂದಾಯ ಇಲಾಖೆ ಮಂಜೂರು ಮಾಡಬೇಕು. ಆರೋಗ್ಯ ಇಲಾಖೆ ಈ ಕುರಿತಂತೆ ಕಂದಾಯ ಇಲಾಖೆಯಲ್ಲಿ ಮನವಿ ಮಾಡಿ ಸಮರ್ಪಕ ನಿವೇಶನ ಪಡೆಯಬೇಕೆಂದು ನಿರ್ದೇಶನ ನೀಡಿದರು. ಸಂಕೋಲಿಗೆಯಲ್ಲಿ ಅಂಚೆ ಇಲಾಖೆಗೆಂದು ಮೀಸಲಿಟ್ಟ ಖಾಲಿ ನಿವೇಶನ ಇದೆ. ಈ ಪ್ರದೇಶದಲ್ಲಿ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಯೋಜನೆ ನಿರ್ಮಿಸುವಂತೆ ಸದಸ್ಯ ಸಲಾಮ್ ಉಚ್ಚಿಲ್ ಸಲಹೆ ನೀಡಿದರು.

ಭೂ ತೆರಿಗೆ ಇಳಿಕೆಗೆ ಆಗ್ರಹ

ಭೂಮಿಗೆ ಚದರ ಅಡಿಗೆ ಶೇ.5 ತೆರಿಗೆ ಪುರಸಭೆ ವಿಧಿಸಿದ್ದು ಸರಿಯಲ್ಲ, ಇದರಿಂದ ಜನರಿಗೆ ಬಹಳಷ್ಟು ಹೊರೆಯಾಗುತ್ತಿದೆ. ತೆರಿಗೆಯನ್ನು ಇಳಿಕೆ ಮಾಡುವಂತೆ ವಿಪಕ್ಷ ನಾಯಕ ಪುರುಷೋತ್ತಮ ಶೆಟ್ಟಿ ಪಿಲಾರ್ ಆಗ್ರಹಿಸಿದರು. ವಿಪಕ್ಷ ನಾಯಕರ ಆಗ್ರಹಕ್ಕೆ ಬಾಕಿ ಪುರಸಭಾ ಸದಸ್ಯರು ಕೂಡಾ ಧ್ವನಿಗೂಡಿಸಿದ ಹಿನ್ನಲೆಯಲ್ಲಿ ಭೂ ತೆರಿಗೆಯನ್ನು ಶೇ.3ಕ್ಕೆ ಇಳಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ಘನತ್ಯಾಜ್ಯ ವಿಲೇವಾರಿಗೆ ಶುಲ್ಕ ಏರಿಕೆ ಮಾಡಿದ ಬಗ್ಗೆ ಸಭೆಯಲ್ಲಿ ಸದಸ್ಯರು ಮಾಡಿದ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಾಧಿಕಾರಿ ಮತ್ತಡಿ ಅವರು ಮಂಗಳೂರಿನಲ್ಲಿ ಘನತ್ಯಾಜ್ಯದ ವಿಲೇವಾರಿ ನಡೆಸಲಾಗುತ್ತಿದ್ದು ಅದಕ್ಕೆ ನಾವು ಶುಲ್ಕ ಪಾವತಿ ಮಾಡಬೇಕಿದೆ. ವಿಲೇವಾರಿ ಪ್ರಕ್ರಿಯೆಗೆ ವಾಹನ,ಪೆಟ್ರೋಲ್ ನಾವೇ ನೀಡಬೇಕಾಗಿದ್ದು ಖರ್ಚು ಜಾಸ್ತಿ ತಗಲುತ್ತಿದೆ ಎಂದು ಸಮಜಾಯಿಷಿ ನೀಡಿದರು.

ಶ್ವಾನದಾಳಿಯಿಂದ ಮೃತಪಟ್ಟ ವ್ಯಕ್ತಿ ಕುಟುಂಬಕ್ಕೆ ಪರಿಹಾರ

ಕಳೆದ ನವೆಂಬರ್ ತಿಂಗಳಲ್ಲಿ ಪುರಸಭೆ ವ್ಯಾಪ್ತಿಯ ಕುಂಪಲ ಬೈಪಾಸ್ ಎಂಬಲ್ಲಿ ಬೀದಿ ನಾಯಿ ದಾಳಿಗೊಳಗಾಗಿ ಮೃತಪಟ್ಟಿದ್ದ ಅವಿವಾಹಿತರಾಗಿದ್ದ ದಯಾನಂದ ಗಟ್ಟಿ ಎಂಬವರ ಕುಟುಂಬಕ್ಕೆ ಸೋಮೇಶ್ವರ ಪುರಸಭೆ ಯಿಂದ 5 ಲ.ರೂ. ಪರಿಹಾರ ನೀಡಲಾಯಿತು.ಪುರಸಭಾ ಅಧ್ಯಕ್ಷ ಕಮಲ ಅವರು ಮೃತ ದಯಾನಂದ ಅವರ ಸಹೋದರ ಯಶೋಧ ಅವರಿಗೆ ಪರಿಹಾರದ ಚೆಕ್ಕನ್ನು ಹಸ್ತಾಂತರಿಸಿದರು.

ಕ್ಯಾಮರಾಗಳನ್ನು ಸರಿಪಡಿಸಿ

ವಿಪಕ್ಷ ಸದಸ್ಯೆ ಪರ್ವಿನ್ ಮಾತನಾಡಿ, ಸಿಸಿ ಕ್ಯಾಮರಾ ಅವ್ಯವಸ್ಥೆ ಬಗ್ಗೆ ಧ್ವನಿ ಎತ್ತಿದರು. ಆಡಳಿತ ಪಕ್ಷ ಸದಸ್ಯ ಜಯಪೂಜಾರಿ ಕೂಡ ಸಮಸ್ಯೆ ಬಗ್ಗೆ ಗಮನ ಸೆಳೆದು, ಸಿಸಿ ಕ್ಯಾಮರಾ ಅಳವಡಿಸಿದ ಜಾಗದಲ್ಲೇ ಕಸ ಎಸೆಯಲಾಗುತ್ತಿದೆ. ಕ್ಯಾಮರಾದಲ್ಲಿ ಡಾಟಾ ಸಂಗ್ರಹವಾಗುತ್ತಿಲ್ಲವೇ ಎಂದು ಅಧಿಕಾರಿಯನ್ನು ತರಾಟೆಗೆತ್ತಿದರು. ಇದಕ್ಕುತ್ತರಿಸಿದ ಇಂಜಿನಿಯರ್ ಪುನೀತ್, ಟೆಂಡರಲ್ಲಿ 1 ದಿನದ ಡಾಟಾ ಕವರೇಜ್ ಕ್ಯಾಮೆರ ನಮೂದಾಗಿತ್ತು. 4 ಲ.ರೂ. ಖರ್ಚಿನಲ್ಲಿ ಒಟ್ಟು 15 ಸಿಸಿ ಕ್ಯಾಮೆರ ಹಾಕಲಾಗಿದೆ ಎಂದರು.

ಜಿಲ್ಲಾ ಯೋಜನಾ ಸಮಿತಿ ಸದಸ್ಯರಾಗಿ ಆಯ್ಕೆಯಾಗಿರುವ ಆಡಳಿತ ಪಕ್ಷ ಸದಸ್ಯ ಹರೀಶ್ ಕುಂಪಲ, ಮನೋಜ್ ಕಟ್ಟೆಮನೆ, ಸೋನಾ ಶುಭಾಶಿನಿ ಅವರನ್ನು ಗೌರವಿಸಲಾಯಿತು. ಸ್ಥಾಯಿ ಸಮಿತಿ ಅಧ್ಯಕ್ಷ ಪುರುಷೋತ್ತಮ ಗಟ್ಟಿ ಪರ್ಯತ್ತೂರು ಇದ್ದರು.

ಸುತ್ತಮುತ್ತ

ಹಿಂದುಗಳ ಕಾರ್ಯಕ್ರಮಕ್ಕೆ ಅಡ್ಡಿ ಸರಿಯಲ್ಲ: ಉದ್ಯಮಿ ಎಡಿಕೇರಿ ಪ್ರಸನ್ನ

ನಾಪೋಕ್ಲು: ರಾಜಕೀಯ ಲಾಭಕ್ಕಾಗಿ ಸಮಸ್ತ ಹಿಂದುಗಳ ಮೂಲವಾದ ಹಿಂದುತ್ವದ ಆಚರಣೆಗಳಿಗೆ ಅಡ್ಡಿಪಡಿಸುವುದು ಸರಿಯಲ್ಲ ಈ ರೀತಿಯ ಹಿಂದೂ ವಿರೋಧಿ ಚಟುವಟಿಗೆಗಳನ್ನು ಹಿಂದೂ ಸಮಾಜ ಸಹಿಸುವುದಿಲ್ಲ ಎಂದು ಉದ್ಯಮಿ ಹಾಗೂ ಸಮಾಜ ಸೇವಕ ಎಡಿಕೇರಿ ಪ್ರಸನ್ನ ಅಭಿಪ್ರಾಯಪಟ್ಟಿದ್ದಾರೆ.



ಮಾಧ್ಯಮ ಹೇಳಿಕೆ ನೀಡಿರುವ ಅವರು ಬಿರುನಾಣಿಯಲ್ಲಿ ಹಿಂದೂ ಸಂಗಮ ಕಾರ್ಯಕ್ರಮದ ಬಂಟಿಂಗ್ಸ್ ತೆರವುಗೊಳಿಸಿದ ಘಟನೆಗೆ ಪ್ರತಿಕ್ರಿಯಿಸಿರುವ ಅವರು ಇಡೀ ಸಮಾಜ ಇಂದು ಒಗ್ಗಟ್ಟು ಮತ್ತು ಹಿಂದುತ್ವದ ಉಳಿವಿಗಾಗಿ ಪಣ ತೊಟ್ಟಿರುವ ಸಮಯದಲ್ಲಿ ರಾಜಕೀಯ ಲಾಭಕ್ಕಾಗಿ ಇಂತ ಕಿಡಿಗೇಡಿತನ ಸರಿಯಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಸಾಮರಸ್ಯದಿಂದ ಇದ್ದ ಕೊಡಗಿನ ಸಮುದಾಯಗಳನ್ನು ರಾಜಕೀಯ ಲಾಭಕ್ಕಾಗಿ ಒಡೆದ ಬಳಿಕ ಈಗ ಕೆಲವು ಪಟ್ಟಬದ್ಧ ಹಿತಾಸಕ್ತಿಗಳು ಹಿಂದು ಸಮಾಜವನ್ನೇ ಕೆಣಕುವ ಕುಚೇಷ್ಟೆ ಖಂಡನೀಯ ಎಂದಿದ್ದಾರೆ. ಎಲ್ಲಾ ಸಮುದಾಯದ ಶುದ್ಧ ಹೃದಯಗಳು ಇಂದು ಹಿಂದುತ್ವವದ ಉಳಿವಿಗಾಗಿ ಉತ್ತಮ ಸಮಾಜವನ್ನು ಕಟ್ಟಿ ನಮ್ಮೊಳಗಿರುವ ಕೆಟ್ಟ ಕ್ರಿಮಿಗಳ ವಿರುದ್ಧ ಎಲ್ಲರೂ ಒಂದಾಗಬೇಕೆಂದು ಹೇಳಿದ ಪ್ರಸನ್ನ ಈ ಪ್ರಕರಣವನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಲು ಅವರು ಇದೆ ವೇಳೆ ಒತ್ತಾಯಿಸಿದ್ದಾರೆ.

ವಿಷ್ಣುಪುರದಲ್ಲಿ ಏ.2ರಿಂದ ಒತ್ತೆಕೋಲ: ಪೂರ್ವಭಾವಿ ಸಭೆ

ಸುಬ್ರಹ್ಮಣ್ಯ: ಕಡಬ ತಾಲೂಕು ಪುಣ್ಚತ್ತಾರಿನ ವಿಷ್ಣುಪುರದ ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನದಲ್ಲಿ ಏ.2ರಿಂದ ಮೂರು ದಿನಗಳ ಕಾಲ ಒತ್ತೆಕೋಲ ಮಹೋತ್ಸವ ನಡೆಯಲಿದ್ದು ಇದರ ಪೂರ್ವಭಾವಿ ಸಭೆಯು ಭಾನುವಾರ ದೈವಸ್ಥಾನದ ಸಭಾಂಗಣದಲ್ಲಿ ಆಡಳಿತ ಮಂಡಳಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರು ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಒತ್ತೆಕೋಲ ಮಹೋತ್ಸವ ಸಂದರ್ಭ ನಡೆಸಬೇಕಾದ ಅನುಕೂಲತೆಗಳ ಬಗ್ಗೆ ಮತ್ತು ಭಕ್ತರಿಗೆ ಒದಗಿಸಬೇಕಾದ ವ್ಯವಸ್ಥೆಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ದೈವಸ್ಥಾನದ ಮೊಕ್ತೇಸರರಾದ ವೆಂಕಟ್ರಮಣ ಆಚಾರ್ಯ, ಜನಾರ್ದನ ಆಚಾರ್ಯ, ಕೃಷ್ಣ ಆಚಾರ್ಯ, ಆಡಳಿತ ಮಂಡಳಿ ಉಪಾಧ್ಯಕ್ಷ ಶೇಷಪ್ಪ ಬೆದ್ರಂಗಳ, ಕಾರ್ಯದರ್ಶಿ ಮೋನಪ್ಪ ಬಂಡಾಜೆ, ಸದಸ್ಯರಾದ ಕುಮಾರ ಆಚಾರ್ಯ ದೋಳ್ಪಾಡಿ, ಭವಿಷ್, ಪ್ರಮೋದ್, ಮೋಹನ್, ರಾಜೇಶ್, ರಾಕೇಶ್ ವಿಷ್ಣುಪುರ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ: ಲಾಂಛನ ವಿನ್ಯಾಸ ಸ್ಪರ್ಧೆ

ಮಂಗಳೂರು: ಬಂಟ್ವಾಳದ ಸ್ಪರ್ಶ ಕಲಾ ಮಂದಿರದಲ್ಲಿ ಮಾ. 27 ಮತ್ತು 28ರಂದು ನಡೆಯುವ 28ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ವಿನ್ಯಾಸಕ್ಕಾಗಿ ಮುಕ್ತ ಸ್ಪರ್ಧೆ ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತರು ವಿನ್ಯಾಸಗೊಳಿಸಿದ ಲಾಂಛನವನ್ನು ಫೆ.27ರ ಒಳಗೆ ವಾಟ್ಸಾಪ್ ಮೂಲಕ ವಿ.ಸು ಭಟ್ 9483903306 ಇವರಿಗೆ ಕಳುಹಿಸಲು ಕೋರಲಾಗಿದೆ ಎಂದು ದ.ಕ.ಜಿಲ್ಲಾ ಕ.ಸಾ.ಪ ಅಧ್ಯಕ್ಷ ಡಾ. ಎಂ.ಪಿ. ಶ್ರೀನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.25: ರೋಟರಿ ಸೇವಾ ಕಾರ್ಯಗಳ ಉದ್ಘಾಟನೆ

ಸುಬ್ರಹ್ಮಣ್ಯ: ರೋಟರಿ ಕ್ಲಬ್ ಸುಬ್ರಹ್ಮಣ್ಯಕ್ಕೆ ಫೆ.25ರಂದು ರೋಟರಿ ಜಿಲ್ಲೆ 3181ನೆ ಜಿಲ್ಲಾ ಗವರ್ನರ್ ಪಿ.ಕೆ. ರಾಮಕೃಷ್ಣ ಅಧಿಕೃತವಾಗಿ ಭೇಟಿ ನೀಡಲಿದ್ದಾರೆ. ಈ ಸಂದರ್ಭ ಸುಬ್ರಹ್ಮಣ್ಯ ರೋಟರಿಯಿಂದ ಕೊಡಮಾಡುವ ಹಲವಾರು ಸಮಾಜಮುಖಿ ಸಮುದಾಯ ಸೇವೆಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಸುಬ್ರಹ್ಮಣ್ಯ ರೋಟರಿ ಅಧ್ಯಕ್ಷ ಜಯಪ್ರಕಾಶ್ ಆರ್. ತಿಳಿಸಿದ್ದಾರೆ.

ಸಮುದಾಯ ಸೇವೆ

ಆರಂಭದಲ್ಲಿ ರೋಟರಿ ಜಿಲ್ಲಾ ರಾಜ್ಯಪಾಲ ರಾಮಕೃಷ್ಣ ಪಿ.ಕೆ. ಅವರು ಉಲ್ಲಾಸ್ ಕಾಮತ್ ಸಹಕಾರದಲ್ಲಿ ಕುಂತೂರಿನ ಶಿಶು ಮಂದಿರಕ್ಕೆ ರೂ.25 ಸಾವಿರ ಮೊತ್ತದ ಉಯ್ಯಾಲೆ ಮತ್ತು ಆಟಿಕೆಗಳನ್ನು, ನೂಜಿಬಾಳ್ತಿಲದ ಬೆಥನಿ ಪದವಿ ಪೂರ್ವ ಕಾಲೇಜಿಗೆ ರೂ.75 ಸಾವಿರ ಮೊತ್ತದ ಕುಡಿಯುವ ನೀರು ಶುದ್ಧೀಕರಣ ಯಂತ್ರ, ಸ್ಯಾನಿಟರಿ ಪ್ಯಾಡ್ ಬರ್ನಿಂಗ್ ಮೆಷೀನ್ ಮತ್ತು 50 ಕುರ್ಚಿಗಳನ್ನು ಹಸ್ತಾಂತರಿಸಲಿದ್ದಾರೆ. ನಂತರ ಸುಬ್ರಹ್ಮಣ್ಯದ ಕಾಶಿಕಟ್ಟೆ ಅಂಗನವಾಡಿ ಕೇಂದ್ರಕ್ಕೆ ಉಲ್ಲಾಸ್ ಕಾಮತ್ ಕೊಡ ಮಾಡಿದ ರೂ.50 ಸಾವಿರ ಮೊತ್ತದ ಮೇಲ್ಚಾವಣಿಯನ್ನು ಉದ್ಘಾಟಿಸಲಿದ್ದಾರೆ. ಯೇನೆಕಲ್ಲಿನ ರೈತ ಯುವಕ ಮಂಡಲಕ್ಕೆ ರೂ.15 ಸಾವಿರ ಮೊತ್ತದಲ್ಲಿ ಉಲ್ಲಾಸ್ ಕಾಮತ್ ನೀಡಿದ 50 ಕುರ್ಚಿಗಳನ್ನು ಹಾಗೂ ಸುಬ್ರಹ್ಮಣ್ಯ ರೋಟರಿ ಸದಸ್ಯರ ಸಹಕಾರದಿಂದ ರೂ.19 ಸಾವಿರ ಮೊತ್ತದಲ್ಲಿ ನೀಡಿದ ಬ್ಲೂಟೂತ್ ಸ್ಪೀಕರ್ ಹಸ್ತಾಂತರಿಸಲಿದ್ದಾರೆ ಎಂದು ಅವರು ಹೇಳಿದರು.

ಪ್ರತಿಭಾ ಪುರಸ್ಕಾರ

ಸಂಜೆ ಯೇನೆಕಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ರೋಟರಿ ಜಿಲ್ಲಾ ಗವರ್ನರ್ ಶೈಕ್ಷಣಿಕ ಸಾಧಕರಿಗೆ ಪ್ರತಿಭಾ ಪುರಸ್ಕಾರ ಮತ್ತು ದತ್ತಿನಿಧಿ ಪ್ರಧಾನ ಮಾಡಲಿದ್ದಾರೆ. ಸಮಾರಂಭದಲ್ಲಿ ರೋಟರಿ ಸಹಾಯಕ ರಾಜ್ಯಪಾಲ ಪ್ರೊ. ಬಾಲಕೃಷ್ಣ ಪೈ, ವಲಯ ಸೇನಾನಿ ವಿಜಯ ಕುಮಾರ್ ಅಮೈ, ವಿದ್ಯಾರಶ್ಮಿ ವಿದ್ಯಾಸಂಸ್ಥೆಗಳ ಅಧ್ಯಕ್ಷ ಸೀತಾರಾಮ ರೈ ಸವಣೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು.

ದ.ಕ. ಜಿಲ್ಲಾ ರೆಡ್‌ಕ್ರಾಸ್ ಚುನಾವಣೆ: ಸಿಎ ಶಾಂತಾರಾಮ ಶೆಟ್ಟಿ ತಂಡಕ್ಕೆ ಗೆಲುವು



ಮಂಗಳೂರು: ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ 2026–29ನೇ ಸಾಲಿನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಹಾಲಿ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ನೇತೃತ್ವದ ತಂಡ ಎಲ್ಲ 10 ಸ್ಥಾನ ಗೆಲ್ಲುವ ಮೂಲಕ ಕ್ಲೀನ್ ಸ್ವೀಪ್ ಸಾಧನೆ ಮಾಡಿದೆ. ಒಟ್ಟು 19 ಅಭ್ಯರ್ಥಿಗಳು ಕಣದಲ್ಲಿದ್ದರು. ರೆಡ್ ಕ್ರಾಸ್ ಶತಮಾನೋತ್ಸವ ಕಟ್ಟಡದಲ್ಲಿ ಸೋಮವಾರ ಮತ ಎಣಿಕೆ ನಡೆಯಿತು.

ಸಿಎ ಶಾಂತಾರಾಮ ಶೆಟ್ಟಿ –1005, ಡಾ.ಸುಮನ ಬಿ.–876, ಡಾ. ಸತೀಶ್ ರಾವ್–870, ಡಾ. ಬಿ.ಸಚ್ಚಿದಾನಂದ ರೈ–868, ರಾಘವೇಂದ್ರ ರಾವ್–844, ಪುಷ್ಪರಾಜ್ ಜೈನ್–835, ಪಿ.ಬಿ. ಹರಿಪ್ರಸಾದ್ ರೈ–810, ಯತೀಶ್ ಬೈಕಂಪಾಡಿ–797, ಸಚೇತ್ ಸುವರ್ಣ– 762, ಗುರುದತ್ ಎಂ. ನಾಯಕ್–762 ಮತ ಗಳಿಸಿ ಜಯಶಾಲಿಗಳಾದರು.

ಆಡಳಿತ ಮಂಡಳಿಯ 10 ಸದಸ್ಯ ಸ್ಥಾನಕ್ಕೆ ಫೆ.22ರಂದು ಚುನಾವಣೆ ನಡೆದಿತ್ತು. 3654 ಮತದಾರರ ಪೈಕಿ 1388 ಮಂದಿ ಮತ ಚಲಾಯಿಸಿದ್ದರು. 24 ಮತ ಅಸಿಂಧುವಾಗಿತ್ತು. ಚುನಾವಣಾಧಿಕಾರಿಯಾಗಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಮಹೇಶ್ ಕುಮಾರ್ ಯು. ಮತ್ತು ಸಹಾಯಕ ಚುನಾವಣಾಧಿಕಾರಿಯಾಗಿ ನಿವೃತ್ತ ಚುನಾವಣಾ ಉಪ ತಹಶೀಲ್ದಾರ್ ರಾಮಚಂದ್ರ ಬಿ. ಕಾರ್ಯನಿರ್ವಹಿಸಿದ್ದರು.

‘ಸಹಕಾರ ಶಿರೋಮಣಿ ಪ್ರಶಸ್ತಿ’ ಸಿದ್ದಕಟ್ಟೆ ಸಹಕಾರ ಸಂಘಕ್ಕೆ ಗೌರವ: ಸಂದೇಶ ಶೆಟ್ಟಿ



ಬಂಟ್ವಾಳ: ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಳೆದ 6 ವರ್ಷಗಳಿಂದ ರೈತರಿಗೆ ಬೇಕಾದ ಸಾಲ ಸೌಲಭ್ಯವನ್ನು ಯಾವುದೇ ತಾರತಮ್ಯವಿಲ್ಲದೆ ಅತೀ ಸುಲಭವಾಗಿ ನೀಡಲಾಗಿದ್ದಲ್ಲದೇ, ಸಮಾಜಮುಖಿ ಕಾರ್ಯಗಳಿಗೆ ಪ್ರೋತ್ಸಾಹ ವನ್ನಿತ್ತು, ಎಲ್ಲಾ ಕ್ಷೇತ್ರಗಳಲ್ಲೂ ಸಿದ್ದಕಟ್ಟೆ ಸಹಕಾರ ಸಂಘವು ಗಣನೀಯವಾಗಿ ತೊಡಗಿಕೊಂಡಿರುವುದರ ಫಲವಾಗಿ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಅವರನ್ನು ಮಾಧ್ಯಮ ಸಂಸ್ಥೆಯೊಂದು ಗುರುತಿಸಿ ಕರ್ನಾಟಕ ಸಹಕಾರ ಶಿರೋಮಣಿ 2025 ರಾಜ್ಯ ಮಟ್ಟದ ಪ್ರಶಸ್ತಿ ನೀಡಿರುವುದು ನಮ್ಮ ಸಂಘಕ್ಕೆ ಸಿಕ್ಕಿದ ಗೌರವವಾಗಿದೆ ಎಂದು ಸಿದ್ದಕಟ್ಟೆ ಪ್ರಾ. ಕೃ. ಪ.ಸ. ಸಂಘದ ಉಪಾಧ್ಯಕ್ಷ ಸಂದೇಶ ಶೆಟ್ಟಿ ಪೊಡುಂಬ ಅಭಿಪ್ರಾಯಪಟ್ಟಿದ್ದಾರೆ.

ಶನಿವಾರ ಸಂಘದ ಬೆಳ್ಳಿವಾಡಿ ಕೃಷ್ಣ ರೈ ರೈತ ಸಭಾಂಗಣದಲ್ಲಿ ಕರ್ನಾಟಕ ಸಹಕಾರ ಶಿರೋಮಣಿ ಪ್ರಶಸ್ತಿ ಪುರಸ್ಕೃತ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭುರವರಿಗೆ ಸಂಘದ ವತಿಯಿಂದ ಏರ್ಪಡಿಸಿದ ಅಭಿನಂದನಾ ಸಭೆಯಲ್ಲಿ ಅವರು ಮಾತನಾಡಿದರು.

ನಿರ್ದೇಶಕ ರಕ್ಷಿತ್ ಶೆಟ್ಟಿ ನೋಣಾಲ್ ಗುತ್ತು, ದಿನೇಶ್ ಪೂಜಾರಿ ಹುಲಿಮೇರು ಅಭಿನಂದನಾ ಭಾಷಣಗೈದರು. ನಿರ್ದೇಶಕ ಸತೀಶ್ ಪೂಜಾರಿ ಅಲಕ್ಕೆ ಚಂದ್ರಶೇಖರ ಶೆಟ್ಟಿ ವಿಶ್ವನಾಥ್ ಶೆಟ್ಟಿಗಾರ್, ಶಿವ ಗೌಡ, ಜಾರಪ್ಪ ನಾಯ್ಕ, ವೀರಪ್ಪ ಪರವ, ರಾಜೇಶ್ ಶೆಟ್ಟಿ ಕೊನೆರಬೆಟ್ಟು, ನವೀನ ಹೆಗ್ಡೆ ಮಂದಾರತಿ ಶೆಟ್ಟಿ ಪುಷ್ಪಲತಾ ಎಸ್. ಆರ್, ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಆರತಿ ಶೆಟ್ಟಿ ಇದ್ದರು. ಸಂಘದ ಸಿಬ್ಬಂದಿ ಸುಭಾಷ್ ಬಂಗೇರ ಸ್ವಾಗತಿಸಿ, ವಂದಿಸಿದರು.

ಆಲಂಗೋಡು: ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯಿಂದ ಗಾನಾಮೃತ



ಕಾಸರಗೋಡು: ಡಾ. ವಾಣಿಶ್ರೀ ಕಾಸರಗೋಡು ನೇತೃತ್ವದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ಇದರ ವತಿಯಿಂದ 178ನೇ ಕಾರ್ಯಕ್ರಮವು ಆಲಂಗೋಡು ಶ್ರೀ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಮಹೋತ್ಸವದ ಪ್ರಯುಕ್ತ ಜರಗಿತು.

ಈ ಕಾರ್ಯಕ್ರಮದಲ್ಲಿ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷೆ ಡಾ. ವಾಣಿಶ್ರೀ ಕಾಸರಗೋಡು ಅವರು ಸಾಹಿತ್ಯ ಸಾದರಪಡಿಸಿದರು. ಗಾನಾಮೃತ ಕಾರ್ಯಕ್ರಮವನ್ನು ಗಾಯಕಿಯರಾದ ದಿವಾಕರ ಕಾಸರಗೋಡು, ವಿಶ್ವನಾಥ ಪುತ್ತಿಗೆ, ಮುರಳಿ ನೀರ್ಚಾಲು, ಅಮೃತ್, ಸೀತಾರಾಮ್, ಮನೋಜ್ ಅವರು ಶ್ರೇಷ್ಠ ಗಾಯನದ ಮೂಲಕ ಪ್ರಸ್ತುತಪಡಿಸಿದರು. ಶ್ರೀ ದೇವಳದ ವತಿಯಿಂದ ಸಂಸ್ಥೆಯ ಸ್ಥಾಪಕಿ ಡಾ.ವಾಣಿಶ್ರೀ ಅವರನ್ನು ಶ್ರೀ ದೇವರ ಪ್ರಸಾದ ನೀಡಿ ಹರಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಎಲ್ಲಾ ಕಲಾಮಾಣಿಕ್ಯಗಳಿಗೆ ಸಂಸ್ಥೆಯ ವತಿಯಿಂದ ಗೌರವಧನ ಮತ್ತು ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ವೇದಿಕೆಯಲ್ಲಿ ಪ್ರಮುಖರಾದ ರವಿ, ವಿಜಯರಾಜ, ಶ್ರೀ ಕ್ಷೇತ್ರದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಅಪಾರ ಸಂಖ್ಯೆಯಲ್ಲಿ ಭಕ್ತಜನರು ಪಾಲ್ಗೊಂಡಿದ್ದರು.

ಮೊಯಿಲ್ಕೆರೆ ನೀರು ಸಂಪೂರ್ಣ ಕಲುಷಿತ: ಶಾಸಕ ವೇದವ್ಯಾಸ್ ಭೇಟಿ



ಮಂಗಳೂರು: ನಗರದ ಮಹಾಕಾಳಿ ಪಡ್ಪು ಅಂಡರ್ ಪಾಸ್ ರಸ್ತೆಯಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆಯಿಲ್ಲದೇ ನೀರು ನಿಲ್ಲುವುದು, ಮೊಯಿಲ್ಕೆರೆಯ ನೀರು ಸಂಪೂರ್ಣ ಕಲುಷಿತಗೊಂಡಿರುವುದು ಸೇರಿದಂತೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಶಾಸಕ ವೇದವ್ಯಾಸ ಕಾಮತ್ ಅಧಿಕಾರಿಗಳೊಂದಿಗೆ ಸ್ಥಳ ವೀಕ್ಷಣೆ ನಡೆಸಿದರು.

ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೊಯಿಲ್ಕೆರೆಯನ್ನು ಮೂಡಾ ವತಿಯಿಂದ ಸಂಪೂರ್ಣ ಅಭಿವೃದ್ಧಿಗೊಳಿಸಲಾಗಿತ್ತು. ಆದರೆ ನಂತರದ ದಿನಗಳಲ್ಲಿ ಈ ಕೆರೆಗೆ ಬೇರೆ ಕಡೆಗಳ ಡ್ರೈನೇಜ್‌ನಿಂದಾಗಿ ನೀರು ಕಲುಷಿತಗೊಂಡಿರುವ ಬಗ್ಗೆ ಅನೇಕ ಸಾರ್ವಜನಿಕರ ದೂರುಗಳು ಬಂದಿವೆ. ಮುಂದಿನ ದಿನಗಳಲ್ಲಿ ಈ ಕೆರೆಗೆ ಡ್ರೈನೇಜ್ ನೀರು ಬರದ ಹಾಗೆ ಅಗತ್ಯವಿರುವ ಎಲ್ಲಾ ಯೋಜನೆಗಳನ್ನು ಸಮಗ್ರವಾಗಿ ರೂಪಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.ಕಳೆದಹಲವಾರುವರ್ಷಗಳಿಂದ ಈ ಭಾಗಕ್ಕೆ ವೆಟ್‌ವೆಲ್ ನಿರ್ಮಾಣದ ಅವಶ್ಯಕತೆಯಿದ್ದು ಆ ಸಲುವಾಗಿ ಪಕ್ಕದಲ್ಲಿರುವ ಸುಮಾರು 10 ಸೆಂಟ್ಸ್ ಖಾಸಗಿ ಜಾಗವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿಯೂ ಮಾತುಕತೆ ನಡೆದಿದೆ ಎಂದರು. ಅಲ್ಲದೇ ಇತ್ತೀಚೆಗೆ ಉದ್ಘಾಟನೆಗೊಂಡ ಮಹಾಕಾಳಿ ಪಡ್ಪು ಅಂಡರ್ ಪಾಸ್ ರಸ್ತೆಯ ಭಾಗದಲ್ಲಿ ಅಡ್ಡಲಾಗಿ ಗೋಡೆ ಕಟ್ಟಿರುವುದರಿಂದ ಮಳೆಯ ನೀರು ಸರಾಗವಾಗಿ ಹರಿಯಲು ಅಡಚಣೆ ಉಂಟಾಗಿದ್ದು ರಸ್ತೆಯಲ್ಲಿ ನೀರು ನಿಲ್ಲುವಂತಾಗಿದೆ. ಕೂಡಲೇ ಅಲ್ಲಿ ಸಮರ್ಪಕ ಚರಂಡಿಯನ್ನು ನಿರ್ಮಿಸಬೇಕು ಎಂದರು. ಇಲ್ಲಿನ ಸ್ಥಳೀಯ ಸಮಸ್ಯೆಗಳನ್ನು ಮಾಜಿ ಉಪ ಮೇಯರ್ ಭಾನುಮತಿ ಪಿ.ಎಸ್. ಹಾಗೂ ನಿಕಟಪೂರ್ವ ಪಾಲಿಕೆ ಸದಸ್ಯ ಶೈಲೇಶ್ ಶೆಟ್ಟಿಯವರು ನನ್ನ ಗಮನಕ್ಕೆ ತಂದಿದ್ದು ಶೀಘ್ರದಲ್ಲಿ ಈ ಬಗ್ಗೆ ಕಾರ್ಯಪ್ರವೃತ್ತರಾಗಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕಳೆದ ಎರಡುವರೆ ವರ್ಷಗಳಲ್ಲಿ ಅಭಿವೃದ್ಧಿಗೆ ಯಾವುದೇ ಅನುದಾನಗಳು ನಡೆದಿರುವುದರಿಂದ ಅಭಿವೃದ್ಧಿ ಕಾರ್ಯ ಕುಂಠಿತವಾಗಿದ್ದರೂ, ಕ್ಷೇತ್ರದ ಸಮಸ್ಯೆ ಬಗ್ಗೆ ಶಕ್ತಿಮೀರಿ ಪ್ರಯತ್ನಿಸಲಾಗುವುದು ಎಂದು ಶಾಸಕರು ಇದೇ ವೇಳೆ ಹೇಳಿದರು.

ಈ ಸಂದರ್ಭ ಅಧಿಕಾರಿ ಅರುಣ್ ಪ್ರಭ, ರಾಜೇಶ್, ಸಬಿತ್, ನಮಿತ್, ಸುರೇಶ್, ಜಯಪ್ರಕಾಶ್, ಭವ್ಯ, ಚಿನ್ಮಯಿ, ಪ್ರಮುಖರಾದ ಶಿವಪ್ರಸಾದ್ ಬೋಳಾರ, ಗಿರೀಶ್ ಶೆಟ್ಟಿಬೆಟ್ಟು ಮತ್ತಿತರರು ಉಪಸ್ಥಿತರಿದ್ದರು.

ಬಂಟ್ವಾಳ: ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಕಾಂಗ್ರೆಸ್‌ನಿಂದ ವಿಚಾರ ಸಂಕಿರಣ



ಬಂಟ್ವಾಳ: ಪಾಣೆಮಂಗಳೂರು ಮತ್ತು ಬಂಟ್ವಾಳ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ವಿಚಾರ ಸಂಕಿರಣ ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ಮಂಗಳವಾರ ನಡೆಯಿತು.

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿ ಬೂತ್ ಮಟ್ಟದ ಏಜೆಂಟ್ (ಬಿ.ಎಲ್.ಎ) ಮತ್ತು ವಲಯ ಕಾಂಗ್ರೆಸ್ ಅಧ್ಯಕ್ಷರಿಗಾಗಿ ಹಮ್ಮಿಕೊಳ್ಳಲಾದ ಈ ವಿಚಾರ ಸಂಕಿರಣವನ್ನು ಮಾಜಿ ಸಚಿವ ಬಿ.ರಮಾನಾಥ ರೈ ಉದ್ಘಾಟಿಸಿದರು.

ಬಳಿಕ ಮಾತನಾಡಿ,ಈ ಶಿಬಿರದ ಸಂಪೂರ್ಣ ಮಾಹಿತಿ ಪಡೆದುಕೊಂಡು ಮುಂದಿನ ದಿನಗಳಲ್ಲಿ ತಮ್ಮ ತಮ್ಮ ಬೂತ್ ಗಳಲ್ಲಿ ಕಾರ್ಯಗತಗೊಳಿಸಬೇಕು ಎಂದು ಕರೆ ನೀಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಡಾ.ವಾಸು ಎಚ್.ವಿ. ಮಾಹಿತಿ ನೀಡಿದರು. ಜಾಗೃತ ಕರ್ನಾಟಕದ ಸದಸ್ಯರಾದ ರಜನೀಕಾಂತ್, ಸಂತೋಷ್, ಮೋಹನ್ ಜಿ.ಕೆ, ಸಹಕರಿಸಿದರು.

ಕಾಂಗ್ರೆಸ್ ಪ್ರಚಾರ ಸಮಿತಿ ಉಸ್ತುವಾರಿ ದುರ್ಗಾ ಪ್ರಸಾದ್, ದ.ಕ.ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಡೆನ್ನಿಸ್ ಡಿ.ಸಿಲ್ವ, ಜಿಲ್ಲಾ ಲೀಗಲ್ ಸೆಲ್ ಅಧ್ಯಕ್ಷ ಪೊನ್ನುರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚಂದ್ರಶೇಖರ್ ಭಂಡಾರಿ, ಬಾಲಕೃಷ್ಣ ಅಂಚನ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಐಡಾ ಸುರೇಶ್, ನಿವೃತ್ತ ಎ.ಸಿ.ಎಫ್ ಮುಹಮ್ಮದ್, ಪಕ್ಷ ಪ್ರಮುಖರಾದ ಸುದೀಪ್ ಕುಮಾರ್ ಶೆಟ್ಟಿ ಬೇಬಿ ಕುಂದರ್, ಅಬ್ಬಾಸ್ ಅಲಿ, ಕೆ.ಪದ್ಮನಾಭ ರೈ, ಶೈಲಜಾ ರಾಜೇಶ್, ಜಯಂತಿ ಪೂಜಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಾಣಿ ವಲಯ ಕಾಂಗ್ರೆಸ್ ಅಧ್ಯಕ್ಷ ಬಾಲಕೃಷ್ಣ ಆಳ್ವ ಕೊಡಾಜೆ ಕಾರ್ಯಕ್ರಮ ನಿರೂಪಿಸಿದರು.

ಬಿ.ಸಿ.ರೋಡಿನಿಂದ ಸರಪಾಡಿಗೆ ಚಂದ್ರಮಂಡಲ ರಥದ ಮೆರವಣಿಗೆ



ಬಂಟ್ವಾಳ: ಸರಪಾಡಿ ಶ್ರೀ ಶರಭೇಶ್ವರ ದೇವಸ್ಥಾನಕ್ಕೆ ಪಡ್ಡಾಯಿಬೆಟ್ಟುವಿನ ಪ್ರಗತಿಪರ ಕೃಷಿಕ ರಘುರಾಮ ಶೆಟ್ಟಿ ಹಾಗೂ ಸುಶೀಲಾ ಆರ್.ಶೆಟ್ಟಿ ಮನೆಯವರು ಸಮರ್ಪಣೆ ಮಾಡಿದ ಚಂದ್ರಮಂಡಲ ರಥದ ಮೆರವಣಿಗೆಗೆ ಅವರು ಭಾನುವಾರ ಬಿ.ಸಿ.ರೋಡಿನ ಶ್ರೀ ರಕ್ತೇಶ್ವರೀ ಸನ್ನಿಧಿಯ ಬಳಿ ಚಾಲನೆ ನೀಡಲಾಯಿತು.

ಶ್ರೀ ಕ್ಷೇತ್ರ ಒಡಿಯೂರಿನ ಶ್ರೀ ಗುರುದೇವಾನಂದ ಸ್ವಾಮೀಜಿ ಅವರು ಚಂದ್ರಮಂಡಲರಥದ ಮೆರವಣಿಗೆಗೆ ಚಾಲನೆ ನೀಡಿ ಆಶೀರ್ವಚನಗೈದರು. ರಾಜ್ಯ ಧಾರ್ಮಿಕ ಪರಿಷತ್ ವಿಶೇಷ ಆಹ್ವಾನಿತ ಸದಸ್ಯ ರವಿಶಂಕರ್ ಶೆಟ್ಟಿ ಬಡಾಜೆಗುತ್ತು ಹಾಗೂ ಬೆಳ್ಳೂರು ಶ್ರೀ ಕಾವೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ರಘು ಎಲ್. ಶೆಟ್ಟಿ ಶುಭಹಾರೈಸಿದರು. ರಾಜ್ಯ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್, ಮಾಜಿ ಸಚಿವ ಬಿ.ರಮಾನಾಥ ರೈ, ಬಿ.ನಾಗರಾಜ ಶೆಟ್ಟಿ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಜಗನ್ನಾಥ ಚೌಟ ಬದಿಗುಡ್ಡೆ, ರಥಶಿಲ್ಪಿ ರಾಜಗೋಪಾಲಾಚಾರ್ಯ,ದೇವಸ್ಥಾನದ ಪ್ರಧಾನ ಅರ್ಚಕ ಶಂಕರನಾರಾಯಣ ಹೊಳ್ಳ, ಪುರೋಹಿತ ವಿಜಯಕೃಷ್ಣ ಐತಾಳ್ ಹಾಗೂ ಚಂದ್ರಮಂಡಲ ರಥದ ದಾನಿಗಳು,ದೇವಳದ ಸಮಿತಿ ಪದಾಧಿಕಾರಿಗಳು,ವಿವಿಧ ಕ್ಷೇತ್ರದ ಗಣ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಜಾತ್ರೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ರೈ ಕೊಟ್ಟುಂಜ ನಿರ್ವಹಿಸಿದರು. ವಿವಿಧ ಭಜನಾ ಕುಣಿತ ತಂಡಗಳು, ಚೆಂಡೆ ಬಳಗ, ಗೊಂಬೆ ಕುಣಿತ ಮೆರವಣಿಗೆಗೆ ಮೆರುಗು ನೀಡಿತು. ಮಣಿನಾಲ್ಕೂರು ಸಿಎ ಬ್ಯಾಂಕ್ ಬಳಿಯಿಂದ ಆದ್ರೂರಿಯ ಪಾದಯಾತ್ರೆ ಮೆರವಣಿಗೆ ನಡೆದು ದೇವಸ್ಥಾನಕ್ಕೆ ತಲುಪಿ ಬಳಿಕ ರಥ ಬೀದಿಯಲ್ಲಿ ಪ್ರದಕ್ಷಿಣೆ ನೆರವೇರಿತು.

ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ್ ಸಿ. ಕುಂದರ್ ಅಧ್ಯಕ್ಷತೆಯಲ್ಲಿ ಪೂರ್ವಸಿದ್ಧತಾ ಸಭೆ

ಮಾ.1ಕ್ಕೆ ಕೋಟ ಅಮೃತೇಶ್ವರೀ ದೇಗುಲದಿಂದ ಏಕಃ ಪವಿತ್ರ ನಾಗಮಂಡಲೋತ್ಸವ

ಕೋಟ: ನಾಗಮಂಡಲೋತ್ಸವ ಇದೇ ಮೊದಲಲ್ಲ, ಬದಲಾಗಿ ಕೆಲ ವರ್ಷಗಳ ಹಿಂದೆ ಅಮೃತೇಶ್ವರೀ ದೇಗುಲ ನಾಗಮಂಡಲೋತ್ಸವ ಯಶಸ್ವಿಯಾಗಿ ಪೂರೈಸಿದೆ. ಆದರೆ ಪ್ರಸ್ತುತ ನಾಗಮಂಡಲೋತ್ಸವ ಒಂದು ರೀತಿಯಲ್ಲಿ ಭಕ್ತರ ನಿರ್ವಹಣೆಯೇ ದೊಡ್ಡ ಸವಾಲಿನ ಕಾರ್ಯ. ಈ ದಿಸೆಯಲ್ಲಿ ಸ್ವಯಂಸೇವಕರ ಪಾತ್ರ ಮಹತ್ವವಾದದ್ದು ಎಂದು ಅಮೃತೇಶ್ವರೀ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ್ ಸಿ. ಕುಂದರ್ ನುಡಿದರು.

ಮಾರ್ಚ್ 1ರಂದು ಕೋಟ ಅಮೃತೇಶ್ವರೀ ದೇಗುಲದ ವತಿಯಿಂದ ನಡೆಯಲಿರುವ ಏಕಃ ಪವಿತ್ರ ನಾಗಮಂಡಲೋತ್ಸವ ಇದರ ಪೂರ್ವ ಸಿದ್ಧತಾ ಸಭೆಯಲ್ಲಿ ಮಾಹಿತಿ ನೀಡಿ ಸುಮಾರು 30ಸಾವಿರಕ್ಕೂ ಅಧಿಕ ಭಕ್ತಾದಿಗಳು ಸೇರುವ ನಿರೀಕ್ಷೆಯಿದ್ದು, ಕೋಟದ



ಗಾಂಧಿ ಮೈದಾನದಲ್ಲಿ ಊಟೋಪಚಾರ ಹಾಗೂ ನಾಗಮಂಡಲೋತ್ಸವ ನಡೆಯುವ ಸ್ಥಳವಾಗಿದ್ದು ಕೋಟದ ಶಾಂಭವೀ ಶಾಲಾ ಮೈದಾನ, ಕೋಟ ಪೊಲೀಸ್ ಸ್ಟೇಷನ್ ಮೈದಾನ, ಕೋಟದ ಬ್ರಹ್ಮಶ್ರೀ ನಾರಾಯಣಗುರು ಮಂದಿರ ಸ್ಥಳವನ್ನು ಪಾರ್ಕಿಂಗ್ ಸ್ಥಳವಾಗಿ ಗುರುತಿಸಲಾಗಿದೆ. ಜನದಟ್ಟಣೆಯನ್ನು ಸಮರ್ಥವಾಗಿ ಭೋಜನಶಾಲೆಗೆ ಕೊಂಡ್ಯೊಯುವ ಮಾರ್ಗೋಪಾಯಗಳ ಬಗ್ಗೆ ಸಭೆಗೆ ತಿಳಿಸಿದರಲ್ಲದೇ, ಅಮೃತೇಶ್ವರೀ ದೇಗುಲದ ಸಂಬಂಧಿಸಿದ ಹದಿನಾಲ್ಕು ಗ್ರಾಮಗಳಲ್ಲಿನ ಗ್ರಾಮಸ್ಥರ ಮೂಲಕ ಸ್ವಯಂಸೇವಕರ ತಂಡವನ್ನು ರಚಿಸಲಾಯಿತು. ಐದು ಶ್ರೀ ನಾಗದೇವರಿಗೆ ಸಂಬಂಧಿಸಿದ ಚಪ್ಪರದಲ್ಲಿ ಭೋಜನ ವ್ಯವಸ್ಥೆ ಒಂದು ಬಫೆ ಚಪ್ಪರಗಳಿರುವ ಬಗ್ಗೆ ಮಾಹಿತಿ ನೀಡಿದರು.

ಫೆ.25,26,27ಕ್ಕೆ ಹೊರೆಕಾಣಿಕೆ

ಮಾರ್ಚ್ 1ರಂದು ನಾಗಮಂಡಲೋತ್ಸವದ ಪೂರ್ವಸಿದ್ಧತಾ ಧಾರ್ಮಿಕ ಕಾರ್ಯಕ್ರಮಗಳು ಫೆ.25ರಿಂದ27ರ ತನಕ ಹೊರೆಕಾಣಿಕೆಯ ಮೂಲಕ ಪ್ರಾರಂಭಗೊಳ್ಳಲಿದೆ ವಿವಿಧ ಭಾಗಗಳಿಂದ ಹೊರೆಕಾಣಿಕೆಯನ್ನು ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ ಉಗ್ರಾಣದಲ್ಲಿ ಇರಿಸುವುದು ಅದನ್ನು ಸ್ವಯಂಸೇವಕರು ಸಮರೋಪಾದಿಯಲ್ಲಿ ನಿರ್ವಹಿಸುವ ಬಗ್ಗೆ ಮಾಹಿತಿ ನೀಡಿದ ಅವರು 27ರಿಂದ 28ರ ತನಕ ದೇಗುಲದಲ್ಲಿ ಕರ್ಮಾಂಗಗಳು ನಡೆಯಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜವಾಬ್ದಾರಿ ಹಂಚಿಕೆ

ಕೋಟದ ವಿವಿಧ ಭಾಗಗಳನ್ನು ಸೇರಿದಂತೆ ಸಾಲಿಗ್ರಾಮ, ಸಾಸ್ತಾನದ ವಿವಿಧ ಭಾಗಗಳ ಪ್ರಮುಖರಿಗೆ ಮಂಡಲೋತ್ಸವದ ಸ್ವಯಂಸೇವಕರ ನಿರ್ವಹಿಸುವ ಜವಾಬ್ದಾರಿಯನ್ನು ಸಭೆಯಲ್ಲಿ ಚರ್ಚಿಸಿ ಹಂಚಿಕೆ ಮಾಡಲಾಯಿತು.

ಸಭೆಯಲ್ಲಿ ಕೋಟ ಆರಕ್ಷಕ ಠಾಣಾಧಿಕಾರಿ ಪ್ರವೀಣ್ ಕುಮಾರ್, ಅಮೃತೇಶ್ವರೀ ದೇಗುಲದ ಟ್ರಸ್ಟಿಗಳಾದ ರತನ್ ಐತಾಳ್, ಸುಭಾಷ್ ಶೆಟ್ಟಿಗಣೇಶ್ ನೆಲ್ಲಿಬೆಟ್ಟು, ಶಿವ ಪೂಜಾರಿ, ಸುಧಾ ಎ. ಪೂಜಾರಿ, ಸುಬ್ರಾಯ ಜೋಗಿ,ಜ್ಯೋತಿ ಡಿ ಕಾಂಚನ್, ನಿವೃತ್ತ ಶಿಕ್ಷಕ ಬಾಲಕೃಷ್ಣ ಶೆಟ್ಟಿ ಗಣೇಶ್ ಜಿ, ಪ್ರತಾಪ್ ಶೆಟ್ಟಿ ಸಾಸ್ತಾನ, ಭಾಸ್ಕರ್ ಶೆಟ್ಟಿ ಮಣೂರು, ಐರೋಡಿ ರಮೇಶ್ ಕಾರಂತ್, ರವೀಂದ್ರ ಐತಾಳ್ ಪಾರಂಪಳ್ಳಿ, ಶೇವಧಿ ಸುರೇಶ್ ಗಾಣಿಗ, ದೇಗುಲದ ಮಾಜಿ ಟ್ರಸ್ಟಿಗಳು ಸೇರಿದಂತೆ ಅನೇಕ ಗಣ್ಯರು ಇದ್ದರು. ದೇಗುಲದ ಟ್ರಸ್ಟಿ ಚಂದ್ರ ಆಚಾರ್ ಕಾರ್ಯಕ್ರಮ ನಿರ್ವಹಿಸಿದರು.

ಸುತ್ತಮುತ್ತ

ಇಂದು ವರ್ಕಾಡಿ ಕೊಂಡೆವೂರು ಕ್ಷೇತ್ರದಲ್ಲಿ ವಾರ್ಷಿಕ ಜಾತ್ರೆ

ಮಂಜೇಶ್ವರ: ವರ್ಕಾಡಿ ಕೊಂಡೆವೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಫೆ.24ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಿಗ್ಗೆ 7ರಿಂದ ವೈದಿಕ ಕಾರ್ಯಕ್ರಮ ನಡೆಯಲಿದೆ. 11ಕ್ಕೆ ನಾಗ ದೇವರಿಗೆ ತಂಬಿಲ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ 4.30ಕ್ಕೆ ಪರಿವಾರ ದೇವತೆಗಳಿಗೆ ತಂಬಿಲ, 5ರಿಂದ ಭಜನೆ, 6.30ಕ್ಕೆ ದೀಪಾರಾಧನೆ, ರಾತ್ರಿ 7ಗಂಟೆಗೆ ರಂಗಪೂಜೆ, 7.30ಕ್ಕೆ ಭೂತಬಲಿ ಉತ್ಸವ, ರಾಜಾಂಗಣ ಪ್ರಸಾದ, ಅನ್ನ ಸಂತರ್ಪಣೆ, 9.30ರಿಂದ ನಾಟಕ ಪ್ರದರ್ಶನಗೊಳ್ಳಲಿದೆ.

ಇಂದು ಕೂಡ್ಲು ಮೀಪುಗುರಿ ದೈವಸ್ಥಾನದ ಪ್ರತಿಷ್ಠಾ ವಾರ್ಷಿಕೋತ್ಸವ

ಕಾಸರಗೋಡು: ಕೂಡ್ಲು ಮೀಪುಗುರಿ ಶ್ರೀ ಪಂಜುರ್ಲಿ ಕಲ್ಲುರ್ಟಿ ದೈವಸ್ಥಾನದ 24ನೇ ಪ್ರತಿಷ್ಠಾ ವಾರ್ಷಿಕೋತ್ಸವ ಫೆ.24ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 7ಕ್ಕೆ ಗಣಪತಿ ಹೋಮ, 8ಗಂಟೆಗೆ ವಿವಿಧ ತಂಡಗಳಿಂದ ಭಜನೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನ ಸಂತರ್ಪಣೆ, ರಾತ್ರಿ 8ರಿಂದ ಸ್ಥಳೀಯ ಕಲಾವಿದರಿಂದ ನೃತ್ಯ ವೈವಿಧ್ಯ ನಡೆಯಲಿದೆ.

ಮಾರ್ಚ್ 1ರಂದು ಸಮಾಲೋಚನಾ ಸಭೆ

ಮಂಜೇಶ್ವರ: ಪೈವಳಿಕೆ ಚಿಪ್ಪಾರು ನಾರ್ಣಕಟ್ಟೆ ದೈವಗಳ ಸ್ಥಾನ ಹಾಗೂ ಮಾಡದ ಬ್ರಹ್ಮಕಲಶ ಕಾರ್ಯಕ್ರಮವು ಏಪ್ರಿಲ್ 19 ಮತ್ತು 20ರಂದು ಜರಗಲಿದೆ. ಈ ಬಗ್ಗೆ ಸಮಾಲೋಚನಾ ಸಭೆಯು ಮಾರ್ಚ್ 1ರಂದು ಬೆಳಗ್ಗೆ 9 ಗಂಟೆಗೆ ನೆರವೇರಲಿದೆ. ಸಭೆಯಲ್ಲಿ ಬ್ರಹ್ಮಕಲಶ ಉತ್ಸವ ಸಮಿತಿ ರಚನೆ ಹಾಗೂ ಉಳಿದ ಕೆಲಸಕಾರ್ಯಗಳ ಕುರಿತು ಚರ್ಚೆ ನಡೆಯಲಿದೆ. ಭಕ್ತಜನರು ಈ ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಚಿಪ್ಪಾರು ನಾರ್ಣಕಟ್ಟೆ ದೈವಸ್ಥಾನ ಜೀರ್ಣೋದ್ಧಾರ ಸಮಿತಿಯ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಮಾ.28ರ ಧರಣಿ ಯಶಸ್ವಿಗೊಳಿಸಲು ಕರೆ

ಕುಂಬಳೆ: ಕೇರಳ ರಾಜ್ಯ ಸರಕಾರವು ಜಾರಿಗೊಳಿಸಿ ರಾಜ್ಯಪಾಲದ ಅನುಮತಿಗಾಗಿ ಕಳುಹಿಸಿದ ಮಲೆಯಾಳ ಭಾಷೆ ಮಸೂದೆಯನ್ನು ಭಾಷಾ ಅಲ್ಪಸಂಖ್ಯಾತ ಪ್ರದೇಶವಾದ ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳನ್ನು ಹೊರತುಪಡಿಸುವ ತಿದ್ದುಪಡಿಯೊಂದಿಗೆ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಕಾಸರಗೋಡಿನ ಕನ್ನಡಿಗರು ನಡೆಸುವ ಪ್ರತಿಭಟನೆಯ ಅಂಗವಾಗಿ ಮಾರ್ಚ್ 28ರಂದು ಕುಂಬಳೆಯಲ್ಲಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ.
ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯ ತನಕ ಕುಂಬಳೆ ಹಳೆ ಬಸ್ ನಿಲ್ದಾಣ ಬಳಿ ಕನ್ನಡಿಗರು ಪ್ರತಿಭಟನಾ ಧರಣಿ ಸತ್ಯಾಗ್ರಹ ನಡೆಸಲಿದ್ದಾರೆ. ವಿವಿಧ ಕನ್ನಡಪರ ಸಂಘ ಸಂಸ್ಥೆಗಳ, ಕನ್ನಡ ಮಾಧ್ಯಮ ಅಧ್ಯಾಪಕ ಸಂಘದ ಸದಸ್ಯರು, ನಿವೃತ್ತ ಕನ್ನಡ ನೌಕರರು, ಕನ್ನಡ ಭಾಷಾಭಿಮಾನಿಗಳು ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸ್ಥಳೀಯಾಡಳಿತ ಸಂಸ್ಥೆಗಳಿಗೆ ಆಯ್ಕೆಗೊಂಡ ಕನ್ನಡ ಜನಪ್ರತಿನಿಧಿಗಳು, ವಿವಿಧ ರಾಜಕೀಯ ಪಕ್ಷಗಳ ನಾಯಕರು ಭಾಗವಹಿಸುವರು.

ಎಣ್ಮಕಜೆ ಗ್ರಾ.ಪಂ.ನ ಅಭಿವೃದ್ಧಿ ವಿಚಾರ ಸಂಕಿರಣ

ಪೆರ್ಲ: ಎಣ್ಮಕಜೆ ಗ್ರಾಮ ಪಂಚಾಯತ್ 2026–27ನೇ ಸಾಲಿನ ಆರ್ಥಿಕ ಯೋಜನೆ ರೂಪಿಸುವ ಅಂಗವಾಗಿ ಅಭಿವೃದ್ಧಿ ವಿಚಾರ ಸಂಕಿರಣ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಶಾಸಕ ಎ.ಕೆ.ಎಂ.ಅಶ್ರಫ್ ಉದ್ಘಾಟಿಸಿದರು. ಪಂಚಾಯತ್ ಅಧ್ಯಕ್ಷೆ ಕುಸುಮಾವತಿ ಬಿ. ಅಧ್ಯಕ್ಷತೆ ವಹಿಸಿದ್ದರು. ಪಂಚಾಯತ್ ಉಪಾಧ್ಯಕ್ಷ ಅನ್ವರ್ ಸಿದ್ದಿಕ್ ವಲಮೊಗರು, ಜಿ.ಪಂ.ಸದಸ್ಯ ಸೋಮಶೇಖರ್ ಜೆ.ಎಸ್., ಗ್ರಾಮ ಪಂಚಾಯತ್ ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ರಮ್ಲಾ ಇಬ್ರಾಹಿಂ, ಕ್ಷೇಮಾಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನಾಯರ್, ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ವಿಜಯ ಕೆ. ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.
ಸಹಾಯಕ ಕಾರ್ಯದರ್ಶಿ ಗಿರೀಶ್ ಟಿ. ಸ್ವಾಗತಿಸಿ, ವಿನೋದ್ ಕೆ. ವಂದಿಸಿದರು.

ವಿಶ್ವಕರ್ಮ ಸಮಾಜ ಬಾಂಧವರ ಕ್ರಿಕೆಟ್: ಹರಾಜು ಪ್ರಕ್ರಿಯೆ

ಕುಂಬಳೆ: ಟೀಮ್ ಜೋಶ್ ಕಾಸರಗೋಡು ಇದರ ನೇತೃತ್ವದಲ್ಲಿ ಮಾರ್ಚ್ 15ರಂದು ಕುಂಬಳೆ ಶಾಲಾ ಮೈದಾನದಲ್ಲಿ ವಿಶ್ವಕರ್ಮ ಸಮಾಜ ಬಾಂಧವರ ಅಂಡರ್ ಆರ್ಮ್ ಕ್ರಿಕೆಟ್ ಪಂದ್ಯಾಟ ನಡೆಯಲಿದೆ. ವಿಜೇತ ತಂಡಕ್ಕೆ ಪ್ರಥಮ ಬಹುಮಾನ 25,000 ರೂ. ನಗದು ಹಾಗೂ ಫಲಕ, ದ್ವಿತೀಯ ಬಹುಮಾನ 15,000 ರೂ. ಹಾಗೂ ಫಲಕ ದೊರೆಯಲಿದೆ.
ಕ್ರೀಡೆಯ ಪೂರ್ವಭಾವಿಯಾಗಿ ಸ್ಪರ್ಧಿಸುವ ತಂಡಗಳ ಹರಾಜು ಪ್ರಕ್ರಿಯೆಯು ಆರಿಕ್ಕಾಡಿ ಶ್ರೀ ಕಾಳಿಕಾಂಬಾ ದೇವಸ್ಥಾನದ ಮೈದಾನ ದಲ್ಲಿ ಜರಗಿತು. ಪಂದ್ಯಾಟದಲ್ಲಿ ಭಾಗವಹಿಸುವ ಫೈರ್ ಬ್ಲಾಸ್ಟರ್ ಮಧೂರು, ಟೀಮ್ ಶ್ಲಾಘ, ಯಂಗ್ ಸ್ಟಾರ್ಸ್ ಕಾಸರಗೋಡು, ವಿಕೆ ಬ್ರದರ್ಸ್ ಮಂಜೇಶ್ವರ, ವಿಸಿಸಿ ಪುತ್ತೂರು, ಟೀಮ್ ನೆಲ್ಲಿಸ್ಥಳ, ಟೀಮ್ ದಿಯಾ ಜೆಪಿ ನಗರ, ಆದಿಶಕ್ತಿ ಬ್ರದರ್ಸ್ ಬಾಡೂರು, ಮಹಮ್ಮಾಯಿ ಮಂಗಳೂರು, ಯುವಕ ಸಂಘ ಮಧೂರು ಮುಂತಾದ ತಂಡಗಳಿಗೆ ಲೀಗ್ ಮಾದರಿಯ ಪಂದ್ಯಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಮೀಂಜದಲ್ಲಿ ಹಿಂದೂ ಸಮಾಜೋತ್ಸವ | ಶ್ರೀಕಾಂತ ಶೆಟ್ಟಿ ಕಾರ್ಕಳ ಆಶಯ

ಸಾಮರಸ್ಯಕ್ಕಾಗಿ ಹಿಂದು ಸಮಾಜ ಸಂಘಟಿತವಾಗಬೇಕು

ಮಂಜೇಶ್ವರ: ಮೀಂಜ ಪಂಚಾಯತ್ ಮಟ್ಟದ ಹಿಂದು ಸಮಾಜೋತ್ಸವವು ಮೀಯಪದವಿನಲ್ಲಿ ಭಾನುವಾರ ಜರಗಿತು.
ಕಾರ್ಯಕ್ರಮದಲ್ಲಿ ಭಾಗವಹಿಸಿದ ಉಪ್ಪಳ ಕೊಂಡೆವೂರು ಮಠಾಧೀಶ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ ನೀಡಿದರು.

ದೇಶಕ್ಕಾಗಿ ಬದುಕುವ ಸಂಕಲ್ಪ ತೊಡಬೇಕು

ಆಶಯ ಭಾಷಣ ಮಾಡಿದ ಶ್ರೀಕಾಂತ ಶೆಟ್ಟಿ ಕಾರ್ಕಳ ಅವರು, ಹಿಂದು ಸಮಾಜದ ರಕ್ಷಣೆಗಾಗಿ ಹಲವರ ಬಲಿದಾನವಾಗಿದೆ. ಕೆಚ್ಚೆದೆಯ ವೀರರಿಂದ ಹಿಂದು ಸಂಸ್ಕತಿಯ ರಕ್ಷಣೆಯಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಸಮಾಜವನ್ನು ಸಂಘಟಿಸಿದೆ ಹಾಗೂ ಸಮಾಜಕ್ಕೆ ಶಕ್ತಿ ತುಂಬಿದೆ. ಅದರ ಸವಿಯನ್ನು ನಾವಿಂದು ಉಣ್ಣುತ್ತಿದ್ದೇವೆ. ಆದರೆ ಮೈಮರೆಯದೆ ಸಾಮರಸ್ಯದ ಬದುಕಿಗಾಗಿ ನಾವೆಲ್ಲರೂ ಸಂಘಟಿತರಾಗಿ ಇರಬೇಕು. ದೇಶಕ್ಕಾಗಿ ಬದುಕುವ ಸಂಕಲ್ಪ ತೊಡಬೇಕು ಎಂದು ನುಡಿದರು.

ಒಗ್ಗಟ್ಟಾಗಬೇಕು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೀಂಜ ಗ್ರಾಮ ಪಂಚಾಯತ್‌ನ ನಿಕಟಪೂರ್ವ ಅಧ್ಯಕ್ಷೆ ಸುಂದರಿ ಆರ್.ಶೆಟ್ಟಿ ಮಾತನಾಡಿ, ಹಿಂದು ಸಮಾಜದ ಕಾರ್ಯಕ್ರಮದಲ್ಲಿ ನಾವೆಲ್ಲರೂ ರಾಜಕೀಯ ಜಾತಿ ವಿಚಾರಗಳನ್ನು ಬದಿಗೊತ್ತಿ ಒಂದಾಗಿ ಸೇರಬೇಕು. ಯುವಕರಿಂದ ಸಂಘಟಿಸಲ್ಪಟ್ಟ ಈ ಕಾರ್ಯಕ್ರಮ ದಲ್ಲಿ ಭಾಗವಹಿಸಲು ಸಂತೋಷವಾಗುತ್ತಿದೆ ಎಂದು ಹೇಳಿದರು.
ಕಾರ್ಯಕ್ರಮದ ಪೂರ್ವಭಾವಿಯಾಗಿ ಪ್ರಚಾರಕ್ಕಾಗಿ ಶತ ದ್ವಿಚಕ್ರ ವಾಹನ ಪರ್ಯಟನೆ ನಡೆದಿತ್ತು. ಕಾರ್ಯಕ್ರಮದಲ್ಲಿ ಶತಕಂಠ ವಿಷ್ಣು ಸಹಸ್ರನಾಮ ಪಠನ, ಶತಕಂಠ ಭಗವದ್ಗೀತೆ ಪಾರಾಯಣ ಪುರಾಣ, ಚಾರಿತ್ರಿಕ ವ್ಯಕ್ತಿಗಳ ವೇಷ ಪ್ರದರ್ಶನಗಳು, ಶತಸಂಖ್ಯೆಯ ಕುಣಿತ ಭಜನೆ ನಡೆಯಿತು. ಸಂಘಟನಾ ಸಮಿತಿಯ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅವರು ಕಾರ್ಯಕ್ರಮದ ಔಚಿತ್ಯವನ್ನು ಪ್ರಾಸ್ತಾವಿಕವಾಗಿ ನುಡಿದು ಸ್ವಾಗತಿಸಿದರು. ಮನೀಶ್ ಸಂತಡ್ಕ ವಂದಿಸಿದರು. ಹರ್ಷರಾಜ್ ಹಾಗೂ ರಾಜಾರಾಮ ರಾವ್ ಮೀಯಪದವು ಕಾರ್ಯಕ್ರಮ ನಿರೂಪಿಸಿದರು.





ಶಕ್ತಿ ತುಂಬುವ ಕಾರ್ಯ

ಸಮಾಜೋತ್ಸವವು ಹಿಂದು ಸಮಾಜಕ್ಕೆ ಶಕ್ತಿ ತುಂಬುವ ಕಾರ್ಯವೆಸಗುತ್ತಿದೆ. ನಮ್ಮ ಸಮಾಜ ಯಾರ ಮೇಲೂ ಆಕ್ರಮಣ ಮಾಡಿಲ್ಲ, ಆದರೆ ನಮ್ಮ ಸಂಸ್ಕೃತಿಗಳ ಮೇಲೆ ಪ್ರಹಾರವಾದಾಗ ಪ್ರಬಲವಾಗಿ ಪ್ರತಿಭಟಿಸಿದ ಇತಿಹಾಸವಿದೆ. ಆದ್ದರಿಂದ ಹಿಂದು ಸಂಸ್ಕೃತಿಗೆ ಧಕ್ಕೆಯಾಗದಂತೆ ನಾವು ಜಾಗೃತರಾಗಿರಬೇಕು. ಮರದ ಬೇರಿನಂತೆ ಸದಾ ಸಮಾಜದ ಅಭ್ಯುದಯಕ್ಕೆ ಎಲ್ಲರೂ ದುಡಿಯಬೇಕೆಂದು ಸಲಹೆ ನೀಡಿದರು.
● ಕೊಂಡೆವೂರು ಶ್ರೀ

ಪಂಚವಾರ್ಷಿಕ ಯೋಜನೆಗೆ ದೀರ್ಘಾವಧಿ ಅಭಿವೃದ್ಧಿ ಕಾರ್ಯಕ್ರಮ ರೂಪಿಸಬೇಕು



ಕಾಸರಗೋಡು: ಕಾಞಂಗಾಡು ಬ್ಲಾಕ್ ಪಂಚಾಯತ್‌ನಲ್ಲಿ 2026–27ನೇ ವಾರ್ಷಿಕ ಯೋಜನೆಯ ಭಾಗವಾಗಿ ಆಯೋಜಿಸಲಾದ ಅಭಿವೃದ್ಧಿ ವಿಚಾರ ಸಂಕಿರಣವನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಉದ್ಘಾಟಿಸಿದರು.
ಹೊಸ ಯುಗದ ಸಾಧ್ಯತೆಗಳು ಮತ್ತು ಸವಾಲುಗಳನ್ನು ಪರಿಗಣಿಸಿ ರಚನಾತ್ಮಕ ಚರ್ಚೆಗಳ ಮೂಲಕ ಪ್ರಾಯೋಗಿಕ ಮತ್ತು ಜನಪ್ರಿಯ ಯೋಜನಾ ಪ್ರಸ್ತಾವನೆ ರೂಪಿಸಬೇಕು ಎಂದು ಜಿ.ಪಂ.ಅಧ್ಯಕ್ಷರು ಹೇಳಿದರು.
ಪ್ರಸ್ತುತ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷವಾಗಿರುವುದರಿಂದ ಒಂದು ವರ್ಷದೊಳಗೆ ಪೂರ್ಣಗೊಳಿಸಬಹುದಾದ ಯೋಜನೆಗಳಿಗೆ ಆದ್ಯತೆ ನೀಡಬೇಕು ಮತ್ತು ಮುಂಬರುವ ಪಂಚವಾರ್ಷಿಕ ಯೋಜನೆಗೆ ದೀರ್ಘಾವಧಿಯ ಅಭಿವೃದ್ಧಿ ಕಾರ್ಯಕ್ರಮ ರೂಪಿಸಬೇಕು. ಜಿಲ್ಲಾಸ್ಪತ್ರೆಯ ವಿಸ್ತರಣೆಯ ಪ್ರಸ್ತಾವನೆಗಳನ್ನು ಸಹ ಚರ್ಚೆಯ ಭಾಗವಾಗಿಸಬೇಕು ಎಂದು ಸಲಹೆ ನೀಡಿದರು.
ಬ್ಲಾಕ್ ಪಂ. ಅಧ್ಯಕ್ಷೆ ಕೆ.ಸುಜಾತ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ.ಉಪಾಧ್ಯಕ್ಷೆ ಕೆ.ಕೆ. ಸೋಯಾ, ಜಿ.ಪಂ.ಸದಸ್ಯರಾದ ಕೆ.ಸಬೀಶ್, ಸುಕುಮಾರಿ ಶ್ರೀಧರನ್, ಬ್ಲಾಕ್ ಪಂ. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಪಿ.ಕೆ. ಮಂಜಿಷಾ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಎಂ.ಪಿ.ಜಯಶ್ರೀ ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಪಿ.ಎಚ್.ಮುಹಮ್ಮದ್ ಹನೀಫಾ, ಮುಹಮ್ಮದ್ ಬಶೀರ್ ಪಕ್ಯಾರ, ಬ್ಲಾಕ್ ಪಂ. ಸದಸ್ಯರು ಮತ್ತು ವಿವಿಧ ವರ್ಕಿಂಗ್ ಗ್ರಾಪ್‌ಗಳ ಸದಸ್ಯರು ಭಾಗವಹಿಸಿದ್ದರು.
2026–27ರ ವಾರ್ಷಿಕ ಯೋಜನೆ ಕರಡು ಯೋಜನಾ ದಾಖಲೆ ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಪಿ.ಕೆ. ಮಂಜಿಷಾ ಮಂಡಿಸಿದರು. ಉಪಾಧ್ಯಕ್ಷ ಪಿ.ಗೋವಿಂದನ್ ಸ್ವಾಗತಿಸಿ, ಬ್ಲಾಕ್ ಪಂ. ಕಾರ್ಯದರ್ಶಿ ಎಸ್.ಹರಿಕೃಷ್ಣನ್ ವಂದಿಸಿದರು.

ಚೆಮ್ನಾಡ್ ಪಂಚಾಯತ್ ವ್ಯಾಪ್ತಿ: ಐಕ್ಯತೆ ಬಲಪಡಿಸುವ ಹಿಂದೂ ಏಕತಾ ಸಮಾವೇಶ



ಕಾಸರಗೋಡು: ಚೆಮ್ನಾಡ್ ಪಂಚಾಯತ್ ವ್ಯಾಪ್ತಿಯಲ್ಲಿ ಎಲ್ಲಾ ಹಿಂದೂ ಸಹೋದರ ಸಹೋದರಿಯರ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಐಕ್ಯತೆ ಬಲಪಡಿಸುವ ಉದ್ದೇಶದಿಂದ ಕೋಳಿಯಡ್ಕ ಸನ್ನಿಧಾನಂ ನಗರದಲ್ಲಿ ಹಿಂದೂ ಏಕತಾ ಸಮಾವೇಶ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷ ಗಣೇಶನ್ ಅರಮಂಗಾನಂ ಅಧ್ಯಕ್ಷತೆ ವಹಿಸಿದ್ದರು.
ಸಮಾವೇಶವನ್ನು ಕಾಸರಗೋಡು ಚಿನ್ಮಯ ಮಿಷನ್‌ನ ಬ್ರಹ್ಮಚಾರಿಣಿ ದಿಶಾ ಚೈತನ್ಯ ಉದ್ಘಾಟಿಸಿ ಮಾತನಾಡಿದರು.
ಸ್ವಾಗತ ಸಂಘ ಪ್ರಧಾನ ಧರ್ಮದರ್ಶಿ, ಚಿನ್ಮಯ ಮಿಷನ್‌ನ ಆಚಾರ್ಯ ಸ್ವಾಮಿ ತತ್ವಾನಂದ ಸರಸ್ವತಿ ಅವರು ಅನುಗ್ರಹ ಭಾಷಣ ಮಾಡಿದರು. ಹಿಂದೂ ಐಕ್ಯ ವೇದಿ ರಾಜ್ಯ ಕಾರ್ಯದರ್ಶಿ ಶ್ಯಾಮ್ ಮೋಹನ್ ಪಿ.ವಿ. ಪ್ರಧಾನ ಭಾಷಣ ಮಾಡಿದರು.

ವಿವಿಧ ಕಲಾತ್ಮಕ ಪ್ರದರ್ಶನ

ಬಳಿಕ ತಾಯಂದಿರು, ಮಕ್ಕಳಿಗೆ ಮೆಗಾ ತಿರುವಾದಿರ, ವಿವಿಧ ಕಲಾತ್ಮಕ ಪ್ರದರ್ಶನಗಳು ನಡೆದವು. ಚೆಮ್ಮನಾಡು ಪಂ. ಸಂಯೋಜಕ ನಾಗೇಶ್ ಜಿ. ಪಳ್ಳಿಪುರಂ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಕಾರ್ವರ್ಣನ್ ಕಾವುಂಗಾಲ್ ವಂದಿಸಿದರು.

ಎಲ್ಲರ ಸಹಕಾರ ಇಂದಿನ ಅಗತ್ಯ

ಧರ್ಮ ರಕ್ಷಣೆ ಮತ್ತು ಸಾಮಾಜಿಕ ಸಾಮರಸ್ಯಕ್ಕಾಗಿ ಹಿಂದು ಸಮುದಾಯ ಒಂದಾಗಬೇಕಾಗಿದೆ. ಸಮಾಜದಲ್ಲಿ ವಿಶ್ವಾಸ ಮತ್ತು ನೈತಿಕ ಮೌಲ್ಯಗಳ ಕಾಪಾಡಿಕೊಳ್ಳಲು, ಯುವ ಪೀಳಿಗೆಯನ್ನು ನೈತಿಕ ಹಾದಿಯಲ್ಲಿ ಮಾರ್ಗದರ್ಶನ ಮಾಡಲು ಎಲ್ಲರೂ ಕೈಜೋಡಿಸಬೇಕು.
● ಆಚಾರ್ಯ ಸ್ವಾಮಿ ತತ್ವಾನಂದ ಸರಸ್ವತಿ

ಮಿಂಚಿಪದವು ದೇವಳದಲ್ಲಿ ಅಷ್ಟಬಂಧ ಬ್ರಹ್ಮಕಲಶ: ಹೊರೆಕಾಣಿಕೆ ಮೆರವಣಿಗೆ



ಮುಳ್ಳೇರಿಯ: ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಭಾನುವಾರ ಆರಂಭಗೊಂಡಿದ್ದು, ಫೆ..27ರವರೆಗೆ ವೈಧಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಗಣಪತಿ ಹೋಮ, ಶಿವಕಾವೇರಿ ಸಭಾಭವನದಲ್ಲಿ ಪ್ರವೇಶ ಮುಹೂರ್ತ, ಶ್ರೀಕೃಷ್ಣಭಜನಾ ಮಂಟಪದಲ್ಲಿ ಭಜನಾ ಕಾರ್ಯಕ್ರಮ ಜರಗಿತು. ಕುಂಟಾರು ಶ್ರೀ ವಿಷ್ಣುಮೂರ್ತಿ ಕ್ಷೇತ್ರದಿಂದ ಹೊರಟು ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆ ವಾದ್ಯಘೋಷ, ಚೆಂಡೆನಾದ. ಕುಣಿತ ಭಜನೆಯೊಂದಿಗೆ ಶ್ರೀ ಕ್ಷೇತ್ರಕ್ಕೆ ಆಗಮಿಸಿತು. ನಂತರ ಉಗ್ರಾಣ ಮುಹೂರ್ತವನ್ನು ಮಲ್ಲ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಉದ್ಘಾಟಿಸಿದರು.

ಸಭಾಭವನ ಉದ್ಘಾಟನೆ

ಸಂಜೆ ಶಿವಕಾವೇರಿ ಸಭಾಭವನವನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಲೋಕಾರ್ಪಣೆಗೊಳಿಸಿದರು. ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು. ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ವಸಂತ ಪೈ ಪದಿಯಡ್ಕ ಅಧ್ಯಕ್ಷತೆ ವಹಿಸಿದ್ದರು. ಹಿಂದು ಐಕ್ಯವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ವಲ್ಸನ್ ತಿಲ್ಲಂಗೇರಿ, ಧಾರ್ಮಿಕ ಚಿಂತಕ ಲಕ್ಷ್ಮೀಶ ಬ್ಬಡ್ಕ ಉಪನ್ಯಾಸ ನೀಡಿದರು. ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು, ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಉಪಸ್ಥಿತರಿದ್ದರು.

ಮಾ.8ರಂದು ಪುತ್ತಿಗೆ ಪಂ.ಮಟ್ಟದ ವಿರಾಟ್ ಹಿಂದು ಸಂಗಮ: ಮಹಾ ಸಂಪರ್ಕ ಅಭಿಯಾನ

ಕುಂಬಳೆ: ಪುತ್ತಿಗೆ ಪಂಚಾಯತ್ ಮಟ್ಟದಲ್ಲಿ ಸೂರಂಬೈಲು ಶ್ರೀ ಸಾಯಿರಾಮ್ ನಗರದಲ್ಲಿ ಮಾ.8ರಂದು ನಡೆಯಲಿರುವ ವಿರಾಟ್ ಹಿಂದು ಸಂಗಮದ ಅಂಗವಾಗಿ ಭಾನುವಾರ ಮಹಾ ಸಂಪರ್ಕ ಅಭಿಯಾನ ನಡೆಯಿತು.
ಷಡ್ರಂಪಾಡಿ ಮತ್ತು ಮುಗು ದೇವಸ್ಥಾನಗಳಿಂದ ಆರಂಭಗೊಂಡ ಅಭಿಯಾನವು ಮುಗು, ಅನೋಡಿಪಳ್ಳ ವಿಕಾಸ್ ನಗರ, ಕಣ್ಣೂರು, ಸೂರಂಬೈಲು ಭಾಗದ ಮನೆಗಳನ್ನು ಸಂಪರ್ಕಿಸಿ ಮುಂದುವರಿಯಿತು. ಆಮಂತ್ರಣ ಪತ್ರ ಮತ್ತು ಓಂಕಾರ ಧ್ವಜಗಳನ್ನು ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಜನರನ್ನು ಆಮಂತ್ರಿಸಲಾಯಿತು.
ಶಡ್ರಂಪಾಡಿ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ 26ನೇ ವರ್ಷದ ಸಾಮೂಹಿಕ ಕಲ್ಪೋಕ್ತ ಶ್ರೀ ಲಕ್ಷ್ಮೀ ಸತ್ಯನಾರಾಯಣ ಪೂಜೆ ನಡೆಯುತ್ತಿತ್ತು. ಈ ಸಂದರ್ಭದಲ್ಲೇ ಆಮಂತ್ರಣ ಪತ್ರ ಮತ್ತು ಧರ್ಮ ಧ್ವಜವನ್ನು ಕ್ಷೇತ್ರದ ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ವಿರಾಟ್ ಹಿಂದು ಸಮ್ಮೇಳನದ ಏಕತಾ ಸಮಿತಿಯ ರಕ್ಷಾಧಿಕಾರಿಯೂ ಆಗಿರುವ ಶಂಕರನಾರಾಯಣ ಭಟ್ ಎಡನಾಡು ಅವರಿಗೆ ಸಮಿತಿಯ ಅಧ್ಯಕ್ಷ ದಾಮೋದರ ದೇಲಂಪಾಡಿ ಅವರು ನೀಡಿ ಮಾತನಾಡಿದರು. ಈ ವೇಳೆ ಅಶೋಕ್ ಮಾಸ್ತರ್ ಬಾಡೂರು, ಪ್ರಸಾದ್ ಎಯ್ಯೂರು ಮೊದಲಾದವರು ಉಪಸ್ಥಿತರಿದ್ದರು.



ಮನೆ ಮನೆಗಳಲ್ಲಿ ಧ್ವಜ ಹಾರಾಟ

ಮಾ.1ರಂದು ಎಲ್ಲಾ ಮನೆಗಳಲ್ಲೂ ಓಂಕಾರಾಂಕಿತ ಧರ್ಮ ಧ್ವಜವನ್ನು ಎಲ್ಲಾ ಮನೆಗಳಲ್ಲಿ ಮನೆಮಂದಿಯೆಲ್ಲಾ ಸೇರಿಕೊಂಡು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಹಾಗೂ ಕಾರ್ಯಕ್ರಮ ನಡೆಯುವ ಮಾ.8ರ ವರೆಗೆ ಆ ಧ್ವಜವನ್ನು ಹಾರಾಡಿಸಬೇಕೆಂದು ಎಲ್ಲಾ ಮನೆಗಳಲ್ಲಿ ಸೂಚನೆ ನೀಡಲಾಯಿತು.

ಪೆರ್ಮುದೆಯಿಂದ ಬೈಕ್ ರ‍್ಯಾಲಿ

ಕಾರ್ಯಕ್ರಮದ ಪ್ರಚಾರಾರ್ಥ ಮಾ.1 ರಂದು ಬೆಳಿಗ್ಗೆ ಪೆರ್ಮುದೆಯಿಂದ ಕಾರ್ಯಕ್ರಮ ನಡೆಯುವ ಶ್ರೀ ಸಾಯಿರಾಮ್ ಭಟ್ ನಗರದ ವರೆಗೆ ಬೃಹತ್ ಬೈಕ್ ರ‍್ಯಾಲಿ ಆಯೋಜಿಸಲಾಗಿದೆ. ರ‍್ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕೆಂದು ವಿನಂತಿಸಲಾಯಿತು.

ಚಂದ್ರಗಿರಿ ಕೊಪ್ಪಲು ಶ್ರೀ ದೇವಳ ಪ್ರತಿಷ್ಠಾ ಮಹೋತ್ಸವ: ಆಮಂತ್ರಣ ಪತ್ರ ಬಿಡುಗಡೆ



ಕಾಸರಗೋಡು: ಚಂದ್ರಗಿರಿ ಕೊಪ್ಪಲು ಶ್ರೀ ಮಹಮ್ಮಾಯಿ ಅಮ್ಮನವರ ದೇವಳದಲ್ಲಿ ಏಪ್ರಿಲ್ 3ರಿಂದ 5ರ ವರೆಗೆ ನಡೆಯಲಿರುವ 55ನೇ ಪ್ರತಿಷ್ಠಾ ಮಹೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ದೇವಳದಲ್ಲಿ ಜರಗಿತು.
ಈ ಸಂದರ್ಭದಲ್ಲಿ ದೇವಳದ ಅಧ್ಯಕ್ಷ ಲೋಕೇಶ್ ಕೊಪ್ಪಲು, ಕಾರ್ಯದರ್ಶಿ ಸೀತಾರಾಮ ಕೊಪ್ಪಲು, ಕೋಶಾಧಿಕಾರಿ ಬಾಲಕೃಷ್ಣ ಪರಿಯಾರ, ಜೊತೆ ಕಾರ್ಯದರ್ಶಿ ಸುರೇಶ್ ತೋಟ, ಸತೀಶ್ ಪರಿಯಾರ, ಅರ್ಚಕ ದಯಾನಂದ ಕೊಪ್ಪಲು, ಹಿರಿಯ ಸದಸ್ಯರಾದ ಸತೀಶ್ ಕೆ. ದೇರೆಬೈಲು, ರವೀಂದ್ರ ಸಿ.ಎಚ್.ಕೊಪ್ಪಲು, ಜನಾರ್ದನ ಪರಿಯಾರ, ಉಮೇಶ್ ಕೆ. ತುಂಗಾನಗರ, ಪ್ರವೀಣ್ ಕೊಪ್ಪಲು, ನವೀನ್ ಕಾಪಿಕ್ಕಾಡು ಉಳ್ಳಾಲ, ಪ್ರಕಾಶ್ ಮುಕ್ಕೋಟ್ಟು, ಬಾಲಕೃಷ್ಣ ಕಿನ್ಯ, ಮಂಗಳೂರು ಶ್ರೀ ಲಕ್ಷ್ಮಣಾನಂದ ಸೊಸೈಟಿಯ ನಿರ್ದೇಶಕ ಜೈರಾಜ್, ಕೆ.ಸಿ.ನಾಗೇಶ್ ಕೊಂಡಾಣ, ಪ್ರಶಾಂತ್, ಸಂಜಯ್, ಸಚಿತ್ ನಾಯಕ್ ಶಾಂತರಾಮ, ವೀಣಾ ಕೊಪ್ಪಲು, ಸ್ವಾತಿ ಕೊಪ್ಪಲ್ , ಸಮಿತಿ ಸದಸ್ಯರು ಮೊದಲಾದವರು ಉಪಸ್ಥಿತರಿದ್ದರು.

ಮಾಹಿತಿ

ಈ ಉತ್ಸವದ ಸಮಯ ದೇವಸ್ಥಾನದಲ್ಲಿ ಕೊಪ್ಪಲು ಶ್ರೀ ಗುಳಿಗ, ಶ್ರೀ ವಿಷ್ಣುಮೂರ್ತಿ, ಶ್ರೀ ಧೂಮಾವತಿ, ಶ್ರೀ ವೆಂಕಟರಮಣ ಮುಡಿಪು ಪೂಜೆ, ಸ್ವಜಾತಿ ಬಾಂಧವರ ವಟುಗಳಿಗೆ ಸಾಮೂಹಿಕ ಉಚಿತ ಬ್ರಹ್ಮೋಪದೇಶ , ಹಿರಿಯರಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ಇತರ ಶೈಕ್ಷಣಿಕ ಪುರಸ್ಕಾರಗಳನ್ನು ಪಡೆದವರಿಗೆ ಸನ್ಮಾನ ಇತ್ಯಾದಿ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಧ್ಯಕ್ಷ ಲೋಕೇಶ್ ಕೊಪ್ಪಲ್ ಮತ್ತು ಕಾರ್ಯದರ್ಶಿ ಸೀತಾರಾಮ ಕೊಪ್ಪಲು ಅವರು ನೀಡಿದರು.



ಕುಂಬ್ಡಾಜೆ ಗ್ರಾಮದ ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಾಲಯದ ಬ್ರಹ್ಮಕಲಶ ಮಾರ್ಚ್ 1ರಿಂದ 9ರ ತನಕ ಜರಗಲಿದೆ. ಕಾರ್ಯಕ್ರಮದ ಪೂರ್ವಭಾವಿ ಗೊನೆ ಕಡಿಯುವ ಮುಹೂರ್ತ ಭಾನುವಾರ ಬೆಳಿಗ್ಗೆ ಜರಗಿತು. ಶ್ರೀ ಕ್ಷೇತ್ರದ ಮೊಕ್ತೇಸರರು, ಭಗವದ್ಭಕ್ತರು, ಬ್ರಹ್ಮಕಲಶ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮಂಜೇಶ್ವರ ತಾಲೂಕಿನ ಕೋಳ್ಯೂರು ಸ್ಪಂದನ ಟ್ರಸ್ಟ್‌ನ 114ನೇ ಮಾಸಿಕ ಸೇವಾ ಯೋಜನೆಯಡಿ ಸಹಾಯಧನವನ್ನು ಶ್ರೀನಾಥ್ ಚಕ್ರಕೋಡಿ ಕೋಳ್ಯೂರು ಅವರ ಚಿಕಿತ್ಸೆಗಾಗಿ ಚೆಕ್ ಮುಖಾಂತರ ಹಸ್ತಾಂತರಿಸಲಾಯಿತು. ಈ ಸಂದರ್ಭ ಜಯಪ್ರಕಾಶ್ ಬಲಿಪಗುಳಿ, ಸುಧೀರ್ ರಂಜನ್ ದೈಗೋಳಿ, ಬಾಲಕೃಷ್ಣ ಕೋಳ್ಯೂರುಪದವು, ಅಮಿತಾ ಬಾಲಕೃಷ್ಣ ಕೋಳ್ಯೂರುಪದವು, ವಿಭವ್ ಕೋಳ್ಯೂರುಪದವು, ಲೋಕೇಶ ಬಿ. ಕೋಳ್ಯೂರು ಉಪಸ್ಥಿತರಿದ್ದರು.

ಮಂಜೇಶ್ವರ ಗ್ರಾ.ಪಂ. ಅಭಿವೃದ್ಧಿ ಸೆಮಿನಾರ್ | 2026-27ನೇ ಸಾಲಿನ ವಾರ್ಷಿಕ ಯೋಜನಾ ಕರಡು ಮಂಡನೆ

ಮೂಲ ಸೌಕರ್ಯಗಳ ಜೊತೆ ಜೀವನಮಟ್ಟ ಸುಧಾರಣೆಗೆ ಆದ್ಯತೆ ನೀಡಬೇಕು

ಮಂಜೇಶ್ವರ: ಮಂಜೇಶ್ವರ ಗ್ರಾಮ ಪಂಚಾಯತ್‌ನ 2026–27ನೇ ಸಾಲಿನ ವಾರ್ಷಿಕ ಯೋಜನೆ ಹಾಗೂ 14ನೇ ಹಣಕಾಸು ಆಯೋಗದ ಅನುದಾನದ ಯೋಜನಾ ರೂಪೀಕರಣದ ಅಂಗವಾಗಿ ಹಮ್ಮಿಕೊಳ್ಳಲಾದ ಅಭಿವೃದ್ಧಿ ಸೆಮಿನಾರ್ ಮಂಜೇಶ್ವರದ ಎ.ಕೆ. ಗಾರ್ಡನ್‌ನಲ್ಲಿ ಜರಗಿತು.
ಫೆಬ್ರವರಿ 9 ರಿಂದ 17ರ ವರೆಗೆ ನಡೆದ ಗ್ರಾಮಸಭೆಗಳು ಹಾಗೂ ವರ್ಕಿಂಗ್ ಗ್ರೂಪ್ ಸಭೆಗಳಲ್ಲಿ ಸಾರ್ವಜನಿಕರಿಂದ ಸ್ವೀಕರಿಸಿದ ಬೇಡಿಕೆಗಳನ್ನು ಕ್ರೋಢೀಕರಿಸಿ ಸಿದ್ಧಪಡಿಸಲಾದ ಕರಡು ಯೋಜನೆಯನ್ನು ಸೆಮಿನಾರ್‌ನಲ್ಲಿ ಪ್ರಸ್ತುತಪಡಿಸಲಾಯಿತು.
ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲಾ ತಂಲ್ ಸೆಮಿನಾರ್ ಉದ್ಘಾಟಿಸಿ ಮಾತನಾಡಿ, ಜನರ ನೇರ ಸಹಭಾಗಿತ್ವದೊಂದಿಗೆ ಯೋಜನೆಗಳನ್ನು ರೂಪಿಸುವುದು ಪ್ರಜಾಪ್ರಭುತ್ವದ ಆಶಯವಾಗಿದ್ದು ಮೂಲಭೂತ ಸೌಕರ್ಯಗಳ ಜೊತೆಗೆ ಜೀವನಮಟ್ಟ ಸುಧಾರಣೆಗೆ ಆದ್ಯತೆ ನೀಡಬೇಕು ಎಂದರು.



ಯೋಜನೆ ರೂಪಿಸಲಾಗುವುದು

ಪಂಚಾಯತ್ ಕಾರ್ಯದರ್ಶಿ ಸುಮೇಶ್ ಮಾತನಾಡಿ, ಗ್ರಾಮಸಭೆಯ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಸಮತೋಲಿತ ಯೋಜನೆಯನ್ನು ರೂಪಿಸಲಾಗುವುದು ಎಂದರು.
ಅಧ್ಯಕ್ಷತೆ ವಹಿಸಿದ್ದ ಮಂಜೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷ ಬಶೀರ್ ಕನಿಲ ಮಾತನಾಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷೆ ಫಾತಿಮತ್ ಝುವುರಾ, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಫರ್ಹಾನ ಟೀಚರ್, ಜಿಲ್ಲಾ ಪಂಚಾಯತ್ ಸದಸ್ಯ ಹರ್ಷಾದ್ ವರ್ಕಾಡಿ, ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಕಮಲಾಕ್ಷಿ ಕೆ. ಪಾವೂರು, ಪಂಚಾಯತ್ ಸದಸ್ಯರಾದ ಇಲ್ಯಾಸ್ ತೂಮಿನಾಡು, ಮುಕ್ತಾರ್ ಎ., ಅಬ್ದುಲ್ ರಹಮಾನ್ ಹಾಜಿ, ಹನೀಫ್ ಕುಚ್ಚಿಕ್ಕಾಡು, ಅಝೀಝ್ ಹಾಜಿ ಉಪಸ್ಥಿತರಿದ್ದರು.
ಯೋಜನಾ ಸಮಿತಿ ಹಾಗೂ ವರ್ಕಿಂಗ್ ಗ್ರೂಪ್ ಸದಸ್ಯರು, ಗ್ರಾಮಸಭೆಯಿಂದ ಆಯ್ದ ಪ್ರತಿನಿಧಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಎಡಿಎಸ್ ಮತ್ತು ಸಿಡಿಎಸ್ ಪ್ರತಿನಿಧಿಗಳು, ಎಸ್‌ಸಿ ಹಾಗೂ ಎಸ್‌ಟಿ ಪ್ರಮೋಟರ್‌ಗಳು, ಬ್ಯಾಂಕ್ ಪ್ರತಿನಿಧಿಗಳು ಹಾಗೂ ಸ್ವಯಂಸೇವಕರು ಪಾಲ್ಗೊಂಡು ಕರಡು ಯೋಜನೆ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ಗ್ರಾಮದ ಸಮಗ್ರ ಸುಧಾರಣೆಗೆ ಪೂರಕವಾದ ಯೋಜನೆಗಳಿಗೆ ಸಭೆಯಲ್ಲಿ ಅಂತಿಮ ರೂಪು ನೀಡಲಾಯಿತು.

ತ್ಯಾಜ್ಯ ಸಮಸ್ಯೆಗೆ ಶಾಶ್ವತ ಪರಿಹಾರದ ಗುರಿ

ನೂತನ ಆಡಳಿತ ಸಮಿತಿ ಪ್ರತಿಯೊಂದು ಅಭಿವೃದ್ಧಿ ಕಾರ್ಯದಲ್ಲಿ ಮುತುವರ್ಜಿ ವಹಿಸಲಿದೆ. ವಿಶೇಷವಾಗಿ ತ್ಯಾಜ್ಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ನಮ್ಮ ಪ್ರಮುಖ ಗುರಿ.
● ಬಶೀರ್ ಕನಿಲ

ಸುತ್ತಮುತ್ತ

ಫೆ. 26: ಕಾಪು ಶ್ರೀ ಹೊಸ ಮಾರಿಗುಡಿಗೆ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ

ಕಾಪು: ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನದ ಉಚ್ಚಂಗಿ ಸಹಿತ ಶ್ರೀ ಮಾರಿಯಮ್ಮ ದೇವಿಯ ಸಾನಿಧ್ಯದಲ್ಲಿ ಫೆ. 28ರಿಂದ ಮಾ. 2ರವರೆಗೆ ಜರಗಲಿರುವ ಕಾಪುವಿನ ಅಮ್ಮನ ಪುನರ್ ಪ್ರತಿಷ್ಠಾ ಪ್ರಥಮ ವರ್ಧಂತಿ ಉತ್ಸವ – ಮಾತೃ ವೈಭವಕ್ಕೆ ಪೂರ್ವಭಾವಿಯಾಗಿ ಫೆ. 26ರಂದು ಬೃಹತ್ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣಾ ಶೋಭಾಯಾತ್ರೆ ವೈಭವ ನಡೆಯಲಿದೆ. ಮೂರು ದಿನಗಳ ಕಾಲ ನಡೆಯುವ ಮಾತೃವೈಭವ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಯುಕ್ತ ಲಕ್ಷಾಂತರ ಮಂದಿ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು ಪ್ರತೀ ದಿನ ಮಧ್ಯಾಹ್ನ ಮತ್ತು ರಾತ್ರಿ ನಿರಂತರ ಅನ್ನಸಂತರ್ಪಣೆ ನಡೆಯಲಿದೆ. ಅದಕ್ಕೆ ಪೂರಕವಾಗಿ ಭಕ್ತಾಧಿಗಳು, ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳಿಂದ ಹೊರೆಕಾಣಿಕೆ ಸಂಗ್ರಹಿಸಲು ಸಮಿತಿಯು ತೀರ್ಮಾನಿಸಿದೆ. ಕಾಪು ಮಾರಿಯಮ್ಮನ ಭಕ್ತಾಧಿಗಳು, ಕಾಪುವಿನ ಅಮ್ಮನ ಮಕ್ಕಳು, ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳಿಂದ ಸಂಗ್ರಹಿಸುವ ಹೊರೆಕಾಣಿಕೆಯನ್ನು ಫೆ. 26ರಂದು ಸಂಜೆ ಗಂಟೆ 4 ಗಂಟೆಗೆ ಕಾಪು ಉಳಿಯಾರಗೋಳಿ ದಂಡತೀರ್ಥ ಮಠದ ಬಳಿಯಿಂದ ಬೃಹತ್ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣಾ ಶೋಭಾಯಾತ್ರೆಯ ಮೂಲಕವಾಗಿ ಶ್ರೀ ಹೊಸ ಮಾರಿಗುಡಿ ದೇವಸ್ಥಾನಕ್ಕೆ ಸಮರ್ಪಿಸಲಾಗುವುದು ಎಂದು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಅಭಿವೃದ್ಧಿ ಸಮಿತಿ ಮತ್ತು ಮಾತೃವೈಭವ ಸಮಿತಿ ಅಧ್ಯಕ್ಷ ರಾಜರ್ಷಿ ಕೆ. ವಾಸುದೇವ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ರವಿಕಿರಣ್, ಹೊರೆಕಾಣಿಕೆ ಸಮರ್ಪಣಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಕುಂದಾಪುರ: ಹಿರಿಯಡ್ಕದಲ್ಲಿ ನಿರ್ವಹಣೆಯ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ.24ರಂದು ಬೆಳಿಗ್ಗೆ 9ರಿಂದ ಸಂಜೆ 5:00 ಗಂಟೆಯವರೆಗೆ ಉಪಕೇಂದ್ರಗಳಾದ ಮಧುವನ, ಕುಂದಾಪುರ ಮತ್ತು ನಾವುಂದ, ತಲ್ಲೂರು, ಬೈಂದೂರು, ಕೊಲ್ಲೂರು, ಗಂಗೊಳ್ಳಿ ಮತ್ತು ಕುಂದಾಪುರ–ಗಂಗೊಳ್ಳಿ ಮಾರ್ಗ, ಸೌಪರ್ಣಿಕಾ ಏತ ನೀರಾವರಿ ಸ್ಥಾವರ ಆಲೂರು, ಸೌಕೂರು ಏತ ನೀರಾವರಿ ವಿದ್ಯುತ್ ಮಾರ್ಗ ಹಾಗೂ ಮೆ|| ಕೊಂಕಣ ರೈಲ್ವೆ ನಿಗಮ ನಿಯಮಿತದ ಸೇನಾಪುರ ಟಿಎಸ್‌ಎಸ್, ಬಾರ್ಕೂರು ರೈಲ್ವೆ ಟಿಎಸ್‌ಎಸ್‌ಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ನಿವೃತ್ತ ನೌಕರರ ಸಭೆ

ಕುಂದಾಪುರ: ತಾಲೂಕು ನಿವೃತ್ತ ಸರಕಾರಿ ನೌಕರರ ಸಂಘದ ಮಾಸಿಕ ಸಭೆಯು ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ಸಭಾಭವನದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷೆ ಸೂರ್ಯಕಾಂತಿ ವಹಿಸಿದ್ದರು. ಸಂಘದ ಅಧ್ಯಕ್ಷ ವಸಂತ ಹೆಗ್ಡೆ ಸಲಹೆಗಳನ್ನು ನೀಡಿದರು. ಗೌರವಾಧ್ಯಕ್ಷ ವಕ್ವಾಡಿ ಭಾಸ್ಕರ್ ಶೆಟ್ಟಿ, ಸದಸ್ಯ ರಾಮಚಂದ್ರ ವಿ.ಖಾರ್ವಿ ಮಾತನಾಡಿದರು. ಗೀತಾ ಕಾರಂತ ಪ್ರಾರ್ಥಿಸಿ, ವಿನಯಾ ಶೆಣೈ ಸ್ವಾಗತಿಸಿದರು. ಕಾರ್ಯದರ್ಶಿ ರಘುವೀರ ಕೆ. ಗತಸಭೆಯ ವರದಿ ವಾಚಿಸಿದರು. ಖಜಾಂಚಿ ಎಚ್.ಸುಬ್ರಾಯ ಗಾಣಿಗ ಲೆಕ್ಕ ಪತ್ರ ಮಂಡಿಸಿದರು.

ಮೊದಲನೇ ಪುಟದಿಂದ

ಜಲಸಮೃದ್ಧಿ

ಇರುವ ಕಾರಣ ಫೆ. 24 ರಂದು ಬೆ. 8 ರಿಂದ ಸಂಜೆ 5 ರವರೆಗೆ ಮಂಗಳೂರು ನಗರಕ್ಕೆ ನೀರು ಸರಬರಾಜು ನಿಲುಗಡೆಗೊಳಿಸಲಾಗುತ್ತಿದ್ದು, ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮಹಾನಗರಪಾಲಿಕೆ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದು, ದುರಸ್ಥಿಕಾರ್ಯ ಪೂರ್ಣ ಗೊಳ್ಳುತ್ತಿದ್ದಂತೆ ಎಂದಿನಂತೆ ತುಂಬೆ ಡ್ಯಾಂನಿಂದ ಮಂಗಳೂರಿಗೆ ನೀರು ಪೂರೈಕೆಯಾಗಲಿದೆ. ಬಿಳಿಯೂರು, ಶಂಭೂರು, ಸರಪಾಡಿ, ಜಕ್ರಿಬೆಟ್ಟು ಡ್ಯಾಂನಿಂದಲು ಹೆಚ್ಚುವರಿ ನೀರನ್ನು ತುಂಬೆ ಡ್ಯಾಂನತ್ತ ಹರಿಯಲು ಬಿಡಲಾಗುತ್ತಿರುವ ಕಾರಣ ಮಾರ್ಚ್, ಏಪ್ರಿಲ್ ಅಂತ್ಯದವರೆಗೆ ಮಂಗಳೂರಿನ ಜನತೆಗೆ ನೀರಿನ ಸಮಸ್ಯೆ ಕಾಡದು ಎಂದು ಮೂಲಗಳು ತಿಳಿಸಿವೆ. ಪ್ರಸ್ತುತ ತುಂಬೆ ಡ್ಯಾಂನಲ್ಲಿ 6 ಮೀ.ನಷ್ಟು ನೀರು ಶೇಖರಣೆಯಾಗಿರುವುದರಿಂದನದಿ ಪಾತ್ರದ ಸುತ್ತ ನೀರು ನಿಲುಗಡೆಯಾಗಿದೆ.

ಮಗುವಿಗೆ ಜನ್ಮ

ಆ್ಯಂಬುಲೆನ್ಸ್ ಘರಂಗಿವೇಟೆ ಬಸಮೀಪಿಸುತ್ತಿದ್ದಂತೆ ಮಹಿಳೆಗೆ ವಿಪರೀತ ಹೆರಿಗೆ ನೋವು ಕಾಣಿಸಿಕೊಂಡಿದ್ದು, ತಕ್ಷಣ ಕಾರ್ಯಪ್ರವರ್ತರಾದ ಶುಶ್ರೂಶಕಿಯರಾದ ಸಿಸ್ಟರ್ ಕುಮುದ, ಸಿಸ್ಟರ್ ಸೌಮ್ಯಾ ಎಸ್. ಆ್ಯಂಬುಲೆನ್ಸ್ ವಾಹನದೊಳಗೆ ಹೆರಿಗೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಾಯಿ ಹಾಗೂ ಆಕೆಯ ಗಂಡು ಮಗು ಆರೋಗ್ಯವಾಗಿದ್ದಾರೆ. ಬೆಳ್ತಂಗಡಿ ತಾಲೂಕು ಸರಕಾರಿ ಆಸ್ಪತ್ರೆಯ ಆ್ಯಂಬುಲೆನ್ಸ್ ಚಾಲಕ ದಿನೇಶ್ ಗೌಡ ಅವರ ಸಮಯಪ್ರಜ್ಞೆಯಿಂದ ಅತ್ಯಂತ ಕಡಿಮೆ ಸಮಯದಿಂದ ಮಂಗಳೂರು ಲೇಡಿಗೋಷನ್ ಆಸ್ಪತ್ರೆಗೆ ತಲುಪಿಸಿ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.


ಉದ್ಘಾಟನೆಗೆ ಸಿದ್ಧ

ಜಿಎಚ್‌ಎಸ್‌ಎಸ್ ಪೈವಳಿಕೆನಗರ, ಜಿಎಚ್‌ಎಸ್‌ಎಸ್ ಪೆರಡಾಲ, ಜಿವಿಎಚ್‌ಎಸ್‌ಎಸ್ ದೇಲಂಪಾಡಿ, ಜಿಎಚ್‌ಎಸ್‌ಎಸ್ ಅಡೂರು, ಜಿಡಬ್ಲ್ಯೂಎಚ್‌ಎಸ್‌ಎಸ್ ಪಾಣತ್ತೂರು, ಜಿಎಚ್‌ಎಸ್‌ಎಸ್ ಕಾಲಿಚ್ಚಾನಡ್ಕ, ಜಿಎಚ್‌ಎಸ್‌ಎಸ್ ಕೊಟ್ಟೋಡಿ ಶಾಲೆಗಳ ನೂತನ ಕಟ್ಟಡಗಳ ನಿರ್ಮಾಣ ಕಾರ್ಯವು ಪೂರ್ತಿಯಾಗಿದ್ದು ಫೆಬ್ರವರಿ ಕೊನೆಯ ವೇಳೆಗೆ ಉದ್ಘಾಟನೆಗೊಳ್ಳಲಿವೆ.

ಶಿರೂರು ಗ್ರಾಮದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಲೆಕ್ಕಕ್ಕೆ ಸೀಮಿತ | ಊರಿನ ಸ್ವಚ್ಛತೆ ಕೊರತೆ ಸಮಸ್ಯೆ

ಜಿಲ್ಲೆಯ ದೊಡ್ಡ ಪಂಚಾಯತ್‌ಗೆ ಕಸ ವಿಲೇವಾರಿಯೇ ಹೊರೆ

ಉಪ್ಪುಂದ: ಜಿಲ್ಲೆಯ ಅತೀ ದೊಡ್ಡ ಗ್ರಾಮ ಪಂಚಾಯತ್ ಎನ್ನುವ ಹೆಗ್ಗಳಿಕೆ ಇರುವ ಶಿರೂರು ಗ್ರಾಮದಲ್ಲಿ ಕಸ ವಿಲೇವಾರಿಯಿಂದ ಸಮಸ್ಯೆಯಾಗಿಬಿಟ್ಟಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕಸ ವಿಲೇವಾರಿ ಮತ್ತು ಸಂಗ್ರಹ ಕೊರತೆ ಕಾರಣ ಶುಚಿತ್ವದ ವಿಷಯದಲ್ಲಿ ಹೈರಾಣಾಗಿಬಿಟ್ಟಿದೆ. ಜಿಲ್ಲಾಡಳಿತ, ತಾಲೂಕು ಹಾಗೂ ಸ್ಥಳೀಯಾಡಳಿತ ಕಸ ವಿಲೇವಾರಿ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ವ್ಯಯ ಮಾಡುತ್ತಿರುವುದು ಲೆಕ್ಕಕ್ಕೆ ಸೀಮಿತವಾಗಿದ್ದು, ಒಟ್ಟಾರೆ ಊರಿನ ಸ್ವಚ್ಛತೆ ಸಮಸ್ಯೆ ಪರಿಹಾರವಾಗಿಲ್ಲ.



ಶಿರೂರು ಗ್ರಾಮದ ವ್ಯಾಪ್ತಿ ಅತ್ಯಂತ ವಿಶಾಲವಾಗಿದ್ದು, ಸ್ವಚ್ಛ ಭಾರತ್ ಅಭಿಯಾನದ ಮನೆ ಮನೆ ಕಸ ಸಂಗ್ರಹ ಯೋಜನೆ ಇದ್ದರೂ ಕೂಡ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಇದುವರೆಗೆ ಕಸದ ವಿಲೇವಾರಿಗೆ ಜಾಗದ ಸಮಸ್ಯೆ ಕಾರಣ ಗ್ರಾಪಂ ಎದುರುಗಡೆ ಕಸದ ರಾಶಿ ಒಂದೆಡೆಯಾದರೆ ತೂದಳ್ಳಿ ರಸ್ತೆ ಸಮೀಪದಲ್ಲಿ ತಾತ್ಕಾಲಿಕ ಕಸ ವಿಲೇವಾರಿ ಘಟಕ ಇದೆ. ಈ ಜಾಗದ ಸುತ್ತ ಒಂದು ಕಿ.ಮೀ.ವರೆಗೆ ಹತ್ತಿರ ಹೋಗುವಂತಿಲ್ಲ, ಕಾರಣವೆಂದರೆ ದಾರಿಯುದ್ದಕ್ಕೂ ಬಿದ್ದಿರುವ ಕಸದ ರಾಶಿ ರಾಶಿ, ನಿರ್ವಹಣೆ ಕೊರತೆ, ಅಸಮರ್ಪಕ ವಿಲೇವಾರಿ ಕಾರಣ ಕಿ.ಮೀ. ದೂರದವರೆಗೆ ಮೂಗುಮುಚ್ಚಿ ಹೋಗಬೇಕಾಗಿದೆ. ಮಾತ್ರವಲ್ಲದೆ ಸಾಂಕ್ರಾಮಿಕ ಕಾಯಿಲೆ ಹರಡುವ ಭೀತಿ ಇದೆ. ಮೇಲಧಿಕಾರಿಗಳು ನೆಪ ಮಾತ್ರಕ್ಕೆ ಕಸ ವಿಲೇವಾರಿ ಸ್ಥಳಕ್ಕೆ ಭೇಟಿ ನೀಡಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಶುಚಿತ್ವದ ವಿಷಯವನ್ನು ಗಂಭೀರವಾಗಿ ಪರಿಗಣಿಸಿದರೂ ಸಹ ಶಿರೂರಿನ ಮಟ್ಟಿಗೆ ಶಾಶ್ವತ ಸಮಸ್ಯೆಯಾಗಿ ಕಾಡುತ್ತಿದೆ. ಈ ಹಿಂದೆ ಸಂಸದರು ಇದೇ ಮಾರ್ಗವಾಗಿ ತೆರಳುವಾಗ ಕಸದ ವಿಲೇವಾರಿ ವೈಫಲ್ಯ ನೋಡಿ ಜಿಲ್ಲಾಧಿಕಾರಿ ಗಮನಕ್ಕೆ ತಂದು ಆಗ್ರಹ ಮಾಡಿದ್ದರೂ ಕೂಡ ಇದುವರೆಗೆ ಈ ರಸ್ತೆಯ ಕಸದ ಸಮಸ್ಯೆ ಕೊನೆಯಾಗಿಲ್ಲ.

ಕಸ ವಿಲೇವಾರಿಗೆ ದಾನಿಗಳ ಕೊಡುಗೆ

ಸ್ವಚ್ಛ ಶಿರೂರು ಪರಿಕಲ್ಪನೆಯಡಿಯಲ್ಲಿ ಶಿರೂರಿನ ದಾನಿಗಳು ಹಾಗೂ ಶಿರೂರು ಅಸೋಸಿಯೇಷನ್ ವತಿಯಿಂದ ಉಡುಪಿ ಜಿಲ್ಲೆಯಲ್ಲಿಯೇ ಪ್ರಥಮ ಬಾರಿಗೆ ಎರಡು ಕಸದ ವಾಹನದ ಕೊಡುಗೆಯನ್ನು ನೀಡಿದ್ದಾರೆ. ಆದರೆ ನಿರ್ವಹಣೆ ಕೊರತೆ ಎದ್ದು ಕಾಣುತ್ತಿದೆ. ಹಡವಿನಕೋಣೆ ರಸ್ತೆ, ಅಳ್ವೆಗದ್ದೆ ರಸ್ತೆ, ಸಂಕದಗುಂಡಿ, ಮುಸ್ಲಿಂ ಕೇರಿ ರಸ್ತೆ, ಕಳಿಹಿತ್ಲು ರಸ್ತೆ ಮುಂತಾದ ಕಡೆ ಸಾರ್ವಜನಿಕರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಕೆಲವು ಕಡೆಗಳಲ್ಲಿ ಪಂಚಾಯತ್‌ನಿಂದ ಸಿಸಿ ಕ್ಯಾಮರಾ ಅಳವಡಿಸಿದರೂ ರಸ್ತೆ ಮೇಲೆ ಕಸ ಎಸೆದು ಕಿಡಿಗೇಡಿಗಳು ಊರಿನ ಶುಚಿತ್ವ ಹಾಳುಮಾಡುತ್ತಿದ್ದಾರೆ.


ಕಸಕ್ಕೆ ಬೆಂಕಿ ಹಾಕುತ್ತಿರುವ ಪಂಚಾಯತ್

ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಕಸವನ್ನು ಬೆಂಕಿಗೆ ಹಾಕಿ ಸುಡುವಂತಿಲ್ಲ, ಆದರೆ ಶಿರೂರು ಗ್ರಾ.ಪಂ. ಕಸದ ರಾಶಿಗೆ ಬೆಂಕಿ ಹಚ್ಚಿ ಸುಡುತ್ತಿದೆ. ಇದರಿಂದಾಗಿ ಅರಮನೆಹಕ್ಲು ಭಾಗದಲ್ಲಿ ಪ್ರತಿದಿನ ದಟ್ಟ ಹೊಗೆ ಆವರಿಸುತ್ತಿದ್ದು ಉಸಿರಾಡಲು ಕಷ್ಟವಾಗುತ್ತಿದೆ ಎಂದು ಜನರು ಆಕ್ಷೇಪಿಸುತ್ತಿದ್ದಾರೆ. ಮಾತ್ರವಲ್ಲದೆ ಬೆಂಕಿ ಇಡುವ ಕಾರಣ ವಿವಿಧ ರೀತಿಯ ವಾಸನೆಯಿಂದ ಮಕ್ಕಳು, ಹಿರಿಯರು ಕಾಯಿಲೆಯಿಂದ ಬಳಲುವಂತಾಗಿದೆ. ಹೀಗಾಗಿ ಗ್ರಾ.ಪಂ. ಕಸ ಸುಡುವುದನ್ನು ತಕ್ಷಣ ನಿಲ್ಲಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಒಟ್ಟಾರೆಯಾಗಿ ಗ್ರಾ.ಪಂ. ಜೊತೆಗೆ ಸಾರ್ವಜನಿಕರ ಜವಾಬ್ದಾರಿ ಕೂಡ ಅತೀ ಮುಖ್ಯವಾಗಿದೆ. ಹೀಗಾಗಿ ಜಿಲ್ಲಾಡಳಿತ ಶಿರೂರಿನ ಕಸ ವಿಲೇವಾರಿ ಕುರಿತು ವಿಶೇಷ ಸಭೆ ಕರೆದು ಶಾಶ್ವತ ಪರಿಹಾರದ ಚಿಂತನೆ ಮಾಡುವ ಮೂಲಕ ಸ್ವಚ್ಛ ಶಿರೂರು ಪರಿಕಲ್ಪನೆ ಸಾಕಾರಗೊಳ್ಳಬೇಕಾಗಿದೆ.

> **ತಕ್ಷಣ ಕ್ರಮ**
> ಶಿರೂರು ಗ್ರಾಮದ ಸರ್ವೆ.ನಂ 81ರಲ್ಲಿ 2.37 ಎಕರೆ ಸ್ಥಳ ಕಸ ವಿಲೇವಾರಿಗಾಗಿ ಗ್ರಾಪಂ ಹೆಸರಿನಲ್ಲಿದೆ. ಜಾಗಕ್ಕೆ ಗಡಿ ಗುರುತು ಮಾಡಿ ಕಸ ವಿಲೇವಾರಿ ಶಾಶ್ವತ ಪರಿಹಾರದ ಬಗ್ಗೆ ಕ್ರಮಕೈಗೊಳ್ಳಲಾಗುವುದು. ಈ ಜಾಗದಲ್ಲಿ ಕಸದ ಸಮರ್ಪಕ ವಿಲೇವಾರಿ ಕುರಿತು ತಕ್ಷಣ ಕ್ರಮ ಕೈಗೊಳ್ಳಲಾಗುವುದು.
> • ರಾಜೇಂದ್ರ ಶೆಟ್ಟಿ, ಶಿರೂರು ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು,

ಕೃಷಿ ಕಾಯಕಗಳಲ್ಲಿ ಹಿರಿಯ ತಲೆಮಾರಿನವರ ಕೊಡುಗೆ ಅನನ್ಯ



ಕೋಟ: ರೈತಕಾಯಕದಲ್ಲಿ ಹಿರಿಯ ತಲೆಮಾರಿನ ಕೊಡುಗೆ ಅನನ್ಯ ಎಂದು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಣೂರು ಭಾಸ್ಕರ್ ಶೆಟ್ಟಿ ಅಭಿಪ್ರಾಯಪಟ್ಟರು.

ಭಾನುವಾರಕೋಟದಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ಗೆಳೆಯರ ಬಳಗ ಕಾರ್ಕಡ,ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ರೈತಧ್ವನಿ ಸಂಘ ಕೋಟ, ಸ್ನೇಹಕೂಟ ಮಣೂರು ಸಹಯೋಗದೊಂದಿಗೆ 52ನೇ ರೈತರೆಡೆಗೆ ನಮ್ಮ ನಡಿಗೆ ಕಾರ್ಯಕ್ರಮದಲ್ಲಿ ಅಭಿನಂದನಾ ನುಡಿಗಳನ್ನಾಡಿ ಕೃಷಿ ಕ್ಷೇತ್ರದಲ್ಲಿ ದಾರೋಜ್ಜಿಮನೆ ಕುಟುಂಬಿಕರ ಪಾತ್ರ ಅತ್ಯಂತ ಗಣನೀಯ ಪಾತ್ರ ವಹಿಸಿದೆ. ಅದರಲ್ಲೂ ಆನಂದ ಕಾಂಚನ್ ಎಂಬ ಹಿರಿಯ ಕೃಷಿಕರನ್ನು ಪಂಚವರ್ಣದವರು ಗುರುತಿಸಿ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದ್ದಾರೆ. ಒಂದು ಸರಕಾರ ಮಾಡಬೇಕಾದ ಕಾರ್ಯವನ್ನು ಪಂಚವರ್ಣ ಸಂಘಟನೆ ರೈತಾಪಿ ವರ್ಗಕ್ಕೆ ಮನೆಯಂಗಳಕ್ಕೆ ತೆರಳು ಪ್ರೋತ್ಸಾಹಿಸುವ ಕಾರ್ಯ ಅದರಲ್ಲೂ ನಿರಂತರವಾಗಿ ಸರಣಿ ಕಾರ್ಯಕ್ರಮದ ರೂಪದಲ್ಲಿ ನಿರ್ವಹಿಸುವುದು ಶ್ರೇಷ್ಠವಾದ ಕಾರ್ಯವಾಗಿದೆ ಎಂದರು.

ಇದೇ ವೇಳೆ ಹಿರಿಯ ಕೃಷಿಕ ದಾರೋಜ್ಜಿಮನೆ ಆನಂದ ಕಾಂಚನ್ ಅವರನ್ನು ಕೃಷಿ ಪರಿಕರವನ್ನಿತ್ತು ಕೃಷಿ ಪುರಸ್ಕಾರ ನೀಡಿ ಗೌರವಿಸಲಾಯಿತು. ತೆಕ್ಕಟ್ಟೆ ಪಂಚಾಯತ್ ಮಾಜಿ ಅಧ್ಯಕ್ಷ ಶೇಖರ್ ಕಾಂಚನ್ ಕೊಮೆ ಪುರಸ್ಕಾರ ನೀಡಿ ಶುಭಹಾರೈಸಿದರು. ಕೋಟತಟ್ಟು ಪಡುಕರೆಯ ಪ್ರಗತಿಪರ ಕೃಷಿಕ ದಿವಾಕರ್ ಐತಾಳ್ ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಮೊಗವೀರ ಯುವ ಸಂಘಟನೆ ಕೋಟೇಶ್ವರ ಘಟಕದ ಅಧ್ಯಕ್ಷ ರಾಘವೇಂದ್ರ ಹರಪ್ಪನಕೆರೆ, ರೈತಧ್ವನಿ ಸಂಘದ ಅಧ್ಯಕ್ಷ ಎಂ. ಜಯರಾಮ ಶೆಟ್ಟಿ, ಪಂಚವರ್ಣ ಮಹಿಳಾ ಮಂಡಲದ ಉಪಾಧ್ಯಕ್ಷೆ ಸುಜಾತಾ ಕುಮಾರ್ ಪೂಜಾರಿ ಉಪಸ್ಥಿತರಿದ್ದರು. ಮಹಿಳಾ ಮಂಡಲದ ಶಾಲಿನಿ ನರಸಿಂಹ ಸನ್ಮಾನ ಪತ್ರವಾಚಿಸಿದರು. ರವೀಂದ್ರ ಕೋಟ ಸ್ವಾಗತಿಸಿದರು. ಸುಜಾತಾ ಬಾಯರಿ ನಿರೂಪಿಸಿದರು. ಅಜಿತ್ ಆಚಾರ್ ವಂದಿಸಿದರು. ಪ್ರಾರಂಭದಲ್ಲಿ ಗೋ ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮಣ್ಣು ಸಾಗಾಟ ವೇಳೆ ರೈತರಿಗೆ ತೊಂದರೆಯಾಗದಿರಲಿ : ಕೋಟ



ಉಡುಪಿ: ರೈತರು ಕೃಷಿ ಚಟುವಟಿಕೆಗಳಿಗೆ ತಮ್ಮ ಜಮೀನಿನ ಮಣ್ಣನ್ನು ಬಳಸಲು ಸಾಗಾಣಿಕೆ ಮಾಡುತ್ತಿರುವಾಗ ತೊಂದರೆ ಆಗುತ್ತಿದೆ ಎಂಬ ದೂರುಗಳು ಬರುತ್ತಿವೆ, ಈ ಸಮಸ್ಯೆಯನ್ನು ಬಗೆಹರಿಸಿ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ರಜತಾದ್ರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಮಣ್ಣು ಸಾಗಾಣಿಕೆ ಮಾಡುತ್ತಿರುವಾಗ ಅಡ್ಡಗಟ್ಟುತ್ತಿರುವ ಸಮಸ್ಯೆಯ ಬಗ್ಗೆ ಚರ್ಚಿಸಲು ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ರೈತರುಗಳು ತಮ್ಮ ಕೃಷಿ ಚಟುವಟಿಕೆಗಳಿಗೆ ತಮ್ಮ ಖಾಸಗಿ ಜಮೀನುಗಳಿಂದ ಮಣ್ಣುಗಳನ್ನು ಸಾಗಾಟ ಮಾಡಿ ಇನ್ನೊಂದು ಜಮೀನಿಗೆ ಬಳಸುತ್ತಿದ್ದಾರೆ. ಆದರೆ ಇನ್ಯಾವುದೋ ಅನ್ಯ ಉದ್ದೇಶಕ್ಕೆ ಬಳಸುತ್ತಿಲ್ಲ, ನಿಯಮಾನುಸಾರ ಅವರಿಗೆ ಸಮಸ್ಯೆ ಉಂಟಾಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಸ್ವ-ಲಾಭಕ್ಕಾಗಿ ದೂರು

ಶಾಸಕ ಸುನೀಲ್ ಕುಮಾರ್ ಮಾತನಾಡಿ, ರೈತರು ತಮ್ಮ ಕೃಷಿ ಜಮೀನುಗಳಿಗೆ ಮಣ್ಣು ಸಾಗಾಟ ಮಾಡುತ್ತಿರುವ ಬಗ್ಗೆ ದೂರುಗಳನ್ನು ಕೆಲವರು ತಮ್ಮ ಲಾಭಕ್ಕಾಗಿ ನೀಡುತ್ತಾರೆ. ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯವಿರುವುದಿಲ್ಲ ಎಂದರು.

ತೊಂದರೆ ಆಗದಂತೆ ಎಚ್ಚರ ಅಗತ್ಯ

ಶಾಸಕರಾದ ಎ. ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಇತ್ತೀಚೆಗೆ ಕೋಟ ವ್ಯಾಪ್ತಿಯಲ್ಲಿ ಮಣ್ಣು ಸಾಗಾಟ ಲಾರಿಯಿಂದ ಎರಡು ಅಪಘಾತ ಪ್ರಕರಣಗಳು ಆಗಿದ್ದು, ನಂತರದ ದಿನಗಳಲ್ಲಿ ರೈತರು ಮಣ್ಣು ಸಾಗಾಣಿಕೆ ಸಂಬಂಧ ದೂರುಗಳು ಬರುತ್ತಿವೆ. ಅಪಘಾತ ಪ್ರಕರಣದ ಈ ಹಿಂದೆ ಕಳೆದ ಒಂದು ವರ್ಷದಿಂದ ಈ ರೀತಿಯ ದೂರುಗಳು ಬಂದಿರುವುದಿಲ್ಲ, ರೈತರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ನೋಡಿಕೊಳ್ಳುವುದು ಸೂಕ್ತ ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಶಾಸಕರಾದ ಯಶ್‌ಪಾಲ್ ಎ. ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ ಹಾಗೂ ಗುರುರಾಜ್ ಶೆಟ್ಟಿ ಗಂಟಿಹೊಳೆ, ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯಕ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ವಿಂಧ್ಯ ಎನ್.ಎಂ. ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪಲಿಮಾರು: 40 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಗುದ್ದಲಿಪೂಜೆ



ಪಡುಬಿದ್ರಿ : ಕಾಪು ವಿಧಾನಸಭಾ ಕ್ಷೇತ್ರದ ಪಲಿಮಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ಕಾಮಗಾರಿಗೆ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ 40 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದ್ದು ಇದರ ಗುದ್ದಲಿ ಪೂಜೆಯನ್ನು ಫೆ. 23ರಂದು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ನೆರವೇರಿಸಿದರು.

ಪಲಿಮಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಡ್ವೆ ಕೆಲ್ಲಾರು ಪಾಂಡು ಪೂಜಾರಿ ಮನೆಯಿಂದ ಕೆಲ್ಲಾರು ದಿವಾಕರ ಶೆಟ್ಟಿ ಮನೆವರೆಗೆ ರಸ್ತೆ ಅಭಿವೃದ್ಧಿ – 10 ಲಕ್ಷ, ಗರಡಿ ಬಳಿ ವಿಠಲ ಪೂಜಾರಿ ಮನೆ ರಸ್ತೆ ಕಾಂಕ್ರೀಟೀಕರಣ – 10 ಲಕ್ಷ, ಪಲಿಮಾರು ರಥಬೀದಿ ರಸ್ತೆ ಅಭಿವೃದ್ಧಿ – 10 ಲಕ್ಷ, ನಂದಿಕೂರು ಶೆಟ್ಟಿಗುಡ್ಡೆ ಪ್ರತೀಕ್ ಮನೆ ಬಳಿಯಿಂದ ಕೋಡ್ದಬ್ಬು ದೈವಸ್ಥಾನದ ವರೆಗೆ ಚರಂಡಿ ರಚನೆ – 10 ಲಕ್ಷ ಸೇರಿದಂತೆ ಒಟ್ಟು 40 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಪಲಿಮಾರು ಪಂಚಾಯತ್ ಮಾಜಿ ಅಧ್ಯಕ್ಷರಾದ ಸೌಮಲತಾ ಶೆಟ್ಟಿ, ಮಾಜಿ ಉಪಾಧ್ಯಕ್ಷರಾದ ರಾಯೇಶ್ ಪೈ, ಮಾಜಿ ಸದಸ್ಯರಾದ ಗಾಯತ್ರಿ ಪ್ರಭು, ಸುಜಾತಾ, ಪ್ರವೀಣ್ ಕುಮಾರ್, ರಶ್ಮಿ ಪ್ರಿಯಾ ಶೆಟ್ಟಿ, ದಿನೇಶ್ ಪಲಿಮಾರು, ದಾಮೋದರ್ ಕೋಟ್ಯಾನ್, ಸದಾನಂದ ಪೂಜಾರಿ, ದಿನೇಶ್ ಶೆಟ್ಟಿ ಶ್ರೀವರ ಶೆಟ್ಟಿ, ಮುಕುಂದ ಭಟ್, ಪ್ರತೀಕ್ ಕೋಟ್ಯಾನ್, ಸತೀಶ್ ದೇವಾಡಿಗ ಸುಕೇಶ್ ಕುಲಾಲ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ತಾ.ಪಂ. ಕಾಮಗಾರಿ ಗುತ್ತಿಗೆ ಬಿಜೆಪಿ, ಕಾಂಗ್ರೆಸ್‌ನವರಿಗೆ ಹಂಚಿಕೆ ಆರೋಪ

ಕುಂದಾಪುರ: ತಾಲೂಕು ಪಂಚಾಯತ್ ಅನುದಾನದ ಗುತ್ತಿಗೆ ನೀಡುವಾಗ ಕಾಮಗಾರಿ ಎದುರು ಬಿ ಮತ್ತು ಸಿ ಎಂದು ನಮೂದಿಸಲಾಗಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ನವರಿಗೆ ಕೆಲಸ ಹಂಚಿಕೆ ಮಾಡಿ ಗುತ್ತಿಗೆ ನೀಡಲು ಕಾನೂನಿನಲ್ಲಿ ಅವಕಾಶ ಇದೆಯೇ? ಯಾವ ಆಧಾರದಲ್ಲಿ ಹೀಗೆ ಮಾಡಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಗರ್ಜನೆ ರಾಜ್ಯ ಸಂಚಾಲಕ ಉದಯ ಕುಮಾರ್ ತಲ್ಲೂರು ಪ್ರಶ್ನಿಸಿದರು.

ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ನಡೆದ ತಾ.ಪಂ. ಜಮಾಬಂದಿಯಲ್ಲಿ ಅವರು ತಾ.ಪಂ. ಆಡಳಿತದ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದರು.


2023–24ನೇ ಸಾಲಿನ ಜಮಾಬಂದಿ ನಡೆದಿಲ್ಲ, 2024–25ನೇ ಸಾಲಿನ ಜಮಾಬಂದಿ ಹೇಗೆ ನಡೆಸಲಾಗುತ್ತಿದೆ. ಒಂದು ವರ್ಷದ ಜಮಾಬಂದಿ ನಡೆಸದ ಕಾರಣ ಏನು? ಇದಕ್ಕೆ ಅವಕಾಶ ಇದೆಯೇ? ಜಮಾಬಂದಿ ಇದೆ ಎಂದು ವ್ಯಾಪಕ ಪ್ರಚಾರ ಏಕೆ ನೀಡಿಲ್ಲ, ಬರಬೇಕಾದ ಎಲ್ಲ ಇಲಾಖೆಗಳ ಅಧಿಕಾರಿಗಳೇ ಯಾಕೆ ಬಂದಿಲ್ಲ, ಸಂಜೀವಿನಿ ತರಬೇತಿಗೆ ಬಂದ ಸ್ವಸಹಾಯ ಸಂಘದ ಸದಸ್ಯೆಯರನ್ನು ದಿಢೀರ್ ಕರೆತಂದು ಜಮಾಬಂದಿ ನಡೆಸುವ ಉದ್ದೇಶ ಏನು ಎಂದು ಉದಯ ಕುಮಾರ್ ತಲ್ಲೂರು ಪ್ರಶ್ನಿಸಿದರು. 20ಕ್ಕೂ ಅಧಿಕ ಇಲಾಖೆಗಳ ಅಧಿಕಾರಿಗಳು ಹಾಜರಾಗಬೇಕಾದ ಜಮಾಬಂದಿಗೆ ಹಾಜರಾದ್ದು 5 ಮಂದಿ. ಸಂಜೀವಿನಿ ಸಂಘಗಳ ತರಬೇತಿಗೆ ಬಂದವರನ್ನು ಕೂರಿಸಿ ಜಮಾಬಂದಿ ಆರಂಭಿಸಲಾಯಿತಾದರೂ 23–24ನೇ ಸಾಲಿನ ಜಮಾಬಂದಿ ನಡೆಸದೇ 24–25ನೇ ಸಾಲಿನ ಜಮಾಬಂದಿ ನಡೆಸಲು ಆಕ್ಷೇಪ ಬಂದ ಕಾರಣ ಜಮಾಬಂದಿ ಮುಂದೂಡಿಕೆಯಾಯಿತು.

ಜಿ.ಪಂ. ಸಿಇಒ ಬರೆದುಕೊಳ್ಳಲಾಗಿತ್ತು. ಅವರಿಂದ ದಿನಾಂಕ ನಿಗದಿಯಾದಂತೆ ಜಮಾಬಂದಿ ಹಮ್ಮಿಕೊಳ್ಳಲಾಗಿದೆ. ಇಂದೇ ಮಧ್ಯಾಹ್ನ ಬೇಕಾದರೂ ನಡೆಸಬಹುದು ಎಂದು ಜಿ.ಪಂ. ಉಪಕಾರ್ಯದರ್ಶಿ ಎಸ್.ಎಸ್. ಕಾದ್ರೊಳಿ ಸಮಜಾಯಿಷಿ ನೀಡಿದರು.

ತಾ.ಪಂ. ಕಟ್ಟಡದಲ್ಲಿ ಟೆಂಡರ್ ಪಡೆದ ಅಂಗಡಿ ಮಾಲಕರು ಒಳ ಒಪ್ಪಂದ ಮಾಡಿ ಬೇರೆಯವರಿಗೆ ಅಂಗಡಿ ನೀಡಿ ಬಾಡಿಗೆ ಪಡೆಯುತ್ತಿರುವುದನ್ನೂ ಆಕ್ಷೇಪಿಸಿದರು.

ಇನ್ನೂ ಸ್ವಲ್ಪ ಕಾಲಾವಕಾಶ ನೀಡಿ ಎರಡೂ ವರ್ಷದ ಜಮಾಬಂದಿ ನಡೆಸಲಾಗುವುದು ಎಂದು ತಾ.ಪಂ. ಇಒ ಮಹೇಶ್ ಕೆ.ಜಿ. ಹೇಳಿ ಜಮಾಬಂದಿ ಮುಂದೂಡಿದರು. ಲೆಕ್ಕಪತ್ರ ಅಧಿಕಾರಿ ದೀಪಾ ಇದ್ದರು.

ವಿಜೇತ ವಿಶೇಷ ಶಾಲೆಯಲ್ಲಿ ಪ್ಲಾಸ್ಟಿಕ್ ವಿರುದ್ಧ ಜಾಗೃತಿ, ಸ್ವಚ್ಛತಾ ಅಭಿಯಾನ



ಕಾರ್ಕಳ: 'ಪ್ಲಾಸ್ಟಿಕ್ ವಿರುದ್ಧ ಜಾಗೃತಿ ಹಾಗೂ ಸ್ವಚ್ಛತಾ ಅಭಿಯಾನ' ವಿಜೇತ ವಿಶೇಷ ಶಾಲೆಯಲ್ಲಿ ಜರಗಿತು. ಶೌರ್ಯ ಮತ್ತು ವಿಪತ್ತು ನಿರ್ವಹಣಾ ಘಟಕದ ಅಧ್ಯಕ್ಷ ಸದಾನಂದ ಸಾಲ್ಯಾನ್ ನೆರವೇರಿಸಿ ಅಭಿಯಾನಕ್ಕೆ ಚಾಲನೆ ನೀಡಿದರು.

ವಿಜೇತ ವಿಶೇಷ ಶಾಲಾ ಸ್ಥಾಪಕ ಡಾ. ಕಾಂತಿ ಹರೀಶ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಅತಿಥಿಗಳಾಗಿ ರಮೇಶ್ ಕಲ್ಲೊಟ್ಟೆ, ಎನ್‌ಎಸ್‌ಎಸ್ ಯೋಜನಾಧಿಕಾರಿಗಳಾದ ಪ್ರೊ. ಚಂದ್ರಕಾಂತ್ ಶೆಣೈ, ಪ್ರೊಫೆಸರ್ ರೇಣುಕಾ ಎಚ್.ಜಿ. ಉಪಸ್ಥಿತರಿದ್ದರು. ಬಿಂದ್ಯಾ ನಿರೂಪಿಸಿದರು. ಕಾವ್ಯ ಸ್ವಾಗತಿಸಿ, ಕೃತಿ ವಂದಿಸಿದರು.

ಸೌಪರ್ಣಿಕ ನದಿಯಲ್ಲಿ ಅವೈಜ್ಞಾನಿಕ ಮರಳುಗಾರಿಕೆ ವಿರುದ್ಧ ಮತ್ತೆ ಪ್ರತಿಭಟನೆ



ಕುಂದಾಪುರ: ತ್ರಾಸಿಯ ಆನಗೋಡಿನ ಸೌಪರ್ಣಿಕ ನದಿಯಲ್ಲಿ ಅವೈಜ್ಞಾನಿಕ ರೀತಿಯಲ್ಲಿ ಮರಳು ತೆಗೆಯುತ್ತಿರುವುದರಿಂದ ಅಲ್ಲಿನ ನದಿ ದಂಡೆ, ಮನೆಗಳಿಗೆ ಅಪಾಯವಿದ್ದು ಟಿಪ್ಪರ್‌ಗಳ ಮಿತಿ ಮೀರಿದ ತಿರುಗಾಟದಿಂದ ಶಾಲಾ ಮಕ್ಕಳು ಜೀವ ಭಯದಲ್ಲೇ ಸಂಚರಿಸುವಂತಾಗಿದ್ದು, ಇಲ್ಲಿ ಮರಳುಗಾರಿಕೆ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿ ಸೋಮವಾರ ಅಲ್ಲಿನ ನಿವಾಸಿಗರು ಮತ್ತೆ ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ಭೇಟಿ ನೀಡಿದ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಗ್ರಾಮಸ್ಥರು ಅಹವಾಲು ಸ್ವೀಕರಿಸಿ, ಎರಡು ದಿನದಲ್ಲಿ ಇಲ್ಲಿ ಮರಳುಗಾರಿಕೆ ಬಂದ್ ಮಾಡಬೇಕು. ಇಲ್ಲದಿದ್ದರ ಇಲ್ಲಿ ಮತ್ತೆ ಬಂದು ನಾನೇ ಧರಣಿ ಕೂರುತ್ತೇನೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ತ್ರಾಸಿ ಗ್ರಾ.ಪಂ. ಮಾಜಿ ಅಧ್ಯಕ್ಷ ಮಿಥುನ್ ದೇವಾಡಿಗ, ಬಿಜೆಪಿ ಪ್ರಮುಖರಾದ ರವಿ ಖಾರ್ವಿ, ರವಿ ಶೆಟ್ಟಿಗಾರ್, ಸ್ಥಳೀಯರಾದ ಲಕ್ಷ್ಮೀಕಾಂತ್, ಕಿರಣ್, ಶರತ್, ಶಬರೀಶ್, ಜಲಜಾ, ಶಾಂತಾ, ಗುಲಾಬಿ, ಆನಗೋಡು ಇದ್ದರು.

ಭೂಮಾಲಕರು ಸಿದ್ಧರಿದ್ದರೂ ಭೂಮಿ ಕೊಡಿಸಲು ತಾಲೂಕು ಆಡಳಿತ ವಿಫಲ | ಕುಂದಾಪುರದಲ್ಲಿ ಅನಿರ್ದಿಷ್ಟಾವಧಿ ಧರಣಿ

ಆಲೂರಿನಲ್ಲಿ ಕೊರಗ ಕುಟುಂಬಗಳ ಅಜಲು ಪದ್ಧತಿಯಂತೆ ದುಡಿಮೆ: ಆರೋಪ

ಕುಂದಾಪುರ: ಆಲೂರಿನಲ್ಲಿ ಇಂದಿಗೂ ಕೆಲ ಕೊರಗ ಕುಟುಂಬಗಳು ಅಜಲು ಪದ್ಧತಿಯಂತೆ ಮಾಲಕರ ಭೂಮಿಯಲ್ಲಿ ದುಡಿಯುತ್ತಿದ್ದಾರೆ. ಭೂಮಾಲಕರು ಭೂಮಿ ನೀಡಲು ಸಿದ್ಧರಿದ್ದರೂ ತಾಲೂಕು ಆಡಳಿತ ಆ ಭುಮಿಯನ್ನು ಕೊರಗರಿಗೆ ಕೊಡಿಸಲು ವಿಫಲವಾಗಿದೆ. ಕಳೆದ 2016ರಿಂದ ನಿರಂತರವಾಗಿ 10 ವರ್ಷಗಳ ಕಾಲ ಆಲೂರು–ಹರ್ಕೂರು ಗ್ರಾಮದಲ್ಲಿ ಲಭ್ಯವಿರುವ ಡಿಸಿ ಮನ್ನಾ ಭೂಮಿ ಹಾಗೂ ಸರಕಾರಿ ಭೂಮಿಯಲ್ಲಿ ಡಾ.ಮಹಮ್ಮದ್ ಫೀರ್ ವರದಿ ಅನ್ವಯ ಕನಿಷ್ಠ ತಲಾ ಒಂದು ಎಕರೆಯಂತೆ 13 ಕೊರಗ ಕುಟುಂಬಗಳಿಗೆ ಭೂಮಿ ನೀಡಲು ಸಾಕಷ್ಟು ಬಾರಿ ಧರಣಿ, ಮನವಿ ನೀಡುತ್ತಾ ಬಂದರೂ ನಿರ್ಲಕ್ಷಿಸಲಾಗಿದೆ. ಕೊರಗರು ಧರಣಿ ನಡೆಸುವಂತೆ ತಾಲೂಕು ಆಡಳಿತವೇ ಕುಮ್ಮಕ್ಕು ನೀಡಿದಂತಾಗಿದೆ.



ಶೋಷಿತ ವರ್ಗ ಹಕ್ಕುಗಳಿಗಾಗಿ ಹೋರಾಡುವ ಸ್ಥಿತಿ ಬಂದದ್ದು ಆಡಳಿತಕ್ಕೆ ನಾಚಿಕೆ ಗೇಡಿನ ಸಂಗತಿಯಾಗಿದೆ ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಜಿಲ್ಲಾ ಸಂಚಾಲಕ ಶ್ರೀಧರ್ ನಾಡ ಹೇಳಿದರು.

ಕುಂದಾಪುರ ತಾಲೂಕು ಆಡಳಿತ ಸೌಧದ ಎದುರು ಸೋಮವಾರ ಆಲೂರು, ಹರ್ಕೂರು ಗ್ರಾಮದಲ್ಲಿ 13 ಕೊರಗ ಕುಟುಂಬಗಳಿಗೆ ಕೂಡಲೇ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿ ಆರಂಭವಾದ ಅನಿರ್ದಿಷ್ಟಾವದಿ ಧರಣಿ ಸತ್ಯಾಗ್ರಹದಲ್ಲಿ ಅವರು ಮಾತನಾಡಿದರು.

ಸ್ಥಳಕ್ಕೆ ಭೇಟಿ ನೀಡಿದ ಉಪತಹಶೀಲ್ದಾರ್ ವಿನಯ್ ಮನವಿ ಸ್ವೀಕರಿಸಿ, ಕೆಸಿಡಿಸಿ ಭೂಮಿಯ ಗೊಂದಲದಿಂದಾಗಿ ಬಾಕಿ ಇದೆ. ಕಂದಾಯ ಇಲಾಖೆ ಭೂಮಿ ನೀಡಲು ಸಿದ್ಧವಾಗಿದೆ. ಗೇರು ನಿಗಮದ ಭೂಮಿ ದಾಖಲೆ ಸರಿಪಡಿಸದೇ ನೀಡಿದರೆ ಮುಂದಿನ ದಿನಗಳಲ್ಲಿ ಅಲ್ಲಿ ವಾಸಿಸುವವರಿಗೆ ತೊಂದರೆ. ಆದ್ದರಿಂದ ಅರಣ್ಯ ಇಲಾಖೆ ಅಭಿಪ್ರಾಯ ಪಡೆದು ನೀಡಲಾಗುವುದು. ಈ ಸಂಬಂಧ ಪ್ರಕ್ರಿಯೆ ಜಾರಿಯಲ್ಲಿದೆ ಎಂದರು.

ತಾಲೂಕಿನ ಆಲೂರು ಗ್ರಾಮದಲ್ಲಿ ಮತ್ತು ಹರ್ಕೂರು ಗ್ರಾಮದಲ್ಲಿ 2 ಎಕರೆ ಭೂಮಿ ಈಗಾಲೇ ಜಂಟಿ ಸರ್ವೆ ನಡೆಸಿ ನಕ್ಷೆ ಸಿದ್ಧವಾಗಿದ್ದು ಕೂಡಲೇ ಕೊರಗ ಕುಟುಂಬಗಳಿಗೆ ಭೂಮಿ ಹಂಚಿಕೆ ಮಾಡಿ ಹಕ್ಕು ಪತ್ರ ನೀಡಬೇಕು. ಅನಾದಿಕಾಲದಿಂದ ವಾಸವಿರುವ ದುರ್ಗಿ, ಅಕ್ಕಮ್ಮ, ಬಚ್ಚಿ ಈ ಮೂರು ಕೊರಗ ಕುಟುಂಬಗಳಿಗೆ ಅವರ ಹೆಸರಿಗೆ ಭೂಮಿಯನ್ನು ರಿಜಿಸ್ಟರ್ ಮಾಡಿ ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಬೇಕು. ಈ ಹಿಂದೆ ಅವರ ಭೂಮಿ ಸರ್ವೇ ನಡೆಸಿ ನಕ್ಷೆಯನ್ನು ಸಹ ಸಿದ್ಧಪಡಿಸಲಾಗಿತ್ತು. ಗ್ರಾಮ ಆಡಳಿತ ಅಧಿಕಾರಿಗಳು ಬದಲಾದ ಕಾರಣ ಈ ಕೆಲಸ ಅಲ್ಲಿಗೆ ನಿಂತು ಹೋಗಿದೆ. ಕೂಡಲೇ ಅವರ ಭೂಮಿ ಅವರಿಗೆ ಸಿಗಲು ಕ್ರಮವಹಿಸಬೇಕು ಎಂದು ಮನವಿ ನೀಡಲಾಯಿತು.

ಸಿಪಿಐಎಂನ ಜಿಲ್ಲಾ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಮುಖಂಡರಾದ ಶೀಲಾವತಿ ನಾಡ, ವೆಂಕಟೇಶ ಕೋಣಿ, ಎಚ್.ನರಸಿಂಹ, ಮಹಾಬಲ ವಡೇರಹೋಬಳಿ ಮೊದಲಾದವರು ಇದ್ದರು.